ಚಿಂತನ ಬಯಲು

ತ್ರೈಮಾಸಿಕ ISSN 2278-2192

ಸಂಪುಟ : 13, ಸಂಚಿಕೆ : 1 ಜುಲೈ–ಸಪ್ಟೆಂಬರ್ 2024
Volume : 13, Issue : 1 July - September 2024

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಹೆಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574219

CHINTHANA BAYALU
Kannada Quarterly; A Peer Reviewed Journal ISSN: 2278-2192
Included in UGC - CARE List
Volume 13, Issue 1, July - September 2024

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574219
Karnataka
Mobile : 8217703698
Email : chinthanabayalu@gmail.com
website: www.chinthanabayalu.in

© : Reserved

Size : Dy 1/8

Paper Used : 70 GSM

Pages : 128

Price : Rs. 50

Cover Photo : **Girish Bhat**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002 / 7019225774

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟು ಭಾಗ–1 : ಸಂಕ್ಷಿಪ್ತ ವಿಮರ್ಶೆ**
❖ ಎಸ್. ಕಾರ್ತಿಕ್ / 6

2. **ಶ್ವಪಚದೇವನಿಂದ ಶಿವಭಕ್ತರಾದ ಸಾಮವೇದಿ**
❖ ಡಾ. ಎಚ್.ಎಮ್. ಚನ್ನಪ್ಪಗೋಳ / 14

3. **ಕಾ.ತ. ಚಿಕ್ಕಣ್ಣನವರ 'ಮೋಡ ನೆರಳ ನಿರಾಳ' ಭೂಮಿತತ್ವದ ಕಥೆಗಳು**
❖ ಡಾ. ಜಾಜಿ ದೇವೇಂದ್ರಪ್ಪ / 19

4. **ಜೆ.ಪಿ. ರಾಜರತ್ನಂ ಅವರ ದಾಂಪತ್ಯ ಗೀತೆಗಳಲ್ಲಿ ಆತ್ಮಚರಿತ್ರಾತ್ಮಕ ಅಂಶಗಳು**
❖ ಡಾ. ಜ್ಯೋತಿ ಎಸ್.ಬಿ. / 25

5. **ಆಚಾರ್ಯ ಶಾಂತಿಸಾಗರ ಮಹಾರಾಜರು ಮತ್ತು ಅವರ ಕೊಣ್ಣೂರು ಚಾತುರ್ಮಾಸದ ವಿಶೇಷತೆಗಳು (ಕ್ರಿ.ಶ. 1872–1955)**
❖ ಡಾ. ಅಪ್ಪಣ್ಣ ಎನ್. ಹಂಜೆ / 31

6. **ಜಾನಪದ : ಬೆಟಗೇರಿಯವರ ದೃಷ್ಟಿ**
❖ ಡಾ. ಮೋಹನ ಕುಂಟಾರ್ / 40

7. **ವಿಜ್ಞಾನ ಸೃಷ್ಟಿಸುವ ಸತ್ಯದ ಸ್ವರೂಪ ಮತ್ತು ವೈಜ್ಞಾನಿಕ ಮನೋಧರ್ಮ ಎನ್ನುವ ಜನಪ್ರಿಯ ಪರಿಕಲ್ಪನೆ**
❖ ಡಾ. ನಾಗೇಶ ಡೂಗನವರ / 48

8. **ಕನ್ನಡದಲ್ಲಿ ಗದ್ಯಸಾಹಿತ್ಯ**
❖ ಡಾ. ಪಾಟೀಲ ಶ್ರೀಕಾಂತ ವಿ / 51

9. **ಅಲ್ಲಮನ ಬೆಡಗಿನ ವಚನಗಳು**
❖ ಡಾ. ಎಸ್. ಸಿದ್ದೇಗೌಡ / 54

10. **ಹಸ್ತಪ್ರತಿಗಳ ಪ್ರಕಾರಗಳು ಮತ್ತು ಸಂರಕ್ಷಣೆ**
❖ ಡಾ. ರೋಹಿಣಿ ಹಿರೇಶೆಡ್ಡಿ / 58

11. **ಅಕ್ಕಮಹಾದೇವಿಯ ವಚನಗಳಲ್ಲಿ ಸಾಹಿತ್ಯ ಸೌಂದರ್ಯ : ಒಂದು ನೋಟ**
❖ ಡಾ. ರಂಗಲಕ್ಷ್ಮಿ ಪಿ.ಎ. / 65

12. **ವೀಣಾ ಶಾಂತೇಶ್ವರ ಅವರ ಕತೆಗಳಲ್ಲಿ ಸ್ತ್ರೀವಾದ : ಸಾಂಸ್ಕೃತಿಕ ಮುಖಾಮುಖಿ**
❖ ಡಾ. ರಾಮರೆಡ್ಡಿ ಎಸ್. ರಡ್ಡೇರ / 69

13. ಸಿರಿ ಸಂಧಿ : ಸಂಶೋಧನೆಗೊಂದು ಮಾರ್ಗದರ್ಶಿ ಕೃತಿ
❖ ಡಾ. ರೋಹಿಣಾಕ್ಷ ಶಿರ್ಲಾಲು / 74

14. ಕರ್ನಾಟಕದ ಜೀವನಾಡಿ ಕಾವೇರಿ : ಒಂದು ಐತಿಹಾಸಿಕ ಅಧ್ಯಯನ
❖ ಸರಸ್ವತಿ ಕೆ / 79

15. ಮಹಾದಾರ್ಶನಿಕ ಬಸವಣ್ಣ
❖ ಡಾ. ಶಂಕರೇಗೌಡ ಎನ್.ಎಸ್. / 83

16. ಕುವೆಂಪು ಅವರ 'ರೈಲ್ ರಸ್ತೆ' ಕವಿತೆಯಲ್ಲಿನ ಆಧುನಿಕತೆಯ ಪ್ರತಿನಿಧೀಕರಣ ಹಾಗೂ ಪರಿಣಾಮಗಳು
❖ ಡಾ. ಸಂಗೀತ ಪಿ. / 87

17. ಸತ್ಯಕ್ಕನ ವಚನಗಳಲ್ಲಿ ಭಕ್ತಿ
❖ ಡಾ. ಪಿ.ಬಿ. ಪ್ರಸನ್ನ / 90

18. ಕರ್ನಾಟಕ ಏಕೀಕರಣ ಹೋರಾಟ ರಾಜಕೀಯ–ಚಾರಿತ್ರಿಕ ಬೆಳವಣಿಗೆ
❖ ಡಾ. ಹೇಮಲತ ಹೆಚ್.ಆರ್ / 94

19. ಅಲೆಮಾರಿ ಸಮುದಾಯಗಳ ಪ್ರದರ್ಶನಾತ್ಮಕ ಕಲೆಗಳಲ್ಲಿ ಬದುಕಿನ ಸಂಕಥನ
❖ ಡಾ. ಪಾಪಯ್ಯ. ಬಿ / 97

20. ಮಕ್ಕಳ ಕವಿ ಈಶ್ವರ ಕಮ್ಮಾರ
❖ ಡಾ. ಎ. ಅಯ್. ಹಂಜಗಿ / 102

21. ಪುರಂದರದಾಸರು ಕಂಡ ಸಮಾಜ
❖ ಡಾ. ಎಚ್. ಜೆ. ಭೀಮೇಶ್ / 107

22. ಮಹಮೂದ್ ಗಾವಾನ್ : ರಾಜಕೀಯ ಕ್ರೌರ್ಯ
❖ ಡಾ. ಅಶ್ವಿನಿ ಆರ್.ಎಸ್. / 112

23. ನಿಸಾರ್ ಅಹಮದ್–ಪಾಬ್ಲೋ ನೆರೂಡ : ಕಾವ್ಯಾನುಸಂಧಾನ
❖ ಡಾ. ಅಮರೇಂದ್ರ ಶೆಟ್ಟಿ ಆರ್ / 116

24. ನವಶೋಧಿತ ಮುರಗೋಡ ಶಾಸನ
❖ ಡಾ. ಕೆ. ಎಸ್. ಪಾಟೀಲ / 122

25. ಕಿ.ರಂ. ನಾಗರಾಜ ಅವರ 'ಕಾಲಜ್ಞಾನಿ ಕನಕ' ಮತ್ತು 'ನೀಗಿಕೊಂಡ ಸಂಸ' ನಾಟಕಗಳು: ಒಂದು ವಿವೇಚನೆ
❖ ಡಾ. ಮಾದಯ್ಯ ಮಾಕನಹಳ್ಳಿ / 125

26. ಸಂಸ್ಕೃತಿ– ಒಂದು ಟಿಪ್ಪಣಿ
❖ ಅಜಕ್ಕಳ ಗಿರೀಶ ಭಟ್ / 128

ಸಂಪಾದಕೀಯ

ಸಂಶೋಧನೆ ಹಾಗೂ ವಿಮರ್ಶಾಲೇಖನಗಳನ್ನು ಮಾತ್ರ ಪ್ರಕಟಿಸುವ ಪತ್ರಿಕೆಗಳನ್ನು ಓದುವವರು ಬಹಳ ಕಡಿಮೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಸಾಹಿತ್ಯ, ಸಂಸ್ಕೃತಿ ಮತ್ತು ಸಂಶೋಧನೆಯ ಕ್ಷೇತ್ರವೆಂದರೆ ಅದು ಕಡೆಗಣಿಸಬಹುದಾದ ಕ್ಷೇತ್ರವಲ್ಲ. ಕಷ್ಟನಷ್ಟಗಳಾದರೂ ಇಂತಹ ಕೆಲಸಗಳು ನಡೆಯುತ್ತಲೇ ಇರಬೇಕು. 'ಚಿಂತನ ಬಯಲು' ಪತ್ರಿಕೆಯಲ್ಲಿ ತರುಣ ಪೀಳಿಗೆಯ ಬೋಧಕರು ಹಾಗೂ ಪಿಹೆಚ್.ಡಿ. ಸಂಶೋಧಕರ ಲೇಖನಗಳೆಲ್ಲ ಇರುವುದರಿಂದ, ಇಲ್ಲಿ ಪ್ರಕಟವಾಗುವ ಎಲ್ಲ ಲೇಖನಗಳು ಸಂಪೂರ್ಣ ತೃಪ್ತಿಯನ್ನು ನೀಡುತ್ತವೆ ಎಂದೇನಿಲ್ಲ. ಅತ್ಯುತ್ತಮ ಗುಣಮಟ್ಟದ ಲೇಖನಗಳ ಕೊರತೆ ಇಂತಹ ಪತ್ರಿಕೆಗಳಿಗೆ ಇದ್ದೇ ಇರುತ್ತದೆ. ವೈವಿಧ್ಯಮಯ ಲೇಖನಗಳಿವೆ ಎಂಬುದು ಸಮಾಧಾನದ ವಿಚಾರ. ಕನ್ನಡ ಅಧ್ಯಯನ ಎನ್ನುವ ವಿಭಾಗದಲ್ಲಿ ಬರುವ ಹೆಚ್ಚುಕಡಿಮೆ ಎಲ್ಲ ವಿಷಯಗಳ ಬಗೆಗಿನ ಲೇಖನಗಳು ಈ ಸಂಚಿಕೆಯಲ್ಲಿ ಇವೆ. ನಿಘಂಟುಶಾಸ್ತ್ರ, ಸಾಹಿತ್ಯ ವಿಮರ್ಶೆ, ವಚನಗಳ ಅಧ್ಯಯನ, ಶಾಸನಗಳ ಅಧ್ಯಯನ, ಜಾನಪದ ಸಾಹಿತ್ಯ, ಜೈನ ಆಚರಣೆ/ಪರಂಪರೆ, ಹಸ್ತಪ್ರತಿಶಾಸ್ತ್ರ, ತೌಲನಿಕ ಅಧ್ಯಯನ ಹೀಗೆ ವಿವಿಧ ವಿಷಯಗಳನ್ನು ಒಳಗೊಂಡ ಲೇಖನಗಳು ಇಲ್ಲಿವೆ. ಲೇಖನಗಳಿಗೆ ಓದುಗರ ಪ್ರತಿಸ್ಪಂದನೆ ಮಾತ್ರ ತೀರ ನಿರಾಶಾದಾಯಕ. ಲೇಖನಗಳನ್ನು ಬರೆಯುವ ಸಂಶೋಧಕರು ಕೂಡ ಇತರರ ಲೇಖನಗಳನ್ನು ಓದಿ ಪ್ರತಿಕ್ರಿಯೆಗಳನ್ನು ನೀಡುವುದಿಲ್ಲ. ಈ ಪರಿಸ್ಥಿತಿ ಬದಲಾಗಬೇಕು.

–ಸಂ.

ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟು ಭಾಗ–1 : ಸಂಕ್ಷಿಪ್ತ ವಿಮರ್ಶೆ

(ಮೂಲ ತೆಲುಗುಭಾಷಾ ಲೇಖಕರು : **ಪುಟ್ಟಪರ್ತಿ ಶ್ರೀನಿವಾಸಾಚಾರ್ಯುಲು**)

ಕನ್ನಡ ಭಾಷಾ ಅನುವಾದಕರು

ಎಸ್. ಕಾರ್ತಿಕ್

#413, ಕರ್ನಾಟಕ 'ಡಿ' ಗ್ರೂಪ್ ಎಂಪ್ಲಾಯಿಸ್ ಲೇಔಟ್, 1ನೆಯ ಬ್ಲಾಕ್, 6ನೆಯ ಮುಖ್ಯರಸ್ತೆ, ಲಿಂಗಧೀರನಹಳ್ಳಿ, ಅಂದ್ರಹಳ್ಳಿ ಮುಖ್ಯರಸ್ತೆ, ಬೆಂಗಳೂರು–560091

"ಇಂಗ್ಲಿಷು–ಕನ್ನಡ ನಿಘಂಟುವು–ಒಂದನೆಯ ಭಾಗವು (A ಯಿಂದ Billow ವರೆಗೆ). ಪುಟಗಳು 96. ಪ್ರಧಾನಸಂಪಾದಕರು : ಬಿ. ವೆಂಕಟನಾರಣಪ್ಪ, ಪ್ರಕಾಶಕರು : ಮೈಸೂರು ವಿಶ್ವವಿದ್ಯಾ[ನಿ]ಲಯ, ಬೆಂಗಳೂರು."[1]

ಇಂಗ್ಲಿಷ್ ವಾಙ್ಮಯ ಪ್ರಪಂಚದಲ್ಲಿ ಸುಪ್ರಸಿದ್ಧನಾದ [ಸ್ಯಾಮ್ಯುಯಲ್] ಜಾನ್ಸನ್ (Johnson)[2] ಇಂಗ್ಲಿಷ್ ಭಾಷೆಯನ್ನು ಕುರಿತು ಕೆಳಗಿನಂತೆ ಹೇಳಿರುತ್ತಾನೆ.[3]

"...that it is copious without order and energetic without rules; that wherever the view is turned there is perplexity to be disentangled and confusion to be regulated; that choice is to be made out of the boundless variety without an established principle of selection; adulterations are to be rejected or received without the suffrages of writers of classical reputation or acknowledged authority."

ಇಂತಹ ಇಂಗ್ಲಿಷ್ ಭಾಷೆಯನ್ನು ಸಾಧಿಸಬೇಕೆಂದರೆ ಸರಿಯಾದ ನಿಘಂಟುಗಳಿರಬೇಕು. ಇಲ್ಲವಾದರೆ ಸಾಧ್ಯವಾಗುವುದಿಲ್ಲ. ವಾಕ್ಯವೊಂದರಲ್ಲಿರುವ ಪದಗಳಿಗೆಲ್ಲ ಸಂದರ್ಭದ ಗ್ರಹಿಕೆಯಿಂದ ಯಾವುದೋ ವಿಧದಲ್ಲಿ ಅರ್ಥ ಹೊಂದಿಕೆಯಾದರೂ ನಿಖರತೆಯನ್ನು ತಿಳಿಯಲು, ಅರ್ಥದಲ್ಲಿನ ಸೂಕ್ಷ್ಮಭೇದಗಳನ್ನು ಅರಿತುಕೊಳ್ಳಲು ಉತ್ತಮವಾದ ನಿಘಂಟು ಎಂಬುದು ಅತ್ಯಾವಶ್ಯಕವಾಗಿದೆ. ಕನ್ನಡ ಪದಗಳಿಗೆ ಇಂಗ್ಲಿಷ್ ಅರ್ಥಗಳನ್ನು ಸೂಚಿಸಿರುವ ಒಂದು ಉತ್ತಮ ನಿಘಂಟನ್ನು ಕಿಟೆಲ್ (Kittel) ಅವರು ಬಹಳ ಕಾಲದ ಹಿಂದೆಯೇ ರಚಿಸಿದ್ದರೂ[4] ಈ ನಿಘಂಟು ಕನ್ನಡ ಭಾಷೆಯನ್ನು ಕಲಿಯಬೇಕೆನ್ನುವವರಿಗೆ ಹೆಚ್ಚಾಗಿ ಉಪಯೋಗವಾಗುತ್ತದೆಯೇ ಹೊರತು ಇಂಗ್ಲಿಷ್ ಕಲಿಯುವವರಿಗೆ ಅಷ್ಟಾಗಿ ಉಪಯೋಗವಾಗದು. ಈ ಕೊರತೆಯನ್ನು ನೀಗಲು ಇಂತಹ ನಿಘಂಟನ್ನು ರಚಿಸುವುದಕ್ಕಾಗಿ ಮೈಸೂರು ವಿಶ್ವವಿದ್ಯಾ[ನಿ]ಲಯದವರು ಪ್ರಯತ್ನವನ್ನು ಮಾಡಿರುತ್ತಾರೆ.

ಇಂತಹ ನಿಘಂಟು ಏಕವ್ಯಕ್ತಿ ಪ್ರಯತ್ನವಾಗಿರದೆ, ಇದಕ್ಕೊಂದು ಸಂಪಾದಕವರ್ಗ ಏರ್ಪಾಡಾಗಿರುವುದು ಒಂದು ವಿಶೇಷವಾಗಿದೆ. ಮುಖ್ಯಸಂಪಾದಕರು ಬಿ. ವೆಂಕಟನಾರಣಪ್ಪನವರು.[5] ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷರಾಗಿರುವ

ಗುಂಡಪ್ಪನವರು[6], [ಮೈಸೂರು] ವಿಶ್ವವಿದ್ಯಾ[ನಿ]ಲಯದ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಬಿ.ಎಂ. ಶ್ರೀಕಂಠಯ್ಯನವರೇ ಮೊದಲಾದವರು[7] ಸಂಪಾದಕವರ್ಗದಲ್ಲಿರುವುದರಿಂದ ಈ ನಿಘಂಟು ತಪ್ಪದೇ ಅಧಿಕ ಪ್ರಾಮುಖ್ಯವನ್ನು ಪಡೆಯುತ್ತದೆ.

ನಿಘಂಟು ರಚನೆ ಎಂಬುದು ಕಷ್ಟಸಾಧ್ಯವಾದ ಕಾರ್ಯವಾಗಿದೆ. ಆದರೆ ಇದುವರೆಗೂ ಪ್ರಕಟವಾಗಿರುವ ಎಷ್ಟೋ ಇಂಗ್ಲಿಷ್ ನಿಘಂಟುಗಳ ಸಹಾಯವನ್ನು ಪಡೆದುಕೊಂಡು ಒಂದು ಇಂಗ್ಲಿಷ್–ಕನ್ನಡ ನಿಘಂಟನ್ನು ರಚಿಸುವುದು ಸ್ವಲ್ಪ ಸುಕರವೇ ಆಗಿದೆ. ಆದುದರಿಂದಲೇ ಈ ನಿಘಂಟು ರಚನೆಗೆ ಮೊದಲು ಸಂಪಾದಕ ವರ್ಗದವರು ಇಂಗ್ಲಿಷ್ ನಿಘಂಟುಗಳಲ್ಲಿ ಉತ್ತಮವಾದ ಆಕ್ಸ್‌ಫರ್ಡ್ ಸಂಕ್ಷಿಪ್ತ ನಿಘಂಟನ್ನು (Oxford Concise Dictionary) ಆಧಾರವಾಗಿರಿಸಿಕೊಂಡಿದ್ದಾರೆ.[8] ಪದಗಳ ಅರ್ಥಗಳನ್ನು ಚರ್ಚಿಸುವಾಗ ಒಂದೊಂದು ಸಾರಿ ಆಕ್ಸ್‌ಫರ್ಡ್ ಸಂಕ್ಷಿಪ್ತ ನಿಘಂಟನ್ನು ಮಾತ್ರವಲ್ಲದೇ ಚಿಕ್ಕ ಆಕ್ಸ್‌ಫರ್ಡ್ ನಿಘಂಟು(Shorter Oxford Dictionary), ವೆಬ್‌ಸ್ಟರ್ ನಿಘಂಟುಗಳನ್ನು (Webster Dictionary) ಕೂಡ ಪರಿಶೀಲಿಸಿ ಅವುಗಳಲ್ಲಿನ ವಿಷಯಗಳನ್ನು ಸಹ ಕೆಲಮಟ್ಟಿಗೆ ಉಪಯೋಗಿಸಿಕೊಂಡಿದ್ದಾರೆ.[9] ಆದರೆ ಆಕ್ಸ್‌ಫರ್ಡ್ ನಿಘಂಟಿನಲ್ಲಿರುವಂತೆ ಪ್ರತಿಪದವನ್ನು ಪ್ರತ್ಯೇಕವಾಗಿ ನೀಡದೆ ಪ್ರಧಾನಪದಗಳ ಶೀರ್ಷಿಕೆಯ ಅಡಿಯಲ್ಲಿಯೇ ಆ ಪದಗಳ ನಾಮವಾಚಕಗಳು ಮೊದಲಾದ ಜನ್ಯ [ಮತ್ತು ಸಮಾಸ] ಪದಗಳನೆಲ್ಲವನ್ನೂ ಸೇರಿಸಿದ್ದಾರೆ.[10] ಒಂದೊಂದು ಸಂದರ್ಭದಲ್ಲಿ ಈ ಪದ್ಧತಿ[ಭಾಷೆಯನ್ನು ಕಲಿಯ ಹೊರಡುವ] ಪ್ರಾರಂಭಿಕರಿಗೆ ಅಷ್ಟು ಅನುಕೂಲವಾಗಿಲ್ಲವೆಂಬಂತೆ ತೋರುತ್ತದೆ. ಉದಾಹರಣೆಗೆ Advisory, Adnominal, Abrasive ಎನ್ನುವ ಪದಗಳನ್ನು ಪರಿಶೀಲಿಸಬಹುದು.[11] ಇವುಗಳಿಗೂ Advice, Adnown, Abrade ಎನ್ನುವ ಪದಗಳಿಗೂ ಬರಹದಲ್ಲಿ ಸ್ವಲ್ಪ ಭೇದಗಳು ಇರುವ ಕಾರಣ ಭಾಷೆಯನ್ನು ಅಷ್ಟಾಗಿ ಅರಿಯದ ಪ್ರಾರಂಭಿಕರಿಗೆ ಮೇಲಿನ ಪದಗಳನ್ನೇ ಮುಖ್ಯ ಪದಗಳ ಅಡಿಯಲ್ಲಿ ನೋಡಬೇಕೆಂಬುದು ತಿಳಿಯದೆ ಸ್ವಲ್ಪ ಶ್ರಮ ಉಂಟಾಗಬಹುದು. ಆದರೂ ಈ ನಿಘಂಟಿನಲ್ಲಿ ಕೆಲವು ಸಂದರ್ಭಗಳಲ್ಲಿ ಮಾತ್ರ ಇಂತಹ ಪದಗಳನ್ನು ಬೇರೆ ಬೇರೆಯಾಗಿಯೂ ನೀಡಲಾಗಿದೆ. ಉದಾಹರಣೆಗೆ Accidence, Accident.

ಕೆಲವು ಪದಗಳ ಅರ್ಥಗಳು ಸಂದೇಹಕ್ಕೆ ಎಡೆಗೊಡುವಂತಿವೆ. Anatomy ಎನ್ನುವ ಪದಕ್ಕೆ ಆಕ್ಸ್‌ಫರ್ಡ್ ಸಂಕ್ಷಿಪ್ತ ನಿಘಂಟಿನಲ್ಲಿ (Popular) Skeleton, Mummy, Emaciated Creature ಎಂದು ಇದ್ದರೂ ಈ ನಿಘಂಟಿನಲ್ಲಿ "(ರೂಢಿಯಾಗಿ) ಅಸ್ಥಿಪಂಜರ; ರಕ್ಷಿತ ಶವ (ಕೊಳೆಯದಂತಿಟ್ಟಿರುವ ಹೆಣ); (ರೂಪಕವಾಗಿ) ಜೀವಚ್ಛವಹಿ ಎಂದು ಇದೆ. ವಿರೂಢಿಯಾಗಿ" ಎಂದು ಹೇಳಿರುವ ಕಾರಣ ಮೇಲಿನ ಅರ್ಥವು ಸರಿಯಾದುದು ಎಂಬ ಅಭಿಪ್ರಾಯ ಮೂಡುವುದಕ್ಕೆ ಆಸ್ಪದವಿದೆ. ಒಂದು 'Emaciated Creature' ಎನ್ನುವ ಜೀವಚ್ಛವ ಎಂಬುದಾಗಿ ತಿದ್ದುಪಡಿ ಮಾಡುವುದು ಸೌಷ್ಠವವೆಂದು ಹೇಳಬೇಕಾಗಿಲ್ಲ.[12]

ಕೆಲವು ಮುಖ್ಯಪದಗಳಿಗೆ ನೀಡಿರುವ ಪರ್ಯಾಯ ಪದಗಳು ಸರ್ವಜನ ಸಮ್ಮತವೆಂದು ಹೇಳುವಂತಿಲ್ಲ. Astronomy ಖಗೋಳಶಾಸ್ತ್ರ ಎಂದು ಹೇಳುವುದಕ್ಕಿಂತ ಜ್ಯೋತಿಃಶಾಸ್ತ್ರವೆಂದೋ ನಕ್ಷತ್ರಶಾಸ್ತ್ರವೆಂದೋ ಹೇಳಿದರೆ ಚೆನ್ನಾಗಿರುತ್ತಿತ್ತೇನೋ.[13] Meteorology ಪವನಶಾಸ್ತ್ರವೆಂದು ಹೇಳಿರುವುದರಲ್ಲಿ ಲಕ್ಷಣವು ಅವ್ಯಾಪ್ತಿ ದೋಷಕ್ಕೆ

ಗುರಿಯಾಗುತ್ತಿದೆ.[14] Physics ಅನ್ನು ಭೌತಿಕವಿಜ್ಞಾನ ಎಂದು ಹೇಳಿದ ಪಕ್ಷದಲ್ಲಿ Geologyಯನ್ನು ಭೌಮವಿಜ್ಞಾನ ಎಂದು ಹೇಳಬಾರದೇಕೆ? ಭೂವಿಜ್ಞಾನ ಎನ್ನುವುದರಲ್ಲಿ ವಿಶೇಷವೇನು?[15] Archaeology ಪ್ರಾಚೀನ ವಸ್ತುಶಾಸ್ತ್ರವೆಂದು[16] ಹೇಳಿದ ಕಾರಣ ಪ್ರಾಮುಖ್ಯವೆಲ್ಲವೂ ನಿರ್ಜೀವವಾದ ಪ್ರಾಚೀನ ವಸ್ತುಸಮೂಹಕ್ಕೆ ನಿಗದಿಯಾಯಿತೇ ಹೊರತು ಆ ವಸ್ತುಗಳನ್ನು ನಿರ್ಮಿಸಿದ ಮನುಷ್ಯರಿಗೆ ಅನ್ವಯವಾಗದೇ ಹೋಯಿತು.

ಪದಗಳ ಅರ್ಥಗಳನ್ನು ವಿಶದಪಡಿಸುವುದು ಮಾತ್ರವಲ್ಲದೆ, ಸಾಧ್ಯವಿರುವ ಮಟ್ಟಿಗೂ ಪರ್ಯಾಯ ಪದಗಳನ್ನು ನೀಡುವುದೇ ನಿಘಂಟುಕಾರರ ಪ್ರಧಾನ ಕರ್ತವ್ಯ. ಪದಗಳ ವಿವಿಧಾರ್ಥಗಳನ್ನು ಅವುಗಳ ಪ್ರಯೋಗಗಳಿಂದ ತಿಳಿಯಬೇಕೆ ಹೊರತು ಇತರ ವಿಧಗಳಿಂದ ಬೋಧೆಯಾಗದು. ಆದುದರಿಂದಲೇ ಆಧುನಿಕ[ಇಂಗ್ಲಿಷ್] ನಿಘಂಟುಗಳಲ್ಲಿ ಪ್ರತಿ ಪದದ ಕೆಳಗೆ ಅನೇಕ ವಾಕ್ಯಗಳನ್ನು ಉದಾಹರಣೆಗೆಂದು ನೀಡಿರುತ್ತಾರೆ. [ಅದೇ ರೀತಿಯೇ ವಾಕ್ಯಗಳನ್ನು ಮತ್ತು ಪದಗುಚ್ಛಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ನಿಘಂಟಿನಲ್ಲಿಯೂ ನೀಡಲಾಗಿದೆ]. ಇದರಿಂದ ಮಾತ್ರವೇ ಈ ನಿಘಂಟು ಹೆಚ್ಚು ಪ್ರಾಮುಖ್ಯಕ್ಕೆ ಅರ್ಹವಾಗಿದೆಯೆಂದು ತಿಳಿಯಬಾರದು. ಅಷ್ಟೇ ಅಲ್ಲ ಆಕ್ಸ್‌ಫರ್ಡ್ ಸಂಕ್ಷಿಪ್ತ ನಿಘಂಟು ಇಂದು ಪ್ರಚಾರದಲ್ಲಿರುವ ಪದಗಳು ಮತ್ತು ಅರ್ಥಗಳನ್ನು ಮಾತ್ರವೇ ವಿಶದೀಕರಿಸುತ್ತದೆ. ಆದರೆ ಅದನ್ನೇ ಆಧಾರವಾಗಿರಿಸಿಕೊಂಡಿರುವ ಈ ಕನ್ನಡ ನಿಘಂಟು ಇಂಗ್ಲಿಷಿನ ಪ್ರಾಚೀನ ಪುಸ್ತಕಗಳನ್ನು ಓದುವಾಗ ಅಷ್ಟು ಉಪಯೋಗಕ್ಕೆ ಬರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಇಂಗ್ಲಿಷಿನಲ್ಲಿಯೇ ಅರ್ಥಗಳನ್ನು ನೀಡುವ ಇಂಗ್ಲಿಷ್ ನಿಘಂಟುಗಳನ್ನು ನೋಡಬಹುದೆಂದು ಸಮಾಧಾನವನ್ನು ಹೇಳಬಹುದು. ಆದರೆ ಸಂಪೂರ್ಣವಾಗಿ ಈ ಸೂತ್ರವನ್ನೇ ಆಧರಿಸಿಕೊಂಡು ವಾದಿಸಿದರೆ ಅಂತಹ ನಿಘಂಟುಗಳ ಪ್ರಾಮುಖ್ಯವೇ ಸಂದೇಹಕ್ಕೆ ಆಸ್ಪದವಾಗುತ್ತದೆ. ಆದುದರಿಂದ ಕನ್ನಡ [=ಮೈಸೂರು] ವಿಶ್ವವಿದ್ಯಾ[ನಿ]ಲಯದವರು ಮಾಡಿರುವ ಇಂತಹ ಕಾರ್ಯವು ಮತ್ತಷ್ಟು ಉತ್ತಮವಾಗಿ ನೆರವೇರಿದರೆ ಎಷ್ಟೋ ಚೆನ್ನಾಗಿರುತ್ತದೆ ಎಂದು ಓದುಗರಿಗೆ ತೋರಬಹುದು. ಮೈಸೂರು ವಿಶ್ವವಿದ್ಯಾನಿಲಯದವರು ಸಾವಿರಕ್ಕೂ ಅಧಿಕ [=ಅಧಿಕ ಸಂಖ್ಯೆಯ] ನಿಘಂಟುಗಳನ್ನು ಪ್ರಚುರಪಡಿಸುವ ಬದಲು ಜನಸಾಮಾನ್ಯರಿಗೆ ಉಪಯೋಗವಾಗುವ ನಿಘಂಟನ್ನು ಅಪಾರ ವೆಚ್ಚವನ್ನೂ ಲೆಕ್ಕಿಸದೆ ಅಧಿಕ ಶ್ರಮದಿಂದ ಸಿದ್ಧಪಡಿಸಿ, ಕಡಿಮೆ ಬೆಲೆಗೆ ಪ್ರಕಟಿಸಿರುವುದು ಅತ್ಯಂತ ಪ್ರಶಂಸಾರ್ಹ ಕಾರ್ಯವಾಗಿದೆ.[17]

ಪ್ರಧಾನ ಪಾಠಶಾಲೆ [=ಉನ್ನತ ವ್ಯಾಸಂಗದ ಶಾಲೆ] ಮತ್ತು ಕಲಾಶಾಲೆಗಳಲ್ಲಿ ಕೂಡ ಮಾತೃಭಾಷೆಯಲ್ಲಿಯೇ ವಿದ್ಯಾವ್ಯಾಸಂಗವನ್ನು ಮಾಡಬೇಕೆಂದು ವಾದಿಸುವವರು, ಇಂತಹ ನಿಘಂಟುಗಳಿಲ್ಲದೆ ಮಾತೃಭಾಷೆಗೆ [ಅನ್ಯಭಾಷೆಯ ರಚನೆಗಳನ್ನು] ಭಾಷಾಂತರ ಮಾಡುವುದು ದುಃಸಾಧ್ಯವೆಂಬುದನ್ನು ಗಮನಿಸುವುದಿಲ್ಲ. [ಇದಕ್ಕೆ] ಭೌತಿಕ ರಸಾಯನಾದಿ ಶಾಸ್ತ್ರಗ್ರಂಥಗಳಿರಲಿ, ಸಾಮಾನ್ಯಗ್ರಂಥಗಳು ಕೂಡ [ಹೊರತಲ್ಲ]. ಇಂಗ್ಲಿಷಿನಿಂದ ಮಾತೃಭಾಷೆಗೆ ಭಾಷಾಂತರ ಮಾಡುವಾಗ ಎಷ್ಟೋ ಪದಗಳಿಗೆ ಪರ್ಯಾಯ ಪದಗಳು ಸುಲಭವಾಗಿ ನೆನಪಿಗೆ ಬಾರದೆ ಇರುವುದು ದುಸ್ಸಾಧ್ಯ ಸಂಗತಿ ಎಂದು ಹೇಳಬೇಕು.[18] ಈ ನಿಘಂಟಿನ ಪ್ರಕಟನೆಯಿಂದ ಕನ್ನಡ ದೇಶದವರಿಗೆ ಇಂತಹ ಸಮಸ್ಯೆಗಳು ಬಹಳ ಮಟ್ಟಿಗೆ ನಿವಾರಣೆಯಾಗುತ್ತದೆ.[19]

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಈ ನಿಘಂಟಿನ ಮೊದಲ ಭಾಗ 1936ರಲ್ಲಿ ಮುದ್ರಿತವಾಯಿತು {ಅನಂತರ ಮುಂದಿನ ಸಂಚಿಕೆಗಳು ಭಾಗಭಾಗವಾಗಿ ಪ್ರಕಟವಾದುವೇ ತಿಳಿಯದು}. ಪ್ರಕಟನೆ ಮೈಸೂರು ವಿಶ್ವವಿದ್ಯಾನಿಲಯದ್ದೇ ಆದರೂ ಕೆಲಸವೆಲ್ಲ ನಡೆದದ್ದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ. ಮುದ್ರಣ ನಡೆದದ್ದು ಕೂಡ ಬೆಂಗಳೂರಿನ ಸರ್ಕಾರಿ ಮುದ್ರಣಾಲಯದಲ್ಲಿಯೇ ಎಂಬುದು ಗಮನಿಸತಕ್ಕುದಾಗಿದೆ. ಈ ನಿಘಂಟು ಸಿದ್ಧವಾಗುತ್ತಿದ್ದ ರೀತಿಯನ್ನು, ಸ್ವರೂಪವನ್ನು ಕುರಿತು ಅದರ ಸಂಪಾದಕ ವರ್ಗ ದಲ್ಲಿಯೇ ಒಬ್ಬರಾಗಿ ಇದ್ದ {ಸಾಹಿತ್ಯಸಹಾಯಕ/ ಸಹಾಯಕ ಪಂಡಿತ ಎಂಬ ಹುದ್ದೆಯಲ್ಲಿದ್ದ} ಕ.ವೆಂ. ರಾಘವಾಚಾರ್ಯರು ಸ್ವಲ್ಪಮಟ್ಟಿಗೆ ಬರೆದಿದ್ದಾರೆ. ಅವರು ದಾಖಲಿಸಿರುವ ಅನೇಕ ವಿವರಗಳು ಸ್ವಾರಸ್ಯಕರವಾಗಿವೆ. ನೋಡಿ : ನಂದಾನೆನಪು, ಉಷಾ ಸಾಹಿತ್ಯ ಮಾಲೆ, ಮೈಸೂರು–1973, ಪುಟ 371–387
2. ಜಾನ್ಸನ್ ಮತ್ತು ಆತನ ನಿಘಂಟಿನ ಬಗೆಗೆ ಹೆಚ್ಚಿನ ವಿವರಗಳಿಗೆ ಕೆಳಗೆ ಸೂಚಿಸಿರುವ ಆಕರಗಳನ್ನು ಅಗತ್ಯವಾಗಿ ಗಮನಿಸಬೇಕು.

- The Life of Samuel Johnson-James Boswell, Penguin Books, First published-1791; First published in Penguin Classics, New York-2008
- Academy Dictionaries 1600-1800 by John Considine, Cambridge University Press, 2014, pp 121-143 & 209-215
- ಡಾ.ಜಾನ್‌ಸನ್ ಅವರ ನಿಘಂಟು–ತಿ.ತಾ.ಶರ್ಮ, ಕನ್ನಡ ನುಡಿ 5–15, 1943, ಫೆಬ್ರುವರಿ 5, ಪುಟ 77, 81–82
- ಜಾನ್ಸನ್ನನ ನಿಘಂಟು–ಬಾ.ವೇ. ಶ್ರೀಧರ, ಗ್ರಂಥಲೋಕ 13–10, (ದಿನಾಂಕ: 1–10–1989), ಪುಟ 1–5

3. A Dictionary of the English Language (Volume-1)-Samuel Johnson, London-1799, The Eight Edition, Corrected and Revised, Preface p 1 [ಮೂಲ ತೆಲುಗು ಲೇಖನದಲ್ಲಿ ಉದ್ಧರಿಸಿರುವ ಈ ಭಾಗವು ಸ್ವಲ್ಪ ವ್ಯತ್ಯಾಸಗಳಿಂದ ಕೂಡಿದೆ. ಮೂಲ ಲೇಖಕರು ಜಾನ್ಸನ್ ನಿಘಂಟಿನ ಯಾವ ಆವೃತ್ತಿಯನ್ನು ಅವಲಂಬಿಸಿದ್ದಾರೆ ಎಂದು ತಿಳಿಯುವಂತಿಲ್ಲ. ಆದ ಕಾರಣ ಪ್ರಕೃತ ಅನುವಾದಕನು ಗಮನಿಸಿರುವ 1799ರ ಆವೃತ್ತಿಯಲ್ಲಿನ ಪಾಠವನ್ನು ಕನ್ನಡಾನುವಾದ ಸಹಿತ ಇಲ್ಲಿ ಉದ್ಧರಿಸಿಕೊಡಲಾಗಿದೆ].

   when I took the first survey of my undertaking, I found our speech copious without order, and energetic without rules; wherever I turned my View, there was perplexity to be disentangled, and confusion to be regulated; choice was to be made out of boundless variety, without any established principle of selection; adulterations were to be detected, without a settled test of purity; and modes of expression to be rejected or received, without the suffrages of any writers of classical reputation or acknowledged authority.

   {ನಾನು ನನ್ನ ಕಾರ್ಯದ ಮೊದಲ ಸಮೀಕ್ಷೆಯನ್ನು ಕೈಕೊಂಡಾಗ, ನಮ್ಮ ಭಾಷೆಯು ಕ್ರಮರಹಿತವಾಗಿ ಸಮೃದ್ಧವಾಗಿದ್ದರೂ ನಿಯಮಗಳಿಲ್ಲದೆ ಶಕ್ತಿಯುತವಾಗಿದ್ದುದನ್ನು ಕಂಡುಕೊಂಡೆ; ನಾನು ನನ್ನ ದೃಷ್ಟಿಯನ್ನು ಎಲ್ಲಿ ಹರಿಸಿದರೂ ಸುಲಭವಾಗಿ ಬಿಡಿಸಲಾಗದ

ಸಂಕೀರ್ಣತೆ ಮತ್ತು ನಿಯಂತ್ರಿಸಬೇಕಾದ ಗೊಂದಲವಿತ್ತು; ಯಾವುದೇ ಸ್ಥಾಪಿತ ಆಯ್ಕೆಯ ತತ್ತ್ವಗಳಿಲ್ಲದೆ ಅಪಾರ ವೈವಿಧ್ಯದಿಂದ ಆಯ್ಕೆ ಮಾಡಬೇಕಾಗಿತ್ತು; ಶುದ್ಧತೆಯ ಯಾವುದೇ ಸ್ಥಿರ ಪರೀಕ್ಷೆಯಿಲ್ಲದೆ ಕಲಬೆರಕೆಗಳನ್ನು ಪತ್ತೆ ಮಾಡಬೇಕಾಗಿತ್ತು; ಮತ್ತು ಯಾವುದೇ ಗೌರವಾನ್ವಿತ ಪ್ರತಿಷ್ಠೆ ಅಥವಾ ಮಾನ್ಯ ಅಧಿಕಾರವುಳ್ಳ ಲೇಖಕರ ಸಮ್ಮತಿಯಿಲ್ಲದೆ ಅಭಿವ್ಯಕ್ತಿಯ ವಿಧಾನಗಳನ್ನು ತಿರಸ್ಕರಿಸಬೇಕಾಗಿತ್ತು ಅಥವಾ ಸ್ವೀಕರಿಸಬೇಕಾಗಿತ್ತು}.

4. A Kannada-English Dictionary-F.Kittel, Basel Mission Press and Book Depot, Mangalore-1894 ; Asian Educational Services, New Delhi-Madras, Reprints-1982, 1984, 1988, 1990, 1991, 1993, 1994, pp 2 + L + 1752
5. ಬೆಳ್ಳಾವೆ ವೆಂಕಟನಾರಣಪ್ಪನವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಆ ಸಂಸ್ಥೆಯ ಅಭಿವೃದ್ಧಿ ಮತ್ತು ಪುಸ್ತಕ ಪ್ರಕಟನೆಗಳು ಮುಂತಾದ ಅನೇಕ ಸಾರ್ವಜನಿಕ ಉಪಯೋಗಿ ಕೆಲಸಗಳನ್ನು ಮಾಡಿ ಪ್ರಸಿದ್ಧರಾದ ಮಹನೀಯರು.
6. ಡಿ.ವಿ.ಜಿ ಎಂಬ ಸಂಕ್ಷಿಪ್ತಾಕ್ಷರಗಳಿಂದ ಪ್ರಸಿದ್ಧರಾಗಿದ್ದ ಡಿ.ವಿ. ಗುಂಡಪ್ಪನವರು ಕನ್ನಡ (ಆಗ ಕರ್ಣಾಟಕ) ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ಅಧ್ಯಕ್ಷರು ಮೈಸೂರು ಸಂಸ್ಥಾನದ ಯುವರಾಜರಾಗಿದ್ದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಅವರು ಎಂಬುದನ್ನು ಸ್ಮರಿಸಬೇಕು.
7. ಡಿ.ವಿ. ಗುಂಡಪ್ಪ, ಬಿ.ಎಂ.ಶ್ರೀಕಂಠಯ್ಯ, ಎ.ಆರ್. ಕೃಷ್ಣಶಾಸ್ತ್ರೀ, ಟಿ.ಎಸ್. ವೆಂಕಣ್ಣಯ್ಯ, ಸಿ.ಕೆ. ವೆಂಕಟರಾಮಯ್ಯ, ಬಿ. ಪುಟ್ಟಯ್ಯ, ಡಿ.ಸಿ. ಸುಬ್ಬರಾಯಪ್ಪ ಇವರುಗಳು ಸಂಪಾದಕ ಮಂಡಲಿಯ ಸದಸ್ಯರಾಗಿದ್ದರು. ಎಲ್. ಗುಂಡಪ್ಪ, ಕ.ವೆಂ. ರಾಘವಾಚಾರ್ಯ ಇವರಿಬ್ಬರೂ ಸಹಾಯಕ ಪಂಡಿತರಾಗಿ ಇದ್ದರು. 1947ರ A-Z ವರೆಗೂ ಇರುವ ಸಮಗ್ರ ಆವೃತ್ತಿಗೂ ಇದೇ ವಿದ್ವಾಂಸರ ಯೋಗದಾನ ಸಂದಿದೆ. ಇವರೆಲ್ಲರ ಜೊತೆಗೆ ಎಂ.ವಿ. ಸೀತಾರಾಮಯ್ಯ, ಎಂ.ಆರ್. ಶ್ರೀನಿವಾಸ ಮೂರ್ತಿಯವರು ಸಹಾಯಕ ಪಂಡಿತರಾಗಿಯೂ ಎಸ್. ಸಿ. ನಂದಿಮಠ, ಕೆ.ಜಿ. ಕುಂದಣಗಾರ್, ಉಲ್ಲಾಳ ಮಂಗೇಶರಾವ್, ಕೆ. ಶಂಕರಭಟ್ಟ ಇವರುಗಳು ಸಹ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಪ್ರಧಾನ ಸಂಪಾದಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರು 1943ರ ಆಗಸ್ಟ್ ತಿಂಗಳಿನಲ್ಲಿ ನಿಧನರಾದುದರಿಂದ, ಮುಂದಿನ ಕಾರ್ಯಭಾರವನ್ನು ಮತ್ತು ಪ್ರಧಾನ ಸಂಪಾದಕತ್ವದ ಹೊಣೆಯನ್ನು ಎಂ.ಆರ್. ಶ್ರೀನಿವಾಸಮೂರ್ತಿ ಅವರು ವಹಿಸಿಕೊಂಡರು. ಕರಡಚ್ಚನ್ನು ಎಂ. ಕೃಷ್ಣರಾವ್ ಎಂಬುವರು ಓದಿರುವಂತೆ ದಾಖಲಾಗಿದೆ. ಈ ಸಂದರ್ಭದಲ್ಲಿ ಗುಮಾಸ್ತರಾಗಿ ಕಾರ್ಯನಿರ್ವಹಿಸಿದವರು ಯು.ವಿ. ಶ್ರೀನಿವಾಸರಾವ್ ಮತ್ತು ಟಿ. ತಾತಾಚಾರ್ ಎಂಬುವವರೆಂದು ನಿಘಂಟಿನಲ್ಲಿ ದಾಖಲಾಗಿದೆ. ಆಗ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಇ.ಪಿ. ಮೆಟ್‌ಕಾಫ್ ಅವರು ಕೂಡ ಶಬ್ದಗಳ ಉಚ್ಚಾರಣೆ ಮುಂತಾದ ವಿಷಯಗಳಲ್ಲಿ ನೆರವು ನೀಡಿರುತ್ತಾರೆ. ಒಟ್ಟು ದೃಷ್ಟಿಕೋನದಿಂದ ನೋಡಿದಾಗ ಹೇಳಲೇಬೇಕಾದ ಅಂಶವೆಂದರೆ ಕನ್ನಡ ವಿದ್ವಾಂಸರಿಂದಲೇ ಸಿದ್ಧವಾಗಿರುವ ಪ್ರಮಾಣಭೂತ ಇಂಗ್ಲಿಷ್–ಕನ್ನಡ ನಿಘಂಟು ಇದಾಗಿದೆ.
8. ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು ಮತ್ತು ಒಟ್ಟು ಇಂಗ್ಲಿಷ್ ನಿಘಂಟುಗಳ ಇತಿಹಾಸದ ಬಗೆಗಿನ ಸರಿಯಾದ, ವಿಶದವಾದ, ಅಧಿಕೃತವಾದ ವಿವರಗಳಿಗೆ ನೋಡಿ : ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ–ತೀ.ನಂ. ಶ್ರೀಕಂಠಯ್ಯ, ಪ್ರಬುದ್ಧ ಕರ್ಣಾಟಕ 16–1, 1934, ಪುಟ 78–88; ಸಮಾಲೋಕನ, ಶಾರದಾ ಮಂದಿರ ಮೈಸೂರು–1958, ಪುಟ 265–276; ತೀ.ನಂ.ಶ್ರೀ ಸಮಗ್ರ ಗದ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2006, ಪುಟ

485–494 ಮತ್ತು ಇಂಗ್ಲಿಷು ಶಬ್ದ ನಿಘಂಟುಶಾಸ್ತ್ರದ ಚರಿತ್ರೆ {ಕ್ರಿ.ಶ 600 ರಿಂದ 1721 ರವರೆಗೆ}–ಮಂ.ಆ. ದೊರೆಸ್ವಾಮಿ ಅಯ್ಯಂಗಾರ್, ಜಯಕರ್ಣಾಟಕ 15ನೆಯ ಸಂಪುಟ ಉತ್ತರಾರ್ಧ (1937ನೆಯ ಜುಲೈ–ಡಿಸೆಂಬರ್) ಪುಟ 371–375; ಇಂಗ್ಲಿಷು ಶಬ್ದ ನಿಘಂಟು ಶಾಸ್ತ್ರದ ಚರಿತ್ರೆ {ಕ್ರಿ.ಶ 1721 ರಿಂದ ಈಚೆಯ ಕಾಲ}– ಮಂ.ಆ.ದೊರೆಸ್ವಾಮಿ ಅಯ್ಯಂಗಾರ್, ಜಯಕರ್ಣಾಟಕ 15ನೆಯ ಸಂಪುಟ ಉತ್ತರಾರ್ಧ (1937ನೆಯ ಜುಲೈ–ಡಿಸೆಂಬರ್) ಪುಟ 441–445

9. ಕನ್ನಡ, ತೆಲುಗು, ತಮಿಳು, ಮರಾಟಿ, ಹಿಂದಿ, ಬಂಗಾಳಿ, ಸಂಸ್ಕೃತ ಭಾಷೆಗಳ ನಿಘಂಟುಗಳನ್ನೂ ಈ ಸಂದರ್ಭದಲ್ಲಿ ಗಮನಿಸಲಾಗಿದೆ.
10. 'ಸಂಬಂಧಪಟ್ಟ ಪದಗಳನ್ನು ಪ್ರಧಾನ ಪದದ ಕೆಳಗೆ ಗುಂಪು ಕೂಡಿಸುವುದರಲ್ಲಿ ಚಾರ್ಲ್ಸ್ ಅನಂಡೇಲ್ (Charles Annandale) ಅವರ The concise English Dictionary ಯನ್ನು ಸಾಮಾನ್ಯವಾಗಿ ಅನುಸರಿಸಿದೆ' ಎಂದು 1936ರ ಆವೃತ್ತಿಯ ಪೀಠಿಕೆಯಲ್ಲಿ ಹೇಳಲಾಗಿದೆ. ಜೊತೆಗೆ ಮೋನಿಯರ್–ಮೋನಿಯರ್ ವಿಲಿಯಂಸ್ ಅವರ ಸಂಸ್ಕೃತ–ಇಂಗ್ಲಿಷ್ ನಿಘಂಟಿನಲ್ಲಿಯೂ ಪ್ರಧಾನ ಪದವನ್ನು ದಾಖಲಿಸಿ, ಅದರ ಅಡಿಯಲ್ಲಿಯೇ ಸಂಬಂಧಪಟ್ಟ ಧಾತುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ಪದಗಳನ್ನು ದಾಖಲಿಸಿರುವುದನ್ನು ಕಾಣಬಹುದು. 1989, 1996, 1999, 2004ರಲ್ಲಿ, ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಪರಿಷ್ಕೃತ–ವಿಸ್ತೃತ ಇಂಗ್ಲಿಷ್–ಕನ್ನಡ ನಿಘಂಟಿನ ಆವೃತ್ತಿಯಲ್ಲಿ ಎಲ್ಲ ಪದಗಳನ್ನೂ ಪ್ರಧಾನ ಪದಗಳಾಗಿಯೇ ದಾಖಲಿಸಲಾಗಿದೆ.
11. 1947ರಲ್ಲಿ ಪ್ರಕಟವಾದ A-Z ವರೆಗೂ ಇರುವ ಸಮಗ್ರ ಆವೃತ್ತಿಯಲ್ಲಿ 1936ರ ಆವೃತ್ತಿಯಲ್ಲಿರುವಂತೆಯೇ ಇದೆ. 1989ರ ಪರಿಷ್ಕೃತ–ವಿಸ್ತೃತ ಆವೃತ್ತಿಯಲ್ಲಿ ಪ್ರತಿಯೊಂದು ಪದವನ್ನೂ ಪ್ರಧಾನ ಪದವಾಗಿಯೇ ದಾಖಲಿಸಲಾಗಿದೆ.
12. 1947ರ ಆವೃತ್ತಿಯಲ್ಲಿ 1936ರ ಆವೃತ್ತಿಯಲ್ಲಿರುವಂತೆಯೇ ಇದ್ದು, ಸಮರ್ಪಕವಾಗಿಯೇ ಇದೆ. 1989ರ ಪರಿಷ್ಕೃತ–ವಿಸ್ತೃತ ಆವೃತ್ತಿಯಲ್ಲಿ 'ಅಂಗವಿಚ್ಛೇದ : 1. ಪರೀಕ್ಷೆಗಾಗಿ ಮನುಷ್ಯ ಯಾ ಪ್ರಾಣಿಯ ದೇಹವನ್ನು ಯಾ ಸಸ್ಯವನ್ನು ಕತ್ತರಿಸುವುದು. 2. ಅಂಗರಚನಾಶಾಸ್ತ್ರ. 3. (ಮನುಷ್ಯ ಯಾ ಪ್ರಾಣಿ ಯಾ ಸಸ್ಯದ) ದೇಹರಚನೆ : ಶರೀರರಚನೆ: ಅಂಗರಚನೆ. 4. ವಿಶ್ಲೇಷಣೆ. 5. ಶರೀಛೇದನ ಮಾದರಿ. 6. ಅಸ್ಥಿಪಂಜರ: ಕಂಕಾಲ: ಎಲುಬು ಗೂಡು. 7. (ಹಾ.) ಮನುಷ್ಯದೇಹ' ಎಂಬ ಅರ್ಥಗಳನ್ನು ನೀಡಲಾಗಿದೆ.
13. 1947ರ ಆವೃತ್ತಿಯಲ್ಲಿ ಖಗೋಳ ವಿಜ್ಞಾನ ; ಜ್ಯೋತಿರ್ವಿಜ್ಞಾನ, ಜ್ಯೋತಿಶ್ಶಾಸ್ತ್ರ ಎಂದು ದಾಖಲಿಸಲಾಗಿದೆ. ನಕ್ಷತ್ರಶಾಸ್ತ್ರ, ಜ್ಯೋತಿಃಶಾಸ್ತ್ರ ಪದಗಳು ಜ್ಯೋತಿಷ್ಯಶಾಸ್ತ್ರದಲ್ಲಿಯೂ ಪ್ರಯುಕ್ತವಾಗುವ ಕಾರಣ, ಜ್ಯೋತಿಷ್ಯಶಾಸ್ತ್ರ ಶಬ್ದಕ್ಕೆ Astrology ಎನ್ನುವ ಶಬ್ದವೇ ಸಮರ್ಥನೀಯ. ಆದುದರಿಂದ Astronomy ಶಬ್ದಕ್ಕೆ ಖಗೋಳವಿಜ್ಞಾನ ಶಬ್ದವೇ ಹೆಚ್ಚು ಸಮರ್ಪಕವೆಂದು ಹೇಳಬಹುದು. ಜೊತೆಗೆ ಭಾರತೀಯ ಗಣಿತಶಾಸ್ತ್ರ ಮತ್ತು ವಿಜ್ಞಾನ ಗ್ರಂಥಗಳಲ್ಲಿ ಖಗೋಳ ಶಬ್ದದ ಬಳಕೆಯೂ ಉಂಟು. 1989ರ ಪರಿಷ್ಕೃತ–ವಿಸ್ತೃತ ಆವೃತ್ತಿಯಲ್ಲಿ Astronomy ಶಬ್ದಕ್ಕೆ ಖಗೋಳವಿಜ್ಞಾನ; ಭೂಮಿಯ ವಾಯುಮಂಡಲದಿಂದಾಚೆ ಇರುವ ಆಕಾಶಕಾಯಗಳನ್ನು ಕುರಿತ ವಿಜ್ಞಾನ ಎಂದು ದಾಖಲಿಸಿದೆ.
14. ಪವನ ಶಬ್ದಕ್ಕೆ ವಾಯು, ಗಾಳಿ ಎಂಬರ್ಥವಿರುವ ಕಾರಣ ಪವನಶಾಸ್ತ್ರ ಎನ್ನುವ ಅರ್ಥ ಅಷ್ಟೊಂದು ತೃಪ್ತಿಕರವೆನಿಸದು ಎಂಬುದು ಪುಟ್ಟಪರ್ತಿ ಶ್ರೀನಿವಾಸಾಚಾರ್ಯರ ಅಭಿಪ್ರಾಯವೆಂದು ಕಾಣುತ್ತದೆ. Meteorology ಶಬ್ದಕ್ಕೆ ಹವಾಮಾನ, ವಾತಾವರಣದ ಮುನ್ಸೂಚನೆ ಎಂಬ ಅರ್ಥ ಸೂಕ್ತವೆಂದು ತೋರುತ್ತದೆ. 1999ರ ಪರಿಷ್ಕೃತ–ವಿಸ್ತೃತ ಆವೃತ್ತಿಯಲ್ಲಿ ಇದೇ ಅರ್ಥಗಳನ್ನು ಹೇಳಿದೆ. ಜೊತೆಗೆ ಪವನಶಾಸ್ತ್ರ ಎಂಬ ಅರ್ಥವನ್ನೂ

ದಾಖಲಿಸಿದೆ. ಹವಾಮಾನದಲ್ಲಿ ಗಾಳಿಯ ಪಾತ್ರವೇ ಪ್ರಮುಖವಾದುದರಿಂದ ಈ ಅರ್ಥವನ್ನೂ ಬಿಡಲಾಗದು.

15. ಭೌಮ ಎಂಬ ಶಬ್ದ ನಾಮವಾಚಕವಾಗಿ ಭೂಮಿ ಎಂಬ ಅರ್ಥವನ್ನು ನೀಡುವುದಿಲ್ಲ. ಕುಜ, ನರಕ ಎಂಬ ಶಬ್ದಗಳು ಭೂಮಿಯಿಂದ ಜನಿಸಿದುದು, ಜನಿಸಿದವನು ಎಂಬ ಅರ್ಥವನ್ನು ಹೊಂದಿವೆ. ಆದುದರಿಂದ ಭೌಮವಿಜ್ಞಾನ ಸಮಂಜಸವಾಗುವುದಿಲ್ಲ. ಬದಲಿಗೆ ಭೂವಿಜ್ಞಾನ ಎಂಬ ಶಬ್ದವೇ ಸೂಕ್ತವಾದುದಾಗಿದೆ. ಈ ಹಿನ್ನೆಲೆಯಲ್ಲಿ ಮೂಲ ಲೇಖಕರ ಸೂಚನೆಯನ್ನು ಒಪ್ಪಲು ಸಾಧ್ಯವಾಗದು.

16. ಪ್ರತಿಯೊಂದು ಶಬ್ದಕ್ಕೂ ಅರ್ಥಸಂಕೋಚ, ಅರ್ಥವಿಸ್ತಾರಗಳೆರಡೂ ಇದ್ದೇ ಇರುತ್ತವೆ. ಜೊತೆಗೆ ಇರುವ ಅರ್ಥಗಳನ್ನೆಲ್ಲ ಆ ಪದ ಧ್ವನಿಸಬೇಕೆಂಬ ನಿಯಮವೇನೂ ಇಲ್ಲ. Archaeology ಶಬ್ದವು ಮಾನವನ ವಿಕಾಸ, ಅವನತಿ ಮುಂತಾದವುಗಳ ಬಗೆಗಿನ ಅಧ್ಯಯನವನ್ನೂ ಒಳಕೊಂಡಿರುತ್ತದೆ.

17. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಬಹಳ ಉಪಯುಕ್ತವಾದುದು ಮತ್ತು ಪ್ರಮಾಣಭೂತ ವಾದುದು. ಮೊದಲ ಬಾರಿಗೆ A ಯಿಂದ Billow ವರೆಗೆ ಮಾತ್ರ ಇರುವ ಮೊದಲ ಭಾಗ 1936ರಲ್ಲಿ ಪ್ರಕಟವಾಯಿತು. ಅನಂತರ A-Z ವರೆಗೂ ಇರುವ ಸಮಗ್ರ ಆವೃತ್ತಿಯು ಕೆಲವೊಂದು ತಿದ್ದುಪಡಿಗಳ ಸಹಿತ 1947ರಲ್ಲಿ ಪ್ರಕಟವಾಗಿದ್ದು, ಇಂದಿಗೂ ಮರುಮುದ್ರಣಗಳಾಗುತ್ತಲೇ ಇದೆ. 1947ರ ಆವೃತ್ತಿಯೇ ಪರಿಷ್ಕೃತ–ವಿಸ್ತೃತವಾಗಿ ನಾಲ್ಕು ಸಂಪುಟಗಳಲ್ಲಿ ಅಚ್ಚಾಗಿದೆ. ನಾಲ್ಕುಸಂಪುಟಗಳಲ್ಲಿ ನೀಡಲಾಗಿರುವ ನುಡಿಗಟ್ಟುಗಳನ್ನು ಪ್ರತ್ಯೇಕಿಸಿ, ಸಂಪುಟವೊಂದನ್ನು ಹೊರತರಲಾಗಿದೆ. ಈ ಎಲ್ಲವುಗಳ ಸಮಗ್ರ ಪ್ರಕಟನೆಯ ವಿವರಗಳು ಕೆಳಕಂಡಂತಿವೆ (ಈ ವಿವರಗಳು ಬೇರೆಡೆ ತೃಪ್ತಿಕರವಾಗಿ ದೊರಕದ ಕಾರಣ ಇಲ್ಲಿ ದಾಖಲಿಸಲಾಗಿದೆ).

- ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು (A ಯಿಂದ Billow ವರೆಗೆ, ಭಾಗ–1), ಮೈಸೂರು–1936, ಪುಟಗಳು ii + 96
- ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು, ಮೈಸೂರು–1947, ಪುಟಗಳು 32 + 1479; ಮರುಮುದ್ರಣಗಳು–1965, 1977, 1985, 1994, 1999, 2004
- ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) ಸಂಪುಟ–1 (A to D), ಮೈಸೂರು–1989, 2000, ಪುಟಗಳು 21 + 1608
- ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) ಸಂಪುಟ–2 (E to L), ಮೈಸೂರು–1996, 2004, ಪುಟಗಳು 19 + 1609-3168
- ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) ಸಂಪುಟ–3 (M to R), ಮೈಸೂರು–1999, ಪುಟಗಳು 19 + 3169-4662
- ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) ಸಂಪುಟ–4 (S to Z), ಮೈಸೂರು–2004, ಪುಟಗಳು 21 + 4663–6189
- ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) {ಸಂಪುಟ 1–4ರ ಏಕೀಕೃತ ಸಂಪುಟ}, ಮೈಸೂರು–2007, ಪುಟಗಳು 8 + 1–1544
- ಇಂಗ್ಲಿಷ್–ಕನ್ನಡ ನುಡಿಗಟ್ಟು ಕೋಶ {Dictionary of Idioms & Phrases}–(ಸಂ) ಜಿ. ಶ್ರೀದೇವಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2013 (ಪ್ರಕಟನೆಯ ವರ್ಷ 2012 ಎಂದು ಒಳಪುಟದಲ್ಲಿ ಮುದ್ರಿತವಾಗಿದೆ), ಪುಟಗಳು 8 + 784

18. ನೆನಪಿಗೆ ಬಾರದೆ ಇರುವುದು ಸಾಮಾನ್ಯ ಸಂಗತಿ ಎಂಬುದಾಗಿ ಮೂಲ ಲೇಖಕರ ಆಶಯವಿರಬೇಕು.

19. ಈ ಲೇಖನದಲ್ಲಿ ಚೌಕಕಂಸಗಳಲ್ಲಿರುವ ಭಾಗ, ಆಧಾರಸೂಚಿ ಮತ್ತು ಟಿಪ್ಪಣಿಗಳ ಭಾಗಗಳು ಮೂಲ ಲೇಖನದ ವಸ್ತು, ವಿಷಯ, ಆಶಯಕ್ಕೆ ಧಕ್ಕೆಯೊದಗದಂತೆ ಪೂರಕ ಮಾಹಿತಿಯ ದೃಷ್ಟಿಯಿಂದ ಪ್ರಕೃತ ಅನುವಾದಕನ ಸೇರ್ಪಡೆಯಾಗಿರುತ್ತದೆ. ಮೂಲ ಲೇಖನದಲ್ಲಿ ಯಾವ ಅಡಿಟಿಪ್ಪಣಿಗಳೂ ಇಲ್ಲ. ಚೌಕಕಂಸದಲ್ಲಿ ಇಲ್ಲದ ಭಾಗವೆಲ್ಲವೂ ಮೂಲ ಲೇಖನದ್ದೆಂದು ತಿಳಿಯಬೇಕು. ಮೂಲ ಲೇಖನದಲ್ಲಿರುವ ಕೆಲವು ಅಚ್ಚಿನ ತಪ್ಪುಗಳನ್ನು ಮತ್ತು ಇತರ ರೀತಿಯ ಪ್ರಮಾದಗಳನ್ನು ಸಂಬಂಧಿತ ಮೂಲ ಆಕರಗಳನ್ನು ಪರಿಶೀಲಿಸಿ ತಿದ್ದಲಾಗಿದೆ. ಮೂಲ ತೆಲುಗು ಲೇಖನಕ್ಕೆ ಯಾವುದೇ ಶೀರ್ಷಿಕೆಯನ್ನು ನೀಡಿಲ್ಲದಿರುವ ಕಾರಣ ಇಲ್ಲಿ ನೀಡಿರುವ ಶೀರ್ಷಿಕೆ ಪ್ರಕೃತ ಅನುವಾದಕನದ್ದಾಗಿದೆ. ಭಾರತೀ {ತೆಲುಗು ಮಾಸಪತ್ರಿಕೆ}, ಸಂಪುಟ–13, ಸಂಚಿಕೆ–12, 1936, ಪುಟ 923–924ರಲ್ಲಿ ವಿಮರ್ಶನಲು ಎನ್ನುವ ವಿಭಾಗದಲ್ಲಿ ಈ ಬರಹ ಪ್ರಕಟವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟಿನ ಮೊದಲ ಭಾಗದ ಪ್ರಕಟನೆ ತೆಲುಗುನಾಡಿನಲ್ಲಿ ಗಮನಸೆಳೆದು ವಿಮರ್ಶಾ ಬರಹ ಪ್ರಕಟವಾಗಿದೆ ಎಂಬುದನ್ನು ಗಮನಿಸಬೇಕು. ಕರ್ನಾಟಕದಲ್ಲಿ ಇಂತಹ ವಿದ್ಯಮಾನವೇ ಕಂಡುಬಂದಿಲ್ಲ, ಜೊತೆಗೆ ಕನ್ನಡ ಭಾಷೆಯಲ್ಲಿ ಈ ನಿಘಂಟನ್ನು ಕುರಿತು ಯಾವುದೇ ವಿಮರ್ಶಾ ಬರಹ ಪ್ರಕಟವಾಗಿರುವಂತಿಲ್ಲ [ಮೈಸೂರು ವಿಶ್ವವಿದ್ಯಾನಿಲಯ ಇಂಗ್ಲಿಷ್ ಕನ್ನಡ ನಿಘಂಟು {(ವಿಮರ್ಶಕರು) ಬಿ. ರಾ., ಪ್ರಕಟನೆ : ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ 21, ಅಕ್ಟೋಬರ್ 1936, ಪುಟ 301–302} ಎಂಬ ಬರಹ ಕನ್ನಡದಲ್ಲಿ ಪ್ರಕಟವಾಗಿದ್ದರೂ ಇದರಲ್ಲಿ ವಿಮರ್ಶೆ ಎಂಬುದೇ ಇಲ್ಲವಾಗಿದ್ದು, ಸ್ಥೂಲಪರಿಚಯ ಮಾತ್ರವಿದೆ]. ಇದರ ಬಗೆಗೆ ಮಾಹಿತಿ ನೀಡುವಾಗ ಈ ನಿಘಂಟು ಆಕ್ಸ್‌ಫರ್ಡ್ ಸಂಕ್ಷಿಪ್ತ ನಿಘಂಟಿನ ಭಾಷಾಂತರ ಮಾತ್ರ ಎಂಬುದಾಗಿ ತಪ್ಪು ಮಾಹಿತಿಯನ್ನು ಒಂದೆರಡು ಸಾಲುಗಳಲ್ಲಿ ದಾಖಲಿಸಲಾಗಿದೆ. ಇದು ಸಮರ್ಥನೀಯವೇ ಅಲ್ಲ. ಈ ದೃಷ್ಟಿಯಿಂದ ಹೇಳುವುದಾದರೆ ತೆಲುಗು ಲೇಖನವು 1936ರ ಆವೃತ್ತಿಗೆ ಸಂಬಂಧಪಟ್ಟುದಾದರೂ ಕೆಲವೊಂದು ಅಂಶಗಳು ಗಮನಿಸುವಂತಿವೆ. ಈ ಕಾರಣಕ್ಕಾಗಿಯೇ ತೆಲುಗು ಬರಹವನ್ನು ಸೂಕ್ತ ಟಿಪ್ಪಣಿಗಳು ಮತ್ತು ಸಂಕ್ಷಿಪ್ತವಾದ ಮಾಹಿತಿಗಳ ಸಹಿತ ಕನ್ನಡಕ್ಕೆ ಅನುವಾದಿಸಲಾಗಿದೆ. ಇಂಗ್ಲಿಷ್–ಕನ್ನಡ ನಿಘಂಟಿನ ಮೊದಲ ಭಾಗದ ಆವೃತ್ತಿಯನ್ನು ಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ಎಸ್. ಎಂ. ಕತ್ರೆ ಅವರೂ ವಿಮರ್ಶಿಸಿದ್ದು, ಅವರ ಬರಹವು ಇಂಗ್ಲಿಷಿನಲ್ಲಿ ಪ್ರಕಟವಾಗಿದೆ. ಕತ್ರೆ ಅವರ ವಿಮರ್ಶೆಯಲ್ಲಿರುವ ಸಲಹೆ, ಸೂಚನೆಗಳು ಗಮನಾರ್ಹವಾಗಿವೆ. ನೋಡಿ : The Mysore University English-Kannada Dictionary, Part-1, Published in Annals of the Bhandarkar Oriental Research Institute, Poona, Volume-18, No-2, 1937, pp 219-221.; ಮತ್ತೊರ್ವ ಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ವಿ. ಸುಕುಮಾರ ಸೇನ್ ಅವರೂ ಈ ನಿಘಂಟನ್ನು ಕುರಿತು ವಿಮರ್ಶಾ ಲೇಖನವನ್ನು ಬರೆದಿದ್ದಾರೆ ಎಂದು ತಿಳಿದುಬರುತ್ತಿದ್ದರೂ ವಿವರಗಳು ಅಲಭ್ಯವಾಗಿವೆ.

❖❖❖

ಶ್ವಪಚದೇವನಿಂದ ಶಿವಭಕ್ತರಾದ ಸಾಮವೇದಿ

ಡಾ. ಎಚ್.ಎಮ್. ಚನ್ನಪ್ಪಗೋಳ
ಮುಖ್ಯಸ್ಥರು, ಕನ್ನಡ ವಿಭಾಗ
ಕೆ.ಎಲ್.ಇ. ಸಂಸ್ಥೆಯ
ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ – 590001

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನ ಚಂಪೂ ಸಾಹಿತ್ಯವು ಅತ್ಯಂತ ಶ್ರೇಷ್ಠತೆಯನ್ನು ಮೆರೆದ ಕಾಲವಾಗಿದೆ. ಈ ಕಾಲಘಟ್ಟದಲ್ಲಿ ಪಂಡಿತರಿಗಾಗಿ, ರಾಜ–ಮಹಾರಾಜರಿಗಾಗಿ ರಚಿತವಾದ ಸಾಹಿತ್ಯವನ್ನೇ ಹೆಚ್ಚಾಗಿ ಕಾಣುತ್ತೇವೆ. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ರಚಿಸಿರುವುದೆಲ್ಲ ಶರಣಸಾಹಿತ್ಯವಾಗಿ, ನಾವಿಂದು ಕರೆಯುವ ವಚನ ಸಾಹಿತ್ಯವಾಗಿದೆ. ಶರಣರು ತಮ್ಮ ಆತ್ಮ ನಿರೀಕ್ಷಣೆಗಾಗಿ, ತಮ್ಮ ಇಷ್ಟದೈವದ ನೆನಪಿಗಾಗಿ, ಹಾಗೆಯೇ ತಾವು ಸಮಾಜದಲ್ಲಿ ಕಂಡ ವಿಚಾರಗಳನ್ನು, ತಮ್ಮ ಅನುಭಾವದ ವಿಚಾರಗಳನ್ನು ವಚನ ಸಾಹಿತ್ಯದಲ್ಲಿ ಬರೆದಿದ್ದಾರೆ. ಇವರ ವಚನಗಳ ಭಾಷೆ ಜನಭಾಷೆಯೇ ಆಗಿದೆ.

ಶೈವ ಸಾಹಿತ್ಯದ ಮತ್ತು ಶೈವಧರ್ಮದ ಪ್ರಚಾರಕ್ಕಾಗಿ ವಚನ ಸಾಹಿತ್ಯದ ಮುಂದುವರೆದ ಭಾಗವೇನೋ ಎನ್ನುವಂತೆ ಹರಿಹರಾದಿಗಳು ಸಾಹಿತ್ಯವನ್ನು ರಚಿಸಿದರು. ಇವರ ಉದ್ದೇಶವಾದರೂ ಶರಣ ಸಾಹಿತ್ಯವನ್ನು ಪ್ರಚುರ ಪಡಿಸುವುದು. ಶೈವ ಸಾಹಿತ್ಯವನ್ನು, ಶಿವಮಹಿಮೆಯನ್ನು, ಶಿವಭಕ್ತರ ಮಹಿಮೆಯನ್ನು ತಿಳಿಸುವುದೇ ಆಗಿದೆ. ಹಾಗಾಗಿ ಇವರ ಸಾಹಿತ್ಯಭಾಷೆ ಕೂಡ ಜನಸಾಮಾನ್ಯರ ಭಾಷೆಯೇ ಆಗಿದ್ದಿತು. ಈ ಸಂದರ್ಭದಲ್ಲಿ ಪ್ರಮುಖವಾಗಿ ಕಾಣುವ ಹೆಸರೆಂದರೆ ಹರಿಹರನದು. ಈತನ ಸಾಮವೇದಿಗಳ ರಗಳೆಯ ಕುರಿತು ಹೇಳುವುದಾದರೆ, ಸಾಮವೇದಿ ಮೂಲತಃ ಒಬ್ಬ ಬ್ರಾಹ್ಮಣ. ಭೂಮಿಯ ಮೇಲಿರುವ ಎಲ್ಲ ವೇದಗಳನ್ನೂ ತನ್ನ ನಾಲಗೆಯ ಮೇಲೆ ಧರಿಸಿದಾತ. ಆತನನ್ನು ಶ್ವಪಚದೇವನೆಂಬ ಶಿವಭಕ್ತ ತನ್ನ ಮಹಿಮೆಯಿಂದ ಶಿವದರ್ಶನ ಮಾಡಿಸಿ ಶಿವಭಕ್ತನನ್ನಾಗಿಸಿದ ಕಥೆಯಾಗಿದೆ.

ಉತ್ತರ ದಿಕ್ಕಿನಲ್ಲಿಯೇ ಶ್ರೇಷ್ಠವೆನಿಸಿದ ಛತ್ತೀಸಪುರವೆಂಬುದು ಭೂಮಿಯ ಮೇಲೆಯೇ ಅತ್ಯಂತ ಶ್ರೇಷ್ಠ ನಗರ ಎನಿಸಿರುತ್ತದೆ. ಅಲ್ಲಿ ಸಾಮವೇದಿ ಎಂಬಾತನೊಬ್ಬ ಪಾಪರಹಿತನೂ ಸಾಮವೇದವೇ ಮನುಷ್ಯರೂಪದಲ್ಲಿದೆ ಎನೋ ಎಂಬಂತೆ ಎಲ್ಲ ಶಾಸ್ತ್ರಗಳನ್ನೂ ತನ್ನ ನಾಲಗೆಯ ಮೇಲೆಯೇ ದರಿಸಿದ್ದಾನೇನೋ ಎನ್ನುವಂತೆ ಭೂಮಿಯ ಮೇಲಿನ ಎಲ್ಲ ಶಾಸ್ತ್ರ, ಕಾವ್ಯ, ನಾಟಕ, ತರ್ಕ, ವ್ಯಾಕರಣ ಹೀಗೆ ಎಲ್ಲವನ್ನೂ ಓದಿ ಅರಗಿಸಿಕೊಂಡಿರುತ್ತಾನೆ. ಈ ಕಾರಣದಿಂದಲೇ ಎಲ್ಲ ರಾಜರೂ ಆತನಿಗೆ ಗೌರವವನ್ನು ಸಲ್ಲಿಸಿ ಉಡುಗೊರೆಗಳನ್ನು ಕಳುಹಿಸುತ್ತಿದ್ದರು. ಎಲ್ಲ ಬಾಹ್ಮಣರೂ ನಲಿನಲಿಯುತ್ತ ಆತನಿಗೆ ಎರಗುತ್ತಿದ್ದರು. ಎಂಥೆಂಥ ವಿದ್ವಾಂಸರೂ ಈತನ ಈ ಪಾಂಡಿತ್ಯಕ್ಕೆ ಹೆದರಿ ಗೌರವ–ಆದರಗಳನ್ನು ಸಲ್ಲಿಸುತ್ತಿದ್ದರು. ತಾನು ಅತ್ಯಂತ ಬುದ್ಧಿವಂತನೆಂಬ ಕಾರಣಕ್ಕೆ

ಗರ್ವ ತುಂಬಿ, ಈತನೂ ಯಾರಿಗೂ ತಾನಾಗಿಯೇ ನಮಸ್ಕರಿಸುತ್ತಿರಲಿಲ್ಲ. ಅವರನ್ನು ನೋಡುತ್ತಿರಲಿಲ್ಲ ಕೂಡ. ಇಂಥ ಪ್ರಸಿದ್ಧ ಸಾಮವೇದಿಗೆ ಮೂರು ಸಾವಿರದ ಐನೂರು ಶಿಷ್ಯವರ್ಗವಿದ್ದಿತು. ಪೋಷಕರಾಗಿ ಅನೇಕ ರಾಜರೂ ಇದ್ದರು. ಈತ ಎಡಗೈಯಲ್ಲಿ ಅಕ್ಷತೆಯನ್ನೂ ಬಲಗೈಯಲ್ಲಿ ಅಗ್ನಿಯನ್ನೂ ಧರಿಸಿದ್ದನು.

ಈ ರೀತಿಯಾದ ಸಾಮವೇದಿ ಒಂದು ದಿನ ವೇದಗಳಲ್ಲಿ ಒಂದು ಭಾಗವಾದ ಆವರಣವನ್ನು ನೋಡುವುದಕ್ಕಾಗಿ ಶ್ರೇಷ್ಠ ವಿದ್ವಾಂಸರನ್ನೆಲ್ಲ ಕೂಡಿಕೊಂಡು ತನ್ನ ಎಲ್ಲ ಶಿಷ್ಯಂದಿರನ್ನು ಸೇರಿಸಿಕೊಂಡು ದಟ್ಟವಾದ ಅರಣ್ಯಕ್ಕೆ ಬರುತ್ತಾನೆ. ಅಲ್ಲಿ ಆಶ್ವತಮರದ ಅಡಿಯಲ್ಲಿ ಕುಳಿತು ಜಗತ್ತಿನ ಯಾವ ಜನರಿಗೂ ಗೊತ್ತಾಗದಂತೆ ವೇದ ಮಂತ್ರ ಯಜ್ಞಾಧಿಗಳನ್ನು ಮಾಡುತ್ತಾನೆ. ತನ್ನ ಶಿಷ್ಯರಿಗೆ ವೇದಗಳ ಮಹತ್ವವನ್ನು ತಿಳಿಸುತ್ತ ಉಚ್ಚ ಸ್ವರದಲ್ಲಿ ವೇದೋಚ್ಚಾರಣೆಯನ್ನು ಮಾಡುತ್ತಿರುತ್ತಾನೆ. ಹೀಗೆಯೇ ಮಧ್ಯಾಹ್ನ ಪರಿಯಂತ ಮಾಡಿ ಮಧ್ಯಾಹ್ನದ ನಂತರ ಪುರದೆಡೆಗೆ ಸಾಗುತ್ತಾನೆ. ಎಲ್ಲ ಶಿಷ್ಯರು ನೆಲದ ಮಾರ್ಗವಾಗಿಯೂ ತಾನು ಮಾತ್ರ ಆಕಾಶ ಮಾರ್ಗವಾಗಿಯೂ ಪುರದೆಡೆಗೆ ಹೋಗುತ್ತಿರುತ್ತಾರೆ.

ಹೀಗಿರುವಾಗ ಇದೇ ಭತ್ತೀಸಪುರದಿಂದ ನಡೆದು ಬಂದ ಶ್ರೇಷ್ಠ ಶಿವಾರ್ಚಕನಾದ ಶ್ವಪಚದೇವನೆಂಬ ಶಿವಭಕ್ತನು ಭವಿಗಳಾರೂ ಕಾಣಬಾರದೆಂದು ಶಿವನನ್ನು ಅರ್ಚಿಸಲೆಂದು ಕಾಡಿನ ಮಧ್ಯಭಾಗದಲ್ಲಿ ಇರುತ್ತಾನೆ. ಅಲ್ಲಿರುವ ಕಾಡುಮಲ್ಲಿಗೆಯ ಗಿಡದ ಹೊದರ ತಳದಲ್ಲಿ ಕುಳಿತುಕೊಂಡು, ಬಗೆಬಗೆಯಲ್ಲಿ ಸ್ತುತಿಸುತ್ತಾ ಶಿವಪೂಜೆಯನ್ನು ಮಾಡುತ್ತಿರುತ್ತಾನೆ. ಹೀಗೆಯೇ ಮಧ್ಯಾಹ್ನ ಪರಿಯಂತ ಪೂಜಿಸುತ್ತಾನೆ. ಬಳಿಕ ಊಟಕ್ಕೆ ತಯಾರಿಯನ್ನು ಮಾಡಲು ತೊಡಗುತ್ತಾನೆ. ಇದೇ ಸಮಯದಲ್ಲಿ ಸಾಮವೇದಿ ಅದೇ ದಾರಿಯಲ್ಲಿ ಹಾದು ಹೋಗುವ ಸಪ್ಪಳವಾಗುತ್ತದೆ. ಆ ಕಡೆಗೆ ನೋಡಿ ತಕ್ಷಣವೇ ಲಿಂಗವನ್ನು ಮರೆಮಾಚುತ್ತಾನೆ. ಮರೆಮಾಡುವುದನ್ನು ಸಾಮವೇದಿಯೂ ಕಾಣುತ್ತಾನೆ.

ಅದನ್ನು ಕಂಡ ಸಾಮವೇದಿ ಇದೇನು ಆಶ್ಚರ್ಯ ನಾನು ಬರುವಾಗ ಈತನೇಕೆ ಮುಚ್ಚಿದ. ಇದು ವಿಚಿತ್ರವಾದು. ನನಗೆ ಇದು ಹೊಸದಾದುದು. ಇಲ್ಲಿ ಏನೋ ಕೌತಕವಿದೆ. ಇಲ್ಲಿಯವರೆಗೆ ನಾನು ಈ ಭೂಮಿಯಮೇಲೆ ಇಂತಹುದನ್ನು ಕಂಡಿಲ್ಲ. ಅದಕ್ಕಾಗಿ ಇದೇನು ಎಂದು ಅರಿಯುವೆನು ಎಂದುಕೊಂಡು ತಾನು ಆಕಾಶ ಮಾರ್ಗದಿಂದ ಕೆಳಗಿಳಿದು ಬಂದು ಎಲೇ ಭಕ್ತನೇ ನೀನು ಏನು ಮುಚ್ಚಿದೆ? ಏಕೆ ಮುಚ್ಚಿದೆ? ನಾನು ಬಂದವನು ವಿಪ್ರಕುಲದವನು ಎಂದು ಅರಿತೂ ಏಕೆ ಮುಚ್ಚಿದೆ? ಕಾರಣವೇನು? ಎಂದು ಪರಿಪರಿಯಾಗಿ ಕೇಳುತ್ತಾನೆ. ಆಗ ಅಲಕ್ಷಿಸುತ್ತಾನೆ. ಆತ ಮಾತನಾಡದಿರುವುದನ್ನು ಕಂಡು ತಾನೇ ನಾಚಿ ಸಾಮವೇದಿ ಊರಕಡೆಗೆ ಹೋಗುತ್ತಾನೆ. ಅವನನ್ನು ಮಾತನಾಡಿಸಲು ಮತ್ತೆ ಮತ್ತೆ ಪ್ರಯತ್ನಿಸಿ ಮೂರನೆಯ ದಿನವೂ ಸೋಲುತ್ತಾನೆ. ಕೊನೆಗೆ ಮೂರನೆಯ ದಿನ ರಾತ್ರಿ ಶಿವನು ವಿಪ್ರನ ಕನಸಿನಲ್ಲಿ ಬಂದು 'ಎಲೆ ಸಾಮವೇದಿ, ನೀನೇಕೆ ಮರುಳಾದಪ್ಪೆ ಕುಲದ ಗರ್ವದೊಳಿಂತು ಕೆಟ್ಟು ಹಾಳಾದಪ್ಪೆ ಆನೆಂದಡಂ ಶ್ವಪಚದೇವರೆನೆ ಬೇರಿಲ್ಲ' ಅಂದರೆ, 'ಶ್ವಪಚದೇವನೆಂದರೆ ಸ್ವತಃ ನಾನೇ ಎಂದು ತಿಳಿ. ನೀನು ಆತನಿಗೆ ಆಳಾಗದ ಹೊರತು ಆತ ನಿನಗೆ ತಿಳಿಯುವುದಿಲ್ಲ' ಎನ್ನುತ್ತಾನೆ. ಹಾಗೆಯೇ ಇತ್ತ ಶ್ವಪಚದೇವನ ಕನಸಿನಲ್ಲಿಯೂ ಬಂದು ನಿನ್ನನ್ನು ಕಾಣುತ್ತಲೇ ಆತನ ಭವಿತನವು ನಾಶವಾಗಿದೆ. ಅವನ ಕುಲವೇ ಹಸನಾಗಿದೆ. ಅವನಿಗೆ ಸಂತೋಷದಿಂದ ನೀನು ಉಪದೇಶವನ್ನು ಮಾಡು,

ಅವನನ್ನು ಈ ಭೂಮಿಯ ಮೇಲೆ ಮೆರೆವಂತೆ ಮಾಡುವೆನು ಎನ್ನುತ್ತಾನೆ.

ಹೀಗೆ ಕನಸು ಕಂಡು ಸಂತೋಷಗೊಂಡ ಶ್ವಪಚದೇವ ಎಂದಿನಂತೆ ಅತಿಯಾದ ದಟ್ಟ ಅಡವಿಗೆ ಬಂದು ಶಿವನನ್ನು ಪೂಜಿಸುತ್ತಿರಲಾಗಿ, ಸಾಮವೇದಿ ಮನಸ್ಸಿನಲ್ಲಿ 'ಅವನೊಂದಿಗೆ ತರ್ಕಶಾಸ್ತ್ರವನ್ನು ಮುಂದಿಟ್ಟು ಮಾತನಾಡಿಸುವೆ. 'ಆತನಿಗೆ ಸೋತರೆ ಅವನೇ ನನ್ನ ಗುರುವೆನ್ನುವೆನು, ಅದಕ್ಕಾಗಿ ಮೊದಲು ಮರ್ಕಟ ಚರಿತ್ರೆಯನ್ನು ನಂತರ ಮಕ್ಕಿನ ಕುತರ್ಕವನ್ನು ಬಿಡುವೆನು' ಎಂದುಕೊಳ್ಳುತ್ತ ಅಲ್ಲಿಗೆ ನಡೆದು ಬರುತ್ತಾರೆ.

ಸಾಮವೇದಿ ಶ್ವಪಚದೇವನ ಹತ್ತಿರ ಬಂದು 'ನನ್ನ ಜೊತೆ ಏಕೆ ಮಾತನಾಡಲೊಲ್ಲಿರಿ, ಏಕೆ ಏನೊಂದು ಹೇಳಲಾರಿರಿ' ಎಂದಾಗ, 'ಮೊದಲು ನೊಸಲಿಗೆ ವಿಭೂತಿಯನ್ನು ಇಟ್ಟುಕೋ, ಮಾತನಾಡುತ್ತೇನೆ' ಎನ್ನುತ್ತಾರೆ. ಆಗ ಸಾಮವೇದಿ ಮನಸಾರೆ ವಿಭೂತಿಯನ್ನು ಹಚ್ಚಿಕೊಳ್ಳುತ್ತಾನೆ. ಆಗ ಶ್ವಪಚದೇವ 'ಲಿಂಗಾರ್ಚನೆಯನ್ನು ಮಾಡುವ ಸಂದರ್ಭದಲ್ಲಿ ಯಾವ ಭವಿಗಳೊಂದಿಗೂ ಮಾತನಾಡುವುದಿಲ್ಲ. ಅವರಿಗೆ ಲಿಂಗಾರ್ಚನೆಯನ್ನು ತೋರುವುದೂ ಇಲ್ಲ' ಎನ್ನುತ್ತಾನೆ. ಆಗ 'ಈ ಗಿಡಮರಗಳೆಲ್ಲ ಭಕ್ತರೆ? ಎಲ್ಲಡೆಗೂ ಗುಂಪುಗೂಡಿ ಬರುವ ಈ ಮೃಗಗಳೆಲ್ಲ ಭಕ್ತರೇ? ಅವುಗಳನ್ನು ಅಟ್ಟಿಸಿಕೊಂಡು ಬರುತಿರುವ ಬೇಡರೆಲ್ಲ ಭಕ್ತರೇ? ಅಲ್ಲದೇ ಇಲ್ಲಿರುವ ಚಾಂಡಾಲರು ಭಕ್ತರೆ? ಅವನ್ನೆಲ್ಲವನ್ನೂ ನೋಡುವೆ. ಅವೆಲ್ಲಕ್ಕೂ ಲಿಂಗವನ್ನು ತೋರುವೆ, ಎನಗೇಕೆ ಇಲ್ಲ ಅವು ಹೇಗೆ ಭಕ್ತ. ನಾನೊಬ್ಬನೇಕೆ ಭವಿ?' ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಶ್ವಪಚದೇವ ಉತ್ತರಿಸುತ್ತಾನೆ: 'ಗಿಡ ಮರಗಳ ಬಿಲ್ವಪತ್ರೆಗಳೆಲ್ಲ ಶಿವನಿಗೆ ಅರ್ಪಿತವಾಗುತ್ತವೆ. ನಿನ್ನ ಹಾಗೆ ಅನೇಕ ಆಸೆಗಳನ್ನು, ಕಾಮ–ಭೋಗ–ಕ್ರೋದಗಳನ್ನು ಹೊಂದಿ, ದುರ್ವಾಸನೆಯನ್ನು ಬೀರಲಾರವು. ತರುಮರಗಳನ್ನುಂಡು ತಿಳೀನೀರನ್ನು ಕುಡಿದು ಬದುಕುವ ತಮಗೆಷ್ಟು ಬೇಕೋ ಅಷ್ಟನ್ನೇ ತಿನ್ನುವ ಮೃಗಗಳು ಯಾರನ್ನೂ ಕಾಡಿಸುವುದಿಲ್ಲ. ಆದರೆ ನಿನ್ನ ಊಟವೇನು ಅನ್ನವಾಗಿದೆ. ಅದು ಹೆಣಕ್ಕೆ ಇಡುವ ಪಿಂಡಾನ್ನವಾಗಿದೆ. ಸತ್ತವರ ಮನೆಯೊಳಗೆ ಉಣ್ಣುವ ಕುಭೋಜನವಾಗಿದೆ. ಅಲ್ಲದೇ ನೀನುನ್ನುವುದೆಲ್ಲವೂ ಕಾಕಭೋಜನವಾಗಿದೆ. ಇನ್ನು ಬೇಡರೊಂದು ವೇದಶಾಸ್ತ್ರ ಅರಿಯದ ಮುಗ್ದರು. ಅವರಿಗೆ ಜಾತಿಧರ್ಮವೇ ಬೇಟೆಯನ್ನಾಡುವುದು. ಅದೇ ಅವರ ಧರ್ಮ. ಇನ್ನು ಚಾಂಡಾಲರ ಬಗ್ಗೆ ಹೇಳಬೇಕೆಂದರೆ ಅವರು ಜಾತಿಯಿಂದ ಚಾಂಡಾಲರಲ್ಲ. ಕರ್ಮದಿಂದಾಗಿ ಅವರು ಚಾಂಡಾಲರಾಗಿದ್ದಾರೆ. ಅವರ ಉದ್ಯೋಗವೇ ಅದಾಗಿದೆ. ಅವರಿಗೆ ದುರ್ಮುಖ, ದುರ್ಗುಣ ಅವಾವವೂ ಅವರಲ್ಲಿಲ್ಲ..." ಎಂದು ಮುಂತಾಗಿ ತಿಳಿಹೇಳುತ್ತಾನೆ. "ಗಗನದೊಳಗೆ ಅಡ್ಡಾಡುವೆನೆಂಬ ಗರ್ವ ಬೇರೆ. ನಿನಗೆ ಗಗನದಲ್ಲಿ ಹಕ್ಕಿಗಳೂ ಹಾರಾಡುತ್ತವೆ. ಅಷ್ಟೇ ಏಕೆ ಹಣ್ಣೆಲೆಗಳೂ ಹಾರಾಡುತ್ತವೆ. ಪಂಚಮುಖಿನಾದ ಶಿವನನ್ನು ಪೂಜಿಸದ ಪಾಪಿ ನೀನು, ... ಶಿವಜ್ಞಾನ ಅರಿಯದ ಮೂಢ ನೀನು" ಎಂಬುದಾಗಿ ಹೇಳುತ್ತಾನೆ. 'ಆ ತರು, ಮೃಗ, ಬೇಡ, ಚಾಂಡಾಲರಿಗಿಂತ ಕಡೆ ನೀನು ಸುಡುಸುಡು ನಿನ್ನ ಭವಿತನವ. ನೀನೇ ಪತಿತನು ಪಂಚಮಹಾಪಾತಕನು. ನಿನ್ನನ್ನು ಯಾವ ಶಿಭಕ್ತರು ನೋಡಬೇಕು. ಯಾವ ಶಿಭಕ್ತರು ಮಾತನಾಡಬೇಕು. ಮೊದಲು ನಿನ್ನ ನೀನರಿದು ಶಿವಶರಣನೆನಿಸಿಕೋ' ಎಂದು ಶ್ವಪಚದೇವನು ಸಾಮವೇದಿಗೆ ಹೇಳುತ್ತಾನೆ.

ಈ ಎಲ್ಲ ಮಾತುಗಳನ್ನು ಕೇಳಿ ಸಾಮವೇದಿಗೆ ಸತ್ಯಭೋದೆಯಾದಂತಾಗಿ ಶಿವನನ್ನು ತನ್ನ ಮನಸ್ಸಿನಲ್ಲಿ ಹೊಂದುತ್ತಾ ಇರುತ್ತಾನೆ. ಆಗ ಕರುಣೆಯಿಂದ ಶ್ವಪಚದೇವನು

ಸಾಮವೇದಿಯನ್ನು ಹತ್ತಿರದಲ್ಲಿ ಕರೆದು ಪದ್ಮಾಸನದಲ್ಲಿ ಕುಳ್ಳರಿಸಿ ಹರನಾದ ಶಶಿಧರನ ರೂಪವನ್ನು ಮನಸ್ಸಿನಲ್ಲಿ ಕೂರಿಸಿಕೊಳ್ಳುತ್ತಾ, ವಿಭೂತಿಯನ್ನು ಆ ವಿಪ್ರನ ಹಣೆಗೆ ಹಚ್ಚಿ ಪಶುಪತಿಯ ಚರಣವನ್ನು ಮನವೆಂಬ ಕೈಯಿಂದಲೇ ಮುಟ್ಟುತ್ತಾ ಸಾಮವೇದಿಯ ತಲೆಯ ಮೇಲೆ ಕೈಯ್ಯನಿಡುತ್ತಾನೆ. ಪ್ರೀತಿಯಿಂದ ಸಾಮವೇದಿಯ ಕಿವಿಯಲ್ಲಿ ಪಂಚಾಕ್ಷರಿ ಮಂತ್ರವನ್ನು ಉಸುರುತ್ತಾನೆ. ಮುಂದಿದ್ದ ಶಿವಲಿಂಗದ ನಿಜಮೂರ್ತಿಯನ್ನು ತಿಳಿಸಿ ಶಿವ ಮಹಿಮೆಯನ್ನು ಉಪದೇಶಿಸುತ್ತಾನೆ. ಆಗ ಸಾಮವೇದಿಯಲ್ಲಿ ಕುಲದ ಕಲ್ಮಶವು ಕಳೆದು ಶಿವಭಕ್ತಿ ನೆಲೆಗೊಳ್ಳುತ್ತದೆ. ಭವಿತನವು ತಾನೇತಾನಾಗಿ ತೊಲಗುತ್ತದೆ. ಸಾಮವೇದಿಯ ಎಲ್ಲ ಕುಲವೂ ಕೈಲಾಸಕ್ಕೆ ಸೇರಿದಂತಾಗುತ್ತದೆ.

ಹೀಗಿರುತ್ತ ಸಾಮವೇದಿ ಕರುಣದಿಂದ ಭತ್ತೀಸಪುರಕ್ಕೆ ಬರುತ್ತಾನೆ. ಅಲ್ಲಿ ಬಂದು ತನ್ನ ಶೈವಾಗಮೋಕ್ತಿಯಿಂದ ತನ್ನೆಲ್ಲ ಶಿಷ್ಯರಿಗೆ ತಿಳಿಹೇಳಿ ಸದ್ಭಕ್ತರನ್ನಾಗಿ ಮಾಡುತ್ತಾನೆ. ಈತನ ಕಾರಣದಿಂದ ಇಡೀ ಭತ್ತೀಸಪುರವೆಲ್ಲವೂ ಶಿವಮಯವಾಗುತ್ತದೆ. ಮನೆ ಮನೆಯೊಳೆಲ್ಲವೂ ಲಿಂಗಾರ್ಚನಾಮಯ ವಾಗುತ್ತದೆ. ಎಲ್ಲೇ ಕೇಳಿದರೂ ಘಂಟಾನಾಧ, ಎಲ್ಲಿ ನೋಡಿದರಲ್ಲೆಲ್ಲ ವಿಭೂತಿಧಾರಿಗಳು, ಎಲ್ಲೆಲ್ಲಿ ಕೇಳಿದರೂ ಶಿವಶಬ್ಧವು, ಎಲ್ಲಲ್ಲಿ ಕೇಳಿದರೂ ಶಿವಪುರಾಣವು, ಹೂವು ಅಗ್ಘವಣಿ ತರುವ ಸಂಭ್ರಮ ಒಟ್ಟಾರೆ ನಗರವೆಲ್ಲ ಶಿವಮಯವಾಗುತ್ತದೆ. 'ಇಂದಾನು ಗುರುವಿಂದೆ ಬದುಕಿದೆನು, ಇಂದಾನು ಗುರುವಿಂದೆ ಶುದ್ಧನಾದೆನು ಎನ್ನುತ್ತಾ' ಕುಣಿಕುಣಿದು ಹಾಡುತ್ತಾ ಆಡುತ್ತಾ ಪೂಜೆಯನ್ನು ಗೈಯ್ಯುತ್ತಾನೆ. ಈ ರೀತಿಯಾಗಿ ಒಂದೆರಡು ತಿಂಗಳ ಪರ್ಯಂತ ಇವರ ಪೂಜೆ ನಡೆಯುತ್ತಿರುತ್ತದೆ. ಇಡೀ ಭೂತಳಕ್ಕೆ ಈತನ ಭಕ್ತಿ ಕಂಪು ಹಬ್ಬುತ್ತದೆ.

ಹೀಗಿರಲು ಇವರ ತಂದೆಯ ದಿನ ಬರುತ್ತದೆ. ಇದನ್ನು ಎಲ್ಲ ಭಕ್ತರಿಗೂ ಹೇಳುತ್ತಾ ತನ್ನ ತಂದೆಯ ದಿನಕರ್ಮ ನಡೆಸುವ ವಿಶ್ವೇದೇವರೊಬ್ಬರೂ ಇಲ್ಲ ತನ್ನ ಮನಸ್ಸಿಗೆ ಹಿತವನ್ನು ನೀಡುವವ ತಾವಿಲ್ಲ ಎಂದು ವಿಚಾರಿಸಿ ನೋಡಿ ಶ್ವಪಚದೇವನನ್ನು ಕರೆಯುವುದೆಂದು ನಿಶ್ಚಯಿಸುತ್ತಾನೆ.

ಹೀಗೆ ವಿಚಾರ ಮಾಡಿದ್ದೇ ತಡ ಅರಣ್ಯಕ್ಕೆ ಬಂದು ಶ್ವಪಚದೇವರನ್ನು ಕಂಡು ತನ್ನ ಮನದ ಇಂಗಿತವನ್ನು ಹೇಳುತ್ತಾನೆ. 'ಮರುಳೆ ವಿಪ್ರವೇಷದೊಳು ಪಿತ್ರದಿವಸಕ್ಕೆ ನಾನು ಬರುವುದಿಲ್ಲ. ನಿನ್ನ ಮನೆಗೆ ವಿಶ್ವೇದೇವರೇ ಬರುತ್ತಾನೆ ಹೋಗು' ಎನ್ನುತ್ತಾನೆ. 'ಮನಸಿಜಹರ ತಾನೇ ಬರುತ್ತಾನೆ ಹೋಗು' ಎಂದಾಗ 'ಆತ ಯಾವರೂಪದಲ್ಲಿ ಬರುವನು ಎಂಬುದನ್ನು ಅರುಹಬೇಕು' ಎನ್ನುತ್ತಾನೆ. ಆಗ 'ನನ್ನಯ ವೇಷದಲ್ಲಿ ಶಿವ ಬರುವನು, ಒಂದು ಕರು ಹೆಗಲಮೇಲೆ, ಕೈಯ್ಯಲ್ಲಿ ಸಂಬಳಿಗೋಲು ಇರುತ್ತದೆ' ಎಂದು ಶಿವನ ಬರುವಿನ ಕುರುಹನ್ನು ತಿಳಿಸುತ್ತಾನೆ. ಆಗ ಸಂತೋಷಗೊಂಡು ಸಾಮವೇದಿ ಭತ್ತೀಸಪುರಕ್ಕೆ ಬರುತ್ತಾನೆ.

ಮರುದಿವಸ ಎಲ್ಲ ಶಿಷ್ಯವರ್ಗವನ್ನು ಕೂಡಿಕೊಂಡು ಸಾಮೇವೇದಿ ಪುಳಕಗೊಳ್ಳುತ್ತಾ ಶಿವನ ಬರುವಿಕೆಯ ದಾರಿಯನ್ನು ನೋಡುತ್ತಿರಲಾಗಿ, ಶಿವನು ಸಾಮವೇದಿಗಳ ಪಿತೃಕುಲವನ್ನೆಲ್ಲ ಕೂಡಿಸಿಕೊಂಡು ಬರುತ್ತಿರುತ್ತಾನೆ. ಹಿಂದಿನ ದಿನ ಶ್ವಪಚದೇವ ಹೇಳಿದ ರೀತಿಯಲ್ಲಿಯೇ ವೇಷಗೊಂಡು ಬರುತ್ತಿರುತ್ತಾನೆ. ಹೆಗಲಮೇಲೆ ಕರುವನ್ನು ಹೊತ್ತುಕೊಂಡು, ಸಂಬಳಿಗೋಲನ್ನು ಕೈಯ್ಯಲ್ಲಿ ಹಿಡಿದುಕೊಂಡು ಉತ್ತಮೋತ್ತಮ ಶರಣರಕ್ಷಕ ಬರುತ್ತಿರುತ್ತಾನೆ. ಆತ ಬರುವುದನ್ನು ದೂರದಿಂದಲೇ ಕಂಡು ಪುಳಕಿತನಾಗಿ,

ತನ್ನ ಪಿತೃಕುಲ ಸಹಿತನಾಗಿ ಬರುತ್ತಿರುವ ಶಿವನನ್ನು ಕರೆದು ಅಲ್ಲಿರುವ ಮಂಡಲದಲ್ಲಿ ನಿಲ್ಲಿಸಿ ಪಾದಕ್ಕೆ ನೀರನ್ನು ಎರೆಯುತ್ತಿರಲಾಗಿ ಅಲ್ಲಿ ನಿಂತಿದ್ದ ವಿಪ್ರಕುಲವೆಲ್ಲ ಓಡೋಡಿ ಹೋಗುತ್ತದೆ. ಸಾಮವೇದಿಯು ಆ ವಿಶ್ವೇಶ್ವರನ್ನನ್ನು ಕರುಣಿಸಬೇಕೆಂದು ಬೇಡಿಕೊಳ್ಳುತ್ತಾ ಪೂಜೆಗೈಯ್ಯುತ್ತಿರುತ್ತಾನೆ. ಆಗ ಶಿವನ ನಿಜರೂಪ ಮೈದೋರುತ್ತದೆ. ಆ ಶಿವನಿಗೆ ಪಂಚಮುಖಗಳಾಗುತ್ತವೆ. ಉಟ್ಟಿದ್ದ ಅರಿವೆ ಹುಲಿತೊಗಲಾಗುತ್ತದೆ. ಕಿವಿಗೆ ಕಟ್ಟಿದ್ದ ಕಿವಿಯೋಲೆ ನಾಗಕುಂಡಲವಾಗುತ್ತದೆ. ಮೈಯ ಅತಿ ಕಪ್ಪುತನ ಅಳಿದು ಕಂಠವೆಲ್ಲ ನೀಲಕಂಠವಾಗುತ್ತದೆ. ಕೈಯ್ಯಲ್ಲಿ ಹಿಡಿದ ಸಂಬಳಿಗೋಲು ತ್ರಿಶೂಲವಾಗುತ್ತದೆ. ಎರಡು ಕಣ್ಣುಗಳು ಹೋಗಿ ಮೂರು ಕಣ್ಣಿನ ಈಶ್ವರನು ಕಂಗೊಳಿಸುತ್ತಾನೆ. ಹೀಗೆ ಶಶಿರವಿಯರು ಬೆಳಗುತ್ತಿರಲಾಗಿ ಆತನ ಮೇಲೆ ಹೂಮಳೆಗರೆಯುತ್ತದೆ. ಈಶ್ವರನು ಸಾಮವೇದಿ ಸ್ನೇಹದಿಂದ ಬಿಗಿದಪ್ಪಿಕೊಳ್ಳುತ್ತಾನೆ. 'ನಡೆ ವಿಮಾನವನ್ನು ಏರಿಕೊಳ್ಳು ಕೈಲಾಸಕ್ಕೆ ಹೋಗೋಣ' ಎನ್ನುತ್ತಾನೆ. ತಕ್ಷಣವೇ ಸಾಮವೇದಿಗಳು 'ನನ್ನ ಗುರುಸಹಿತವಲ್ಲದೇ ನಾನು ಬರಲಾರೆನು' ಎನ್ನುತ್ತಾನೆ. ಆಗ ಈಶ್ವರನು ಶ್ವಪಚದೇವನನ್ನು ಕರೆಯಿಸಿ ಇಡೀ ಭತ್ತೀಸಪುರವನ್ನೇ ಕೈಲಾಸಕ್ಕೆ ತೆಗೆದುಕೊಂಡು ಹೋಗುತ್ತಾನೆ. ಶಿವನ ಓಲಗದಲ್ಲಿ ಇವರಿಗೆ ಗಣಪದವಿಯನ್ನು ನೀಡಿ ಗುರು ಶಿಷ್ಯರ ಭಕ್ತಿನ್ನು ಅಲ್ಲಿರುವವರಿಗೆಲ್ಲ ಗುಣಗಾನ ಮಾಡುತ್ತಾನೆ. ಭತ್ತೀಸಪುರವನ್ನೇ ರುದ್ರಲೋಕದೊಳಗೆ ಸೇರಿಸುತ್ತಾನೆ.

ಹೀಗೆ ಶಿವನ ಮಹಿಮೆಯನ್ನು ಶಿವಭಕ್ತನ ಮೂಲಕ ತೋರಿಸುವ ಮತ್ತೊಂದು ರಗಳೆಯಾಗಿ ಈ ರಗಳೆಯನ್ನು ನೋಡಬಹುದು.

*****

ಆಕರ ಗ್ರಂಥ

ಹರಿಹರನ ರಗಳೆಗಳು, ಸಂಪಾದಕರು: ಡಾ. ಎಂ. ಎಂ. ಕಲಬುರ್ಗಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ –1999

❖❖❖

ಬಿಸಿಲ ಉಕ್ಕು ಇಳಿಯಿತು
ಮುಗಿಲು ಬಾನ ಕವಿಯಿತು
ಹಕ್ಕಿ ಹಾರಿ ಗೂಡ ಸೇರಿ
ಮಕ್ಕಳೊಡನೆ ಬೆರೆಯಿತು
ಪುಟ್ಟಕೊಕ್ಕು ಅರಳಿತು
ಗುಟುಕಿಗೊಡ್ಡಿಕೊಂಡಿತು

ಕಾ.ತ. ಚಿಕ್ಕಣ್ಣನವರ 'ಮೋಡ ನೆರಳ ನಿರಾಳ' ಭೂಮಿತತ್ವದ ಕಥೆಗಳು

ಡಾ. ಜಾಜಿ ದೇವೇಂದ್ರಪ್ಪ
ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಅಧ್ಯಯನ ಕೇಂದ್ರ
ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗಂಗಾವತಿ

ಕನ್ನಡ ಕಥಾಪರಂಪರೆಯಲ್ಲಿ ನವೋದಯಪೂರ್ವದಿಂದ ವರ್ತಮಾನದ ಸಾಮಾಜಿಕ ಸಂದರ್ಭದವರೆಗೂ ಹಲವು ಅನುಭವ ಲೋಕಗಳು ನಿರಾಳವಾಗಿ ತೆರೆದುಕೊಂಡಿವೆ. ಆಯಾ ಕಾಲದ ಸಾಮಾಜಿಕ, ಸಾಂಸ್ಕೃತಿಕ ವಿದ್ಯಮಾನಕ್ಕೆ ಪ್ರತಿಕ್ರಿಯೆಯೆಂಬಂತೆ ಬಂದ ಕನ್ನಡ ಕಥೆಗಾರರ ನುಡಿನಿರೂಪಣೆಗಳು ನಮ್ಮ ಕಾಲವನ್ನು ಪ್ರಭಾವಿಸಿವೆ. ಕನ್ನಡದ ನವೋದಯ ಮತ್ತು ನವ್ಯದ ಕಥಾಹಂದರ ಇನ್ನಿಲ್ಲದಷ್ಟು ಜೀವಪರಂಪರೆಯನ್ನು ಮೊಗೆಮೊಗೆದು ನೀಡಿರುವುದು ಸಾಹಿತ್ಯದ ದೃಷ್ಟಿಯಿಂದ ಬಹುದೊಡ್ಡ ಕೊಡುಗೆಯೇ.

ದಲಿತ–ಬಂಡಾಯದ ಸಂದರ್ಭದಲ್ಲಿಯಂತೂ ಕಥನ ಪರಂಪರೆಯ ಮತ್ತೊಂದು ಲೋಕವೇ ಸೃಷ್ಟಿಯಾಯಿತು. ಕನ್ನಡದಲ್ಲಿ ಇಷ್ಟು ದೊಡ್ಡ ಕಥಾ ಪರಂಪರೆಯಿದ್ದರೂ ಇನ್ನೂ ಅನುಭವಗಳ ಲೋಕ ಪರಿಪೂರ್ಣಗೊಂಡಿಲ್ಲ. ಜಾಗತೀಕರಣದ ನವವಸಾಹತುಶಾಹಿಯ ಈ ಕಾಲದಲ್ಲಿಯೂ ನಮ್ಮ ಹಿರೀಕ ಕಥೆಗಾರರು ತಮ್ಮ ಬಾಲ್ಯದ ವರ್ತಮಾನದ ಜೀವನಾನುಭವಗಳನ್ನು ಇಂದಿಗೂ ಅಭಿವ್ಯಕ್ತಿಸುತ್ತಿರುವುದು ಕುತೂಹಲದ ಸಂಗತಿಯೇ. ಹಳೇ ತಲೆಮಾರು ಮತ್ತು ಎರಡನೇ ತಲೆಮಾರಿನ ಲೇಖಕರ ಗಾಢ ಗ್ರಾಮೀಣ ಅನುಭವಿಕ ಜಗತ್ತು ಅಕ್ಷರದ ಹಂದರದಲ್ಲಿ ರಂಗೋಲಿ ಹಾಕುವ ಕಾಲ ಮುಗಿಯಿತು ಎಂಬಷ್ಟರಲ್ಲಿಯೇ ಮತ್ತೆ ಅವುಗಳ ಒರತೆಯು ಮತ್ತೆ ಜೀವಜಲದಂತೆ ಅಂತರಂಗದ ಕವಾಟಕ್ಕೆ ಲಗ್ಗೆಯಿಡುತ್ತಿರುವುದರ ಸಂಕೇತವೇನೆಂದರೆ ಚರಿತ್ರೆಯ, ಪರಂಪರೆಯ ಸಾಂಸ್ಕೃತಿಕ ಬೇರುಗಳಲ್ಲಿ ಇನ್ನೂ ಜೀವದ್ರವ್ಯವಿದೆ ಎನ್ನುವುದೇ ಆಗಿದೆ.

ಕಾ.ತ. ಚಿಕ್ಕಣ್ಣನವರು ಕನ್ನಡದ ಮುಖ್ಯ ಕಥೆಗಾರರಲ್ಲಿ ಒಬ್ಬರು. ಈ ಹಿಂದೆ ಹೇಳಿದಹಾಗೆ ದಟ್ಟ ಗ್ರಾಮೀಣ ಜೀವನವನ್ನೂ ಎರಡನೇ ತಲೆಮಾರಿಗೆ ನೀಡುತ್ತಾ ನುಡಿ ನಿರೂಪಣೆಯ ಮಣಿಹದಲ್ಲಿ ನಿರತರಾಗಿದ್ದಾರೆ. ಇಡೀ ಕನ್ನಡದ ಕಥಾಪರಂಪರೆಯಲ್ಲಿಯೇ ವಿಭಿನ್ನ ಅಭಿವ್ಯಕ್ತಿಯ ಮಾರ್ಗ ಕಂಡುಕೊಂಡ ಚಿಕ್ಕಣ್ಣನವರ ಕಥಾಶೈಲಿಯು ಹೆಚ್ಚು ಚರ್ಚೆಯಾಗಬೇಕು. ದಕ್ಷಿಣ ಕರ್ನಾಟಕ–ಮೈಸೂರು ಭಾಗದ ಕಥೆಗಳನ್ನು ಓದಿದ ಗಾಢ ಅನುಭವವಿರುವ ಓದುಗನಿಗೆ ಇವರ ಕಥೆಗಳನ್ನು ಒಂದೇ ಗ್ರಹಿಕೆಯಲ್ಲಿ ಅರ್ಥಮಾಡಿಕೊಳ್ಳುವುದು ಕಷ್ಟವೇ. ಹೈದ್ರಾಬಾದ್ ಕರ್ನಾಟಕದಲ್ಲಿ ಇವರ ಸಮಕಾಲೀನರಾಗಿ ಬರೆಯುತ್ತಿರುವವರ ಕಥೆಗಳನ್ನು ಓದಿಕೊಂಡು ಸಹೃದಯರಿಗೂ ಚಿಕ್ಕಣ್ಣನವರ ನುಡಿನಿರೂಪಣೆಯು ಒಂದಷ್ಟು ಸಿದ್ಧತೆಯನ್ನು ಮಾಡಿಕೊಂಡೇ

ಓದಬೇಕೆಂಬ ಒತ್ತಾಯವನ್ನು ಮಾಡುತ್ತವೆ.

ಚಿಕ್ಕಣ್ಣನವರ ಕಥನಕ್ರಮ ಕನ್ನಡದ ಕಥಾಭಿವ್ಯಕ್ತಿಯ ಮಾರ್ಗಕ್ಕಿಂತ ಕೊಂಚ ಬೇರೆಯೆನಿಸುತ್ತದೆ. ಅವರು ಗ್ರಾಮೀಣ ಪರಿಸರವನ್ನು ವಿವರಿಸುವಾಗ ಸಾಲುಸಾಲಾಗಿ ಬಳಸುವ ಗಿಡ, ಮರಗಳ ಹೆಸರುಗಳು, ಹಳ್ಳ–ಕೊಳ್ಳಗಳ ಹೆಸರುಗಳು, ಜನಸಮುದಾಯದ ವೃತ್ತಿಗಳ ಹೆಸರುಗಳು, ಧಾನ್ಯ ಮುಂತಾದ ಕಾಳು–ಕಡ್ಡಿಯ, ಹೂ–ಬೇರು, ಸಂತೆಮೊಳದ ವಿವರ, ಪ್ರಾಣಿ–ಪಕ್ಷಿಯ, ದಂಡಿಯಾಗಿ ಬರುವ ವಿವಿಧ ಹೆಸರುಗಳು, ಸೊಪ್ಪು–ಬೇರುಗಳ ಸೌದೆ–ಮಣ್ಣಿನ ವಿವರವಾದ ಹೆಸರುಗಳು ಕೊಡುವಾಗ ಅವರಿಗೆ ಗಾಢವಾದ ಗ್ರಾಮಜೀವನದ ಭಾಷಿಕ ನುಡಿಗಟ್ಟುಗಳ ಮೋಹವನ್ನು ಬಿಡದಂತೆ ಮಾಡಿದೆ. ಈ ಮೋಹ ಬರಿಯ ಬೆಡಗಲ್ಲ. ಅದು ಭಾಷಿಕ ಸಂಸ್ಕೃತಿಯ ವಿಶಿಷ್ಟ ಚಹರೆಯಾಗಿಯೂ, ಜನಪದ ಭಾಷೆಯ ದಾಖಲೀಕರಣದ ಉತ್ಸಾಹವಾಗಿಯೂ ಮೇಲ್ನೋಟಕ್ಕೆ ಕಂಡುಬರುತ್ತದೆ.

ವರ್ತಮಾನದಲ್ಲಿ ಜಾಗತೀಕರಣ ಭಯಾನಕವಾಗಿ ನಮ್ಮ ಹಳ್ಳಿಗಾಡನ್ನು ಇನ್ನಿಲ್ಲದಂತೆ ಬಕಾಸುರೋಪಾದಿಯಲ್ಲಿ ನುಂಗಿ ನೊಣೆದು ಹಾಕಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಕಥೆಗಾರರೆಲ್ಲ ಗೋಳೀಕರಣದ ಅಪಾಯಗಳನ್ನು, ಬಂಡವಾಳದ ಅನಾಹುತಗಳನ್ನು ಕಥೆಯ ಮುಖೇನ ಹೇಳುವ ಪರಿಯಲ್ಲಿದ್ದಾರೆ. ಆದರೆ ಚಿಕ್ಕಣ್ಣನವರ ಕಥೆಗಳ ಆಶಯಗಳಿರುವುದು 'ನಮ್ಮತನದ' ಹುಡುಕಾಟದಲ್ಲಿ. ಯಾವ ನಗರಕೇಂದ್ರಿತ ತಲ್ಲಣಗಳನ್ನು ಉಸುರದೇ ನಮ್ಮ ಗ್ರಾಮೀಣ ಜೀವನದ ಅಪ್ಪಟ ಬದುಕಿನ ಲೋಕದ ಆಳವನ್ನು ಸೂಕ್ಷ್ಮವಾಗಿ ಎತ್ತಿ ತೋರಿಸುತ್ತಿರುವುದು ಈ ಕಾಲದ ಅಗತ್ಯವೆಂದು ತಿಳಿಯುತ್ತದೆ. ಕಾ.ತ.ಚಿಯವರ ಕಥೆಯ ಸಂವಿಧಾನ ಭೂಮಿತತ್ವದ ನೆಲೆಯಲ್ಲಿದೆ. ಕಥಾ ಒಣತಂತ್ರಗಳನ್ನು ಎಲ್ಲಿಯೂ ಬಳಸದೇ, ನೇರನುಡಿಯ ಸರಳ ವರದಿಗಳಂತೆ ಗೋಚರಿಸುವ ಮುಗ್ಧ ರಚನೆಗಳೇ ಹೆಚ್ಚು. ಈ ಬಗೆಯ ರಚನೆಗಳು ಕಥಾ ಚೌಕಟ್ಟಿಗೆ ಗಾಢತೆಯನ್ನು ಆವರಿಸದೇ ಹೋಗಿರುವುದೊಂದು ವಿಶೇಷವೇ. ಪಾತ್ರಗಳನ್ನು ತುಂಬುವಾಗಲೂ ಚಿಕ್ಕಣ್ಣನವರು ಯಾವುದೇ ಕಥಾತಂತ್ರವನ್ನು ಬಳಸಿಕೊಂಡಿಲ್ಲವೆಂಬುದು ತಿಳಿಯಬಹುದು. ಪಾತ್ರದ ಸೂಕ್ಷ್ಮ ಕಲಾಯಿಯನ್ನು ಮಾಡದೇ ಕಥೆಗಳಲ್ಲಿ ಬರುವ ಎಲ್ಲ ಪಾತ್ರಗಳು ಸುಮ್ಮನೇ ಹಳ್ಳಿಯೊಂದರಲ್ಲಿ ಓಣಿಯಿಂದ ಓಣಿಗೆ ಯಾವುದೋ ಕೆಲಸದ ನಿಮಿತ್ಯ ಓಡಾಡಿಕೊಂಡಂತೆ ಭಾಸವಾಗುತ್ತದೆ. ಇಲ್ಲಿನ ಕಥೆಗಳಲ್ಲಿ ಯಾವ ಪಾತ್ರವೂ ಸೂಕ್ಷ್ಮವಾಗಿ, ಗಾಢವಾಗಿ, ಅಂತರಂಗ ಹಸಿಯಾಗಿ ಆವರಿಸಿಕೊಳ್ಳದೇ ಹೋಗುವಂತೆ ಢಾಳಾಗಿ, ಸರಳವಾಗಿ ಚಿತ್ರಿಸಿರುವುದನ್ನು ಗಮನಿಸಬಹುದು.

ಕಾ.ತ. ಚಿಕ್ಕಣ್ಣನವರ 'ಮೋಡ ನೆರಳ ನಿರಾಳ'ದ ಹಿನ್ನಲೆಯಲ್ಲಿ ಈ ಹಿಂದೆ ಪ್ರಸ್ತಾಪಿಸಿದ ಕೆಲವು ಸ್ಥಾಯಿ ಪರಿಕರಗಳೊಂದಿಗೆ ಕಥಾಂತರಂಗವನ್ನು ಪ್ರವೇಶಿಸುವುದು ಉಚಿತ. ಮೋಡ ನೆರಳ ನಿರಾಳ ಸಂಕಲನದಲ್ಲಿ ಒಂಭತ್ತು ಕಥೆಗಳಿವೆ. ಈ ಒಂಭತ್ತು ಕಥೆಗಳು ಚಿಕ್ಕಣ್ಣನವರ ಅಪಾರ ಗ್ರಾಮಾನುಭವದ ಚಹರೆ ಹೊಂದಿವೆ. ಇದೇ ಇವರ ಬಿಂಬಜ್ಞಾನ. ಚಿಕ್ಕಣ್ಣನವರ ಕಥೆಗಳು ಬಿಂಬಜ್ಞಾನ ಆಧಾರಿತ ಕೃಷಿ ಸಂಸ್ಕೃತಿಯನ್ನು ಏಕಾಲಜಿಯ ನೆಲೆಯಲ್ಲಿ ವಿಸ್ತಾರಗೊಳ್ಳುತ್ತಲೇ ಜಂಗಮ ಸಂಸ್ಕೃತಿಯ ವಿಶಿಷ್ಟತೆಯನ್ನು ಎತ್ತಿ ತೋರುತ್ತವೆ.

'ಏಕಾಲಜಿ'ಯನ್ನು ಕಥೆಯಲ್ಲಿ ಮತ್ತೆ ಮತ್ತೆ ಪ್ರಜ್ಞಾಪೂರ್ವಕವಾಗಿ ಚಿಕ್ಕಣ್ಣನವರು

ತರುವ ಹಿಂದಣ ಸತ್ಯವನ್ನು ಅರಿಯಬೇಕಾದದ್ದು ಜರೂರು. 'ಗದ್ದೆಗುಮ್ಮ' ಕಥೆಯಲ್ಲಿ ಮೊದಲ ಸಾಲು ಹೀಗಿದೆ – "ಭೂಮಿಗೆ ಮನುಷ್ಯ ಅಧೀನವೋ? ಮನುಷ್ಯನಿಗೆ ಭೂಮಿ ಅಧೀನವೋ?" ಇದೇ ಭೂಮಿ ತತ್ವ. ಈ ಪ್ರಶ್ನೆಯನ್ನಿಟ್ಟುಕೊಂಡೇ ಮಾದನಾಯಕ ಊರಿಗೆ ಬರುತ್ತಾನೆ. ದನ, ಕುರಿ, ಕರು, ಆಡು, ಹಕ್ಕಿ, ಪ್ರಾಣಿ–ಪಕ್ಷಿ, ಮರ–ಗಿಡ–ಗಂಟೆ, ಹಳ್ಳ, ಗುಡ್ಡ ಯಾವವೂ ನಿರಾತಂಕವಾಗಿಲ್ಲವೆಂದು ಯೋಚಿಸುವ ಮಾದನಾಯಕ ಆಧುನಿಕ ಮನುಷ್ಯನ ಸ್ವಾರ್ಥಕ್ಕೆ ಆಧುನೀಕರಣದ ನೆಪದಲ್ಲಾಗುತ್ತಿರುವ ನಿಸರ್ಗದ ಕೊಲೆಯ ಹತಾರಗಳನ್ನು ಸೂಕ್ಷ್ಮವಾಗಿ ಬಿಂಬಿಸುತ್ತಿದ್ದಾರೆ. ಬಾಲ್ಯದಲ್ಲಿ ತಾನು ಕಂಡುಂಡ ಗ್ರಾಮ–ಹಳ್ಳಿಯ ಸಮೃದ್ಧ ಹಸಿರು–ಕಾಡು–ನೀರು–ಪಕ್ಷಿ–ಪ್ರಾಣಿ ಸಂಕುಲಗಳ ಕಣ್ಣ ಮುಂದಣ ಹಬ್ಬ ಈಗ ಇಲ್ಲದಂತಾಗಿರುವುದು. ಕಂತ್ರಾಟುದಾರರ ರಾಕ್ಷಸ ಕೆಲಸಗಳಿಗೆ ಹಸಿರು ಬಲಿಯಾಗಿರುವುದು ಆತಂಕದ ಸಂಗತಿಯೇ. ಈ ಕಥೆಯಲ್ಲಿ ಬರುವ ಅರಳೀಮರ ಮತ್ತು ದೇವೀರಪ್ಪ ಇಂತವುಗಳ ಪ್ರತಿರೋಧದ ಸಾಂಕೇತಿಕ ಪ್ರಜ್ಞೆಯಾಗಿ ಕಾಣುತ್ತಾರೆ. ಒಣ ರಾಗಿರೊಟ್ಟಿ ತಿಂದು ದಿನಪೂರ್ತಿ ಹೊಲಗೆಲಸ ಮಾಡುತ್ತಿದ್ದ ಜನ ಈಗ ಕಾಲಾಯಿ ಕೆಲಸ ಇತ್ಯಾದಿ ಮಾಡಿ ನಾಕುಪಟ್ಟು ಕಾಸು ಕೂಡಿಹಾಕಿ ಗುಂಪು ಚೀಟಿ ಲೇವಾದೇವಿ ಮಾಡುತ್ತಾರೆ ಎಂಬಲ್ಲಿ ಆಧುನಿಕತೆಯ ಭಾನಗಡಿಯು ಚಿತ್ರಿತವಾಗಿದೆ. ಒಂದು ಕಾಲದಲ್ಲಿ ತರಕಾರಿ–ಗೆಣಸು–ಗಡ್ಡೆಗಳನ್ನು ಬೆಳೆಯುತ್ತಿದ್ದ ದೇವೀರಪ್ಪ ಭೂಮಿಯನ್ನು ಮಾರಿಕೊಂಡು ನಗರದಲ್ಲಿರುವ ಮಗನ ಹತ್ತಿರ ಹೋಗುವುದು. ಅಲ್ಲಿ ಸುಖಗಾಣದೆ ತನ್ನೂರ ಅರಳೀಕಟ್ಟೆಯ ಸುಖವನ್ನು ಧೇನಿಸಬರುವುದು. ಸೊಸೆಯ ಕೈ ಅನ್ನ–ಸಾರಿನ ಬದಲಾಗಿ ಹಟ್ಟಿಯ ಕಂಚಿನ ಗಂಗಾಳದ ಮುದ್ದೆ–ಸೊಪ್ಪೆಸಾರನ್ನು ಬಯಸುವುದೆಲ್ಲವೂ ಪರಂಪರೆ ಮತ್ತು ವರ್ತಮಾನವನ್ನು ತೀವ್ರ ಸಂಘರ್ಷಕ್ಕೆ ಒಡ್ಡುವ ಸಂಗತಿಗಳೆಂಬುದು ಗಮನಿಸಬೇಕು. "ಈ ಭೂಮಿಗೆ ಮನುಷ್ಯ ಒಡೆಯನಲ್ಲ, ಈಚೆಗೆ ಅವನು ಭೂಮಿ ಸಂಬಂಧ ಕಳಚಿಕೊಂಡು, ಭೂಮಿಗಿಂತ ದೊಡ್ಡವನಾಗಿ ಬೆಳೆಯುವ ಹುಚ್ಚು ಹಚ್ಚಿಸಿಕೊಂಡಿದ್ದಾನೆ" ಎಂದು ಸಾರುವ ಕಾ.ತ.ಚಿಕ್ಕಣ್ಣನವರ ಆತ್ಯಂತಿಕ ಜೀವಪರ ಏಕಾಲಜಿಕಲ್ ತತ್ವವನ್ನು ಅನುಸರಿಸುವ ಒತ್ತಾಯವನ್ನು ಮಾಡುತ್ತವೆ. ಮಾದನಾಯಕ ಅರಸಿಕೊಂಡು ಬರುವ 'ಗದ್ದೆಗುಮ್ಮ' ವಿಶಿಷ್ಟ ಸಾಂಕೇತಿಕ ರೂಪಕ ಅದು. ಜೀವ ಸಂಕುಲಗಳು ಕಾಣೆಯಾಗುತ್ತಿರುವ ಈ ಕಾಲದ ವಿನಾಶ ಸಂಸ್ಕೃತಿಯನ್ನು ಈ ಗದ್ದೆಗುಮ್ಮದ ಹುಡುಕಾಟ ಧ್ವನಿಸುತ್ತಿದೆ.

ಸಂತೆಮೊಳದ ಹಾದಿಗುಂಟೆಯು ಸಮೃದ್ಧವಾದ ಗ್ರಾಮಭಾರತದ ಹಲವು ವಿವರಗಳನ್ನು ಕೊಡುವ ಕಥೆ. ಮೊಪತಿ ಮತ್ತು ಆತನ ಮಗ ಮೋನಾನ ಚಿತ್ರಣ ಸೊಗಸಾಗಿ ಬಂದಿದೆ. ಈ ಕಥೆಯಲ್ಲಿ ಬರುವ ಗಾಡಿ, ಕುದುರೆ, ಕತ್ತೆ ಮುಂತಾದ ವಿವರ, ಅಕ್ಕಿ, ರಾಗಿ, ಇತ್ಯಾದಿ ತರಕಾರಿ, ಮಿಠಾಯಿ, ಬೆಲ್ಲ, ಪೆಪ್ಪರಮೆಂಟು ಹೀಗೆ ದಂಡಿಯಾಗಿ ಸಂತೆಮೊಳದ ವಿವರ ಕೊಡುತ್ತಲೇ, ಆ ಕಾಲದ ಸಾಲಗಾರರು, ಲೇವಾದೇವಿಗಾರರು, ಮೇಷ್ಟ್ರುಗಳು ಅದರಲ್ಲಿಯೂ ಭಾಷಾಬೋಧನೆ ಮಾಡುವ ಕಾಲಿಗೆ ಎಂದೂ ಚಪ್ಪಲಿ ಬಳಸದ ಪಂಡಿತರು, ಸಂತೆಯಲ್ಲಿ ಚೌಕಾಸಿ ಮಾಡಿ ಪ್ರೇಯಸಿಗೆ ಒಳಲಂಗ, ಮಿಠಾಯಿ, ಗಂಮನ ಎಣ್ಣೆ ಖರೀದಿಸುವ ಹುಡುಗರು ಹೀಗೆ ದಟ್ಟವಾದ ವಿವರಗಳು ಹಲವು ಚಿತ್ರಗಳು ಕಣ್ಣಮುಂದೆ ನೇಯಂತೆ ಬಂದು ಹೋಗುತ್ತವೆ. ಈ ಕಥೆಯಲ್ಲಿಯೂ ಕೂಡಾ ಕಥೆಗಾರರು ಭೂಮಿ–ಮನುಷ್ಯ–ಪ್ರಾಣಿ–ಪಕ್ಷಿಸಂಕುಲ–ನಿಸರ್ಗ ಮತ್ತು ಜಡದ

ಜೊತೆಗಿನ ಜೀವ ಸಂಬಂಧವನ್ನು ಬೆಸೆಯುತ್ತಿರುವುದು ವಿಶೇಷ.

ಮಳೆ–ಮಾರು ಕಥೆಯು ಚಿಕ್ಕಣ್ಣನವರ ಮತ್ತೊಂದು ವಿಶೇಷವಾದ ಕಥೆ. ಈ ಕಥೆಯಲ್ಲಿ ಕ್ವಾಟೆಯಮ್ಮ, ರೇವು, ನಾಯಿಗಳು, ಜಗಲಿಕಟ್ಟೆಗಳು ಜೀವಂತರೂಪಕಗಳಾಗಿರುವುದನ್ನು ಗಮನಿಸಬಹುದು. ಇಲ್ಲಿ ಅರಳಿಮರ ಜೀವರಕ್ಷಕವಾಗಿ ಸಂಕೇತಿಸಿರುವುದು ನಮ್ಮ ಕಾಲದ ಅಗತ್ಯವಾಗಿದೆ. ಸೌಹಾರ್ದವೇದಿಕೆಯಾಗಿದ್ದ ಜಗಲಿಕಟ್ಟೆಯು, ದ್ಯಾವಣ್ಣನಂತಹ ಪುಡಾರಿ ರಾಜಕೀಯ ವ್ಯಕ್ತಿಗಳ ತಾಣವಾಗುವುದು ಮತ್ತು ದ್ಯಾವಣ್ಣನ ಹಣದ ಹೊಳೆಯಲ್ಲಿ ತೇಲಿಹೋದ ಊರಿನ ಪಡ್ಡೆಗಳ ಮೌಲ್ಯಗಳನ್ನು ಕಥೆಯು ಎತ್ತಿತೋರಿಸುತ್ತದೆ. ಕ್ವಾಟೆಯಮ್ಮನ ಜಗುಲಿಕಟ್ಟೆಯು ಈಗ ತನ್ನ ಮೈಯನ್ನು ಬದಲಿಸಿಕೊಂಡು ಮದ್ಯ–ಮಾಂಸ ತಿಂದು ತೇಗುವ ದ್ಯಾವಣ್ಣನ ರಾಜಕೀಯ ಅಡ್ಡವಾಗಿರುವುದು ಒಂದು ಆಕಸ್ಮಿಕವಷ್ಟೇ. ಮಾಯವಾಗುತ್ತಿರುವ ಕೂಡುಕುಟುಂಬದ ಕಟ್ಟಿಗಳು, ಬೆಲೆಕಳೆದುಕೊಂಡಿವೆ. ಎಲ್ಲರೊಳಗೊಂದಾದ ಕ್ವಾಟೆಯಮ್ಮನಂತಹ ಅಪ್ಪಟ ಮಾನವೀಕರಣದ ಮೂರ್ತಿಗಳು ಮೂಲೆಗುಂಪಾಗಿ, ಹಣದ ಮೆರವಣಿಗೆಯಲ್ಲಿ ತೇಲಾಡುವ ಜನ ಸಂಸ್ಕೃತಿಯ ವಿಕಾರಗಳನ್ನು ಈ ಕಥೆಯು ಸರಳವಾಗಿ ನಿರೂಪಿಸುತ್ತದೆ.

ಆಡಿಬಾ ನನಕಂದ ಕಥೆಯಲ್ಲಿ ಬೂಬಮ್ಮ–ಇಮಾಮ್‌ರ ಮಗ ಚೋಟೆಯು ಸುಬ್ರಾಯ ಶೆಟ್ಟಿಯ ಪಾಳುಬಿದ್ದ ಹೊಲದಲ್ಲಿರುವ ಹಾಳುಬಾವಿಗೆ ಬೀಳುತ್ತಾನೆ. ಈ ಪ್ರಸಂಗದ ಗುಂಟ ನಡೆಯುವ ಹಲವು ಮಾನವೀಯ ಪ್ರಸಂಗಗಳು, ರಾಜಕಾರಣದ ನೆಲೆಗಳು ಬೆಸೆದುಕೊಂಡಿವೆ. ಬಡರೈತ ಇಮಾಮುವಿನ ಮಗಚೋಟೆ ಆಡಾಡುತ ಬಾವಿಯಲ್ಲಿ ಬೀಳುತ್ತಾನೆ. ಪಾಳುಬಿದ್ದ ಬಾವಿಯು ಮುನೇಶ್ವರನ ವಾಸಸ್ಥಾನವೆಂತಲೂ, ಅದನ್ನು ನೋಡಿದವರಿಗೆ ಕೇಡುಗಾಲವೆಂತಲೂ ನಂಬಿದ್ದ ಆ ಊರಜನತೆಯು ಚೋಟೆಯನ್ನು ಹೊರತೆಗೆಯಲು ಸಾಧ್ಯವಾಗದೇ ಬರೀ ಮಾತಲ್ಲಿ ತೊಡಗುವುದು ಕೊನೆಗೆ ಮಾದೇವಸ್ವಾಮಿಯ ಕಳಕಳಿ, ದಯಾನಂದ ಧೈರ್ಯರಾಗಿ ಚೋಟೆಯನ್ನು ರಕ್ಷಿಸುವ ಘಟನೆ ಚಿತ್ರಿತವಾಗಿದೆ. ಬೂಬಮ್ಮ ತನ್ನ ಮಗನನ್ನು ಶಾಲೆಗೆ ಕಳಿಸುವ ಫ್ಲ್ಯಾಶ್‌ಬ್ಯಾಕ್‌ನೊಂದಿಗೆ ಕತೆ ಮುಗಿಯುತ್ತದೆ. ಸಣ್ಣ ಘಟನೆಯ ಸುತ್ತ ಸರಳವಾಗಿ ಹೆಣೆದ ಕಥೆಯಿದು.

ಈ ಕಥೆಯಲ್ಲಿನ ಪಾತ್ರಗಳು ದುರ್ಬಲದೊಂಡಂತೆ ಭಾಸವಾಗುತ್ತವೆ. ಬಾವಿಯಲ್ಲಿ ಬಿದ್ದ ಮಗುವನ್ನು ರಕ್ಷಿಸುವ ಪ್ರಸಂಗ ತೀರಾ ನಾಟಕೀಯವಾಗಿ ಚಿತ್ರಣಗೊಂಡಿದೆ. ಬಾವಿಯಲ್ಲಿ ಮಗು ಬಿದ್ದಾಗ ಪೆನ್ನಿನೆವರು ಅಧಿಕಾರಿಗೆ ಕೇಳುವ ಬಾಲಿಶ ಪ್ರಶ್ನೆಗಳನ್ನು ಮಗು ಬಾವಿಯಿಂದ ಬಂದಮೇಲೆ ಊರವರ ಕಾಳಜಿಯನ್ನು ಸೂಕ್ಷ್ಮವಾಗಿ ಹೆಣೆಯಬಹುದಿತ್ತು. ಕೆಂಪೊಳೆ ಕಥೆಯು ಗ್ರಾಮೀಣ ಪರಿಸರದ ಒಂದು ಜನಪದ ನಂಬಿಕೆಯನ್ನಾಧರಿಸಿದ ಸಶಕ್ತವಾದ ಕಥೆ. ತೊನ್ನು ಹತ್ತಿ ಮರಣಹೊಂದಿದ ಸಿದ್ಧಲಿಂಗ ಪಟೇಲರ ಹೆಣವನ್ನು ಹೂತಿದ್ದರಿಂದಲೇ ಮಳೆಯಾಗಿಲ್ಲವೆಂಬ ಕಾರಣದಿಂದ ಊರಿನ ಮೂಡಲಯ್ಯ, ನಾಗಾಚಾರಿ, ಮುಂತಾದ ಹಿರಿಯರ ದಂಡು, ಹೂತಿಟ್ಟ ಪಟೇಲರ ಹೆಣಕ್ಕೆ ದಸಿಹೊಡೆಸಬೇಕೆಂದು ನಿರ್ಧರಿಸಿ, ಇದು ಆ ಊರಿನ ಅಸ್ಪೃಶ್ಯ ತೆಂಕನಿಂದಲೇ ಸಾಧ್ಯವೆಂದು ಆತನಿಗೆ ಅವನ ಮನೆಗೆ ಬಂದು ಒತ್ತಾಯದಿಂದ ಮಾತಂಗಿ–ತೆಂಕನನ್ನು ಒಪ್ಪಿಸುತ್ತಾರೆ. "ದಸಿ ಹೊಡೆಯೋದ್ರಲ್ಲಿ ನಿನಗಿರೋ ನಿಪುಣತೆ ಊರಲ್ಲಿ ಯಾರಿಗಿದೆ ಹೇಳು. ನೀನೇ ಈ ಕೆಲ್ಸ ಮಾಡಬೇಕು. ಇದು ಹತ್ತೊ ಜನದ ಕೆಲ್ಸ, ಧರ್ಮದ ಕೆಲ್ಸ"

ಎಂದು ಊರ ಕೆಲಗುಂಪು ತೆಂಕನಿಗೆ ವಹಿಸುವುದು ಧರ್ಮದ ಹೆಸರಲ್ಲಿ ಅವನನ್ನು ದಸಿಹೊಡೆಯಲು ಹುನ್ನಾರ ಮಾಡುತ್ತಾರೆ.

ಊರಿನ ಕೆಂಪೊಳೆ ಬತ್ತಿಹೋದ ರೂಪಕದಿಂದ ನೀಡುವ ಚಿತ್ರಣ ಸೊಗಸಾಗಿದೆ. ಕೆಂಪೊಳೆಯ ಜೀವಕ್ಕಾಗಿ ತನ್ನ ಜೀವವನ್ನೇ ಒತ್ತೆಯಿಟ್ಟು ತೆಂಕ ಧೈರ್ಯವಾಗಿ ಪಟೇಲರ ಹೆಣಕ್ಕೆ ದಸಿಹೊಡೆಯವುದು, ಆ ಕ್ಷಣಕ್ಕೆ ಧಾರಾಕಾರ ಮಳೆ ಸುರಿಯುವುದು. ದಸಿಹೊಡೆಯುವುದನ್ನು ತಡೆಯಲು ಬಂದ ಇನ್ನೊಂದು ಗುಂಪು ನಿರುತ್ತರವಾಗುವುದು ಕಾಕತಾಳೀಯವೆಂಬಂತೆ ಕಥೆಗಾರರು ಚಿತ್ರಿಸಿದ್ದಾರೆ. ಈ ಕಥೆಯಲ್ಲಿಯು ಕೆಂಪೊಳೆಯ ಜೀವಜಲಕ್ಕೆ ತೆಂಕನು ಸಾಹಸಮಾಡುವುದು, ತೆಂಕನ ಹೆಂಡತಿ ಮಾತಂಗಿಯು ಗುಡಿಸಲಿನ ಹಿಂಭಾಗದಲ್ಲಿ ತರಕಾರಿ, ಬಳ್ಳಿ, ಗಿಡ ಬೆಳೆಸುವ ಹುಚ್ಚು ಇಟ್ಟುಕೊಂಡಿರುವುದು, ನಿಂಬೆಗಿಡಕ್ಕೆ 'ದ್ಯಾವ', ಪರಂಗಿ ಗಿಡಕ್ಕೆ 'ಕೆಂಪಾ', ಮಲ್ಲಿಗೆ ಬಳ್ಳಿಗೆ 'ಗಮಗಮಿ' ಎಂದು ಹೆಸರಿಟ್ಟುಕೊಂಡು ಮಕ್ಕಳಂತೆ ಬೆಳಸಿ ತಾಯಿವಾತ್ಸಲ್ಯ ತೋರುವ ಮತಿ(ಮಾತಂಗಿ)ಯ ನಿಸರ್ಗ ಪ್ರೀತಿಯು ಅಪ್ರತಿಮವಾದದ್ದು. ದಸಿಹೊಡೆದು ಬಂದ ಮೇಲೆ ಮಳೆಬಂದಿತು. ಅದನ್ನು ಕಂಡ ತೆಂಕ **"ಈ ನೆಲ–ಮುಗಿಲುಗಳ ಮರ್ಮವೇ ತಿಳಿಯಲೊಲ್ಲದು.... ಅವನು ಮಳೆಹನಿಗಳನ್ನು ಬೊಗಸೆಯಲ್ಲಿ ತುಂಬಿಕೊಂಡು ಕಣ್ಣಿಗೊತ್ತಿಕೊಂಡದ್ದು ಮೋಡ ನೆರಳ ನಿರಾಳವೇ ಅಲ್ಲವೇ?"**.

ಕಣಿವೆ ಕತ್ತಲ ಬೆಳಕು ಕಥೆಯ ಅರಸನಾಳು ಹುಲಿಯಪ್ಪ ಉರುಫ್ ದೇಶಬಂಧು ದಯಾಳು ಎಂಬ ಮಿಲಿಟರಿಯವನೊಬ್ಬನ ಸ್ವಾಭಿಮಾನದ ಕಥೆ. ಮಿಲಿಟರಿ ಸೇವೆಗೆ ಸೇರಿದ ದಯಾಳು ತಾನಿಟ್ಟುಕೊಂಡ ದೇಶಸೇವೆಯ ಕನಸು ನಿಜ ಅರ್ಥದಲ್ಲಿ ನಡೆಯಲಿಲ್ಲ. ಅದು ಮೇಲಾಧಿಕಾರಿಗಳ ರಾಜಕೀಯ ನಾಯಕರ ದೇಹಕಾಯುವ, ಮನೆಕಾಯುವ, ಮನೆ ಹೆಂಡರನ್ನು ಕಾಯುವ ಕೆಲಸ ಗುಲಾಮಗಿರಿಯಂತೆ ಭಾಸವಾಗಿ ನೊಂದು ತನ್ನ ಹಳ್ಳಿಗೆ ಬಂದು ಸ್ವಚ್ಛಂದ ನಿಸರ್ಗ–ಹಸಿರು–ಹಳ್ಳ–ಪ್ರಾಣಿ–ಪಕ್ಷಿ–ಹೊಲ–ಗದ್ದೆಯ ಸಾಂಗತ್ಯದಲ್ಲಿ ಕಳೆದ ತನ್ನ ಬಾಲ್ಯವನ್ನು ನೆನಪಿಸಿಕೊಂಡು, ರೈಫಲ್ ಜೀವನದಿಂದ ಮುಕ್ತನಾಗಬೇಕೆಂದು ಬಯಸುತ್ತಾನೆ. ಈ ಕಥೆಯು ಗ್ರಾಮಜೀವನದ ಕೃಷಿ ಸಂಸ್ಕೃತಿಯ ಸ್ವತಂತ್ರಜೀವನ ಮತ್ತು ಔದ್ಯೋಗಿಕ ಸಂಸ್ಕೃತಿಯ ಗುಲಾಮಿ ಜೀವನಗಳನ್ನು ಮುಖಾಮುಖಿಯಾಗಿಸುತ್ತದೆ.

ಮೋಡ ನೆರಳ ನಿರಾಳ ಕಥೆಗಳಲ್ಲಿ ಕಾ.ತ.ಚಿಕ್ಕಣ್ಣನವರು ಗಿಡ–ಮರಗಳನ್ನು ನೀರೆರೆದು ಪೋಷಿಸಿದ್ದಾರೆ. ಹಸಿರು ಉಸಿರಾಗುವ ಪರಿಯನ್ನು ಹೇಳುತ್ತಲೇ, ನಮ್ಮ ಹಿರೀಕ ಹಳ್ಳಿಗರ ಬದುಕಿನ ಸೂಕ್ಷ್ಮವಿವರಗಳನ್ನು ಬಿಚ್ಚಿಡುತ್ತಾರೆ. ಹಳ್ಳಿಗರು ತಮ್ಮ ಊರು–ಕೇರಿಯಲ್ಲಾಡುವ ಸರಳಭಾಷೆಯ ಸೊಗಡನ್ನು ಹಾಗೇ ಬಳಸುತ್ತಲೇ ಕಥೆ ನಿರೂಪಿಸುವ ಮಾದರಿಯನ್ನು ತಂದಿದ್ದಾರೆ. ಇಲ್ಲಿನ ಕಥೆಗಳಲ್ಲಿ ಎಲ್ಲಿಯೂ 'ಕಥಾತಂತ್ರ'ವೆಂಬ ಕುಣಿಕೆಗೆ ವಿನಾಕಾರಣ ಶರಣಾಗದೇ 'ಆನು ಒಲಿದಂತೆ ಹಾಡುವೆ' ಎಂಬಂತೆ ಸರಳವಾಗಿ ಹೇಳುವ ತಂತ್ರ ರೂಢಿಸಿಕೊಂಡಿದ್ದಾರೆ.

ಮೋಡ ನೆರಳ ನಿರಾಳ ಕಥೆಗಳಲ್ಲಿ ಎಲ್ಲಿಯೂ ವಿಲನ್‌ಗಳಿಲ್ಲದಿರುವುದು ವಿಶೇಷ ಮತ್ತು ಸೋಜಿಗ. ಹಳ್ಳಿಗಾಡಿನ ದ್ವಂದ್ವ ಮನಸ್ಸುಗಳ ಸಣ್ಣ ವಿವರ ಮಾತ್ರ ಇದೆ. ಎಲ್ಲಿಯೂ ಜಾತಿ, ವರ್ಗ, ವರ್ಣಗಳ ನಡುವಣ ತಲ್ಲಣಗಳ ಕಡೆ ಈ ಕಥಾನೆಲೆಗಳ ಬೇರುಗಳು ಚಾಚಿಕೊಂಡಿಲ್ಲ. ಅಂತೆಯೇ ಎಲ್ಲ ಕಥೆಗಳಲ್ಲಿ ಒಂದಿಲ್ಲೊಂದು

ಸಂದರ್ಭದಲ್ಲಿ ನಿರಾಳವಾಗಿ ಮಳೆಯ ಹನಿಯಂತೆ ಸೇರುವ ನಿಸರ್ಗ–ಪ್ರಾಣಿ–ಪಕ್ಷಿ ಸಂಕುಲ ಅವುಗಳೊಂದಿಗೆ ಮನುಷ್ಯ ಜೀವನದ ಬೆಸುಗೆಯನ್ನು ವಿಶೇಷವಾಗಿ ನೆಯ್ದುಕೊಡುವ ಕಾ.ತ. ಚಿಕ್ಕಣ್ಣನವರು ಎಕಾಲಜಿಕಲ್ ಮಾದರಿ ಭೂಮಿತತ್ವವನ್ನು ಆತ್ಯಂತಿಕವಾಗಿ ನಂಬಿರುವುದು ಆರೋಗ್ಯಪೂರ್ಣ ಸಮಾಜವೊಂದರ ದಿವ್ಯವೆಂಬಂತೆ ನಾವು ಭಾವಿಸಬೇಕಾಗಿದೆ.

ಆಕರ ಗ್ರಂಥಗಳು

1. ಕನ್ನಡ ಕಥನ ಸಾಹಿತ್ಯ : ಕಾದಂಬರಿ – ಡಾ. ಜಿ.ಎಸ್. ಅಮೂರ – 2006 – ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ – ಕೀರ್ತಿನಾಥ ಕುರ್ತುಕೋಟಿ – 2010 –ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ.
3. ವಿಮರ್ಶಾ ಲೇಖನಗಳು – ಡಾ. ವಿಜಯಶ್ರೀ ಸಬರದ – 2005 – ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
4. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ – ವಿವಿಧ ಲೇಖಕರು– 2006 – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

❖❖❖

ಗಾಳಿ ಕರುಣೆ ಮರೆತಂತೆ
ನೆಲದಿ ಧೂಳು ಎದ್ದಿತು
ಧೂಳು ಕೆರಳುತಿದ್ದಂತೆ
ಬುವಿಯ ಹೆರಳು ಕೆದರಿತು
ಮರಗಳಮಲು ಏರಿದಂತೆ
ತುದಿಯು ಮಣ್ಣ ಮುಟ್ಟುವಂತೆ
ಓಲಾಡತೊಡಗಿತು

ಜಿ.ಪಿ. ರಾಜರತ್ನಂ ಅವರ ದಾಂಪತ್ಯ ಗೀತೆಗಳಲ್ಲಿ ಆತ್ಮಚರಿತ್ರಾತ್ಮಕ ಅಂಶಗಳು

ಡಾ. ಜ್ಯೋತಿ ಎಸ್.ಬಿ.
ಕನ್ನಡ ಸಹ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ

'ಕಾವ್ಯಕಲೆ'ಯನ್ನು ತಮ್ಮ ಬದುಕಿನ ಭಾಗವಾಗಿಯೇ ಪರಿಭಾವಿಸಿದ ನವೋದಯ ಕವಿಗಳಲ್ಲಿ ಜಿ. ಪಿ. ರಾಜರತ್ನಂ ಅವರೂ ಒಬ್ಬರು. ಬದುಕು ಮತ್ತು ಬರೆವಣಿಗೆಯನ್ನು ಸಮಾನವಾಗಿ ಗೌರವಿಸಿದ, ಕವಿಯ ಲೌಕಿಕ ವ್ಯಕ್ತಿತ್ವ ಮತ್ತು ಕಾವ್ಯ ವ್ಯಕ್ತಿತ್ವಗಳು ಏಕೀಭವಿಸಬೇಕೆಂಬ ಸ್ಪಷ್ಟ ನಿಲುವಿನೊಂದಿಗೆ ಬರೆವಣಿಗೆ ನಡೆಸಿದವರು. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ದುಡಿದರೂ ಕಾವ್ಯ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಿಕೊಂಡವರು. ರಾಜರತ್ನಂ ಅವರ ಕಾವ್ಯದ ಬಗ್ಗೆ ಜನರಲ್ಲಿ ಒಂದು ಬಗೆಯ ರೋಚಕ ಅನುಭವ ಮೂಡಲು ಕಾರಣವಾದ 'ಹೆಂಡ', 'ಹೆಂಡತಿ' ಮತ್ತು 'ಕನ್ನಡ ಪದ'ಗಳು ಅವರ ಕಾವ್ಯದ ನೆಲೆಗಳಾಗಿವೆ.

ರಾಜರತ್ನಂ ಅವರ ಕಾವ್ಯ ಬಹುತೇಕ ಈ ನೆಲೆಗಳ ಸುತ್ತಲೇ ಸುತ್ತುತ್ತ ಸಮಕಾಲೀನ ಸಾಮಾಜಿಕ ಜೀವನಕ್ಕೆ ತೆರೆದುಕೊಳ್ಳಲಿಲ್ಲ. ಆದರೂ ಈ ಮೂಲಕವೇ "ರಸಪೂರ್ಣವಾದ ಕಾವ್ಯ ನಿರ್ಮಾಣ ಮಾಡಿ ತನ್ನ ಜೀವನ ದೃಷ್ಟಿಗೆ ಅನುಕೂಲವಾದ ಪರಿಸರವೊಂದನ್ನು ನಿರ್ಮಿಸಿಕೊಂಡು, ಆ ಪರಿಸರದ ಬಣ್ಣಗಾರಿಕೆಯ ಮುಖಾಂತರವೇ ಕವಿ ತನ್ನ ಭಾವನೆಗಳನ್ನು ಪ್ರಕಟಿಸುವ ಪ್ರಯತ್ನವನ್ನು ಕನ್ನಡದಲ್ಲಿ ರಾಜರತ್ನಂರು ಮೊದಲ ಬಾರಿಗೆ ಮಾಡಿದರು." (ಕುರ್ತುಕೋಟಿ ಕೀರ್ತಿನಾಥ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, 2010, ಪು.ಸಂ.72) ತಾವು ನಿರ್ಮಿಸಿದ ಹೆಂಡ್ಕುಡ್ಕನ ಲೋಕದಲ್ಲಿ ಕವಿಯೂ ನಟನಾಗಿ, ಪ್ರೇಕ್ಷಕನಾಗಿ ವರ್ತಿಸುವ ಮೂಲಕ ಈ ಜಗತ್ತಿನಲ್ಲಿ ಒಬ್ಬರಾದರು.

ಗಂಡು–ಹೆಣ್ಣಿನ ದಾಂಪತ್ಯ ಬದುಕನ್ನು ಅತ್ಯಂತ ಸಹಜ ನೆಲೆಯಲ್ಲಿ ಅಭಿವ್ಯಕ್ತಗೊಳಿಸಿ ಮನುಷ್ಯ ಸಂಬಂಧದ ಉತ್ಕೃಷ್ಟ ಭಾವವಾಗಿ ಪರಿಭಾವಿಸಿದ ನವೋದಯ ಕವಿಗಳಲ್ಲಿ ಜಿ.ಪಿ. ರಾಜರತ್ನಂ ಅವರೂ ಒಬ್ಬರು. ಕೆಳಮಧ್ಯಮ ವರ್ಗದ ಸಾರ್ಥಕ ಸಾಂಸಾರಿಕ ಬದುಕಿನ ಅನುಭವಗಳನ್ನು 'ರತ್ನನ ಪದಗಳು' ಮತ್ತು 'ನಾಗನ ಪದಗಳು' ಕೃತಿಗಳ ಮೂಲಕ ಚಿತ್ರಿಸಿ "ಎಲ್ಲವೂ ಸುಖವಾಗಿದ್ದು, ಪ್ರೀತಿ ಪ್ರೇಮದಂತಹ ಸಾರ್ಥಕತೆಯನ್ನು ಅನುಭವಿಸುವುದು ಒಂದು ಸಾಮಾನ್ಯ ಸಂಗತಿಯಾಗಬಹುದು. ಆದರೆ ಬದುಕು ನಿತ್ಯ ಬವಣೆಯೇ ಆಗಿರುವ ಹೊತ್ತಿಗೂ ಆ ನಡುವೆ ಪ್ರೀತಿಗೆ ಅರ್ಥ ಕಂಡುಕೊಳ್ಳುವುದು, ನಗುತಾ ಬದುಕುವುದು ಶ್ರೇಷ್ಠವೇ ಹೌದು"(ಪ್ರಶಾಂತ ನಾಯಕ ಜಿ., ಪ್ರೇಮ ನವೋದಯ, ಗೀತಾಂಜಲಿ ಪ್ರಕಾಶನ, ಶಿವಮೊಗ್ಗ, 2013, ಪು.ಸಂ. 50) ಎಂಬುದನ್ನು ತಮ್ಮ ವೈಯಕ್ತಿಕ ಬದುಕಿನ ಹಿನ್ನೆಲೆಯಲ್ಲಿ ಅನಾವರಣಗೊಳಿಸಿದರು.

ರಾಜರತ್ನಂ ಅವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟ 'ರತ್ನನ ಪದಗಳು' ಕೃತಿಯಲ್ಲಿ ಕನ್ನಡಕ್ಕೆ ಅತ್ಯುತ್ತಮ ಪ್ರಣಯಗೀತೆಗಳನ್ನು ನೀಡಿದ್ದಾರೆ. ಅವರೇ ಹೇಳಿರುವಂತೆ "ಈ ರತ್ನ ತನ್ನ ದುಃಖ ಜಲಧಿಯ ತಳದಿಂದಲೆ ಬಂದಿದೆ. ತನ್ನ ಕೃತಿಗೆ ಕಾರಣ Inspiration ಗಿಂತ Irritation ಹೆಚ್ಚು" (ಉದ್ಧೃತ: ರಾಜರತ್ನಂ ಜಿ. ಪಿ., ಹತ್ತು ವರುಷ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, 2008, ಪೀಠಿಕೆ) ಎಂಬ ಮಾತುಗಳಲ್ಲಿ ಅವರು ತಮ್ಮ ಬದುಕಿನಲ್ಲಿ ಅನುಭವಿಸಿದ ಬಡತನದ ಯಾತನೆ, ನಿರುದ್ಯೋಗ, ಪತ್ನಿಯ ಖಾಯಿಲೆ, ಅದರಿಂದ ಚೇತರಿಸಿಕೊಳ್ಳಲಾಗದೆ ಸಂಸಾರ ಹೂಡುವ ಮೊದಲೇ ಪತ್ನಿವಿಂ ಯೋಗವನ್ನನುಭವಿಸಬೇಕಾದ ದುಃಖ – ಈ ಬಗೆಯ ಸಂಕಟಗಳ ನಡುವೆಯೂ ತಮ್ಮ ದಾಂಪತ್ಯಪ್ರೇಮದ ಅನುಭವಗಳನ್ನು ಮಧುರ ಪ್ರಣಯರೂಪಗಳಾಗಿ ಚಿತ್ರಿಸಿದ್ದಾರೆ. ರತ್ನ–ನಂಜಿಯರ ಈ ಪ್ರಪಂಚ ವ್ಯಕ್ತಿನಿಷ್ಠ ಎಂದುಕೊಂಡರೂ ಬಡತನದಲ್ಲೂ ಪ್ರೀತಿಯ ಶ್ರೀಮಂತಿಕೆಯನ್ನು ಅನುಭವಿಸಿದ ಈ ನೆಲದ ಬಹುಜನರ ಬದುಕಿನ ಪ್ರಾತಿನಿಧಿಕ ರೂಪ ಎನ್ನಬಹುದು. ಇಲ್ಲಿನ ಪ್ರಣಯಕಾವ್ಯದ ನಾಯಕ ಕುಡುಕನಾದರೂ, ಬಡವನಾದರೂ, ಅವನಿಗೂ ಬದುಕಿನ ಬಗೆಗೆ ಪ್ರೀತಿಯಿದೆ. ತನ್ನದೇ ಆದ ಆದರ್ಶ, ಕನಸುಗಳಿವೆ. ಕೈ ಹಿಡಿದು ನಂಬಿ ಬಂದವಳನ್ನು ಸಂತೋಷವಾಗಿಡಬೇಕೆಂಬ ಬಯಕೆಯಿದೆ. ಹೀಗಾಗಿ ಇಲ್ಲಿ ಬರುವ ರತ್ನ ಮತ್ತು ನಂಜಿಯರ ಪ್ರೇಮದ ಒಂದೊಂದು ಭಾವಕ್ಕೂ ವಿಶೇಷತೆಯಿದೆ ಹಾಗೂ ಸಾರ್ಥಕ ಬದುಕಿನ ಕ್ಷಣಗಳ ಅವಲೋಕನವಿದೆ.

'ಕನ್ನಡ ಪದಗೊಳು' ಕವಿತೆಯಲ್ಲಿ ಅಪರಿಮಿತ ಕನ್ನಡಾಭಿಮಾನವನ್ನು ಪ್ರದರ್ಶಿಸುವ ಭರದಲ್ಲಿ ಹೆಂಡ್ತಿ ಹೋದ್ರೆ 'ಕಳದೋಯ್ತ್ ಅಂತ ಕುಣಿದಾಡ್ತೀನಿ ದೊಡ್ಡ ಒಂದ್ ಕಾಟ! ತೊಂದ್ರೆ!' ಎಂದು ಹಾಡಿದ ವಿಚಾರ ರಾಜರತ್ನಂ ಅವರ ಹೆಂಡತಿಯ ಕಿವಿಗೆ ಬಿದ್ದದ್ದು ವಿಪರೀತಾರ್ಥವಾಗಲು ಪ್ರೇರಣೆಯಾಯಿತು. ಈ ಗೊಂದಲವನ್ನು ಪರಿಹರಿಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಪ್ರೇಮಗೀತೆಗಳು ಕನ್ನಡದ ಅಪೂರ್ವವಾದ ಭಾವಗೀತೆಗಳ ಸಾಲಿನಲ್ಲಿ ನಿಲ್ಲುವ ಶಕ್ತಿ ಪಡೆದವು.

ಗಂಡ–ಹೆಂಡತಿಯರ ಅನನ್ಯ ಪ್ರೇಮಭಾವ ರಾಜರತ್ನಂ ಅವರ ಪ್ರೇಮಗೀತೆಗಳ ರಚನೆಗೆ ಸ್ಫೂರ್ತಿಯಾಗಿವೆ. ಇದು ರತ್ನನ ಪದಗಳಲ್ಲಿ ರತ್ನ–ನಂಜಿಯರ ರೂಪದಲ್ಲಿದ್ದರೆ ನಾಗನ ಪದಗಳಲ್ಲಿ ನಾಗ–ಮಲ್ಲಿಯರ ಪಾತ್ರಗಳಲ್ಲಿ ಅನಾವರಣಗೊಂಡಿದೆ. 'ಪುಟ್ಟಂಜೀ ರತ್ನ' ಶೀರ್ಷಿಕೆಯ ಅಡಿಯಲ್ಲಿರುವ 'ರತ್ನನ ಪದಗಳು' ಕೃತಿಯ ಪ್ರೇಮಗೀತೆಗಳು ಕವಿಯ ಸಾಂಸಾರಿಕ ಪ್ರೇಮ ಮತ್ತು ವಿರಹದ ಭಾವಗಳನ್ನು ಅತ್ಯುತ್ತಮವಾಗಿ ಹಿಡಿದಿಟ್ಟಿವೆ. ಇವು ವ್ಯಕ್ತಿನಿಷ್ಠ ನೆಲೆಯನ್ನು ಮೀರಿ ಸಾಮಾನ್ಯೀಕರಣಗೊಂಡಿರುವುದರಿಂದ ಇಂದಿಗೂ ಅತ್ಯುತ್ತಮ ಪ್ರೇಮಗೀತೆಗಳಾಗಿ ಉಳಿಯಬಲ್ಲ ಶಕ್ತಿ ಪಡೆದಿವೆ. ಮಡದಿಯ ಸೌಂದರ್ಯದ ವರ್ಣನೆಯೊಂದಿಗೆ ಪ್ರಾರಂಭಗೊಳ್ಳುವ ಕವಿತೆಗಳಲ್ಲಿ ಹೆಣ್ಣಿನ ಚೆಲುವನ್ನು ಕೇವಲ ಬಾಹ್ಯ ಸ್ವರೂಪಕ್ಕೆ ಸೀಮಿತಗೊಳಿಸದೆ ಒಂದು ಮೌಲ್ಯವಾಗಿ ಪರಿಭಾವಿಸಿರುವುದರಲ್ಲಿ ಕವಿಯ ವ್ಯಕ್ತಿತ್ವದ ಘನತೆ ಕಾಣುತ್ತದೆ.

ಸೌಂದರ್ಯ ಎಂಬುದು ಮನಸ್ಸಿನ ಗ್ರಹಿಕೆಗೆ ಸಂಬಂಧಿಸಿದ್ದು ಎಂಬುದನ್ನು ಯಾವ ಶಿಷ್ಟ ವರ್ಣನೆಗೂ ಕಡಿಮೆಯಿಲ್ಲದಂತೆ ಕವಿ ತನ್ನ ಪತ್ನಿಯ ರೂಪವನ್ನು 'ಹೆಂಡ್ತುಡ್ಕ ರತ್ನ'ನ ಮೂಲಕ ಹಾಡಿ ಹೊಗಳಿದ್ದಾರೆ. ಅತ್ಯುತ್ತಮ ಗುಣವಿರುವ, ಬೆಲೆಯಿರುವ ವಸ್ತುಗಳೊಂದಿಗೆ ಅವಳನ್ನು ಸಮೀಕರಿಸುತ್ತಲೇ, ಅವಳ ವ್ಯಕ್ತಿತ್ವವನ್ನು ಪರಿಚಯಿಸಿರುವ

ಪರಿ ವಿನೂತನವಾದದ್ದು. ಮನದರಸಿಯ ಸಹನೆ ಮತ್ತು ಪ್ರೀತಿಯ ಗುಣವೇ ಅವಳ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ ಎನ್ನುತ್ತಲೇ,

ದೇವಸ್ತಾನ್ದಾಗ್ ಎಂಗಿರತೈತೆ
ಚಿನ್ನದ್ ನಂದಾದೀಪ
ಅಂಗ್ ನನ್ ಅಟ್ಟೀನ್ ಬೆಳಗಿಸ್ತೈತೆ
ನನ್ ಪುಟ್ಟಂಜೀ ರೂಪ!

(ನನ್ ಪುಟ್ಟಂಜೀ ರೂಪ, ರತ್ನನ ಪದಗಳು–ನಾಗನ ಪದಗಳು, ಪು. ಸ. 56)

ಎಂದು ನಂದಾದೀಪದ ಪಾವಿತ್ರ್ಯತೆಗೆ ಹೆಂಡತಿಯ ಚೆಲುವನ್ನು ಹೋಲಿಸಿದ್ದಾರೆ. ಪರಸ್ಪರರ ಬಗೆಗೆ ಪ್ರೀತಿ, ಕಾಳಜಿ, ಬದ್ಧತೆಗೆ ಬೇಕಾಗಿರುವುದು ಆರ್ಥಿಕ ಶ್ರೀಮಂತಿಕೆಯಲ್ಲ ಹೃದಯ ಶ್ರೀಮಂತಿಕೆ ಎಂದು ತಮ್ಮ ಪ್ರೀತಿಯ ಮಧುರ ಕ್ಷಣಗಳನ್ನು ಮೆಲುಕುಹಾಕುತ್ತಾರೆ.

ಬಟ್ಟೇ ಒಟ್ಟೇಗ್ ಇಲ್ದಿದ್ರೂನೆ
ನಂ ನಂ ಪ್ರೀತಿ ಇರೊವರ್ಗೂನೆ
ದೇಅ ಓದ್ರು ಮನಸೋಗಲ್ಲ–
ನಿಂಗ್ ನೆಪ್ಪಿರಲಿ ನಂಜಿ!

(ನಿಂಗ್ ನೆಪ್ಪೈತ ನಂಜಿ?, ರತ್ನನ ಪದಗಳು–ನಾಗನ ಪದಗಳು, ಪು.ಸಂ. 61)

ಈ ಮಾತುಗಳು ಕವಿಯ ದಾಂಪತ್ಯ ಬದುಕಿನ ತಾತ್ವಿಕತೆಯನ್ನು ಪ್ರದರ್ಶಿಸುತ್ತವೆ. ದಾಂಪತ್ಯದ ಅರ್ಥಪೂರ್ಣತೆಯನ್ನು ಅನಾವರಣಗೊಳಿಸುತ್ತವೆ.

ರತ್ನನ ಪಾಲಿಗೆ ಮಡದಿ ಕೇವಲ ಗಂಡನ ಸುಖ–ದುಃಖಗಳಿಗೆ ಹೆಗಲು ಕೊಡುವವಳಷ್ಟೇ ಅಲ್ಲ, ಅವಳು ತನ್ನ ಬದುಕಿನ ಶಕ್ತಿ. ಹೀಗಾಗಿ ಆಕೆಯನ್ನು 'ಜೀವನ ಗಂಗೆ' ಎನ್ನಲು ಕವಿಗೆ ಯಾವ ಮುಜುಗರವೂ ಇಲ್ಲ. ಹೀಗೆ ತನ್ನ ಬಾಳಸಂಗಾತಿಯನ್ನು ಸಂತತವಾಗಿ ನೆನೆಯುವಾಗ, ಅವಳ ರೂಪ ಲಾವಣ್ಯಗಳನ್ನು ಕವಿತೆಗಳಲ್ಲಿ ಹಾಡಿ ಹೊಗಳುವಾಗ, ಕೆಲವರು ಕುಹಕವಾಡಿದುದೂ ಉಂಟು. "ಕ್ಷಯ ಬಂದು ಬರೀ ಮೂಳೆ ಚಕ್ಕಳ ಆಗಿದ್ದಾಳೆ. ಕಣ್ಣು ಗುಳಿ ಬಿದ್ದು ಹೋಗಿದೆ. ಇವಳಿಗೆ ರೂಪವಂತೆ!" (ರಾಜರತ್ನಂ ಜಿ.ಪಿ., ಹತ್ತು ವರುಷ, ಪು.ಸಂ.123) ಎಂದವರಿಗೆ ಕವಿ ನೀಡಿದ ಉತ್ತರ 'ಕಣ್ಣು' ಕವಿತೆ.

'ಸಿಕ್ದಂಗ್ ಒರ್ಣಿಸ್ತಾರ ಈ ಕುಡುದೋನ್ ಎಣ್ಣ?
ಯೋಳಾಕ್ ಏನಂತೀಗ? ಬರಿ ಮಾತಿನ್ ಬಣ್ಣ!'
ಅನ್ನೋನ್ ಕಣ್ ಸಣ್ಣ!
ನೀ ಸಿಗಿಯೋ ಕಬ್ಬನಕ ಮುಕ್ಕಾಲ್ವ ಮಣ್ಣ?
ನಡುವೆ 'ಥು' ಅಂತಾಚೆ ಉಗದಾಕ್ಸ್ನೆ ಗಿಣ್ಣ
ಕಬ್ ಸೀ ಅಲ್ವಾಣ್ಣ?

(ಕಣ್ಣು, ರತ್ನನ ಪದಗಳು–ನಾಗನ ಪದಗಳು, ಪು. ಸಂ. 62)

ಹೆಣ್ಣನ್ನು ಭೋಗದ ವಸ್ತುವಾಗಿ ಪರಿಭಾವಿಸುವ ಜಗತ್ತಿಗೆ ಈ ನಿಲುವು ಅನುಕರಣೀಯ. ಇದೇ ನವೋದಯ ಪ್ರೇಮಕಾವ್ಯದ ಬಹುಮುಖ್ಯ ಆಶಯವೂ ಆಗಿದೆ. ಇಂತಹ ಸಂದರ್ಭಗಳಲ್ಲಿ ರಾಜರತ್ನಂ ಅವರು ವಿಶಿಷ್ಟವಾಗಿ ಕಾಣುತ್ತಾರೆ. ಆದ್ದರಿಂದಲೇ

ಸಾಂಸಾರಿಕ ಸುಖವನ್ನು ನೀಡಬೇಕಾದವಳು ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರೂ ಅವಳನ್ನು ನಿಕೃಷ್ಟವಾಗಿ ಕಾಣದೆ ಪ್ರೇಮದೇವತೆಯನ್ನಾಗಿ ಆರಾಧಿಸಲು ಸಾಧ್ಯವಾಯಿತು ಎನ್ನಬಹುದು. "ಪ್ರೀತಿಗೆ, ಸಂಬಂಧಗಳ ಸಾರ್ಥಕತೆಗೆ ಹೀಗೇ ಎಂದು ನಿರ್ದಿಷ್ಟವಾದ ಕಾರಣವನ್ನು ಹುಡುಕುವುದು ಸುಲಭವಲ್ಲ. ಅದು ಅನುಭವವೇದ್ಯವಾದರೂ ವಿವರಣೆಗೆ ಅತೀತವಾದುದೆಂದೇ ಹೇಳಬಹುದು." (ಪ್ರಶಾಂತ ನಾಯಕ ಜಿ., ಪ್ರೇಮ ನವೋದಯ, ಪು.ಸಂ. 62)

ಈ ಬಗೆಯ ನಿಷ್ಕಲ್ಮಶ ಪ್ರೇಮವನ್ನು ಹೊಂದಿದ್ದ ಕವಿಗೆ ಪತ್ನಿ ಬದುಕುವುದಿಲ್ಲ ಎಂಬ ಆಘಾತ ಸಹಿಸಲಸಾಧ್ಯವಾದ ದುಃಖವನ್ನು ತಂದೊಡ್ಡಿತು. "ಇದನ್ನು ಒಬ್ಬರಲ್ಲಿ ಅಡಿಕೊಳ್ಳಲಾರದೆ, ತನ್ನಲ್ಲಿ ಅಡಗಿಸಿಟ್ಟುಕೊಳ್ಳಲಾರದೆ ರತ್ನ ತನ್ನ ಅಳಲನ್ನು 'ಗೋರಿ', 'ರತ್ನ ಬೇವಾರ್ಸಿ' ಮತ್ತು 'ನಂಜೀಗೆ' ಎಂಬ ಪದಗಳಲ್ಲಿ ತೋಡಿಕೊಂಡ" (ರಾಜರತ್ನಂ ಜಿ. ಪಿ., ಹತ್ತು ವರುಷ, ಪು. ಸಂ. 124) ಎನ್ನುವಲ್ಲಿ ಬದುಕಿನ ವೇದನೆಯನ್ನು ಕಡಿಮೆ ಮಾಡಿಕೊಳ್ಳಲು ಕಾವ್ಯದ ಆಶ್ರಯವನ್ನು ಪಡೆದುಕೊಂಡಿದ್ದರಲ್ಲಿ ಕಾವ್ಯವು ಬದುಕಿನ ದರ್ಶನವೂ ಹೌದು ಎಂಬುದನ್ನು ಕಾಣಬಹುದು. ತಮ್ಮಿಬ್ಬರ ಅನುರೂಪ ದಾಂಪತ್ಯದ ಸಾರ್ಥಕ್ಯಕ್ಕೆ ಸಾಕ್ಷಿಯಾಗಿ ಬರೆದ ಪ್ರೇಮಗೀತೆಗಳಂತೆ ಪತ್ನಿಯ ಸಾವಿನ ನೋವನ್ನು ಮರೆಯಲು ರಚಿಸಿದ ನೋವಿನ ಗೀತೆಗಳು ಅತ್ಯಂತ ಯಶಸ್ವಿಯಾಗಿವೆ. ಈ ಕವಿತೆಗಳಲ್ಲಿ ಕವಿ ತಮ್ಮ ಜೀವನದ ತಾತ್ವಿಕತೆಯನ್ನು ತೆರೆದಿಟ್ಟಿದ್ದಾರೆ. ನಂಜಿ ಇಲ್ಲದ ತನ್ನನ್ನು 'ರತ್ನ ಬೇವಾರ್ಸಿ' ಎಂದು ಕರೆದುಕೊಂಡು ದುಃಖದ ತೀವ್ರತೆಯನ್ನು ದಾಖಲಿಸಿದ್ದಾರೆ.

ಗುಡಿಸಿಲ್ ಬಾಗಿಲ್ ಬೀಗದಂಗೇನೆ
ಮನಸಿನ್ ರಾಗಾನು.
'ನಂಜಿ ಇಲ್ಲದ್ ಮನೆಗ್ ಯಾಕ್ಬರ್ತಿ?'
ಅಂತೈತ್ ಬೀಗಾನು!
(ರತ್ನ ಬೇವಾರ್ಸಿ, ರತ್ನನ ಪದಗಳು–ನಾಗನ ಪದಗಳು, ಪು. ಸಂ. 73)

'ನಂಜಿ ಹೋಗಿ ನೆಪ್ಪುಳಿಯಾದು ನನ್ ಪುಟ್ಟಂಜಿ ಮಾತ್ವ' ಎಂದುಕೊಂಡಿದ್ದ ರತ್ನನಿಗೆ ಅವಳ ನೆನಪಷ್ಟೇ ಸಾಲುವುದಿಲ್ಲ, ಪ್ರತಿಕ್ಷಣವೂ ಅವಳ ಕನವರಿಕೆಯಲ್ಲೇ ಬದುಕುತ್ತಿದ್ದವನಿಗೆ ಇದ್ದಕ್ಕಿದ್ದಂತೆ ಹೋರಟುಹೋದಾಗ ಅವಳಿಲ್ಲದ ಈ ಜಗತ್ತು ಶೂನ್ಯವಾಗಿ ಕಾಣುತ್ತಿದೆ. ತನ್ನ ಮನೆ–ಮನಗಳಿಗೆ ಬೆಳಕಾಗಿದ್ದ ಮಡದಿಯ ಅಗಲಿಕೆಯಿಂದ ಜೀವನದ ತಾತ್ವಿಕತೆಯೊಂದು ಹೊರಡುತ್ತದೆ.

ಅಗಲೋಡೋಗ್ತೆ ರಾತ್ರಿ ಬಂತಂತ್ ಅಂಜಿ!
ರಾತ್ರಿ ಮುಗುದೋದ್ರ್ ಅಗಲೆ ಅಲ್ವ ನಂಜಿ?
ರಾತ್ರಿ ಬಿತ್ತು!
ಅಗಲೇ ಬತ್ತು!
ಓಗೋದ್ ಮಳ್ಳಿ ಬರೋದ್ಕೆ ಅಲ್ವ ನಂಜಿ!
ಆ ನೆಮ್ಮೆ ನನ್ ಜೀವಾನ್ ಉಳಿಸೊ ಗಂಜಿ!
(ನಂಜೀಗೆ, ರತ್ನನ ಪದಗಳು–ನಾಗನ ಪದಗಳು, ಪು. ಸಂ. 75)

ಹೆಂಡತಿಯನ್ನು ಗಾಢವಾಗಿ ಪ್ರೀತಿಸುತ್ತಿದ್ದ ರತ್ನ ತನ್ನನ್ನು ಒಂಟಿಯಾಗಿ ಬಿಟ್ಟು ಹೋದವಳನ್ನು ನೆನೆದು ದುಃಖಿಸುತ್ತ ರಚಿಸಿದ ಈ ಚರಮಗೀತೆ ರಾಜರತ್ನಂ ಅವರ

ಶ್ರೇಷ್ಠ ಭಾವಗೀತೆಗಳಲ್ಲಿ ಒಂದು. ಪತ್ನಿಯ ನೆನಪಿಗಾಗಿ ಬರೆದ ಈ ಭಾವಗೀತೆ ಕಾವ್ಯರಸಿಕರನ್ನು ನೋವಿನ ನೆಲೆಗೆ ಸೆಳೆದೊಯ್ಯುತ್ತದೆ. ಕೊನೆಗೆ ಸಾವಿನ ಸತ್ಯವನ್ನು ಅರಗಿಸಿಕೊಂಡು ಅದು ಸ್ವೀಕರಿಸಲೇಬೇಕಾದ ಬದುಕಿನ ಇನ್ನೊಂದು ತುದಿ ಎಂಬ ನಿಲುವು ಕವನದ ಕೊನೆಯಲ್ಲಿ ವ್ಯಕ್ತವಾಗಿ ಬದುಕು ಅರ್ಥಪೂರ್ಣವಾದುದು ಎಂಬ ಆಶಾವಾದವನ್ನು ಪ್ರಕಟಿಸುತ್ತದೆ. 'ಈಗ್ ಅಗಲಿದ್ರೇನ್ ಮುಂದ್ ನಾವ್ ಸೇರ್ತೀವ್ ನಂಜು!' ಎಂಬ ನಂಬಿಕೆ ಬದುಕಿನ ಬಗೆಗೆ ಭರವಸೆ ಹುಟ್ಟಿಸುತ್ತದೆ.

ಜೀವಾನ್ ಬೆಳೆಸೋಕ್ ತಾಕತ್ ಅಂದ್ರೆ
ನಂಜೀ ನಾಮ ಸ್ಮರಣೆ!
ಜೀವದ ಗಂಗೆ ಕೆಡದಂಗ್ ಇಡೋಕ್
ನಂಜೀನ್ ಎಸರೇ ಬರಣೆ!
(ನಂಜೀ ಹೆಸರು, ರತ್ನನ ಪದಗಳು–ನಾಗನ ಪದಗಳು, ಪು.ಸಂ. 62)

ಎನ್ನುವಾಗಲಂತೂ ಅವಳ ನೆನಪೇ ಬದುಕಿಗೆ ಮತ್ತು ಕಾವ್ಯಕ್ಕೆ ಸ್ಫೂರ್ತಿಯ ಚಿಲುಮೆಯಾಗಿ ಗೋಚರಿಸುತ್ತದೆ.

ಮಡದಿಯನ್ನು ಕಳೆದುಕೊಂಡ ದುಃಖ ಎಷ್ಟು ತೀವ್ರವಾಗಿತ್ತೆಂದರೆ ರತ್ನ "ಒಂಟಿ ಬದುಕು ಬೇಡವಾಗಿ, ತನ್ನ 'ಗೌತಮಬುದ್ಧ'ವನ್ನು ಮುಗಿಸಿ ತನ್ನನ್ನು ಮುಗಿಸಿಕೊಳ್ಳಬೇಕೆಂದಿದ್ದ." (ರಾಜರತ್ನಂ ಜಿ.ಪಿ., ಹತ್ತು ವರುಷ, ಪು.ಸಂ. 139) ಹೀಗೆ ಆತ್ಮಹತ್ಯೆಗೆ ಆತುರಪಡುತ್ತಿದ್ದ ಸಂದರ್ಭದಲ್ಲಿ ಶ್ರೀ ಎನ್.ಎಸ್. ಸುಬ್ಬರಾಯರು ಎಂಬ ಬಲ್ಲವರು ವಿಶ್ವಾಸದಿಂದ ಬರಮಾಡಿಕೊಂಡು ಕೆಲವು ದಿನ ತಮ್ಮೊಂದಿಗೆ ಇರಿಸಿಕೊಂಡಿದ್ದರು. ಅಲ್ಲದೆ ಈ ವೇಳೆಗೆ ಪತ್ನಿ ಮರಣಹೊಂದಿದ ಮೂರು ತಿಂಗಳೊಳಗೆ ಪು.ತಿ.ನ. ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರರಂತಹ ಹಿರಿಯರ ಒತ್ತಾಯದ ಮೇರೆಗೆ ಇನ್ನೊಬ್ಬ ಹೆಣ್ಣು ಮಗಳೊಂದಿಗೆ ವಿವಾಹವಾದದ್ದು ರಾಜರತ್ನಂ ಅವರ ಬದುಕಿನ ಮಹತ್ವದ ತಿರುವು. ದುಃಸ್ಸಹವಾದ ದುಃಖದಲ್ಲಿ ಬೇಯುತ್ತಿದ್ದ ಕವಿಯ ಬದುಕಿಗೆ ಭರವಸೆಯೊಂದು ಸಿಕ್ಕಂತಾಗಿ ಎರಡನೇ ಮಡದಿ ಸೀತಮ್ಮನವರೊಂದಿಗೆ ಸಂಸಾರ ನಡೆಸಿ, ಇದ್ದ ಮತ್ತು ಇರುವ ಮಡದಿಯರೊಂದಿಗೆ ಸಮನ್ವಯವಾದ ಬದುಕು ನಡೆಸುತ್ತಾ ಸಾಹಿತ್ಯಾರಾಧನೆಯಲ್ಲಿ ತೊಡಗಿಸಿಕೊಂಡರು.

ರತ್ನನ ಪದಗಳಲ್ಲಿರುವ ಪುಟ್ಟಂಜಿ–ರತ್ನರ ನಿರಾಡಂಬರ ಪ್ರೇಮ, ಅಬ್ಬರವಿಲ್ಲದ ನಿರ್ಮಲ ಪ್ರೀತಿ ಎರಡು ಪರಿಶುದ್ಧ ಮನಸ್ಸುಗಳ ಮಧುರಾನುಭೂತಿ. ಇದು 'ನಾಗನ ಪದಗಳು' ಕೃತಿಯಲ್ಲಿ ಬರುವ ನಾಗ–ಮಲ್ಲಿಯರ ದಾಂಪತ್ಯ ಪ್ರೇಮಕ್ಕೆ ಸ್ಫೂರ್ತಿ ನೀಡಿತು. ತಮ್ಮ ಎರಡನೇ ಮಡದಿಯೊಂದಿಗಿನ ಸಾರ್ಥಕ ದಾಂಪತ್ಯ ಬದುಕಿನ ಅನುಭವಗಳನ್ನು ಕವಿ ನಾಗ–ಮಲ್ಲಿಯರ ಮೂಲಕ ಅಭಿವ್ಯಕ್ತಿಸಿ ಸಾಧಾರಣೀಕರಿಸಿದ್ದಾರೆ. "ಮೊದಲನೇ ಹೆಂಡತಿ ಮತ್ತು ಆಕೆಯ ನೆನಪಿಗಾಗಿ ರತ್ನನ್ ಪದಗಳನ್ನು ರಚಿಸಿದ ರಾಜರತ್ನಂ ನಾಗನ ಪದಗಳನ್ನು ಬರೆದದ್ದು ತಮ್ಮ ಎರಡನೇ ಹೆಂಡತಿ ಪ್ರೇರಣೆಯಿಂದ." (ನಾರಾಯಣ ಪಿ.ವಿ.(ಸಂ), ನಾರಾಯಣ ಪಿ.ವಿ.(ಲೇ), ರತ್ನನ್ ಪರ್‌ಪಂಚ, ವಿಜಯ ಕಾಲೇಜು, ಬೆಂಗಳೂರು, 2009, ಪು.ಸಂ. 84) ಹೀಗಾಗಿ 'ನಾಗನ ಪದಗಳು' ಕೃತಿಯಲ್ಲಿಯೂ ತಮ್ಮ ದಾಂಪತ್ಯಾನುಭವಗಳನ್ನು ನಾಗ–ಮಲ್ಲಿಯರ ಮೂಲಕ ತೆರೆದಿಟ್ಟಿದ್ದಾರೆ. ದಂಪತಿಗಳು ಪರಸ್ಪರ ಪ್ರೀತಿಯನ್ನು ಕೊಟ್ಟು ಪಡೆಯುವಾಗ ಯಾವ ಹೆಚ್ಚು–

ಕಡಿಮೆಯ ಭಾವಕ್ಕೂ ಅವಕಾಶ ನೀಡದೆ ಪರಸ್ಪರ ಗಂಡು–ಹೆಣ್ಣು ಶರಣಾಗುವುದರಲ್ಲಿ ಸಿಗಬಹುದಾದ ಆತ್ಮಸಂತೋಷ ರಾಜರತ್ನಂ ಪದ್ಯಗಳಲ್ಲಿ ದಾಖಲಾಗಿದೆ.

ಹೀಗೆ 'ರತ್ನನ ಪದ'ಗಳಲ್ಲಿ ಬರುವ ಪುಟ್ಟಂಜಿ–ರತ್ನ, 'ನಾಗನ ಪದ'ಗಳಲ್ಲಿರುವ ಮಲ್ಲಿ– ನಾಗ ದಂಪತಿಗಳ ಮೂಲಕ ರಾಜರತ್ನಂ ಅವರು ತಮ್ಮ ದಾಂಪತ್ಯಾನುಭವಗಳನ್ನು ಅಭಿವ್ಯಕ್ತಿಸಿ ಗಂಡು–ಹೆಣ್ಣಿನ ಅನ್ಯೋನ್ಯತೆಯನ್ನು ಸಾಮಾನ್ಯೀಕರಿಸಿದ್ದಾರೆ. "ಸಮಷ್ಟಿ ಕಲ್ಯಾಣದ ಮೂಲ ಘಟಕವಾಗಿ ರಾಜರತ್ನಂ ದಾಂಪತ್ಯವನ್ನು ಕುಟುಂಬವನ್ನು ಗ್ರಹಿಸುತ್ತಾರೆ. ಈ ಘಟಕದ ನಿರ್ಧಾರಕ ಶಕ್ತಿಯೆಂದರೆ ಹೆಣ್ಣು ಎನ್ನುವುದನ್ನೂ ಇವರು ಒಪ್ಪುತ್ತಾರೆ" (ನಾರಾಯಣ ಪಿ.ವಿ.(ಸಂ.), ಆಶಾದೇವಿ ಎಂ.ಎಸ್.(ಲೇ), ರತ್ನನ್ ಪರ್‌ಪಂಚ, ಪು.ಸಂ.29) ಎಂಬುದು ಈ ದಾಂಪತ್ಯ ಗೀತೆಗಳಲ್ಲಿ ಕಾಣುವ ಸಂಗತಿಯಾಗಿದೆ.

ಹೀಗೆ ಗಂಧರ್ವತೆಯರಾಗಿ ತನ್ನೊಂದಿಗೆ ಬದುಕು ಹಂಚಿಕೊಂಡ ಇಬ್ಬರು ಪತ್ನಿಯರೊಂದಿಗಿನ ಸಾಂಸಾರಿಕ ಅನುಬಂಧವನ್ನು ಕವಿ ನಂಜಿ ಮತ್ತು ಮಲ್ಲಿಯರ ಪಾತ್ರಗಳ ಮೂಲಕ ಸಾಧಿಸಿದರು. ತಮ್ಮ ವೈಯಕ್ತಿಕ ಬದುಕಿನ ಅನೇಕ ನೋವು–ನಲಿವಿನ ಸಂಗತಿಗಳನ್ನು ಹಾಡಾಗಿಸಿ ಸಾಮಾನ್ಯೀಕರಿಸುವ ಮೂಲಕ ಮನುಷ್ಯ ಎಲ್ಲ ಕಾಲಕ್ಕೂ ಬಯಸುವ ದಾಂಪತ್ಯದ ಅನ್ಯೋನ್ಯತೆಯ ಸ್ಮೃತಿ ಚಿತ್ರವಾಗಿಸಿದ್ದಾರೆ. ಪರಸ್ಪರರ ಪ್ರೀತಿ, ತ್ಯಾಗ, ಆರಾಧನೆ, ನಂಬಿಕೆ ಸನ್ನಡತೆಯೆ ದಾಂಪತ್ಯ ಬದುಕಿನ ಅಡಿಗಲ್ಲು ಎಂಬ ಜೀವನ ಸಂದೇಶವನ್ನು ಬದುಕು ಮತ್ತು ಬರೆವಣಿಗೆಗಳಲ್ಲಿ ಸಾಧಿಸಿದ ಹಿರಿಮೆ ರಾಜರತ್ನಂ ಅವರದ್ದು.

ಗ್ರಂಥಋಣ

1. ಕುರ್ತುಕೋಟಿ ಕೀರ್ತಿನಾಥ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, 2010.
2. ಪ್ರಶಾಂತ ನಾಯಕ ಜಿ., ಪ್ರೇಮ ನವೋದಯ, ಗೀತಾಂಜಲಿ ಪ್ರಕಾಶನ, ಶಿವಮೊಗ್ಗ, 2013.
3. ರಾಜರತ್ನಂ ಜಿ.ಪಿ., ಹತ್ತು ವರುಷ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, 2008.
4. ನಾರಾಯಣ ಪಿ.ವಿ. (ಸಂ), ನಾರಾಯಣ ಪಿ.ವಿ. (ಲೇ), ರತ್ನನ್ ಪರ್‌ಪಂಚ, ವಿಜಯ ಕಾಲೇಜು, ಬೆಂಗಳೂರು, 2009.

❖❖❖

ಆಚಾರ್ಯ ಶಾಂತಿಸಾಗರ ಮಹಾರಾಜರು ಮತ್ತು ಅವರ ಕೊಣ್ಣೂರು ಚಾತುರ್ಮಾಸದ ವಿಶೇಷತೆಗಳು (ಕ್ರಿ.ಶ. 1872–1955)

ಡಾ. ಅಪ್ಪಣ್ಣ ಎನ್. ಹಂಜೆ
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ವಿಭಾಗ
ಶ್ರೀ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲಕೋಟಿ–582205

1. ಪೀಠಿಕೆ

ಜೈನ ಪರಂಪರೆ ಮತ್ತು ಆಗಮಗಳನ್ನು ತಲಸ್ಪರ್ಶಿಯಾಗಿ ಅವಲೋಕಿಸಿದಾಗ ಈ ಧರ್ಮವು 'ಆತ್ಮನನ್ನು ಪರಮಾತ್ಮನನ್ನಾಗಿ ಮಾಡುವುದೇ ಪರಮ ಆದರ್ಶ' ಎಂದು ಸ್ವೀಕರಿಸಿರುವುದು ಮನದಟ್ಟಾಗುತ್ತದೆ. ಪ್ರತಿಯೊಂದು ಜೀವಿಯೂ ಸನ್ಮಾರ್ಗದಿಂದ ನಡೆದು ಸ್ವಯಂ ತಪೋಬಲದಿಂದ ಆತ್ಮನ ಗುಣಗಳಿಗೆ ಘಾತವಾಗಿರುವ ನಾಲ್ಕು ಘಾತಿ ಕರ್ಮಗಳು(ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯ) ಮತ್ತು ಆತ್ಮನ ಅನಂತ ಗುಣಗಳಿಗೆ ಘಾತಿಯನ್ನುಂಟುಮಾಡದ ನಾಲ್ಕು ಅಘಾತಿ ಕರ್ಮಗಳ(ವೇದನೀಯ, ಆಯು, ನಾಮ, ಗೋತ್ರ) ಬಂಧನದಿಂದ ಮುಕ್ತವಾಗಿ ಮೋಕ್ಷ ಪಡೆದು ಪರಮಾತ್ಮ–ಸಿದ್ಧಾತ್ಮ ಸ್ಥಾನ ಪಡೆಯಬಹುದೆಂಬುದು ಈ ಧರ್ಮದ ಸಂದೇಶವಾಗಿದೆ. ಹೀಗೆ ದೇವತ್ವ ಪದವಿ ಪಡೆದವರನ್ನೇ ಜಿನರು, ದೇವರು, ಪರಮಾತ್ಮರು, ಅರಿಹಂತರು, ಸಿದ್ಧರು, ತೀರ್ಥಂಕರರು, ವೀತರಾಗರು, ಸರ್ವಜ್ಞರು, ಹಿತೋಪದೇಶಿಗಳು, ಮುಕ್ತಾತ್ಮರು ಎಂದೆಲ್ಲ ಕರೆಯಲಾಗಿದೆ. 1ನೆಯ ತೀರ್ಥಂಕರ ಆದಿನಾಥ ಆದಿಯಾಗಿ 24ನೆಯ ತೀರ್ಥಂಕರ ಮಹಾವೀರನವರೆಗಿನ ಪ್ರತಿಯೊಬ್ಬರೂ ಸ್ವಯಂ ತಪೋಬಲದಿಂದ 'ಕೇವಲಜ್ಞಾನ' ಸಂಪಾದಿಸಿ, ಈ ಜ್ಞಾನವನ್ನು ಸರ್ವಜೀವಿಗಳ ಶ್ರೇಯೋಭಿವೃದ್ಧಿಗೆ ವಿನಿಯೋಗಿಸಿ ಆತ್ಮಕಲ್ಯಾಣ ಸಾಧಿಸಿದ್ದಾರೆ. ಕೇವಲಜ್ಞಾನವು ಸರ್ವಜ್ಞತ್ವವಾಗಿದ್ದು, ಲೋಕಾಲೋಕಗಳ ತ್ರಿಕಾಲಗಳಲ್ಲಿಯ ಸರ್ವವಸ್ತುಗಳ ಸಮಗ್ರ ಜ್ಞಾನ ಸಂಪಾದನೆಯಾಗಿದೆ.

ಮಹಾವೀರನ(ಕ್ರಿ.ಪೂ.599–527) ತರುವಾಯ ಮೂವರು ಕೇವಲಿಗಳು (ಕ್ರಿ.ಪೂ.527–465), ಐವರು ಶ್ರುತಕೇವಲಿಗಳು(ಕ್ರಿ.ಪೂ. 465–365), ಹನ್ನೊಂದು ದಶಪೂರ್ವಧರರು (ಕ್ರಿ.ಪೂ.365–182), ಐವರು ಏಕಾದಶಾಂಗಧರರು(ಕ್ರಿ.ಪೂ. 182–59), ನಾಲ್ವರು ಆಚಾರಾಂಗಧರರು(ಕ್ರಿ.ಪೂ.59–ಕ್ರಿ.ಶ.38), ಐವರು ಏಕಾಂಗವೇದಧರರು(ಕ್ರಿ.ಶ.38–147) ಜೈನ ಧರ್ಮದ ಪ್ರವರ್ತಕರಾಗಿದ್ದು, ಇವರು ತೀರ್ಥಂಕರರ ಉಪದೇಶಗಳು, ತತ್ವ–ಸಿದ್ಧಾಂತಗಳನ್ನು ಯಥಾಸ್ಥಿತಿಯಲ್ಲಿ ಮುಂದುವರೆಸುವುದರ ಜೊತೆಗೆ ಮಾನವಕುಲದ ಕಲ್ಯಾಣಕ್ಕೆ ಶ್ರಮಿಸಿದ್ದಾರೆ. ಕರ್ನಾಟಕದ ಸಂದರ್ಭದಲ್ಲಿ ಅಂತಿಮ ಶ್ರುತಕೇವಲಿ ಭದ್ರಬಾಹು ಭಟ್ಟಾರಕರು(ಕ್ರಿ.ಪೂ.394–365) ಆದಿಯಾಗಿ ಸಾವಿರಾರು ಆಚಾರ್ಯರು, ಮುನಿಗಳು, ಆರ್ಯಿಕೆಯರು, ಭಟ್ಟಾರಕರು, ಐಲಕರು, ಕ್ಷುಲ್ಲಕರು ಧರ್ಮಪ್ರವರ್ತನೆ ಜೊತೆಗೆ ತತ್ಕಾಲೀನ ಪ್ರಭುಗಳು, ಅಧಿಕಾರಿಗಳು,

ವರ್ತಕರು, ಪ್ರಜೆಗಳಿಗೆ ಮಾನವೀಯ ಮೌಲ್ಯಗಳನ್ನು ಬೋಧಿಸುತ್ತ, ಧರ್ಮಮಾರ್ಗದಲ್ಲಿ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳಲು ಸ್ಫೂರ್ತಿ–ಪ್ರೇರಕರಾಗಿ, ತಮ್ಮ ಆತ್ಮಕಲ್ಯಾಣದ ಜೊತೆಗೆ ಮಾನವಕುಲಕ್ಕೆ ಸಾರ್ವಕಾಲಿಕ ಜೀವನಮೌಲ್ಯಗಳನ್ನು ಬೋಧಿಸಿ ವಿಶ್ವಶಾಂತಿ ಸಂದೇಶ ಸಾರಿದ್ದಾರೆ. ಎಂತಲೇ ಈ ನಾಡಿನಲ್ಲಿ ಅನೇಕ ಅರಸರು, ರಾಣಿಯರು, ಯುವರಾಜರು, ಅಧಿಕಾರಿಗಳು, ವರ್ತಕರು, ಪ್ರಜೆಗಳು ಲೋಕಕಲ್ಯಾಣ ಕಾರ್ಯಗಳನ್ನು ಕೈಗೊಂಡು ತಮ್ಮ ಬದುಕಿನ ಅಂತಿಮದಲ್ಲಿ ಸಲ್ಲೇಖನ ವ್ರತದ ಮೂಲಕ ಸಮಾಧಿಮರಣ ಹೊಂದಿ ಸದ್ಗತಿ ಸಂಪಾದಿಸಿ ಕೀರ್ತಿಶಾಲಿಯಾಗಿ ಜನಮಾನಸದಲ್ಲಿ ಅಜರಾಮರರಾಗಿದ್ದಾರೆ. ಅರ್ವಾಚೀನ ಮುನಿಗಳೂ ಧರ್ಮಪ್ರಸಾರದ ಮೂಲಕ ಮಾನವಕುಲದ ಶ್ರೇಯೋಭಿವೃದ್ಧಿಗೆ ಪೂರಕವಾಗಿರುವ ಕಾರ್ಯಗಳನ್ನು ಸಾಂಗವಾಗಿ ಮುಂದುವರೆಸಿದ್ದಾರೆ. ಈ ನಿಟ್ಟಿನಲ್ಲಿ ಬೆಳಗಾವಿ ಜಿಲ್ಲೆ ಪ್ರದೇಶದ ಮುನಿಗಳ ಬದುಕು, ಧರ್ಮಪ್ರವರ್ತನೆ, ಸಂದೇಶಗಳು, ಧಾರ್ಮಿಕ–ಸಾಮಾಜಿಕ ಚಟುವಟಿಕೆಗಳು, ಅವರ ತಪೋಬಲದಿಂದ ನಡೆದ ವಿಶೇಷತೆಗಳು ಗಮನಾರ್ಹವಾಗಿವೆ.

ಬೆಳಗಾವಿ ಜಿಲ್ಲೆ ಪ್ರದೇಶದಲ್ಲಿ ಪೌರಾಣಿಕವಾಗಿ ಭದ್ರಬಾಹು ಭಟ್ಟಾರಕರ ಕಾಲದಿಂದಲೂ ಜೈನ ಚಟುವಟಿಕೆಗಳು ಗೋಚರಿಸುತ್ತವೆ. ಐತಿಹಾಸಿಕವಾಗಿ ಈ ಪ್ರದೇಶದಲ್ಲಿ ಕ್ರಿ.ಶ. ಸುಮಾರು 5ನೆಯ ಶತಮಾನದಿಂದಲೂ ಅನೇಕ ಮುನಿಗಳು, ಆರ್ಯಿಕೆಯರು, ಭಟ್ಟಾರಕರು ಧರ್ಮಪ್ರಸಾರದ ಜೊತೆಗೆ ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆರಾಧನೆ, ದಾನ–ದತ್ತಿಗಳ ಆದಾನ ಮತ್ತು ಪ್ರಧಾನ, ಧಾರ್ಮಿಕ–ಸಾಮಾಜಿಕ ಚಟುವಟಿಕೆಗಳ ಆಯೋಜನೆ ಮೊದಲಾದ ಸಾಂಸ್ಕೃತಿಕ ಮತ್ತು ಲೋಕೋಪಯೋಗಿ ಕಾರ್ಯಗಳಿಗೆ ಸ್ಫೂರ್ತಿ–ಪ್ರೇರಣೆ ಕೊಡಮಾಡುತ್ತ ಬಂದಿರುವುದು ಇಲ್ಲಿಯ ಶಾಸನಗಳಾದಿ ವಿವಿಧ ಪುರಾತತ್ವ ಅವಶೇಷಗಳು ಮತ್ತು ಸಾಹಿತ್ಯಿಕ ಆಕರಗಳಿಂದ ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿ ಕ್ರಿ.ಶ. ಸುಮಾರು 18ನೆಯ ಶತಮಾನದಿಂದೀಚೆಗೆ ಅನಂತಸೇನ, ಶಾಂತಿಕೀರ್ತಿ, ಆದಿಸಾಗರ, ಕುಲಭೂಷಣ, ದೇಶಭೂಷಣ, ಶಾಂತಿಸಾಗರ, ಕುಂಥುಸಾಗರ, ಪಾಯಸಾಗರ, ಚಂದ್ರಸಾಗರ, ಮಹಾಬಲ, ವಿದ್ಯಾನಂದ, ನೇಮಿಸಾಗರ, ಅನಂತಕೀರ್ತಿ, ವಿದ್ಯಾಸಾಗರ, ವರಾಂಗ, ಸುಬಲಸಾಗರ, ಜಯಸೇನ, ಪದ್ಮಾವತಿ ಮಾತಾಜಿ ಮುಂತಾದ ಅನೇಕ ಮುನಿಗಳು ಮತ್ತು ಆರ್ಯಿಕೆಯರು ಧರ್ಮಪ್ರಸಾರದ ಮೂಲಕ ಸಮಾಜವನ್ನು ಜಾಗೃತಗೊಳಿಸಿದ್ದಾರೆ. ಇವರಲ್ಲಿ ಆಚಾರ್ಯ ಶಾಂತಿಸಾಗರ ಮಹಾರಾಜರು ತತ್ಕಾಲಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಇತ್ಯಾದಿ ಕಾರಣಗಳಿಂದಾಗಿ ದಿಗಂಬರ ಮುನಿಪರಂಪರೆ ಕಣ್ಮರೆಯಾಗುತ್ತಿದ್ದ ಸಂದರ್ಭದಲ್ಲಿ ಈ ಪರಂಪರೆಯ ಪುನರುತ್ಥಾನಕ್ಕೆ ಅಡಿಪಾಯ ಹಾಕಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇವರನ್ನು '20ನೆಯ ಶತಮಾನದ ಪ್ರಥಮಾಚಾರ್ಯ' ಎಂದು ಕರೆಯಲಾಗುತ್ತದೆ. ಇವರ ಪೂರ್ವಾಶ್ರಮದ ಬದುಕಿನಲ್ಲಿ ಮತ್ತು ಮುನಿ ಅವಸ್ಥೆಯ ಸಂದರ್ಭದಲ್ಲಿ ಹಲವು ವಿಶೇಷತೆಗಳು ನಡೆದಿವೆ. ಅವುಗಳಲ್ಲಿ ಅವರು ಗೋಕಾಕ ತಾಲ್ಲೂಕಿನ ಕೊಣ್ಣೂರು ಗ್ರಾಮದಲ್ಲಿ ಚಾತುರ್ಮಾಸ ಕೈಗೊಂಡಿದ್ದ ಸಂದರ್ಭದಲ್ಲಿ ನಡೆದಿರುವ ವಿಶೇಷತೆಗಳು ಚಾರಿತ್ರಿಕವಾಗಿವೆ.

2. ಆಚಾರ್ಯ ಶಾಂತಿಸಾಗರ ಮಹಾರಾಜರ ಪೂರ್ವಾಶ್ರಮ

ಶಾಂತಿಸಾಗರರ ಪೂರ್ವಾಶ್ರಮದ ಹೆಸರು ಸಾತಗೌಡ. ಇವರು ಚಿಕ್ಕೋಡಿ ತಾಲ್ಲೂಕಿನ ಭೋಜ ಗ್ರಾಮದ ಭೀಮಗೌಡ ಪಾಟೀಲ ಮತ್ತು ಸತ್ಯವತಿ ದಂಪತಿಗಳ ಉದರದಲ್ಲಿ ಕ್ರಿ.ಶ. 1872ರ ಜುಲೈ 23ರಂದು ಜನಿಸಿದರು. ಸಾತಗೌಡ ಸ್ವಗ್ರಾಮದ ಮರಾಠಿ ಪ್ರಾಥಮಿಕ ಶಾಲೆಯಲ್ಲಿ 3ನೆಯ ತರಗತಿ ಓದುತ್ತಿದ್ದ ಸಂದರ್ಭದಲ್ಲಿ ಸಹಪಾಠಿಗಳ ಜೊತೆಗೆ ಆಟವಾಡುತ್ತಿದ್ದಾಗ ಬಿದ್ದು ಶರೀರಕ್ಕೆ ನೋವು ಮಾಡಿಕೊಂಡ ಕಾರಣ ಪಾಲಕರು ಶಾಲೆ ಬಿಡಿಸಿದರು. 9ನೆಯ ವಯಸ್ಸಿನಲ್ಲಿ ಸೋದರತ್ತೆಯ ಆರು ವರ್ಷದ ಮಗಳ ಜೊತೆಗೆ ವಿವಾಹ ಮಾಡಿದರು. ವಿವಾಹವಾದ ಆರು ತಿಂಗಳಲ್ಲಿ ಪತ್ನಿ ಮರಣವನ್ನಪ್ಪಿದಳು. ಪ್ರಾಯದಲ್ಲಿ ಪಾಲಕರು ಮತ್ತು ಬಂಧುಗಳು ಪುನರ್ವಿವಾಹಕ್ಕೆ ಒತ್ತಾಯಿಸಿದರೂ ಇವರು ಒಪ್ಪಲಿಲ್ಲ. ಬಾಲ್ಯಾವಧಿಯಿಂದಲೂ ರೂಢಿಯಲ್ಲಿದ್ದ ಧಾರ್ಮಿಕ ಆಚರಣೆ, ಮುನಿಗಳ ಸೇವೆ, ಸ್ವಾಧ್ಯಾಯ, ಪೂಜೆ–ಪುನಸ್ಕಾರ, ತೀರ್ಥಯಾತ್ರೆ, ಜೈನಾಗಮಗಳ ಅಧ್ಯಯನದ ಪ್ರಭಾವದಿಂದ ಲೌಕಿಕ ಜೀವನದಲ್ಲಿ ವೈರಾಗ್ಯತಾಳಿ, 18ನೆಯ ವಯಸ್ಸಿನಲ್ಲಿ ಆಚಾರ್ಯ ಸಿದ್ಧಸಾಗರ ಮಹಾರಾಜರಿಂದ 'ಬ್ರಹ್ಮಚರ್ಯ' ವ್ರತ ಸ್ವೀಕರಿಸಿದರು. ದೇವೇಂದ್ರಕೀರ್ತಿ ಮಹಾರಾಜರು ಇವರಿಗೆ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಕಾಗಲ ತಾಲ್ಲೂಕಿನ ಉತ್ತೂರು ಗ್ರಾಮದಲ್ಲಿ 1915ರ ಜೂನ್ 13ರಂದು 'ಕ್ಷುಲ್ಲಕ' ದೀಕ್ಷೆ ಕೊಡಮಾಡಿ 'ಶಾಂತಿಸಾಗರ' ಎಂದು ನಾಮಕರಣ ಮಾಡಿದರು. ಗುಜರಾತದ ಜುನಾಗಢ ಜಿಲ್ಲೆಯ ಗಿರಿನಾರ ಕ್ಷೇತ್ರದಲ್ಲಿ ನೇಮಿನಾಥ ತೀರ್ಥಂಕರನ ಚರಣಗಳ ದರ್ಶನ ಪಡೆದು ಸ್ವಯಂಸ್ಫೂರ್ತಿಯಿಂದ 1919ರ ಜನೇವರಿ 15ರಂದು 'ಐಲಕ' ದೀಕ್ಷೆ ತೆಗೆದುಕೊಂಡರು. ಹುಕ್ಕೇರಿ ತಾಲ್ಲೂಕಿನ ಯರನಾಳದಲ್ಲಿ ನಡೆದ ಪಂಚಕಲ್ಯಾಣ ಪೂಜಾಮಹೋತ್ಸವದ ಸಂದರ್ಭದಲ್ಲಿ ದೇವೇಂದ್ರಕೀರ್ತಿ ಮಹಾರಾಜರಿಂದ 1920ರ ಮಾರ್ಚ್ 2ರಂದು 'ದಿಗಂಬರ ಮುನಿ' ದೀಕ್ಷೆ ಸ್ವೀಕರಿಸಿದರು. ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಸಮಡೋಳಿ ಗ್ರಾಮದಲ್ಲಿ ಕೈಗೊಂಡಿದ್ದ ಚಾತುರ್ಮಾಸದಲ್ಲಿ 1924ರ ಅಕ್ಟೋಬರ್ 8ರಂದು 'ಆಚಾರ್ಯ' ಪದಾರೋಹಣ ಮಾಡಿದರು. ಮಹಾರಾಷ್ಟ್ರದ ನಾಸಿಕ ಜಿಲ್ಲೆಯ ಗಜಪಂಥದಲ್ಲಿ 1937ರಲ್ಲಿ ನಡೆದ ಪಂಚಕಲ್ಯಾಣ ಪೂಜಾಮಹೋತ್ಸವದಲ್ಲಿ ಇವರನ್ನು 'ಚಾರಿತ್ರ ಚಕ್ರವರ್ತಿ' ಪದನಾಮದಿಂದ ಗೌರವಿಸಲಾಯಿತು.

3. ಆಚಾರ್ಯ ಶಾಂತಿಸಾಗರ ಮಹಾರಾಜರ ಚಾತುರ್ಮಾಸಗಳು

ಶಾಂತಿಸಾಗರರು ತಮ್ಮ ಮುನಿ ಅವಸ್ಥೆಯಲ್ಲಿ ಜೈನಾಗಮಗಳ ತಲಸ್ಪರ್ಶಿ ಅಧ್ಯಯನ ಮತ್ತು ಕಠಿಣ ತಪಸ್ಸಿನ ಮೂಲಕ ಸಂಪಾದಿಸಿದ ಜ್ಞಾನವನ್ನು ಮಾನವಕುಲದ ಶ್ರೇಯೋಭಿವೃದ್ಧಿಗೆ ವಿನಿಯೋಗಿಸಲು ರಾಷ್ಟ್ರದಾದ್ಯಂತ ವಿಹಾರ ಕೈಗೊಂಡು ಉಪದೇಶಗೈದಿದ್ದಾರೆ. ಶ್ರೀಗಳು ಕನ್ನಡ, ಮರಾಠಿ, ಹಿಂದಿ ಭಾಷೆಯಲ್ಲಿ ಪಾರಂಗತರಾಗಿದ್ದರು. ಅವರಿಗೆ ಭಾರತದ ಇತರೆ ಪ್ರಾದೇಶಿಕ ಭಾಷೆಗಳ ಪರಿಚಯವೂ ಇದ್ದಿತು.

ಶಾಂತಿಸಾಗರರು ಮಹಾರಾಷ್ಟ್ರ ರಾಜ್ಯದ ಸಾಂಗಲಿ ಜಿಲ್ಲೆಯ ಮಿರಜ ತಾಲ್ಲೂಕಿನ ಸಮಡೋಳಿ(1924), ಡಿಗ್ರಜ(1943), ಕೊಲ್ಲಾಪುರ ಜಿಲ್ಲೆಯ ಹಾತಕಣಂಗಲೆ ತಾಲ್ಲೂಕಿನ ಕುಂಭೋಜ(1916, 1925), ಕೋರೋಚಿ(1942), ಶಿರೋಳ ತಾಲ್ಲೂಕಿನ ನಾಂದಣಿ

(1926), ಬಾಹುಬಲಿ ಕ್ಷೇತ್ರ(1927), ನಾಸಿಕ ಜಿಲ್ಲೆಯ ಮಹಸೂರಲ ಗ್ರಾಮ ಹತ್ತಿರದ ಜೈನ ಸಿದ್ಧಕ್ಷೇತ್ರ ಗಜಪಂಥ(1937, 1950), ಮನಮಾಡ ತಾಲ್ಲೂಕಿನ ಕವಳಾಣಾ (1946, 1949), ಪುಣೆ ಜಿಲ್ಲೆಯ ತಾಲ್ಲೂಕು ಕೇಂದ್ರ ಬಾರಾಮತಿ(1938, 1951), ಸೊಲ್ಲಾಪುರ ಜಿಲ್ಲೆಯ ಮಾಳಶೀರಸ ತಾಲ್ಲೂಕಿನ ಅಕಲುಜ(1941), ಜಿಲ್ಲಾಕೇಂದ್ರ ಸೊಲ್ಲಾಪುರ(1947), ಉಸ್ಮಾನಾಬಾದ ಜಿಲ್ಲೆಯ ಜೈನ ಸಿದ್ಧಕ್ಷೇತ್ರ ಕುಂಥಲಗಿರಿ (1944, 1953, 1955), ಸಾತಾರಾ ಜಿಲ್ಲೆಯ ತಾಲ್ಲೂಕು ಕೇಂದ್ರ ಫಲಟಣ(1945, 1948, 1954), ಖಂಡಾಲಾ ತಾಲ್ಲೂಕಿನ ಲೋಣಂದ(1952), ಮಧ್ಯಪ್ರದೇಶ ರಾಜ್ಯದ ಜಿಲ್ಲಾಕೇಂದ್ರ ಕಟನಿ(1928), ಬುಂದೇಲಖಂಡ ರಾಜ್ಯದ ಜಿಲ್ಲಾಕೇಂದ್ರ ಲಲಿತಪುರ (1929), ಉತ್ತರಪ್ರದೇಶದ ಮಥುರಾ(1930), ರಾಜಸ್ಥಾನದ ಜೈಪುರ(1932), ಬ್ಯಾವರ (1933), ಉದಯಪುರ(1934), ಪ್ರತಾಪಗಡ(1936, 1939), ಗುಜರಾತದ ಗೋರಲ (1935, 1940), ದೆಹಲಿ(1931), ಬೆಳಗಾವಿ ಜಿಲ್ಲೆಯ ಕೋಗನೋಳಿ(1915, 1917, 1920), ಜೈನವಾಡಿ(1918), ನಸಲಾಪುರ(1919, 1921), ಅಥಣಿ ತಾಲ್ಲೂಕಿನ ಐನಾಪುರ(1922), ಗೋಕಾಕ ತಾಲ್ಲೂಕಿನ ಕೊಣ್ಣೂರು(1923) ಮುಂತಾದೆಡೆಯಲ್ಲಿ ಚಾತುರ್ಮಾಸ ಕೈಗೊಂಡಿದ್ದಾರೆ. ಈ ಸ್ಥಳಗಳೆಲ್ಲವೂ ಶಾಂತಿ, ಸಮನ್ವಯತೆ, ಸಹಕಾರ, ಬಂಧುತ್ವ, ಸಂಯಮಾಚರಣೆ, ಸೇವಾಮನೋಭಾವನೆಯ ಸಾಂಸ್ಕೃತಿಕ ಕೇಂದ್ರಗಳಾಗಿ ಪರಿಣಮಿಸಿವೆ.

4. ಆಚಾರ್ಯ ಶಾಂತಿಸಾಗರ ಮಹಾರಾಜರ ಕೊಣ್ಣೂರು ಚಾತುರ್ಮಾಸದ ವಿಶೇಷತೆಗಳು

ಶಾಂತಿಸಾಗರರು 1923ರಲ್ಲಿ ಕೊಣ್ಣೂರದಲ್ಲಿ ಕೈಗೊಂಡ ಚಾತುರ್ಮಾಸದ ಸಂದರ್ಭದಲ್ಲಿ ನಡೆದಿರುವ ಹಾಗೂ ಅವರ ಈ ಚಾತುರ್ಮಾಸದ ಪ್ರಭಾವದಿಂದ ನಂತರದ ಕಾಲಾವಧಿಯಲ್ಲಿ ನಡೆಯುತ್ತ ಬಂದಿರುವ ಹಲವು ವಿಶೇಷತೆಗಳು ಅವರ ಹಿರಿಮೆಗೆ ನಿದರ್ಶನಗಳಾಗಿವೆ.

4.1. ಶಿಲಾಗೋರಿಗಳಲ್ಲಿ ಏಕಾಂತ ತಪಸ್ಸು

ಅಂತಿಮ ಶ್ರುತಕೇವಲಿ ಭದ್ರಬಾಹು ಭಟ್ಟಾರಕರ ಮುನಿಸಂಘವು ಉತ್ತರ ಭಾರತದಿಂದ ದಕ್ಷಿಣ ಭಾರತದ ಶ್ರವಣಬೆಳಗೊಳಕ್ಕೆ ವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ ಕೆಲಕಾಲ ಕೊಣ್ಣೂರದಲ್ಲಿ ನೆಲೆಸಿದ್ದಿತೆಂದು ಪ್ರತೀತಿಯಿದೆ. ಆ ಮುನಿಗಳು ಕೊಣ್ಣೂರದಿಂದ ಪೂರ್ವಕ್ಕೆ 2ಕಿ.ಮೀ. ಅಂತರದಲ್ಲಿ ಗೊಡಚಿನಮಲ್ಕಿ ಗ್ರಾಮದ ದಾರಿಯ ಎಡ–ಬಲದಲ್ಲಿರುವ ಶಿಲಾಗೋರಿಗಳಲ್ಲಿ ತಪಸ್ಸು ಮಾಡಿದರೆಂದು ಮೌಖಿಕ ಪರಂಪರೆಯಿದೆ. ಈ ಶಿಲಾಗೋರಿಗಳನ್ನು ಪರಿಶೀಲಿಸಿರುವ ಪುರಾತತ್ವಶಾಸ್ತ್ರಜ್ಞ ಅ. ಸುಂದರ ಅವರು ಇವು ಇತಿಹಾಸಪೂರ್ವ ಕಾಲಾವಧಿಯ ಬೃಹತ್ ಶಿಲಾಸಂಸ್ಕೃತಿಯ (ಕ್ರಿ.ಪೂ. ಸುಮಾರು 1200–800) ದಾರಿಕೋಣೆ, ಕಿಂಡಿಕೋಣೆ ಪ್ರಕಾರದ ಗೋರಿಗಳು ಎಂದು ಗುರುತಿಸಿದ್ದಾರೆ. ಇಲ್ಲಿ ಕ್ರಿ.ಶ. 1884ರಲ್ಲಿ 750ಕ್ಕೂ ಹೆಚ್ಚು ಶಿಲಾಗೋರಿಗಳಿದ್ದವು. ಚಿಕ್ಕ ಕೊಠಡಿಗಳಂತಿರುವ ಇವುಗಳನ್ನು ಅಂದಿನ ಜೈನ ಮುನಿಗಳು ತಮ್ಮ ಏಕಾಂತ ತಪಸ್ಸು–ಧ್ಯಾನಕ್ಕೆ ಬಳಸಿಕೊಂಡಿರುವುದು ಸಹಜವಾಗಿದೆ. ಬಹುತೇಕ ಗೋರಿಗಳು ನಾಶವಾಗಿದ್ದು, ಪ್ರಸ್ತುತ ಏಳೆಂಟು ಮಾತ್ರ ಉಳಿದುಬಂದಿವೆ. ಜೈನ ಮುನಿಗಳು

ಏಕಾಂತ ತಪಸ್ಸಿಗೆ ಬಳಸುವ ಅತಿ ಚಿಕ್ಕದಾದ ಕೊಠಡಿಗಳನ್ನು 'ಗುಂಫಾ'ಗಳೆಂದು ಕರೆಯಲಾಗುತ್ತದೆ. ಇದಕ್ಕೆ ಕಳಿಂಗದ ಚೇದಿವಂಶದ ಮಹಾಮೇಘವಾಹನ ಖಾರವೇಲನು (ಕ್ರಿ.ಪೂ.183–170) ಕ್ರಿ.ಪೂ. ಸುಮಾರು 2ನೆಯ ಶತಮಾನದಲ್ಲಿ ಇಂದಿನ ಓಡಿಸ್ಸಾದ ಖಂಡಗಿರಿ–ಉದಯಗಿರಿ ಬೆಟ್ಟದಲ್ಲಿ ಕೊರೆಯಿಸಿರುವ ಗುಂಫಾಗಳು ಉತ್ತಮ ನಿದರ್ಶನವಾಗಿವೆ.

ಕೊಣ್ಣೂರದ ಶಿಲಾಗೋರಿಗಳಲ್ಲಿ ತಾವೂ ತಪಸ್ಸು ಮಾಡಬೇಕೆಂದು ಶಾಂತಿಸಾಗರರು ಇಚ್ಛಿಸಿದರು. ಹೀಗಾಗಿ 1923ರಲ್ಲಿ ತಮ್ಮ 9ನೆಯ ಚಾತುರ್ಮಾಸವನ್ನು ಕೊಣ್ಣೂರದಲ್ಲಿ ಕೈಗೊಂಡರು. ಇಲ್ಲಿಯ ಶಿಲಾಗೋರಿಯಲ್ಲಿ ಆತ್ಮಧ್ಯಾನದಲ್ಲಿ ನಿರತರಾಗಿದ್ದ ಶಾಂತಿಸಾಗರರ ಶರೀರದ ಮೇಲೆ ದೊಡ್ಡ ನಾಗರಹಾವು ಹರಿದಾಡುತ್ತ ಕುತ್ತಿಗೆಯನ್ನು ಸುತ್ತಿ ತಲೆಯ ಮೇಲೆ ತನ್ನ ಹೆಡೆಯನ್ನು ಛತ್ರಿಯಂತೆ ಬಿಚ್ಚಿಕೊಂಡು ಆಡುತ್ತಿತ್ತು. ಆದರೂ ಪದ್ಮಾಸನದಲ್ಲಿ ಸ್ಥಿರಚಿತ್ತರಾಗಿದ್ದ ಇವರು ಸಂತಾಪಹಾರಿ ಸುವಾಸನಾಸಂಪನ್ನ ಚಂದನವೃಕ್ಷದಂತೆ ಅಚಲರಾಗಿ ಪಾರ್ಶ್ವನಾಥ ತೀರ್ಥಂಕರನಂತೆ ಗೋಚರಿಸುತ್ತಿದ್ದರು. ಮೂರು ಗಂಟೆಗಳ ತರುವಾಯ ಆ ಹಾವು ತನ್ನಷ್ಟಕ್ಕೆ ತಾನೇ ಇಳಿದು ಹೋಯಿತು.

ಶಾಂತಿಸಾಗರರು ಈ ಶಿಲಾಗೋರಿಗಳಲ್ಲಿ ತಪಸ್ಸು ಕೈಗೊಂಡು ಪವಾಡ ಸದೃಶ ಘಟನೆಗಳನ್ನು ಮೆರೆದ ತರುವಾಯ ಈ ಶಿಲಾಗೋರಿಗಳ ಸ್ಥಳಗಳು 'ತಪಸಿ ಮಡ್ಡಿಗಳು' ಎಂದು ಹೆಸರುವಾಸಿಯಾಗಿವೆ. ಇವುಗಳನ್ನು ಭಕ್ತಿಯಿಂದ ಗೌರವಿಸುತ್ತ ಕಾಪಾಡಿಕೊಂಡು ಇಂದಿಗೂ ಸುರಕ್ಷಿತವಾಗಿ ಉಳಿಸಿಕೊಂಡು ಬಂದಿರುವುದು ಇಲ್ಲಿಯ ಜೈನ ಸಮುದಾಯದ ಐತಿಹಾಸಿಕ ಪ್ರಜ್ಞೆಗೆ ಉತ್ತಮ ನಿದರ್ಶನವಾಗಿದೆ. ಈಗ ಏಳೆಂಟು ಶಿಲಾಗೋರಿಗಳು ಮಾತ್ರ ಉಳಿದಿವೆ. ಇಲ್ಲಿಯ ಶ್ರಾವಕರು 'ತಪಸಿ ಮಡ್ಡಿ'ಗಳಲ್ಲಿ 1998ರಲ್ಲಿ ನಿಷಿಧಿ ಮಂಟಪಗಳನ್ನು ನಿರ್ಮಿಸಿದ್ದಾರೆ. ಹಾಗೆಯೇ ಕೊಣ್ಣೂರದ ಪಾರ್ಶ್ವನಾಥ ಬಸದಿಯ ಸಭಾಂಗಣದ ಗೋಡೆಯಲ್ಲಿ ಅವರ ಅಂತಿಮ ಸಂದೇಶವನ್ನು ಅಮೃತಶಿಲೆಯಲ್ಲಿ ಕೆತ್ತಿಸಿದ್ದಾರೆ. ಬಾಲಯೋಗಿನಿ ಆರ್ಯಿಕಾ ಸುಭೂಷಣಮತಿ ಮಾತಾಜಿ ಅವರ ಪ್ರೇರಣೆಯಿಂದ ಚೆನ್ನೈ ವ್ಯಾಪಾರಿ ಕಜೋಡಿಮಲ ಸುರೇಶಕುಮಾರ ಜೈನ ಅವರು ತಮಗೆ ಗಂಡು ಮಗು ಜನಿಸಿದ ಸವಿನೆನಪಿಗಾಗಿ 1998ರ ಫೆಬ್ರುವರಿ 6ರಂದು ಗೊಡಚಿನಮಲ್ಕಿ ದಾರಿಯ ಬಲಬದಿಯಲ್ಲಿರುವ ತಪಸಿಮಡ್ಡಿಯಲ್ಲಿ ಭದ್ರಬಾಹು ಭಟ್ಟಾರಕರ ನಿಷಿಧಿ ಮಂಟಪ ನಿರ್ಮಿಸಿ ಚರಣಕಮಲಗಳನ್ನು ಪ್ರತಿಷ್ಠಾಪಿಸಿದ್ದಾರೆ. ಅಂಕಲಿಯ ಜೈನ ಸಮಾಜವು ಅಜಿತ ಶೆಟ್ಟಿ ಅವರ ನೇತೃತ್ವದಲ್ಲಿ ಶಾಂತಿಸಾಗರರ ನಿಷಿಧಿ ಮಂಟಪ ನಿರ್ಮಿಸಿ ಚರಣಕಮಲಗಳನ್ನು ಪ್ರತಿಷ್ಠಾಪಿಸಿದೆ. ಬಾಲಯೋಗಿನಿ ಆರ್ಯಿಕಾ ಸುಭೂಷಣಮತಿ ಮಾತಾಜಿ ಅವರ ಉಪದೇಶದಿಂದ ಸ್ಥಳೀಯ ಶ್ರಾವಕರು ಇಲ್ಲಿಯ ಎಲ್ಲ ಶಿಲಾಗೋರಿಗಳನ್ನು 2000ರಲ್ಲಿ ಜೀರ್ಣೋದ್ಧಾರ ಮಾಡಿಸಿದ್ದಾರೆ.

ಶಾಂತಿಸಾಗರರು ಪವಾಡಗಳನ್ನು ಮೆರೆದಿರುವ ಕೊಣ್ಣೂರದಲ್ಲಿ ಧವಲಸಾಗರ (1983), ಅಮೀತಕೀರ್ತಿ(1983), ಸುಬಲಸಾಗರ(1998), ಕಾಮಕುಮಾರನಂದಿ(2005) ಮೊದಲಾದ ಹಲವು ಮುನಿಗಳು ಮತ್ತು ಮಾತಾಜಿಗಳು ಚಾತುರ್ಮಾಸ ಕೈಗೊಂಡಿದ್ದಾರೆ. ಈ ಗ್ರಾಮದಲ್ಲಿ ಜಯಸೇನ(1998), ಧರಸೇನಸಾಗರ(1998), ವರಾಂಗ(1999) ಮುನಿಗಳು ಸಮಾಧಿಮರಣ ಹೊಂದಿದ್ದಾರೆ. ಇವರ ಪರೋಕ್ಷ ವಿನಯಾರ್ಥವಾಗಿ ಗೊಡಚಿನಮಲ್ಕಿ ದಾರಿಯ ಎಡಬದಿಯ ತಪಸಿಮಡ್ಡಿಯಲ್ಲಿ ನಿಷಿಧಿ ಮಂಟಪಗಳನ್ನು

ನಿರ್ಮಿಸಲಾಗಿದೆ. ಬಾಲಯೋಗಿನಿ ಆರ್ಯಿಕಾ ಸುಭೂಷಣಮತಿ ಮಾತಾಜಿ ಅವರು ತಮ್ಮ ದೀಕ್ಷಾಗುರು ದಯಾಸಾಗರರ (1931–1986) ಪರೋಕ್ಷ ವಿನಯಾರ್ಥವಾಗಿ ಗೊಡಚಿನಮಲ್ಕಿ ದಾರಿಯ ಬಲಬದಿಯ ತಪಸಿಮಡ್ಡಿಯಲ್ಲಿ ನಿಷಿಧಿ ಮಂಟಪ ನಿರ್ಮಿಸಿದ್ದಾರೆ. ಇಲ್ಲಿಯ ಶಿಲಾಗೋರಿಗಳ ಪ್ರದೇಶವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ತನ್ನ ಸುಪರ್ದಿಗೆ ತೆಗೆದುಕೊಂಡು ಸಂರಕ್ಷಿಸುತ್ತಿದೆ.

4.2. ನಿದ್ರಾಪರೀಷಹ ವಿಜಯ ತಪಸ್ಸು

ತಪಸ್ಸಿನ ಸಂದರ್ಭದಲ್ಲಿ ನಿದ್ರಾವೇದನೆಯನ್ನು ಸಹಿಸಿಕೊಳ್ಳುವುದು ಮತ್ತು ಮಲಗಿಕೊಳ್ಳುವ ಸ್ಥಳದಲ್ಲಾಗುವ ತೊಂದರೆಗಳನ್ನು ಸಹಿಸುವುದು 'ನಿದ್ರಾಪರೀಷಹ ವಿಜಯ ತಪಸ್ಸು'ವಾಗಿದೆ. ಇದನ್ನು 'ಶಯ್ಯಾಪರೀಷಹ ವಿಜಯ ತಪಸ್ಸು' ಎಂತಲೂ ಕರೆಯುತ್ತಾರೆ. ಶಾಂತಿಸಾಗರರು ಸ್ಥಳೀಯ ಪಾರ್ಶ್ವನಾಥ ಬಸದಿಯಲ್ಲಿ ನಿದ್ರಾಪರೀಷಹ ವಿಜಯ ತಪಸ್ಸಿನಲ್ಲಿ ನಿರತರಾಗಿದ್ದರು. ಪುರೋಹಿತರು ಮುಸ್ಸಂಜೆಯಲ್ಲಿ ಬಸದಿಯ ದೀಪಗಳನ್ನು ಬೆಳಗಿಸಲು ಎಣ್ಣೆ ಹಾಕುತ್ತಿದ್ದ ಸಂದರ್ಭದಲ್ಲಿ ಸ್ವಲ್ಪ ಎಣ್ಣೆ ನೆಲದ ಮೇಲೆ ಚೆಲ್ಲಿತ್ತು. ಚೆಲ್ಲಿದ ಎಣ್ಣೆಗೆ ಇರುವೆಗಳು ಬಂದು ಮುತ್ತುತ್ತ ಇವರ ಶರೀರದ ಮೇಲೂ ಹರಿದಾಡುತ್ತ ರಕ್ತ ಹೀರತೊಡಗಿದರೂ, ಇವರು ಈ ಶರೀರವೇ ತಮ್ಮದಲ್ಲವೇನೋ ಎಂಬಂತೆ ಪರಮಶಾಂತ ಧ್ಯಾನಮುದ್ರೆಯಲ್ಲಿ ಪದ್ಮಾಸನದಲ್ಲಿ ಆಸೀನರಾಗಿದ್ದರು.

4.3. ಅರಣ್ಯದಲ್ಲಿ ಕಠಿಣ ತಪಸ್ಸು

ಶಾಂತಿಸಾಗರರು ಒಂದು ದಿನ ಇಲ್ಲಿಯ ಶಿಲಾಗೋರಿಗಳ ಪರಿಸರದ ಅರಣ್ಯದಲ್ಲಿ ವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ, ಮಧ್ಯಾಹ್ನದ ಸಾಮಾಯಿಕ (ಸಮತಾ ಸ್ವಭಾವಿಯಾದ ಆತ್ಮನಲ್ಲಿ ಲೀನವಾಗುವುದು) ಮಾಡುವ ಸಮಯ ಬಂದಿತು. ಕೂಡಲೇ ಅಲ್ಲಿದ್ದ ಒಂದು ಕಲ್ಲಿನ ಮೇಲೆ ಪದ್ಮಾಸನದಲ್ಲಿ ಆಸೀನರಾಗಿ ಆತ್ಮಧ್ಯಾನದಲ್ಲಿ ಮಗ್ನರಾದರು. ಆಗ ದೊಡ್ಡ ಕಟ್ಟಿರುವೆಗಳು ಮತ್ತು ಕೆಂಪು ಇರುವೆಗಳು ಇವರ ಶರೀರದ ಮೇಲೆ ಹರಿದಾಡುತ್ತ ರಕ್ತ ಹೀರತೊಡಗಿದವು. ರಕ್ತ ಸೋರುತ್ತಿದ್ದರೂ ಸುಮಾರು ಒಂದೂವರೆ ಗಂಟೆಗಳ ಕಾಲ ನಿಶ್ಚಲವಾಗಿ ಧ್ಯಾನಸ್ಥರಾಗಿದ್ದರು. ಇದನ್ನು ಗಮನಿಸಿದ ಶ್ರಾವಕರು ಮಹಾರಾಜರ ಏಕಾಂತ ತಪಸ್ಸಿಗೆ ಭಂಗ ಬರಬಾರದೆಂದು ಅರಿತು ಅವರ ಸುತ್ತಲೂ ಸಕ್ಕರೆ ಹಾಕಿ ಇರುವೆಗಳು ತಾವಾಗಿಯೇ ಶರೀರದಿಂದ ಕೆಳಗಿಳಿಯುವಂತೆ ಮಾಡಿದರು. ಇದು ಶ್ರೀಗಳ 'ದಂಶಮಶಕ' (ಸೊಳ್ಳೆ–ನೊಣ ಮುಂತಾದವುಗಳ ಕಡಿತ) ಪರೀಷಹ ಜಯಕ್ಕೆ ನಿದರ್ಶನವಾಗಿದೆ.

4.4. ಪೀತಾಂಬರನಿಗೆ ಮುನಿದೀಕ್ಷೆ

ಗೋಕಾಕದ ರಾಮಚಂದ್ರಪ್ಪ ಡೋಂಗರೆ ಮತ್ತು ಶ್ರೀಮಂತಿ ದಂಪತಿಗಳ ಮಗ ಪೀತಾಂಬರನು (ಕ್ರಿ.ಶ.1889–1958) 2ನೆಯ ತರಗತಿವರೆಗೆ ಓದಿ, ನಾಟಕದೆಡೆಗೆ ಆಕರ್ಷಿತನಾಗಿದ್ದನು. 'ಕೊಣ್ಣೂರು ನಾಟಕ ಕಂಪನಿ'ಯಲ್ಲಿ ಅಭಿನಯ, ಮುಂಬೈ 'ಫ್ಯುಜಿಲ್ ಮಿಲ್'ನಲ್ಲಿ ಕಾರಕೂನ, 'ಭಜನಾ ಮಂಡಳಿ' ಪ್ರಾರಂಭ, ಕೂಲಿಕಾರ ಸಂಘದ ಮುಖಂಡನಾಗಿ ಸತ್ಯಾಗ್ರಹ ಸಂಘಟನೆ, ಬಂಡುಖೋರನಾಗಿ ಸೆರೆಮನೆವಾಸ,

ಅಧ್ಯಾತ್ಮದಲ್ಲಿ ಆಸಕ್ತನಾಗಿ ಕೊರಳಲ್ಲಿ ರುದ್ರಾಕ್ಷಿಮಾಲೆ ಧಾರಣೆ, ಹಣೆಯಲ್ಲಿ ವಿಭೂತಿ ಧರಿಸಿ ಪುಣ್ಯಕ್ಷೇತ್ರಗಳ ದರ್ಶನ, ಸೊಲ್ಲಾಪುರದ ಸಿದ್ಧರಾಮ ದೇವಾಲಯದಲ್ಲಿ ಪುರಾಣ–ಪ್ರವಚನಗಳ ಮೂಲಕ 'ಸಿದ್ಧಪುರುಷ'ನಾಗಿ ಹೆಸರುವಾಸಿಯಾಗಿದ್ದನು. ಸಂಬಂಧಿಕರು ಈತನಿಗೆ ಮದುವೆ ಮಾಡಲು ನಿರ್ಧರಿಸಿದರು. ಆದರೆ ನಾಟಕ ಕಂಪನಿಯಲ್ಲಿ ಪಾತ್ರಮಾಡುತ್ತ ಅಲೆದಾಡುವ ಈತನಿಗೆ ಕನ್ಯೆ ಕೊಡಲು ಯಾರೂ ಒಪ್ಪಲಿಲ್ಲ. ಇದರಿಂದ **"ನಾನು ಈ ಜನ್ಮದಲ್ಲಿಯೇ ಮದುವೆಯಾಗಲಾರೆ"** ಎಂಬ ದೃಢನಿರ್ಧಾರ ಮಾಡಿದನು. ಶಾಂತಿಸಾಗರರು ಕೊಣ್ಣೂರದಲ್ಲಿ ಚಾತುರ್ಮಾಸ ಆಚರಿಸುತ್ತಿದ್ದ ಸುದ್ದಿ ತಿಳಿದು ಒಂದು ದಿನ ಅವರ ದರ್ಶನಕ್ಕೆ ಹೋದನು. ಶ್ರೀಗಳ ಪ್ರವಚನದ ಪ್ರಭಾವಕ್ಕೊಳಗಾಗಿ 'ಬ್ರಹ್ಮಚರ್ಯ' ವ್ರತ ಸ್ವೀಕರಿಸಲು ಮುಂದಾದನು. ಶಾಂತಿಸಾಗರರು ಚಾತುರ್ಮಾಸದ ತರುವಾಯ ಗೋಕಾಕಕ್ಕೆ ಆಗಮಿಸಿದ ಸಂದರ್ಭದಲ್ಲಿ, ಅವರಿಂದ 'ಐಲಕ' ದೀಕ್ಷೆ ಪಡೆದು 'ಪಾಯಸಾಗರ' ಎಂದು ನಾಮಾಂಕಿತರಾದರು. ತರುವಾಯ 1930ರಲ್ಲಿ ಮಧ್ಯಪ್ರದೇಶದ ದಾತಿಯಾ ಜಿಲ್ಲೆಯ ಸೋನಗಿರಿ(ಸ್ವರ್ಣಗಿರಿ) ಪಟ್ಟಣದಲ್ಲಿ ಶಾಂತಿಸಾಗರರಿಂದಲೇ 'ದಿಗಂಬರ ಮುನಿ' ದೀಕ್ಷೆ ಸ್ವೀಕರಿಸಿ ಸ್ವತಂತ್ರ ಚಾತುರ್ಮಾಸಗಳ ಮೂಲಕ ಧರ್ಮಪ್ರಭಾವನೆ ಕೈಗೊಳ್ಳುತ್ತ 'ಅಭಿನವ ಸಮಂತಭದ್ರ' ಎಂಬ ಗೌರವಕ್ಕೆ ಪಾತ್ರರಾದರು. ಉತ್ತರ ಕರ್ನಾಟಕದ ನೂರಾರು ಗ್ರಾಮಗಳಲ್ಲಿ ಧರ್ಮಪ್ರಸಾರದೊಂದಿಗೆ ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಪಂಚಕಲ್ಯಾಣ ಪೂಜಾಮಹೋತ್ಸವ, ಶಿಲ್ಪಗಳ ಪ್ರತಿಷ್ಠಾಪನೆ, ಜೈನ–ಜೈನೇತರರಲ್ಲಿ ಸಮನ್ವಯ, ಸದಾಚಾರ, ಶಾಂತಿ, ಅಹಿಂಸೆ, ವ್ಯಸನಮುಕ್ತಿಗೆ ಪ್ರೇರಣೆ ನೀಡಿ, ತಾವು ಕೇವಲ ಜೈನ ಸಮುದಾಯದ ಗುರುಗಳಾಗಿರದೇ 'ಮಾನವಕುಲದ ಗುರುಗಳು' ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

5. ಆಚಾರ್ಯ ಶಾಂತಿಸಾಗರ ಮಹಾರಾಜರ ಅಂತಿಮ ಸಂದೇಶ ಮತ್ತು ಸಮಾಧಿಮರಣ

ಶಾಂತಿಸಾಗರರು ಸಮಾಧಿಮರಣದ ಪೂರ್ವದಲ್ಲಿ ಶ್ರಾವಕ ಸಮುದಾಯನ್ನುದ್ದೇಶಿಸಿ ಮಾಡಿದ ಅಂತಿಮ ಸಂದೇಶದಲ್ಲಿ (ಧರ್ಮೋಪದೇಶ) **"**ಹನ್ನೊಂದು ಅಂಗಗಳು ಮತ್ತು ಹದಿನಾಲ್ಕು ಪೂರ್ವ ಗ್ರಂಥಗಳು ಜೈನ ತತ್ವ–ಸಿದ್ಧಾಂತದ ಸಾಗರವಾಗಿವೆ. ತೀರ್ಥಂಕರರು ಬೋಧಿಸಿದ ಜೀವನ ವಿಧಾನವನ್ನು ಅಳವಡಿಸಿಕೊಂಡವರು ಬದುಕಿನುದ್ದಕ್ಕೂ ಸಂತೋಷ ಪಡುತ್ತಾರೆ. ಓಂ ಪದವನ್ನು ಪುನರುಚ್ಚರಿಸುವವರೂ ಮುಕ್ತಿ ಪಡೆಯುತ್ತಾರೆ. ಜೀವ ಮತ್ತು ವಸ್ತು ಬೇರೆ ಬೇರೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಈ ತತ್ವದಲ್ಲಿ ನಂಬಿಕೆ ಇರುವವರು ಬಹಳ ಕಡಿಮೆಯಿದ್ದಾರೆ. ಇವೆರಡರ ಗುಣಲಕ್ಷಣಗಳು ವಿಭಿನ್ನವಾಗಿವೆ. ನಮ್ಮ ಕಾರ್ಯವು ನಮ್ಮ ಆತ್ಮಕ್ಕೆ ಪರಿಪೂರ್ಣ ಸಂತೋಷ ಸಾಧಿಸಲು ಶ್ರಮಿಸುವುದು... ನಮ್ಮಲ್ಲಿ ಕೆಲವರು ಮಾತ್ರ ನಿಜವಾದ ಜೀವನದಲ್ಲಿ ತತ್ವಗಳನ್ನು ಅಭ್ಯಾಸ ಮಾಡುತ್ತಾರೆ. ನಾವು ಈ ತತ್ವಗಳನ್ನು ಕಾರ್ಯರೂಪಕ್ಕೆ ತರಬೇಕು. ಇದರಲ್ಲಿಯೇ ಮೋಕ್ಷವಿದೆ**"** ಹೀಗೆ ಅವರು ಮಾಡಿರುವ ಉಪದೇಶವು ಸದಾಕಾಲ ಸ್ಮರಣೀಯವಾಗಿದೆ.

ಶ್ರೀಗಳು ಮಹಾರಾಷ್ಟ್ರದ ಜೈನ ಸಿದ್ಧಕ್ಷೇತ್ರ ಕುಂಥಲಗಿರಿಯಲ್ಲಿ ಕೈಗೊಂಡ ಚಾತುರ್ಮಾಸದ ಸಂದರ್ಭದಲ್ಲಿ ಇವರಿಗೆ ಬೆನ್ನಿನಲ್ಲಿ ಗಜಕರ್ಣವ್ಯಾಧಿ ಪ್ರಾರಂಭವಾಯಿತು. ಇದರಿಂದ ಏಕಾಂತ ತಪಸ್ಸು ಮತ್ತು ಸಂಚಾರಕ್ಕೆ ತೊಂದರೆಯಾಯಿತು. ಈ

ಬಾಧೆಯನ್ನು ಪ್ರತಿರೋಧಿಸಲು ಸಾಧ್ಯವಾಗದೆಂದು ಮನದಟ್ಟಾದಾಗ ತಾವು ಶ್ರದ್ಧೆಯಿಂದ ಪಾಲಿಸುತ್ತಿರುವ ಪವಿತ್ರ ಧರ್ಮದ ರಕ್ಷಣೆಗಾಗಿ ಸಲ್ಲೇಖನ ವ್ರತ ಧಾರಣೆ ಮಾಡಲು ನಿರ್ಧರಿಸಿದರು. 1955ರ ಅಗಸ್ಟ್ 14ರಂದು ಯಮಸಲ್ಲೇಖನ ವ್ರತ ತೆಗೆದುಕೊಂಡು ಕ್ರಮೇಣ ಆಹಾರವನ್ನು ತ್ಯಾಗಮಾಡುತ್ತ 36 ದಿನ ಉಪವಾಸವಿದ್ದು, ಆತ್ಮಧ್ಯಾನದಲ್ಲಿ ಲೀನವಾಗಿ 1955ರ ಸಪ್ಟೆಂಬರ್ 18ರಂದು ತಮ್ಮ 83ನೆಯ ವಯಸ್ಸಿನಲ್ಲಿ ಸಮಾಧಿಮರಣದ ಮೂಲಕ ಸದ್ಗತಿ ಸಂಪಾದಿಸಿದರು. ಹಂತ ಹಂತವಾಗಿ ಆಹಾರ, ನೀರು ಮತ್ತು ದ್ರವ ಪದಾರ್ಥಗಳನ್ನು ತ್ಯಜಿಸುತ್ತ ಕೊನೆಗೆ ಸಂಪೂರ್ಣವಾಗಿ ಎಲ್ಲವನ್ನೂ ತ್ಯಜಿಸಿ ಮನವನ್ನು ಆತ್ಮಧ್ಯಾನದಲ್ಲಿ ಲೀನವಾಗಿಟ್ಟುಕೊಂಡು ಪರಮಾತ್ಮನತ್ತ ಸಾಗುವುದು 'ಯಮಸಲ್ಲೇಖನ ವ್ರತ'ವಾಗಿದೆ. ಮುನಿಗಳು ತಮ್ಮ ರೋಗ ಬಾಧೆಗೆ ತಾವೂ ಚಿಕಿತ್ಸೆ ಮಾಡಿಕೊಳ್ಳದೆ, ಬೇರೆಯವರಿಗೂ ಮಾಡಗೊಡದೆ ಸಹನೆಯಿಂದ ಧ್ಯಾನದಲ್ಲಿ ತೊಡಗಿ ಪ್ರಾಣತ್ಯಾಗ ಮಾಡುವುದು 'ಪ್ರಾಯೋಪಗಮನ ಮರಣ'ವಾಗಿದೆ. ಶಾಂತಿಸಾಗರರ ಸಮಾಧಿಮರಣವು ಈ ಪ್ರಕಾರದ್ದಾಗಿದೆ.

6. ಸಮಾರೋಪ

ಆಚಾರ್ಯ ಶಾಂತಿಸಾಗರ ಮಹಾರಾಜರ ವಿಹಾರ ಮತ್ತು ಚಾತುರ್ಮಾಸಗಳ ಸಂದರ್ಭದುದ್ದಕ್ಕೂ ಮೇಲೆ ಗಮನಿಸಲಾದಂಥ ಅನೇಕ ಮಹಾಮಹಿಮೆಯ ಜೀವಂತ ಪವಾಡ ಸದೃಶ್ಯಗಳು ಮತ್ತು ಉಪಸರ್ಗಗಳು ಜರುಗಿವೆ. ಈ ಉಪಸರ್ಗಗಳು ಅವರ ಏಕಾಗ್ರತೆ, ನಿಶ್ಚಲಮತಿ, ಧ್ಯಾನನೈಪುಣ್ಯ, ಯೋಗ ಸಾಧನೆಯಲ್ಲಿಯ ಪರಿಣಿತಾವಸ್ಥೆಯನ್ನು ಪ್ರದರ್ಶಿಸಿವೆ. ಈ ಹಿನ್ನೆಲೆಯಲ್ಲಿ ಅವರನ್ನು ಸಮಾಜವು ಚಾರಿತ್ರ ಚಕ್ರವರ್ತಿ, ಪಸನ್ನಮೂರ್ತಿ, ಉಪಸರ್ಗ ವಿಜೇತ, ಆಧ್ಯಾತ್ಮಿಕ ಚೂಡಾಮಣಿ, ಆಗಮ ರಕ್ಷಕ, ಸಾಧುರತ್ನ ಮೊದಲಾದ ಬಿರುದುಗಳಿಂದ ಗೌರವಿಸಿದೆ. ಅವರ ಆದರ್ಶ ಬದುಕು, ಧರ್ಮಪರಿಪಾಲನೆ, ಧರ್ಮಪ್ರಭಾವನೆ, ಸಂದೇಶ, ಧರ್ಮದ ರಕ್ಷಣೆ ಮತ್ತು ಶ್ರೇಯೋಭಿವೃದ್ಧಿಗಾಗಿ ಕೈಗೊಂಡ ಕಾರ್ಯಗಳ ಪ್ರಭಾವದಿಂದ ಬೆಳಗಾವಿ ಜಿಲ್ಲೆ ಪ್ರದೇಶದ ಅನೇಕ ಶ್ರಾವಕರು ಮುನಿದೀಕ್ಷೆ ಸ್ವೀಕರಿಸಿ ನಾಡು, ರಾಷ್ಟ್ರದಾದ್ಯಂತ ಧರ್ಮಪ್ರಭಾವನೆಯ ಮೂಲಕ ಕೀರ್ತಿವಂತರಾಗಿದ್ದಾರೆ. ಇವರಲ್ಲಿ ವೀರಸಾಗರ, ನೇಮಿಸಾಗರ, ವರ್ಧಮಾನಸಾಗರ, ಪಾಯಸಾಗರ, ಚಂದ್ರಸಾಗರ, ನಮಿಸಾಗರ, ಕುಂಥುಸಾಗರ, ಸುಧರ್ಮಸಾಗರ, ಧರ್ಮಸಾಗರ ಮುಂತಾದವರು ಪ್ರಮುಖರಾಗಿದ್ದಾರೆ. ಇವರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಲೋಕಕಲ್ಯಾಣ ಕಾರ್ಯಗಳಿಂದಾಗಿ ಜೈನ ಧರ್ಮವು ಬೆಳಗಾವಿ ಜಿಲ್ಲೆ ಪ್ರದೇಶದಲ್ಲಿ ಸಾಂಗವಾಗಿದೆ.

ಆಧಾರ ಗ್ರಂಥಗಳು

1. ಕಿರಣಗಿ ಮೋಹನಚಂದ, 2019 (ದ್ವಿತೀಯ ಮುದ್ರಣ), ಶ್ರೀ 108 ಆಚಾರ್ಯ ಪಾಯಸಾಗರ ಮಹಾರಾಜರ ಚರಿತ್ರೆ, ಕರ್ನಾಟಕ ಪುರಾತತ್ವ ಮತ್ತು ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಕೆಂಪಣ್ಣವರ ಪಿ.ಜಿ. ಮತ್ತು ಜೋಡಟ್ಟಿ ಟಿ.ಆರ್. (ಸಂ.), 1990, ಜೈನ ಕ್ಷೇತ್ರಗಳ ಐತಿಹ್ಯ, ಬಿ.ಬಿ. ಕರ್ಣವಾಡಿ, ಹಾರೂಗೇರಿ.

3. ನ್ಯಾಮಗೌಡ ಬಿ.ಪಿ. (ಸಂ.), 2009, ಮಹಾಬಲ ಕೃತ ಸ್ಯಾದ್ವಾದ ಕೇಸರಿ, ಕವಿಪ್ರಭಾ ಪ್ರಕಾಶನ, ಆಲಗೂರು.
4. ಪದ್ಮನಾಭಶರ್ಮ ಡಿ. ಭುವನಹಳ್ಳಿ, 1982, ಶ್ರಮಣಶಿರೋಮಣಿ, ಸನ್ಮತಿ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಪದ್ಮರಾಜ ಜಿ. (ಅನು.), 1992, ಚಾರಿತ್ರ ಚಕ್ರವರ್ತಿ, ಜ್ಞಾನೋಪಾಸನಾ ಗ್ರಂಥಮಾಲೆ, ಹಾಸನ.
6. ಪಾಟೀಲ ಎಸ್.ಪಿ. (ಸಂ.), 1993, ದ್ವಾರಪಾಲ ವಿರಚಿತ ಶಾಂತಿಸಾಗರ ಲಾವಣಿ, ವೈಶಾಲಿ ಪ್ರಕಾಶನ, ಧಾರವಾಡ.
7. ಸುದೀಪ ಜೈನ (ಸಂ.), 2003 (ಜುಲೈ–ಡಿಸೆಂಬರ್), ಪ್ರಾಕೃತ ವಿದ್ಯಾ (ತ್ರೈಮಾಸಿಕ ಸಂಶೋಧನ ನಿಯತಕಾಲಿಕೆ), ಯುಗಪ್ರಧಾನ ಚಾರಿತ್ರ ಚಕ್ರವರ್ತಿ ಆಚಾರ್ಯಶ್ರೀ ಶಾಂತಿಸಾಗರ ವಿಶೇಷಾಂಕ, ಜೈನ ಸಂಸ್ಕೃತಿ ಸಂರಕ್ಷಕ ಸಂಘ, ಸೊಲ್ಲಾಪುರ.
8. ಸುಂದರ ಅ., 1996, "ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿಯ ಪೂರ್ವಭಾವಿ ಇತಿಹಾಸ ಸಂಸ್ಕೃತಿಗಳು", ಇತಿಹಾಸ ದರ್ಶನ ಸಂ.11, ಪು. 9–14, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.
9. ಹಂಜೆ ಸಂಜಯ ಎನ್., 2016, ಗೋಕಾಕ ಪರಿಸರದಲ್ಲಿ ಜೈನಧರ್ಮ, ವಿದ್ಯಾಶ್ರೀ ಪ್ರಕಾಶನ, ಅಳಗವಾಡಿ.
10. ಹಂದೂರ ಬಿ.ಆರ್., 2003, ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ, ಶ್ರೀ ಅಜಿತ ಕುಚನೂರೆ, ವಿಜಾಪುರ.
11. ಕೊಣ್ಣೂರದಲ್ಲಿ ಸ್ವಯಂ ಕೈಗೊಂಡ ಕ್ಷೇತ್ರಕಾರ್ಯ ವರದಿ

❖❖❖

ಗುಡುಗು ಜಗಳಕಿಳಯಿತು
ಸಿಡಿಲು ನೆಲಕೆ ಬಡಿಯಿತು
ಕಾರ್ಮೋಡವು ಅಬ್ಬರಿಸುತೆ
ಕಳಚಿ ನೆಲಕೆ ಬಿದ್ದಿತು
ಸ್ಫೋಟಗೊಂಡ ಮೋಡದಿಂದ
ಜಲದ ಹನಿಯು ಸಿಡಿಯಿತು
ನೆಲದಿ ನದಿಯು ಹರಿಯಿತು

ಜಾನಪದ : ಬೆಟಗೇರಿಯವರ ದೃಷ್ಟಿ

ಡಾ. ಮೋಹನ ಕುಂಟಾರ್
'ಪಯಸ್ವಿನಿ', ಶಾಂತಿನಗರ, ಕಾಲೇಜು ರಸ್ತೆ, ಹೊಸಪೇಟೆ – 583276

ಭಾಗ–2

ಎರಡನೆಯ ಉಪನ್ಯಾಸದಲ್ಲಿ ಜನಪದ ವಾಸ್ತವ ಜೀವನ ಹಾಗೂ ಮಾನವೀಯ ಆದರ್ಶಗಳನ್ನು ಕುರಿತ ವಿಶ್ಲೇಷಣೆಯಿದೆ ಜನಪದ ಹಾಡುಗಳಲ್ಲಿ ವ್ಯಕ್ತವಾದ ವಾಸ್ತವ ಸಾಹಿತ್ಯ ಮೀಮಾಂಸೆ, ಜಾನಪದರ ಆದರ್ಶ ಪ್ರಜ್ಞೆ, ಜಾನಪದ ಧರ್ಮ, ಕೌಟುಂಬಿಕ ಸಾಮರಸ್ಯ, ವಿಷಮ ದಾಂಪತ್ಯ, ಹೆಣ್ಣು ಮಕ್ಕಳ ಆಂತರ್ಯದ ಅಪೇಕ್ಷೆ ಇತ್ಯಾದಿಗಳನ್ನು ಕುರಿತು ಜಾನಪದರ ಬಾಯಿಂದ ಹೊರಹೊಮ್ಮಿದ ಸಾಹಿತ್ಯದ ಸಾಲುಗಳನ್ನು ಸೋದಾಹರಣವಾಗಿ ಉಲ್ಲೇಖಿಸಿರುವುದನ್ನು ಕಾಣಬಹುದು.

ಗರತಿಯ ಅಪೇಕ್ಷೆ :

ಹಸುವು ಕೊಟ್ಟಿಗಿಯೊಳಗ ಸಿಸುವು ತೊಟ್ಟಿಲದೊಳಗ
ವಾರಿಗಿಯರಾಯ–ಒಳಹೊರಗ – ಇದ್ದರ
ಹಸಿವಿ ನೀರಡಿಕೆ ನನಗಿಲ್ಲ ॥
ಅಕಳಂಥಾ ಅತ್ತಿ, ಗೋಪನಂಥಾ ಮಾವ
ಶ್ರೀಕೃಷ್ಣ ನಂಥಾ ಪತಿಪುರುಷ ಇದ್ದರ
ಸಾಕೀದ ತವರ ಮೆರತೇನ ॥

ಗಂಡಸಿನ ಅಪೇಕ್ಷೆ :

ಬಸವಣ್ಣ ಹುಟ್ಟಲೋ.. ಹೊಸ ಪ್ಯಾಟೀ ಕಟ್ಟಲೋ।
ರಸಬಾಳಿ ಕಬ್ಬು ಬೆಳೆಯಲೋ।.. ನಮ್ಮೂರ
ಬಸವಾ ನಿನ ತೇರು ಎಳಿಯಲೋ!
ಏಳು ಗಾಲಿಯ ಬಾಂಪ್ಯೊ.. ಎಲಿಯ, ಬಳ್ಳಿಯ ತ್ವಾಟೋ..
ಸಾಲೂ ಸುತ್ತೆಲ್ಲಾ ಮಗಿಮಾವೋ..
ಸಾಲೂ ಸುತ್ತೆಲ್ಲಾ ಮಗಿಮಾವೋ.. ನನ್ನ ಗೆಣೆಯಾ
ಬಾಳೇವು ಆತೊ ಬಂಗಾರ

ಹೀಗೆ ಬದುಕು ಸುಖ ಸಂಪತ್ತು, ಸಮೃದ್ಧಿಯಿಂದ ಕೂಡಿರಲಿ ಎಂಬ ಹಾರೈಕೆಯು ವಾಸ್ತವ ನೆಲೆಯಿಂದಲೇ ರೂಪುಗೊಂಡಿವೆ.

"ದೇವರನ್ನು ನೆನೆದು ಪುಣ್ಯ ಸಂಪಾದಿಸುವುದು
ಏಳುತಲೆ ಶಿವ ಎನ್ನಿ ಬೀಳುತಲೆ ಶಿವಎನ್ನಿ
ವೇಳೆ ಬಂದಾಗ ಶಿವ ಎನ್ನಿ–ಯೋಳ್ಹೆಡೆಯ
ಸರಸ ಬಂದಾಗ ಶಿವ ಎನ್ನಿ"

ಪುಣ್ಯದ ಬದುಕನ್ನು ವಾಸ್ತವದ ನೆಲೆಯಲ್ಲಿ ಕಟ್ಟಿಕೊಳ್ಳುವುದನ್ನು ಇಂತಹ ಸಾಲುಗಳಲ್ಲಿ ಕಾಣಬಹುದು. ದೇವರೆಂದು ಮನೆಯ ಕೆಲಸಗಳನ್ನು ಬಿಟ್ಟು ಬಿಡುವಂತಿಲ್ಲ. ದೇವರ ಪೂಜೆಗಿಂತಲೂ ಮನೆವಾಳ್ತೆ ಮೇಲಾದುದು.

"ಊರ ಮಾದೇವಿಯ ತೇರೆಳೆಯುತಿರುವಾಗ
ತೀರಲಿಲ್ಲ ನನ್ನ ಮನಿಗೆಲಸ–ನನ್ನ ತಾಯಿ
ದೂರಿಂದಕೈಯ ಮುಗಿದೇನ!"

ದೂರದ ಪುಣಕ್ಷೇತ್ರಗಳಿಗೆ ಹೋಗಿ ಬರುವ ಸಮಯವನ್ನು ವ್ಯಯ ಮಾಡುವುದಕ್ಕಿಂತ ತಾಸುಹೊತ್ತಿನ ದೂರದಲ್ಲಿರುವ ತವರಿಗೆ ಹೋಗಿ ಹಡೆದವ್ವನ ಕಂಡು ಬರುವುದೇ ಪುಣ್ಯದ ಕೆಲಸವೆಂದು ನಂಬಿದ ಬದುಕು ಗ್ರಾಮೀಣ ಮಹಿಳೆಯರದು.

"ಕಾಶಿಗೆ ಹೋಗುದಕ ಏಸೊಂದು ದಿನಬೇಕ,
ತಾಸೊತ್ತಿನ ದಾರಿ ತವರೂರ,–ಮನಿಯೊಳಗ
ಕಾಶಿಕುಂತಾಳ ಹಡೆದವ್ವ!"

ಜನಪದರ ಮನಸ್ಸಿನಲ್ಲಿ ಧರ್ಮ ಅಧರ್ಮಗಳ ವಿವೇಚನೆ ವಿಪುಲವಾಗಿದೆ. ಅವರೇ ಹೇಳಿದ ಸಾಲುಗಳಿವು.

"ಸತ್ಯುಳ್ಳ ಪಾಂಡವರು ಸತ್ತರಂತನಬ್ಯಾಡ್ರಿ
ಸತ್ತರೀ ಲೋಕ ಬೆಳೆಯವು–ಧರ್ಮರು
ಬಿತ್ತ ಹೋಗ್ಯಾರ ಅವರೀಯ॥"

ಧರ್ಮಿಷ್ಠರಾದ ಪಾಂಡವರ ವನವಾಸದ ಕಷ್ಟವನ್ನು ಜನಪದರು ಹೇಳುವುದು ಹೀಗೆ:

"ಕಲ್ಲ ಕಡಬನೆ ಮಾಡಿ, ಮುಳ್ಳ ಶಾವಿಗೆ ಮಾಡಿ
ಬನ್ನೀಯ ಎಲಿಯ ಪತರೋಳ–ಪಾಂಡವರು
ಉಂಡುಕಳೆದಾರು ವನವಾಸ।"

ಹೀಗೆ ಜನಪದರು ಸಾಹಿತ್ಯದಲ್ಲಿ ಅಷ್ಟೆ ಅಲ್ಲ ಪಾಂಡವರ ಬಗೆಗಿನ ತಮ್ಮ ಶ್ರದ್ಧೆಯನ್ನು ನಾಡಿನಲ್ಲಿ ದೊರೆಯುವ ಕುರುಹುಗಳ ಮೂಲಕವೂ ಉಳಿಸಿಕೊಂಡಿರುವುದನ್ನು ಕಾಣಬಹುದು.

ತಮ್ಮ ಗಳತಿಯರ ಜೊತೆಗೆ ತನ್ನ ಗಂಡನ ಬಗೆಗಿನ ಮೆಚ್ಚು ನುಡಿಗಳನ್ನಾಡುವ ಹೆಣ್ಣುಗಳು:

"ಮನಿಗಿ ಹಿರಿಮಗನಂತ ಗುಣದ ಬಲು ಮೇಲಂತ
ಮನುಮತನ ರೂಪ ಅವಗಂತ–ಗರಡೀಯ
ಮನಿಯಾಗ ಬಂಟ ಅವನಂತ"

ಹೀಗೆ ಹೆಣ್ಣು–ಮಗಳು ತಮ್ಮ ಕನಸಿನ ಗಂಡನ ಮನೆಯನ್ನು ಪದ್ಯದ ಮೂಲಕ ಹರಿಯಬಿಟ್ಟಿದ್ದಾರೆ.

ಮದುವೆಗೆ ನಿಂತ ಸೋದರನಿಗೆ ಅಕ್ಕಂದಿರು ಕನ್ಯೆಯ ಬಗೆಗೆ ಹೇಳುವ ತಿಳುವಳಿಕೆ ಮಾತುಗಳು ಈ ಮುಂದಿನ ಸಾಲುಗಳಲ್ಲಿವೆ.

"ಕೆಂಪು ಹೆಂಡತಿ ಅಂತ ಸಂತೋಷ ಪಡಬ್ಯಾಡೊ
ಸಂತ್ಯಾಗ ಮಾರುವ ಸವಳುಪ್ಪೊ॥

ಸಂತ್ಯಾಗ ಮಾರುವ ಸವಳುಪ್ಪಿನಂತಾಕಿ
ನಿಂತಲ್ಲೇ ನೀರ ಬಿಡುವಳೊ!"
"ಕಪ್ಪು ಹೆಂಡತಿ ಅಂತ ಕರಿಕರಿ ಮಾಡಬ್ಯಾಡೋ
ನೀರಲದ ಹಣ್ಣು ಅತಿ ಕಪ್ಪೊ
ನೀರಲದ ಹಣ್ಣು ಅತಿಕಪ್ಪೊ ..... ತಮ್ಮಯ್ಯ

ಸಮರಸದ ದಾಂಪತ್ಯದಲ್ಲಿ ಗಂಡನ ಪ್ರೀತಿಯ ಆಧಿಕ್ಯವನ್ನು ಸೂಚಿಸುವ ಹಾಡುಗಳ ಸ್ವಾರಸ್ಯ ಬೇರೆ.

"ಹಚ್ಚಡದ ಪದರಾಗ ಮುಚ್ಚಿ ಮಲ್ಲಿಗೆ ಹೂವ
ಬಿಚ್ಚಿ– ನನ್ನ ಮ್ಯಾಲ ಒಗಿವಂಥ–ರಾಯನ್ನ
ಬಿಟ್ಟು ಬರಲ್ಯಾಂಗ ಹಡದವ್ವ॥"
"ಹಾಸಿಗಿಯ ಹಾಸೆಂದ ಮಲ್ಲಿಗೆಯ ಸೂಸೆಂದ
ಬ್ಯಾಸತ್ತರ ಮಡದಿ ಮಲಗೆಂದ–ನನ್ನ ದೊರಿ
ನನ್ನೋಡಿ ತವರ ಮರಿಯಂದ।"

ಹೀಗೆ ಗಂಡನ ಅದಮ್ಯ ಪ್ರೀತಿಯನ್ನು ಹೆಂಡತಿ ತಾಯಿಯೊಡನೆ ಬಹಿರಂಗಪಡಿಸುತ್ತಾಳೆ.

ಹೆಂಡತಿಯ ಒಲುಮೆಯನ್ನು ನೆನೆಯುವ ಗಂಡನ ಮನದಾಳದ ಮಾತು.

"ಅಡಗೀಯ ಮನಿಯಾಗ ಮಡದೀಯ ಸುಳಿವಿಲ್ಲ
ಅಡಗಿ ಬಾಯ್ಗೊಂದು ರುಚಿಯಿಲ್ಲ– ಸವಿಯಿಲ್ಲ
ಮಡದಿ ಹೊಗ್ಯಾಳ ತವರೀಗ॥"

ಇಂತಹವು ಹೆಚ್ಚಿಲ್ಲ ನಾಲ್ಕೈದು ಪದ್ಯಗಳಷ್ಟೇ ದೊರೆಯತ್ತವೆ ಎಂಬುದನ್ನು ತಿಳಿಸಿದ್ದಾರೆ.

ದಾಂಪತ್ಯ ವಿಷಮವಾಗದಂತಿರಬೇಕಾದರೆ ಜನಪದರು ಈ ನೀತಿಯನ್ನು ಆಗಾಗ ತಿಳಿಯುವಂತೆ ಹೇಳುವುದನ್ನು ಕಾಣಬಹುದು. ತಾಯಿ ಮಗಳಿಗೆ ಹೀಗೆ ಹೇಳುವಳು:

"ಅತ್ತೀಯ ಮನಿಯೊಳಗ ಮುತ್ತಿನ್ಹಾಂಗಿರಬೇಕು
ಹೊತ್ತ ಹಾಕಿದರು ಉಣಬೇಕು–ಕಂದಮ್ಮ
ಹೆತ್ತಮನಿಗ್ಹೆಸರ ತರಬೇಕು॥"

ತಂದೆಯ ಹಿತನುಡಿ :

"ಬಂದದ್ದು ಬರಲವ್ವ ಎದಿಗೊಟ್ಟು ನಿಲಬೇಕ
ಹೆದರಿದರ ಬೆನ್ನ ಬಿಡದವ್ವ–ನನ ಮಗಳ
ಒದಗಿದರೆ ದುಃಖ ಒಳನುಂಗ॥"

ಅಣ್ಣನ ಕೀವಿಮಾತು :

"ಸರದಾರ ಅಣ್ಣಯ್ಯ ಕರದು ತಾ ಹೇಳ್ಯಾನು
ನೆರೆ–ಹೊರಿಯ ಮನಿಯ ಹೊಗಬ್ಯಾಡ–ನನತಂಗಿ
ಬರಬಾರದ ಮಾತು ಬರುತಾವ॥"

ಗೆಳತಿಯಾದವಳು ಗಂಡನ ಮನೆಯಲ್ಲಿ ಹೆಣ್ಣಿಗೆ ಅನಿವಾರ್ಯ ಎಂಬುದನ್ನು ತಿಳಿಹೇಳುವ ಸಾಲುಗಳಿವು:

"ಅತ್ತರೂ ಬಿಡದವ್ವ ಸತ್ತರೂ ಬಿಡದವ್ವ
ಅತ್ತೀಯ ಮನಿಯು ಹೆಣ್ಣೀಗೆ–ನನ ಗೆಳತಿ
ಮುತ್ತಯ್ದಿಯಾಗಿ ಬಾಳವ್ವಾ॥"

ಹೀಗೆ ಹೆಣ್ಣು ಆದರ್ಶದ ಬದುಕನ್ನು ಬದಕಬೇಕೆಂಬ ಆಶಯ ಜನಪದರದು.

ಪರಸ್ತ್ರೀಯರ ಸಂಗಮಾಡಿದ ಗಂಡನನ್ನು ಕುರಿತ ಓರಗೆಯವರ ಮಾತನ್ನು ಕೇಳಿ ಔದಾರ್ಯದ ಮನಸ್ಸಿನಿಂದ ಮರುನುಡಿಯುವಳು:

"ನಕ್ಕರ ನಗಲೇಳ ನಗಿಮಕದ ಕ್ಯಾದಿಗಿ
ನಾ ಮುಚ್ಚಿ ಮುಡಿದ ಪರಿಮಳದ ಮಲ್ಲಿಗೆಯ
ಅವಳೊಂದು ಗಳಿಗಿ ಮುಡಿಯಲಿ॥"

ಹೆಣ್ಣೊಬ್ಬಳ ಅಂತರಂಗದ ಆಪೇಕ್ಷೆಯನ್ನು ತೊಡಿಕೊಳ್ಳುವುದು ಹೀಗೆ:

"ಅತ್ತಿಗೆಯು ಹಡಿಯಲಿ, ಹತ್ತೆಮ್ಮೆ ಕರಿಯಲಿ
ಹಿತ್ತಲಿನ ಬಾಳಿ ಚಿಗುರಲತ್ತಿಗಿ ಮಗಳು
ಅತ್ತಿ ಅಂತ ನನ್ನ ಕರಿಯಲಿ॥"

ಅತ್ತಿಗೆಯು ಮಗಳನ್ನು ಹೆರುವುದಕ್ಕೆ ಮೊದಲ ತಾನು ಗಂಡು ಮಗುವನ್ನು ಹೆರಬೇಕು. ಆ ಮಗುವಿಗೆ ಅತ್ತಿಗೆಯ ಮಗಳನ್ನು ಮದುವೆ ಮಾಡಿಕೊಳ್ಳಬೇಕು. ಆ ಮಗು ನನ್ನನ್ನು ಅತ್ತಿ ಎಂದು ಕರೆಯಬೇಕು ಎಂಬ ಮನದಾಳದ ಆಪೇಕ್ಷೆಯನ್ನು ವ್ಯಕ್ತಪಡಿಸುತ್ತಾಳೆ. ಬದುಕು ಹಸನಾಗಬೇಕು ಜೊತೆಗೆ ಕುಟುಂಬದ ಬಾಂಧವ್ಯವೂ ಬಿಗಿಗೊಳ್ಳಬೇಕು ಎಂಬ ಸದಾಶಯದ ಇಂತಹ ಸಾಲುಗಳಲ್ಲಿ ಜನಪದರ ವಾಸ್ತವ ಬದುಕನ್ನು ಕಂಡುಕೊಳ್ಳಬಹುದು ಎಂಬುದನ್ನು ಬೆಟಗೇರಿಯವರು ಗುರುತಿಸಿದ್ದಾರೆ.

ತಾಯಿಯಿಲ್ಲದ ತವರಿನ ಸ್ಥಿತಿಯನ್ನು ಹೇಳುವ ಪದ್ಯ :

"ಅತ್ತಿಗಿಯು ತವರಲ್ಲ, ಹಿತ್ತಾಳೆ ಒಡವ್ಯಲ್ಲ
ಉತ್ತರಾಣಿಯ ಗಿಡದ ನೆರಳಲ್ಲ–ಅಣ್ಣಯ್ಯ
ನಿನ್ನ ಮನಿ ನನಗೆ ತವರಲ್ಲ!"

ಹೀಗೆ ಜನಪದರ ಆದರ್ಶದ ವಾಸ್ತವದ ಬದುಕಿನ ಕುರಿತ ಚಿತ್ರಣವನ್ನು ಅನೇಕ ಸಾಹಿತ್ಯಿಕ ಪಂಕ್ತಿಗಳನ್ನು ಉಲ್ಲೇಖಿಸಿ ವಿವೇಚಿಸಲಾಗಿದೆ. ಇಲ್ಲಿ ಜನಪದರ ಬದುಕಿನ ನುಡಿಗಳನ್ನು ದಾಖಲಿಸುವಾಗಲೂ ಆಡುನುಡಿಯ ಲಯದ ಅಂದಗೆಡದಂತೆ ದಾಖಲಿಸಿರುವುದೂ ಕೂಡಾ ಗಮನಾರ್ಹವಾಗಿದೆ. ಸಾಹಿತ್ಯದ ಮೂಲಕ ಕನ್ನಡ ನಾಡಿನ ಜನಪದ ಜೀವನದ ಹಾಡುಗಳು ಗದ್ಯಭಾಗಗಳು ಲೋಕೋಕ್ತಿಗಳು, ಚತುರೋಕ್ತಿಗಳು ಹೀಗೆ ಹಲವು ವಿಧದಲ್ಲಿ ದಾಖಲಿಸಿದ ಪ್ರಸ್ತುತ ಪ್ರಬಂಧವು ಜನಪದ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತವೆನಿಸುವ ಧಾಟಿಯಲ್ಲಿದೆ.

ಜಾನಪದ ರಂಗಭೂಮಿ ಎಂಬ ಲೇಖನದಲ್ಲಿ ಪರವಂತರ ಆಟ, ನಾಳ್‌ಪಗರಣ, ಬೀದಿಗೊಟ್ಟಿ, ದಾಸರಾಟ, ರಾಧನಾಟ, ರೂಪಸಿಂಗನ ಆಟ, ಸಂಗ್ಯಾಬಾಳ್ಯಾ, ಶರಣರ ಆಟಗಳು, ಶ್ರೀಕೃಷ್ಣ ಪಾರಿಜಾತ, ಬಯಲಾಟಗಳು, ಮೂಡಲಪಾಯ ಆಟಗಳು, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ ಇತ್ಯಾದಿ ರಂಗಕಲೆಗಳ

ವಿವರವಾದ ಪರಿಚಯವಿದೆ. ಜೊತೆಗೆಜಾನಪದ ರಂಗಭೂಮಿಯ ಕುರಿತ ವಿವಿಧ ಪಾರಿಭಾಷಿಕ ಪದಗಳ ನಿಷ್ಪತ್ತಿಗಳನ್ನು ಸಹ ಕಂಡುಕೊಳ್ಳುವ ಪ್ರಯತ್ನ ಮಾಡಿದುವುದು ಕುತೂಲಹಕರವಾಗಿದೆ.

ಪರವಂತರ ಆಟದಲ್ಲಿ 'ಸಂಬಾಳ', ಎಂಬ ಚರ್ಮವಾದ್ಯವನ್ನು ಸೊಂಟಕ್ಕೆ ಬಿಗಿದುಕೊಂಡು ಕೈಯಲ್ಲಿ 'ಗುಣಿ' (ವಾದನದಂಡ) ಹಿಡಿದು ಬಾರಿಸುವನು, ಅವನೊಡನೆ ಕಂಚಿನಿಂದ ಕೂಡಿದ ಝಲ್ಲರಿ ತಾಳವನ್ನು ಬಾರಿಸುವ ಒಬ್ಬಿಬ್ಬರು ಸಹಕರಿಸುವರು, ಜೊತೆಗೆ ಶ್ರುತಿಯೊಡನೆ ಬಜಂತ್ರಿ ವಾದ್ಯದವನೂ ಇರುತ್ತಾನೆ. ಈ ಎಲ್ಲಾ ವಾದ್ಯ ಸಮ್ಮಿಲನದೊಡನೆ ದಾರಿಯುದ್ದಕ್ಕೂ ಪರವಂತರ ಮೆರವಣಿಗೆ ಹೊರಡುವರು. ದಾರಿಯ ನಡು ನಡುವೆ ವಿರಮಿಸುವ ವೇಳೆ ಪರವಂತರ ಆಟ ವಿಜೃಂಭಿಸುತ್ತದೆ. ಮೊದಲು ವಾದ್ಯಗಳ ಗತಿಗನುಗುಣವಾದ ವೀರನೃತ್ಯ ಮುಕ್ತಾಯವಾದ ಮೇಲೆ ಶೈವಲೀಲಾ ಪ್ರಸಂಗಗಳನ್ನು ಅಭಿನಯ ಪೂರ್ವಕವಾಗಿ ಉಗ್ಗಡಿಸುವನು. ಈ ಉಗ್ಗಡಣೆಯನ್ನು 'ಒಡಪ' ಎಂದು ಹೇಳುವರು. ಶಿವನ ದುಷ್ಟ ಸಂಹಾರದ ಕತೆಯಿರುತ್ತಿದ್ದುದರಿಂದ ಇದು ಜನರ ಆಕರ್ಷಣೆಗೂ ಕಾರಣವಾಗುತ್ತದೆ. ಒಬ್ಬನಾದ ಮೇಲೆ ಒಬ್ಬನಂತೆ ಬಂದು ಒಡಪನ್ನು ಉಗ್ಗಡಿಸುವುದು ನಡುನಡುವೆ ವಿದೂಷಕನಂತೆ ಲೌಕಿಕ ಸಂಗತಿಗಳ ಒಡಪುಗಳನ್ನು ಹೇಳುತ್ತ ಜನರನ್ನು ನಗಿಸುತ್ತಿರುವನು. ಹಿನ್ನೆಲೆಯ ವಾದ್ಯ, ನಾಟಕೋಚಿತ ಭಾಷೆ, ಆಂಗಿಕಾಭಿನಯ, ಭಾವಾಭಿನಯ ಇತ್ಯಾದಿಗಳಿಂದಾಗಿ ಇದು ಆರ್ಯದ್ರಾವಿಡ ಸಮ್ಮಿಶ್ರ ಪರಂಪರೆಯಿಂದ ಹುಟ್ಟಿಕೊಂಡಿದೆ ಎಂದು ಊಹಿಸುತ್ತಾರೆ.

ನಾಳ್‌ಪಗರಣ ರಂಗಕಲೆಯ ಬಗೆಗೆ ವಿವರಿಸುತ್ತ ಅದರ ಶಬ್ದವ್ಯುತ್ಪತ್ತಿಯ ಬಗೆಗೆ ವಿಚಾರ ಮಾಡಲಾಗಿದೆ. 'ಪಗರಣ'ಎಂದರೆ ಸಂಸ್ಕೃತದ ಪ್ರಕರಣದ ಅಪಭ್ರಂಶ ಎಂದೇ ವ್ಯಾಕರಣಕಾರರು ಸಿದ್ಧಮಾಡಿದ್ದಾರೆ. ಆದರೆ ಪ್ರಸ್ತುತ ಕನ್ನಡದ ವ್ಯುತ್ಪತ್ತಿಯನ್ನು ಕಂಡುಕೊಳ್ಳಲು ಮಾಡಿದ ಯತ್ನ ಕುತೂಹಲಕರವಾಗಿದೆ. ಇದರ ಬದಲಾದ ರೂಪದಲ್ಲಿ 'ಹಗರಣ', ಹಗಣ ಎಂದೂ ಬಳಕೆಯಲ್ಲಿದೆ ಶ್ರೀಸಾಮಾನ್ಯರು ಹಗಣ ಎಂದೇ ಬಳಸುತ್ತಾರೆ. 'ಹಾದರ ಮಾಡುವಾಕೆ ಮದಲ ಹಗಣಾ ಕಲೀಬೇಕು' ಎಂಬ ಗಾದೆಮಾತು ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿದೆ ಸೋಗಲಾಡಿಯಾದ ಮಹಿಳೆಯನ್ನು 'ಹಗಣಗಿತ್ತಿ' ಎಂದು ಬೈಯ್ಯುತ್ತಾರೆ.

ದಕ್ಷಿಣ ಕರ್ನಾಟಕದಲ್ಲಿ ಗೊಂದಲಗಳ ಘಟನೆಯನ್ನು ವಿವರಿಸುವಾಗ ಹಗರಣ ಎಂದು ಹೇಳಲಾಗುತ್ತದೆ. ಆದರೆ ಉತ್ತರ ಕರ್ನಾಟಕದಲ್ಲಿ 'ಹಗಣ' ಅಶ್ಲೀಲ ಭಾವ ಸೂಚಕವಾದ ಪದ. ಹಾಗೆಯೇ 'ಹಾದರ' ಎಂಬುದು ಅಶ್ಲೀಲಭಾವ ಸೂಚಕ ಪದವೇ ಆಗಿದೆ. ವ್ಯಾಕರಣಕಾರರು ಹೇಳುವಂತೆ 'ಪಾತ್ರ' ಎಂಬ ಸಂಸ್ಕೃತ ಪದವು ಅಪಭ್ರಂಶ ರೂಪದಲ್ಲಿ 'ಹಾದರ' ಆಗಿರುವುದು. ಇದು ನಿಜವೇ ಆಗಿದ್ದರೆ ಅಶ್ಲೀಲ ಅರ್ಥಕ್ಕೆ ಅಸ್ಪದವೇ ಇರಲಿಲ್ಲ. ಆದರೆ ಕನ್ನಡ ಕವಿಗಳು ಪಾದರ, ಪಾದರಿಗೆ, ಹಾದರ ಪದಗಳನ್ನು ಅಶ್ಲೀಲಾರ್ಥದಲ್ಲಿ ಬಳಸಿರುವುದನ್ನು ಕಾಣಬಹುದು. ಅಂದರೆ 'ಪಾತ್ರ' ಪದದ ತದ್ಭವವೇ ಹಾದರ, ಪಾದರ ಆಗಿರುವುದು ನಿಜವಿರಬಹುದೆಂಬ ಸಂದೇಹವನ್ನು ವ್ಯಕ್ತ ಪಡಿಸಿ ವಿಶ್ಲೇಷಣೆಯನ್ನು ಮುಂದುವರಿಸಿದ್ದಾರೆ.

ಅವರು 'ಹಾದರ ಮಾಡಬೇಕೆನ್ನುವಾಕಿ ಮದಲ ಹಗಣಾ ಕಲೀಬೇಕು' ಎಂಬ ನುಡಿಯ ಸರಿಯಾದ ಅರ್ಥವನ್ನು ಗ್ರಹಿಸಬೇಕು. ಮೂಲದಲ್ಲಿ ಅದು ನಟ, ನಟಿಯರು

ಅನುಸರಿಸಬೇಕಾದ ನೀತಿಯನ್ನು ಬೋಧಿಸುವ ಸಲುವಾಗಿ ಹೇಳುವ ಮಾತು. ಕಾಲಾಂತರದಲ್ಲಿ ಅದು ಅಶ್ಲೀಲ ಅರ್ಥವನ್ನು ಆರೋಪಿಸಿಕೊಂಡಿರಬೇಕು. ಹಾಗಾಗಿ ಪಗರಣವೇ 'ಹಗಣ' ಪಾತ್ರವೇ 'ಹಾದರ' 'ಪ್ರಕರಣವೇ' 'ಪಗರಣ' ಆಗಿದೆಯೆಂಬುದನ್ನು ಒಪ್ಪಬೇಕಾಗುತ್ತದೆ ಎಂಬ ನಿರ್ಣಯಕ್ಕೆ ಬರುತ್ತಾರೆ.

'ಹಾದರ ಮಾಡಬೇಕೆನ್ನುವಾಕಿ ಮದಲ ಹಗಣಾ ಕಲೀಬೇಕು' ಎಂಬುದನ್ನು ಶಿಷ್ಟ ಕನ್ನಡದಲ್ಲಿ 'ಪಾತ್ರವನ್ನು ಮಾಡುವಾಕೆ ಮೊದಲು ಹಗರಣವನ್ನು ಕಲಿಯಬೇಕು' ಎಂದಾಗಬಹುದು. ಅಂದರೆ ಪಾತ್ರವನ್ನು ಮಾಡಬೇಕಾದ ನಟ ನಟಿಯರು ಹಗರಣದ ಹುರುಳನ್ನು ತಿಳಿದು ಅಭಿನಯಿಸಲೇಬೇಕು ಎಂಬ ಅರ್ಥ ಸಿದ್ಧವಾಗುತ್ತದೆ. ಪಾತ್ರ ಎಂಬ ಸಂಸ್ಕೃತ ಪದವು ಜಾನಪದದಲ್ಲಿ 'ಪಾತರ' ಎಂದು ಅಪಭ್ರಂಶ ರೂಪವನ್ನು ತಾಳಿ ಬಳಕೆಯಲ್ಲಿದೆ. 'ಪಾದರ ಹಾಗೂ 'ಹಾದರ' ಪದಗಳಿಗೆ ಅರ್ಥದಲ್ಲಿ ತುಂಬಾ ವ್ಯತ್ಯಾಸವಿದೆ. ಆದರೆ ಹಾದರ ಕನ್ನಡ ಪದವೇ ಆಗಿದ್ದರೆ ರೂಪ ನಿಷ್ಪತ್ತಿಗಾಗಿ ಹುಡುಕಾಡುವ ಅಗತ್ಯವಿದೆ. ಹೀಗೆ ಜನಪದ ರಂಗಭೂಮಿಯನ್ನು ಕುರಿತ ವಿವರಣೆಯೊಂದಿಗೆ ಪದ ನಿಷ್ಪತ್ತಿ ಇತ್ಯಾದಿಗಳ ಅಯಾಮದಿಂದಲೂ ಬೆಟಗೇರಿಯವರು ಪರಿಶೀಲಿಸುತ್ತಾರೆ. ಹೀಗೆ ಬೀದಿಗೊಟ್ಟಿಯ ಗೊಟ್ಟಿ, ಕಿಳ್ಳೇಕ್ಯಾತರ ತೊಗಲು ಗೊಂಬೆಯಾಟದ ವಿದೂಷಕನ ಪಾತ್ರ 'ಕಟಬೂ' ಎಂಬಿತ್ಯಾದಿ ಪದಗಳ ಬಗೆಗೆ ತಮ್ಮ ವಿವೇಚನಾ ಸಾಮರ್ಥ್ಯದಿಂದ ಪದ ನಿಷ್ಪತ್ತಿಯ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಜಾನಪದ ರಂಗಭೂಮಿಯ ಸಂದರ್ಭದಲ್ಲಿ ಕನ್ನಡ ನಾಡಿನಲ್ಲಿ ಹುಟ್ಟಿ ಮರೆಯಾದ ಅನೇಕ ಜಾನಪದ ರೂಪಕ ಪ್ರಯೋಗಗಳಿವೆ. ಅವುಗಳಲ್ಲಿ ರೂಪಸಿಂಗನ ಆಟವೂ ಒಂದು. ಇದು ರಾಧಾನಾಟದ ಪದ್ಧತಿಯಲ್ಲಿಯೇ ಪ್ರಯೋಗಗೊಳ್ಳುವ ರಂಗ ಸಂಪ್ರದಾಯ. ಮಂಗಲಾಚರಣದ ಪ್ರಾರ್ಥನಾ ಗೀತೆ, ಬಳಿಕ ಗಣಪತಿಯ ಪ್ರವೇಶ, ಗೋಪಾಲ ಗೊಲ್ಲತಿಯ ಪ್ರಸಂಗಗಳ ನಂತರ ಕಥಾಭಾಗ ಆರಂಭವಾಗುವುದು. ಇದರ ಕತೆ ಕುತೂಹಲಕರವಾಗಿದೆ. ಅದನ್ನು ಇಲ್ಲಿ ಹಾಗೆಯೇ ದಾಖಲಿಸಬಹುದು.

"ವಾಮನಿಂಗನೆಂಬುವನೊಬ್ಬ ಸೈನ್ಯದಲ್ಲಿನ ಸಿಪಾಯಿ. ಅವನ ಹೆಂಡತಿ ಜಯವಂತೆ. ಮಗ ರೂಪಸಿಂಹ.ಒಂದು ಸಲ ಮೇಲಿನ ಕರೆಬರಲು ರಾಮಸಿಂಹ ಸಿಪಾಯಿ ರಾಜಧಾನಿ ನಗರಕ್ಕೆ ಹೋಗುವನು. ಅಲ್ಲಿ ಅವನು ಇರುವಾಗ, ಒಂದು ಹೆಣ್ಣಿನ ಪರಿಚಯವಾಗುವುದು. ಅವಳ ಹೆಸರು 'ಕಮಲಾಕ್ಷಿ' ಎಂದು. ಕಮಲಾಕ್ಷಿಯ ದಾಂಪತ್ಯ ತುಂಬ ವಿಷಮವಾದುದು. ಲೀಲಾವತಿಯಾದ ಈ ಚೆಲುವೆಗೆ ಹೇಡಿಯಾದ ಒಬ್ಬ ಗಂಡನೊಂದಿಗೆ ಮದುವೆಯಾಗಿತ್ತು. ವೀರನಾದ ರಾಮಸಿಂಗನನ್ನು ಅವಳು ಕಂಡು ಕಾಮಿಸಿ ಅವನ ಪರಿಚಯ ಮಾಡಿಕೊಳ್ಳುವಳು. ದೂತಿಯ ಸಹಾಯದಿಂದ ಅವನನ್ನು ವಶಪಡಿಸಿಕೊಳ್ಳಲು ಹವಣಿಸುವಳು. ಮೊದಮೊದಲು ರಾಮಸಿಂಗ ಅವಳ ಯಾಚನೆಯನ್ನು ಧಿಕ್ಕರಿಸುವನು. ಅವಳಿಗೆ ಆದರ್ಶ ಸತಿಧರ್ಮದ ಮಾತುಗಳನ್ನು ಹೇಳುವನು. ಬರಬರುತ್ತ ಅವನ ಏಕಾಕಿ ಜೀವನ, ಕಮಲಾಕ್ಷಿಯ ಚೆಲುವು, ತಾನಾಗಿಯೇ ಮಾಡಿದ ಅವಳ ಪ್ರೇಮಯಾಚನೆ, ದೂತಿಯ ಪ್ರಯತ್ನ ಇವೆಲ್ಲವುಗಳಿಂದ ಚಂಚಲಚಿತ್ತನಾಗಿ ಅವನು, ಕಮಲಾಕ್ಷಿಗೆ ಸೋತು ವಶವಾಗುವನು. ಇತ್ತ ಹಳ್ಳಿಯಲ್ಲಿ, ಊರಿಗೆ ಹೋದ ಗಂಡ ಬರಬೇಕಾದ ದಿನಕ್ಕೆ ಮರಳಿ ಬಾರದುದರಿಂದ ಹೆಂಡತಿ ಜಯವಂತಿ ತುಂಬ ಚಿಂತಿಸುವಳು. ಮಗ ರೂಪಸಿಂಹನೂ ಕಳವಳದಲ್ಲಿರುವನು.

ಹೀಗಿರುವಾಗಲೇ ಅವರಿಗೆ ರಾಮಸಿಂಗ ಕಮಲಾಕ್ಷಿಯನ್ನು ಕೂಡಿಕೊಂಡಿರುವ ಸಂಗತಿ ಗೊತ್ತಾಗುವುದು. ತಾಯಿ ಮಗ ಇಬ್ಬರೂ ಹೊರಟು ರಾಜಧಾನಿಗೆ ಬರುವರು.ಅಲ್ಲಿ ಅವರಿಬ್ಬರೂ ರಾಮಸಿಂಗನನ್ನು ಕಂಡು ಮಾತನಾಡುವರು. ಜಯವಂತಿ ಕಮಲಾಕ್ಷಿಯಲ್ಲಿ ತನ್ನ ಪತಿಭಿಕ್ಷೆಯನ್ನು ಬೇಡುವಳು. ಅವಳು ಸವತಿ ಮತ್ಸರದಿಂದ ಬೇಕಾದ ಹಾಗೆ ಅವಳನ್ನು ಬೈದು ಮಾತನಾಡುವಳು. ರೂಪಸಿಂಗನೂ ಅತ್ತು ಕರೆದು ತಂದೆಯನ್ನು ಊರಿಗೆ ಬರಲು ಬೇಡಿಕೊಳ್ಳುವನು. ರಾಮಸಿಂಗನ ಮನಸ್ಸು ಹೆಂಡತಿ ಮಕ್ಕಳ ಕಡೆಗೆ ಒಲಿಯುತ್ತಲಿದೆ ಎಂಬುದು ಕಮಲಾಕ್ಷಿಗೆ ತಿಳಿಯಲು, ಒಂದು ರಾತ್ರಿ ಮಲಗಿದಾಗ ಕತ್ತಿಯಿಂದ ಇರಿದು ರಾಮಸಿಂಗನನ್ನು ಕೊಲ್ಲುವಳು. ಈ ಸಂಗತಿ ತಿಳಿಯಲು ತಾಯಿ, ಮಗ ಅಲ್ಲಿಗೆ ಬಂದು ತುಂಬ ದುಃಖ ಮಾಡುತ್ತಿರುವರು. ಜಯವಂತಿ ಪತಿವ್ರತೆ, ರೂಪಸಿಂಗ ಸತ್‌ಪುತ್ರ ಇವರಿಬ್ಬರೂ ದೇವರನ್ನು ಪ್ರಾರ್ಥಿಸುವಾಗ, ದೇವರು ಒಬ್ಬ ಸಾಧುವಿನ ವೇಷದಿಂದ ಬಂದು ರಾಮಸಿಂಗನನ್ನು ಬದುಕಿಸುವನು.ಆಟವು ಮುಗಿಯುವದು.

ಈ ಆಟದಲ್ಲಿ ಬರುವ ಹಾಡುಗಳು ಕಥೆಯ ಸಂದರ್ಭಕ್ಕೆ ಉಚಿತವಾಗಿರುವವು. ಮುಮ್ಮೇಳ ಹಿಮ್ಮೇಳದವರೇ ಹಾಡುಗಳನ್ನು ಹೇಳುವರು. ಪಕ್ಕವಾದ್ಯಗಳಾಗಿ ಡಪ್ಪು, ಸಾರಂಗಿಗಳಿರುವವು. ಮಿಕ್ಕ ತಂತ್ರವೆಲ್ಲ 'ರಾಜಾನಾಟ'ದಂತೆಯೆ. ಈ ಆಟವು ಉತ್ತರ ಕರ್ನಾಟಕದ ಉತ್ತರ ಗಡಿಗಳ ಹಳ್ಳಿಗಳಲ್ಲಿ ತುಂಬ ಪ್ರಚಾರದಲ್ಲಿತ್ತು. ಈಗಲೂ ಒಂದೊಂದು ಕಡೆ ಅಪೂರ್ವವಾಗಿ ನೋಡಲು ಸಿಕ್ಕುವದು. ಈ ಕಥೆಯಲ್ಲಿಯೇ ಅಲ್ಪಸ್ವಲ್ಪ ವ್ಯತ್ಯಾಸ ಮಾಡಿಕೊಂಡು, ಬೇರೆ ಒಂದೆರಡು ಬಯಲಾಟಗಳೂ ರಂಗದ ಮೇಲೆ ಬಂದುದುಂಟು" (2014: 270, 271).

ಕರಾವಳಿಯ ಯಕ್ಷಗಾನ ಬಯಲಾಟಗಳ ಬಗೆಗೆ ಬೆಟಗೇರಿಯವರಿಗೆ ಸ್ಪಷ್ಟವಾದ ಅರಿವಿತ್ತು. ಅವುಗಳ ಬಗೆಗೂ ಆಸಕ್ತಿ ತೋರಿ ಬರೆದಿರುವುದನ್ನು ಗಮನಿಸಬಹುದು. ಕರಾವಳಿಯ ಬಯಲಾಟಗಳ ಪಾತ್ರಧಾರಿಗಳು ಸಂಭಾಷಣೆಗಳನ್ನು ಬಾಯಿಪಾಠ ಮಾಡಿ ಒಪ್ಪಿಸುವವರಲ್ಲ. ಕಥಾ ಸಂದರ್ಭದ ಪ್ರಜ್ಞೆಯುಳ್ಳವರಾಗಿ ತಾವೇ ಕಲ್ಪಿಸಿ ಮಾತನಾಡುತ್ತಾರೆ ಎಂಬ ವಾಸ್ತವವನ್ನು ಗುರುತಿಸಿದ್ದಾರೆ. ವಾಸ್ತವ ಜೀವನದ ಕಥಾವಸ್ತುಗಳು ರಂಗಭೂಮಿಯಿಂದ ಬಂದಾಗ ಅವುಗಳನ್ನು 'ಸಣ್ಣಾಟ'ಗಳೆಂದು ಕರೆಯುವ ಸಂಪ್ರದಾಯ ರೂಢಿಗೆ ಬಂತು. ದೇವ ದೇವತೆಗಳ ಲೀಲಾಪ್ರಸಂಗಗಳನ್ನು ಹೇಳುವ ಪೌರಾಣಿಕ ಕತೆಗಳ ಆಟಗಳನ್ನು 'ದೊಡ್ಡಾಟ'ಗಳೆಂದು ಕರೆಯಲಾರಂಭಿಸಿದರು ಎಂಬುದನ್ನು ನಿಖರವಾಗಿ ಹೇಳಿದ್ದಾರೆ.

ಜಾನಪದ ರಂಗಭೂಮಿ ಬೆಳೆದು ಬಂದ ಬಗೆಯನ್ನು ಗುರುತಿಸುವ ಪ್ರತ್ಯೇಕ ಲೇಖನದಲ್ಲಿ ಜಾನಪದ ನಾಟಕಗಳ ಸವಿಸ್ತಾರವಾದ ವಿಶ್ಲೇಷಣೆಯಿದೆ. 'ಕನ್ನಡ ಜನಪದ ಕಥಾ ವಾಹಿನಿ' ಎಂಬ ಲೇಖನದಲ್ಲಿ ಜನಪದರು ಮಕ್ಕಳ ಮನಸ್ಸನ್ನು ಅರಳಿಸುವ ಕುತೂಹಲ ಭರಿತ ಕತೆಗಳನ್ನು ಪೋಣಿಸಿ ಹೇಳುತ್ತಿದ್ದರು ಎಂಬುದನ್ನು ಗುರುತಿಸಿದ್ದಾರೆ.

ಜರ್ಮನಿಯ ಶಿಕ್ಷಣ ತಜ್ಞ ಫ್ರೊಬೆಲನ 'ಕಿಂಡರ್ ಗಾರ್ಟನ್' ಪದ್ಧತಿಯ ಕಲ್ಪನೆ ಕನ್ನಡ ನಾಡಿನ ಜನಪದರಿಗೆ ಇದ್ದಿರಲಿಲ್ಲ. ಲೇಡಿ ಮಾಂಟೆಸೊರಿಯ ಶಿಶು ಶಿಕ್ಷಣ ಪದ್ಧತಿಯ ತಿಳುವಳಿಕೆಯೂ ಇರಲಿಲ್ಲ. ಆದರೂ ಅವರು ಮಕ್ಕಳ ಬುದ್ಧಿ ಮನಸ್ಸುಗಳ ವಿಕಾಸಕ್ಕಾಗಿ ರೂಪಿಸಿದ ಸಾಹಿತ್ಯ ಶಿಶು ಸಾಹಿತ್ಯವನ್ನು ಇಂದಿನ ವಿಮರ್ಶೆಯ ಮಾನದಂಡಗಳಿಂದ

ಪರಿಶೀಲಿಸಿದರೂ ಮೌಲ್ಯಯುತವಾದುದೆಂಬುದು ಸ್ಪಷ್ಟವಾಗುತ್ತದೆ. ಜಾನಪದ ಶಿಶು ಸಾಹಿತ್ಯವನ್ನು ಓದದೆ 'ನಮ್ಮಲ್ಲಿ ಮಕ್ಕಳಿಗೆ ಉಚಿತವೆನಿಸುವ ಸಾಹಿತ್ಯವೇ ಇಲ್ಲ'. ಎಂದು ಹೇಳುವವರು ಅನೇಕ ಜನರಿದ್ದಾರೆ. ಇಂಥವರು ಇಂಗ್ಲೀಷ್ ಶಿಶು ಸಾಹಿತ್ಯದ ಕತೆಗಳನ್ನು ಅನುವಾದಗಳ ರೂಪದಲ್ಲಿ ಕನ್ನಡದಲ್ಲಿ ಬರೆಯುತ್ತಾರೆ. ಇಂಥವುಗಳಲ್ಲಿ ಹೊಸದೇನೂ ಇರುವುದಿಲ್ಲ. ಹೀಗೆ ಜಾನಪದಗಳು ಶಿಶು ಸಾಹಿತ್ಯದ ಬಗೆಗೆ ವಿದ್ವಜ್ಜನರ ಅಲಕ್ಷ್ಯದ ಬಗೆಗೆ, ಅಜ್ಞಾನದ ಬಗೆಗೆ ಕಟುವಾಗಿಯೇ ವಿಮರ್ಶಿಸುವುದನ್ನು ಕಾಣಬಹುದು.

ಬೆಟಗೇರಿಯವರಿಗೆ ಜಾನಪದ ಸಾಹಿತ್ಯದಲ್ಲಿನ ಸಾರಸತ್ವದ ಬಗೆಗೆ ಅಪರಿಮಿತವಾದ ತಿಳುವಳಿಕೆಯಿತ್ತು. ಹಾಗೆಯೇ ಅದಮ್ಯವಾದ ಪ್ರೀತಿಯಿತ್ತು. ಬದುಕಿನ ವಿಕಾಸಕ್ಕೆ ಬೇಕಾದ ವಿಚಾರಗಳನ್ನು, ತಿಳುವಳಿಕೆಯನ್ನು ಜಾನಪದ ಸಾಹಿತ್ಯದಿಂದ ಪಡೆಯಬಹುದು ಎಂಬ ನಂಬಿಕೆಯಿಂದಲೇ ಅವರ ಅನೇಕ ಬರಹಗಳು ಹೃದ್ಯವಾಗಿ ಗಮನ ಸೆಳೆಯುತ್ತವೆ. ಜಾನಪದ ಅವರ ಅನುಭವದ ಭಾಗವಾಗಿ ಬದುಕಿನ ದಾರಿದೀಪವೂ ಆಗಿತ್ತು.

ಪರಾಮರ್ಶನ ಗ್ರಂಥಗಳು

1. ಅಂಗಡಿ ಎಸ್.ಎಸ್(ಡಾ.), (ಸಂ.)(2014), ಬೆಟಗೇರಿ ಕೃಷ್ಣಶರ್ಮರ ಆಯ್ದ ಬರಹಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
2. ನಾಯಕ ಹಾ.ಮಾ (1971, 11ನೆಯ ಮುದ್ರಿಕೆ 2015) ಜಾನಪದ ಸ್ವರೂಪ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ
3. ಪುರುಷೋತ್ತಮ ಬಿಳಿಮಲೆ(ಡಾ.), (ಸಂ) (1997) ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಪಂಪ ಮಹಾಕವಿರಸ್ತೆ, ಬೆಂಗಳೂರು–18
4. ಬೆಟಗೇರಿ ಕೃಷ್ಣ ಶರ್ಮಾ(ಡಾ.), (1976) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
5. ರಾಘವೇಂದ್ರ ಪಾಟೀಲ(1997) ಆನಂದಕಂದ, ಸಾಹಿತ್ಯ ಅಕಾಡೆಮಿ ನವದೆಹಲಿ

❖❖❖

ಬಾನ ಕೋಪದಲ್ಲಿ ಅದ್ದಿ
ನೆಲದ ಜಲವೆ ಕೆಂಪಗಾಗಿ
ಕಡ್ಡಿಕಸಗಳನ್ನು ಬಾಚಿ
ಸೆಳೆಯತೊಡಗಿತು
ಧುಮುಧುಮಿಸುತ ಕೆಳಗೆ ಇಳಿದು
ಮುನಿದುಕೊಂಡ ಮುನಿಯ ತೆರದಿ
ಚಿಮ್ಮಿ ಹರಿಯತೊಡಗಿತು

ವಿಜ್ಞಾನ ಸೃಷ್ಟಿಸುವ ಸತ್ಯದ ಸ್ವರೂಪ ಮತ್ತು ವೈಜ್ಞಾನಿಕ ಮನೋಧರ್ಮ ಎನ್ನುವ ಜನಪ್ರಿಯ ಪರಿಕಲ್ಪನೆ

ಡಾ. ನಾಗೇಶ ಡೂಗನವರ
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇಂಗ್ಲೀಷ್ ವಿಭಾಗ
ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ.

ನಮ್ಮ ಸಂವಿಧಾನದ 42ನೇಯ ತಿದ್ದುಪಡಿಯ ಪರಿಚ್ಛೇದ 51/ಎ ಅನ್ವಯ "ಸೈಂಟಿಫಿಕ್ ಟೆಂಪರ್" ಎನ್ನುವ ಅಂಶವನ್ನು ಅಳವಡಿಸಲಾಗಿದ್ದು ಇದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯಗಳಲ್ಲಿ ಒಂದು. ಇದು ಜಗತ್ತಿನ ಇನ್ನಾವುದೇ ಸಂವಿಧಾನದಲ್ಲಿ ಇಲ್ಲ ಎನ್ನುವುದು ವಿಚಿತ್ರವಾದರೂ ಸತ್ಯವಾದ ಸಂಗತಿ. "ಸೈಂಟಿಫಿಕ್ ಟೆಂಪರ್" ಎನ್ನುವುದನ್ನು ಸ್ಥೂಲವಾಗಿ ನಾವು ವೈಜ್ಞಾನಿಕ ದೃಷ್ಟಿಕೋನ, ವೈಜ್ಞಾನಿಕ ಮನೋಧರ್ಮ ಎಂದು ಅನುವಾದಿಸಬಹುದಾಗಿದೆ. ನಮ್ಮ ಸಂವಿಧಾನದಲ್ಲಿ ಉಲ್ಲೇಖಿಸಿದಂತೆ "ವೈಜ್ಞಾನಿಕ ಮನೋಭಾವವನ್ನು, ಮಾನವೀಯತೆಯನ್ನು, ವಿಚಾರಶೀಲತೆ ಮತ್ತು ಸುಧಾರಣೆಯನ್ನು ಬೆಳೆಸುವುದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯವಾಗಿರುತ್ತದೆ". ನಮ್ಮ ಧಾರ್ಮಿಕ ಆಚರಣೆಗಳು ಹಾಗೂ ಸಾಂಸ್ಕೃತಿಕವಾಗಿರತಕ್ಕಂತಹ ವಿಶಿಷ್ಟವಾದ ಪ್ರಕ್ರಿಯೆಗಳನ್ನು ನಾವು ಮಾಡುವಾಗ ಇಂತಹ ಆಚರಣೆಗಳಿಗೆ ವೈಜ್ಞಾನಿಕ ತಳಹದಿ ಇರಬೇಕೆಂಬುದು ಹಲವು ಪ್ರೊಗ್ರೇಸ್ಸಿವ್ ಬುದ್ಧಿಜೀವಿಗಳ ವಾದವಾಗಿದೆ. ಸಂವಿಧಾನದಲ್ಲಿ ಅಳವಡಿಸಿರುವ "ಸೈಂಟಿಫಿಕ್ ಟೆಂಪರ್" ಎನ್ನುವ ಅಂಶದ ಆಶಯವೂ ಇದೆ ಆಗಿದೆ ಎಂಬುದು ಜನಪ್ರಿಯ ವಾದ. ಮೂಢನಂಬಿಕೆಗಳಿಂದ ನಾವು ಮುಕ್ತರಾಗಬೇಕೆಂಬುದೇನೊ ವೈಜ್ಞಾನಿಕ ಮನೋಧರ್ಮದ ಉದ್ದೇಶವಾಗಿದ್ದರೂ ನಮ್ಮ ಆಚರಣೆಗಳೆಲ್ಲವೂ ಮೂಢನಂಬಿಕೆಗಳಲ್ಲ. ನಾವು ಆಚರಿಸುವ ಹಲವಾರು ಸಂಗತಿಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ವಿಶ್ಲೇಷಿಸುವುದು ಅಥವಾ ವೈಜ್ಞಾನಿಕವಾಗಿ ಸತ್ಯವಾಗಿವೆ ಎಂದು ಸಾಬೀತುಪಡಿಸಲು ಹೆಣಗಾಡುವುದು "ಸೈಂಟಿಫಿಕ್ ಟೆಂಪರ್" ಎನ್ನುವ ಸಂವಿಧಾನದ ಆಶಯಕ್ಕೆ ವಿರುದ್ಧವಾದ ಅವೈಚಾರಿಕ ಪ್ರಯತ್ನ ಎಂಬುದನ್ನು ನಾವು ಅರಿಯಬೇಕಾಗಿದೆ. ಏಕಂದರೆ ಈ ಹಲವಾರು ಆಚರಣೆಗಳು ನಮ್ಮ ಧಾರ್ಮಿಕ ಬದುಕು ಮತ್ತು ಸಂಸ್ಕೃತಿಯ ಫಲಶ್ರುತಿಗಳಾಗಿ ಬಂದಿರುವಂಥಹವುಗಳು. ಇಂಥಹ ಆಚರಣೆಗಳ ಸತ್ಯಾಸತ್ಯತೆಯನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಪರೀಕ್ಷಿಸಿ ಅದು ಸುಳ್ಳು ಅಥವಾ ಸತ್ಯ ಎಂದು ನಿರ್ಣಹಿಯಿಸುವುದು ವಿಜ್ಞಾನದ ಬಗ್ಗೆ ನಮಗೆ ಇರುವ ತಪ್ಪುಗ್ರಹಿಕೆಯ ಕಾರಣಕ್ಕಾಗಿ. ಹುಟ್ಟಿನಿಂದ ಹಿಡಿದು ಸಾಯುವವರೆಗೆ ಹಲವಾರು ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳನ್ನು ನಾವು ಆಚರಿಸುತ್ತೇವೆ. ಮಗು ಹುಟ್ಟಿದಾಗ ಹೆಸರಿಡುವುದು, ಮದುವೆಯ ಸಂಭ್ರಮದಲ್ಲಿ ಹೆಣ್ಣು ಮಕ್ಕಳು ಮದರಂಗಿ ಹಾಕಿಕೊಳ್ಳುವುದು, ಬಸುರಿಗೆ ಸೀಮಂತ ಮಾಡುವುದು, ಕುಂಕುಮ ಧರಿಸುವುದು, ಬಳೆ

ಧರಿಸುವುದು, ದೇವರಿಗೆ ಕೈ ಜೋಡಿಸಿ ನಮಸ್ಕರಿಸುವುದು, ನೈವೇದ್ಯ ಅರ್ಪಿಸುವುದು, ಹಿರಿಯರ ಪಾದಗಳಿಗೆ ಕೈ ಸ್ಪರ್ಶಿಸಿ ನಮಷ್ಕರಿಸುವುದು, ನದಿಗೆ ಬಾಗಿನ ಕೊಡುವುದು, ಪಿತ್ರು ಪಕ್ಷದ ಆಚರಣೆ ಇತ್ಯಾದಿ ಇತ್ಯಾದಿ. ಇಂತಹ ಹತ್ತು ಹಲವು ವಿಶಿಷ್ಟ ಸಾಂಸ್ಕೃತಿಕ–ಧಾರ್ಮಿಕ ಆಚರಣೆಗಳನ್ನು ನಾವು ವೈಜ್ಞಾನಿಕ ಮಾಪನದಿಂದ ಅಳೆದು ತೂಗಿ ಇದು ವೈಜ್ಞಾನಿಕವಾಗಿ ಸತ್ಯವಾಗಿವೆ ಎಂದು ಹೇಳಲಾಗದು. ಹಾಗಾದರೆ ಯಾವುದನ್ನು ನಾವು ವೈಜ್ಞಾನಿಕವಾಗಿ ಸತ್ಯವಾಗಿದೆ ಎಂದು ಪ್ರೂವ್ ಮಾಡಲು ಸಾಧ್ಯವಿಲ್ಲವೊ ಅದೆಲ್ಲವೂ ಸುಳ್ಳು ಎಂದೊ ಅಥವಾ ಮೂಢ ನಂಬಿಕೆ ಎಂದೊ ಪರಿಗಣಿಸಬೇಕೆ?

ಇತ್ತೀಚಿಗೆ ವಾಟ್ಸ್‌ಆಪ್ ಅಲ್ಲಿ ಇಂತಹ ಹಲವಾರು ಸುದ್ದಿಗಳು ಹರಿದಾಡುತ್ತಿವೆ. ನಾವು ದೇವರಿಗೆ ನಮಷ್ಕರಿಸುವಾಗ ಅಥವಾ ಪ್ರಾರ್ಥನೆ ಮಾಡುವಾಗ **"ಕೈ ಜೋಡಿಸುವಲ್ಲಿ"** ಏನಾದರೂ ವೈಜ್ಞಾನಿಕ ಸತ್ಯ ಇರಬಹುದೆ? ನಾವು ಆಚರಿಸುವ ಹಬ್ಬ ಹರಿದಿನಗಳಲ್ಲಿ ವಿಶೇಷವಾಗಿ ಮಾವಿನ ತಳಿರು ತೋರಣ ಹಾಕುವುದರಲ್ಲಿ ವೈಜ್ಞಾನಿಕ ಸತ್ಯ ಇರಬಹುದೆ? ಇತ್ಯಾದಿ ಇತ್ಯಾದಿ. ಮಾವಿನ ಎಲೆಗಳ ಬಳಕೆಯ ಪ್ರಸ್ತುತತೆಯನ್ನು ಹೀಗೆ ವೈಜ್ಞಾನಿಕವಾಗಿ ವಿಶ್ಲೇಸಿಸುವ ಸುದ್ದಿಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚಿಗೆ ಹೀಗೆ ಬಿತ್ತರಗೊಂಡಿತ್ತು. ಮಾವಿನ ಎಲೆಗಳು ಕಿತ್ತ ನಂತರವೂ ಎರಡು ದಿನಗಳ ಕಾಲ ಆಮ್ಲಜನಕವನ್ನು ಹೊರಸೂಸುತ್ತವೆ ಎಂದು ಇತ್ತೀಚಿಗೆ ವೈಜ್ಞಾನಿಕವಾಗಿ ಸಾಬೀತಾಗಿದೆ ಎಂಬುದು. ಹಬ್ಬ ಹರಿದಿನಗಳಲ್ಲಿ ಮನೆಯಲ್ಲಿ ನೆಂಟರಿಷ್ಟರು ತುಂಬಾ ಇರುವುದರಿಂದ ಮನೆಯ ಗಾಳಿಯನ್ನು ಶುದ್ಧೀಕರಿಸಿ ಹೆಚ್ಚು ಹೆಚ್ಚು ಆಮ್ಲಜನಕವನ್ನು ಮಾವಿನ ಎಲೆಗಳು ಹೊರಸೂಸುತ್ತವೆ. ಆದ್ದರಿಂದ ಮಾವಿನ ಎಲೆಗಳನ್ನು ಜನ ಹಬ್ಬಗಳಲ್ಲಿ ಬಳಸುತ್ತಾರೆ. ಈ ಇಡೀ ವಿವರಣೆಯಲ್ಲಿ ಬಹಳ ವಿಶೇಷ ಅಂದರೆ ನಮ್ಮ ಪೂರ್ವಜರಿಗೆ ಮಾವಿನ ಎಲೆಗಳ ಹಿಂದಿರುವ ವಿಜ್ಞಾನ ತಿಳಿದಿತ್ತು ಎಂಬುದು. ಆದ್ದರಿಂದ ನಮ್ಮ ಪೂರ್ವಜರ ವೈಜ್ಞಾನಿಕ ಜ್ಞಾನದ ಅರಿವು ನಮಗೆ ಹೆಮ್ಮೆ ಮೂಡಿಸಬೇಕೆಂಬುದು. ಅಂದರೆ ನಮ್ಮ ಪೂರ್ವಜರ ಜ್ಞಾನವನ್ನು ಪಾಶ್ಚಾತ್ಯ ವಿಜ್ಞಾನದೊಂದಿಗೆ ಸಮೀಕರಿಸಿದಾಗ ಮಾತ್ರ ನಮ್ಮ ಪೂರ್ವಜರು ಸೃಷ್ಟಿಸಿದ ಜ್ಞಾನಕ್ಕೆ ಬೆಲೆ ಇದೆ ಎಂದರ್ಥವಲ್ಲವೆ? ಹಾಗಾದರೆ ಮಾವಿನ ಎಲೆಗಳು ಆಮ್ಲಜನಕವನ್ನು ಹೊರಸೂಸುವುದಿಲ್ಲ ಎಂದು ವೈಜ್ಞಾನಿಕವಾಗಿ ಸಾಬೀತಾಗಿದ್ದರೆ ಈ ಆಚರಣೆಯನ್ನು ನಾವು ಕೈ ಬಿಡಬೇಕೆ?

ಇಂತಹ ಹಲವಾರು ಆಚರಣೆಗಳನ್ನ ಭಾರತೀಯರಾದ ನಾವು ಮಾತ್ರ ಅಲ್ಲ ಜಗತ್ತಿನಾದ್ಯಂತ ಬೇರೆ ಬೇರೆ ಸಮುದಾಯಗಳ ಜನರು ಬೇರೆ ಬೇರೆ ನಾಗರೀಕತೆಗಳ ಇತಿಹಾಸದಲ್ಲಿ ಅಷ್ಟೇ ಏಕೆ ಇಂದಿಗೂ ಆಚರಿಸುತ್ತ ಬಂದಿರುವುದನ್ನು ನಾವು ಕಾಣಬಹುದಾಗಿದೆ. ಇಂತಹ ಹಲವಾರು ಆಚರಣೆಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಬೇಕೆಂಬುದರ ಒಳಾರ್ಥ ಇಷ್ಟೆ. ವಿಜ್ಞಾನ ಸತ್ಯವನ್ನು ಹೇಳುತ್ತದೆ. ಆದ್ದರಿಂದ ನಾವು ನಮ್ಮ ಆಚರಣೆಗಳನ್ನು ಸತ್ಯದ ನೆಲೆಗಟ್ಟಿನಲ್ಲಿ ನೋಡಬೇಕು. ಆದ್ದರಿಂದ ನಾವು ಮಾಡುವ ಆಚರಣೆಗಳು ವೈಜ್ಞಾನಿಕವಾಗಿ ಸತ್ಯವಾಗಿವೆ ಎಂದು ತೋರಿಸುವ ಸಂಸ್ಕೃತಿಯೊಂದು ತಲೆಯೆತ್ತಿ ನಿಂತಿದೆ ಇಂದು.

ಆದರೆ ವಿಜ್ಞಾನ ಸೃಷ್ಟಿಸುವ ಸತ್ಯದ ಸ್ವರೂಪ ಎಂಥಹುದು ಎಂದು ನಾವು ಚಿಂತನೆ ಮಾಡುತ್ತ ಹೋದರೆ ನಮಗೆ ಗೋಚರಿಸುವುದೇನು? ವಿಜ್ಞಾನದ ಇತಿಹಾಸದ ಪುಟಗಳನ್ನು ನಾವು ಮರುಭೇಟಿ ಮಾಡುವುದಾದರೆ, ಒಂದು ಕಾಲಘಟ್ಟದಲ್ಲಿ ವಿಜ್ಞಾನ

ಕಂಡುಕೊಂಡ ಸತ್ಯಗಳು ಅಥವಾ ವೈಜ್ಞಾನಿಕ ಸಿದ್ಧಾಂತಗಳು ಅದರ ಇತಿಹಾಸದ ಪುಟಗಳಲ್ಲಿ ಸಮಾಧಿಯಾಗಿ ಇನ್ಯಾವುದೊ ಸತ್ಯದ ಅಥವ ಸಿದ್ಧಾಂತದ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಉದಾಹರಣೆಗೆ ಕೊಪರ್ನಿಕಸ್‌ನಿಗಿಂತ ಮೊದಲು ಜನ ಭೂಮಿ ನಮ್ಮ ಸೌರಮಂಡಲದ ಕೇಂದ್ರ ಎಂದು ತಿಳಿದಿದ್ದರು. ಆದರೆ ಕೊಪರ್ನಿಕಸ್ ಸೂರ್ಯ ಕೇಂದ್ರಿತ ಸೌರ ಮಂಡಲದ ಮಾದರಿಯನ್ನು ಕೊಟ್ಟ. ನವಗ್ರಹಗಳ ನಮ್ಮ ನಂಬಿಕೆಯನ್ನು ವಿಜ್ಞಾನಿಗಳು ಸುಳ್ಳಾಗಿಸಿ ಪ್ಲೂಟೋ ಇನ್ನುಳಿದ ಗ್ರಹಗಳ ಲಕ್ಷಣಗಳನ್ನು ಹೊಂದಿಲ್ಲವಾದ್ದರಿಂದ ಅದು ಕುಬ್ಜ ಗ್ರಹ ಎಂದು ತೀರ ಇತ್ತೀಚಿಗೆ ಹೇಳಿದ್ದಾರೆ. ಅಂದರೆ ಇಂದು ಮಾನ್ಯ ಮಾಡಿರುವ ವೈಜ್ಞಾನಿಕ ಸಿದ್ಧಾಂತ ಬೇರೆ ಹಲವಾರು ಸಿದ್ಧಾಂತಗಳಿಗಿಂತ ಹೆಚ್ಚು ರಿಲಾಯೇಬಲ್ ಅನ್ನುವ ಕಾರಣಕ್ಕಾಗಿಯೇ ಹೊರತು ಅದು ನಮ್ಮ ಪ್ರಪಂಚದ ಬಗ್ಗೆ ಆತ್ಯಂತಿಕವಾದ ಸತ್ಯವೊಂದನ್ನು ಹೇಳುತ್ತದೆ ಎಂದಲ್ಲ. ಬದಲಾಗಿ ನಾವು ಮಾನ್ಯ ಮಾಡಿರುವ ವೈಜ್ಞಾನಿಕ ಸಿದ್ಧಾಂತವು ಅದನ್ನು ವಿರೋದಿಸಬಹುದಾದ ಬೇರೆ ಸಿದ್ಧಾಂತಗಳ ಅನುಪಸ್ಥಿತಿಯಲ್ಲಿ ದೃಢೀಕರಿಸಲ್ಪಟ್ಟಿದೆ ಎಂದರ್ಥ. ಮುಂದೊಂದು ದಿನ ಹೊಸ ಸಿದ್ಧಾಂತ ಈಗ ನಾವು ಮಾನ್ಯೀಕರಿಸಿರುವ ಸಿದ್ಧಾಂತವನ್ನು ಸುಳ್ಳೆಂದು ಸಾಬೀತುಪಡಿಸಬಹುದು. ವಿಜ್ಞಾನದ ತತ್ವಜ್ಞಾನಿ ಕಾರ್ಲ್ ಪಾಪರ **"ಫಾಲ್ಸಿಫಾಯೆಬಿಲಿಟಿ"** ಎನ್ನುವುದು ನೈಜ ವಿಜ್ಞಾನದ ಗುಣಲಕ್ಷಣವಾಗಿದೆ ಎಂದು ಹೇಳುತ್ತಾನೆ. ಅಂದರೆ ಒಂದು ವೈಜ್ಞಾನಿಕ ಸಿದ್ಧಾಂತ ಮುಂದೊಂದು ದಿನ ಸುಳ್ಳೆಂದು ಸಾಬೀತುಪಡಿಸಬಹುದಾದ ಗುಣವನ್ನು ತನ್ನೊಳಗೆ ಹೊಂದಿದೆ. ಆದ್ದರಿಂದ ನಾವು ಇಂದು ನಂಬಿರುವ ವೈಜ್ಞಾನಿಕ ಆವಿಷ್ಕಾರಗಳು ಅಥವಾ ಸಿದ್ಧಾಂತಗಳು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಪ್ರಕ್ರಿಯೆಗಳೇ ಹೊರತು ಪರಿಪೂರ್ಣತೆಯಿಂದ ಕೂಡಿದ ಅಥವಾ ಸಾರ್ವಕಾಲಿಕ ಸತ್ಯವೊಂದನ್ನು ನಮಗೆ ಕಟ್ಟಿಕೊಡುತ್ತವೆ ಎಂದಲ್ಲ.

ಈ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯರಿಂದ ಬಂದ ಜ್ಞಾನಶಾಖೆಯಾದ ವಿಜ್ಞಾನವನ್ನು ನಾವು ಈ ಜಗತ್ತನ್ನು ಅರ್ಥೈಸಿಕೊಳ್ಳುವ ಹಲವು ಜ್ಞಾನಮಾರ್ಗಗಳಲ್ಲಿ ಒಂದು ಎಂದು ಪರಿಭಾವಿಸಬೇಕೇ ಹೊರತು ಭಾರತವನ್ನೂ ಒಳಗೊಂಡಂತೆ ಬೇರೆ ಬೇರೆ ದೇಶಗಳ ಜನ ಸಮುದಾಯಗಳು ನಾಗರೀಕತೆಗಳು ಕಂಡುಕೊಂಡ ಜ್ಞಾನಶಾಖೆಗಳಿಗೆ ವಿಜ್ಞಾನವೇ ಪ್ರಮಾಣ ಅಲ್ಲ. ಹಾಗೆಯೇ ನಮ್ಮ ಸಂಸ್ಕೃತಿಗೆ ವಿಶಿಷ್ಟ ಎನಿಸಿರುವ ಹಲವಾರು ಆಚರಣೆಗಳನ್ನು ವಿಜ್ಞಾನದ ಹಿನ್ನೆಲೆಯಲ್ಲಿ ವಿಶ್ಲೇಸಿಸುವ ಅಥವ ಸಮರ್ಥಿಸಿಕೊಳ್ಳುವ ಅನುಚಿತ ಅಭ್ಯಾಸದಿಂದ ನಾವು ಹೊರಬಂದರೆ ನಮ್ಮ ಬದುಕು ಹೆಚ್ಚು ಅರ್ಥಪೂರ್ಣವಾಗುತ್ತದೆ.

❖❖❖

ಕನ್ನಡದಲ್ಲಿ ಗದ್ಯಸಾಹಿತ್ಯ

ಡಾ. ಪಾಟೀಲ ಶ್ರೀಕಾಂತ ವಿ.
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜು, ಬೀದರ

ಕನ್ನಡ ಸಾಹಿತ್ಯದಲ್ಲಿ ಗದ್ಯ ಮೊದಲೋ? ಪದ್ಯ ಮೊದಲೋ? ಎಂದು ಬಗೆದು ನೋಡಿದರೆ ಕನ್ನಡ ಗದ್ಯ ದೊರಕಿರುವ ಮೊಟ್ಟಮೊದಲ ದಾಖಲೆ ಸುಮಾರು ಕ್ರಿ.ಶ. 450ರ ಹಲ್ಮಿಡಿ ಶಾಸನ. ಆದರೆ ಇಲ್ಲಿನ ಗದ್ಯವೇನೂ ಹೇಳಿಕೊಳ್ಳುವಂಥದಲ್ಲ. ಇದನ್ನು ನೋಡಿದಾಗ ಕನ್ನಡ ಅದೇ ತಾನೇ ಪಂಡಿತರ ಮನ್ನಣೆಯನ್ನು ಪಡೆದು ಬೆಳಕಿಗೆ ಬರುತ್ತಿತ್ತು ಎಂದೆನಿಸುವುದು. ಪ್ರಾರಂಭ ಕಾಲದಿಂದಲ್ಲೇ ಗದ್ಯ ಸಾಹಿತ್ಯವು ಕನ್ನಡದಲ್ಲಿ ಮೈದಳೆದರೂ ಪದ್ಯದಷ್ಟು ಹುಲುಸಾಗಿ ಬೆಳೆಯಲಿಲ್ಲ ಎಂಬುದು ಗಮನಿಸಬೇಕಾದ(20ನೆಯ ಶತಮಾನದ ಸಾಹಿತ್ಯವನ್ನು ಹೊರತುಪಡಿಸಿ) ಸಂಗತಿ. ಅಲ್ಲದೆ ಗದ್ಯವು ಕವಿಗಳ ಒರೆಗಲ್ಲು ಎಂಬ ಮಾತು ರೂಢಿಯಲ್ಲಿದ್ದರೂ ಶಾಸ್ತ್ರ ವಿಚಾರಗಳನ್ನು, ಜೋತಿಷ್ಯ, ಗಣಿತ, ಅಶ್ವಶಾಸ್ತ್ರ, ವೈದ್ಯಶಾಸ್ತ್ರ ಇತ್ಯಾದಿಗಳನ್ನೂ ಪದ್ಯದಲ್ಲಿಯೇ ಬರೆದಿದ್ದಾರೆ. ಇದಕ್ಕೆಲ್ಲಾ ಏನು ಕಾರಣವಿರಬಹುದು? ಪದ್ಯದಲ್ಲಿದ್ದರೆ ಕಂಠಸ್ಥ ಮಾಡಿ ನೆನಪಿನಲ್ಲಿಡುವುದು ಸುಲಭ ಎಂಬ ಸಂಗತಿಯಾಗಿರಬಹುದೇ?

ಹಲ್ಮಿಡಿ ಶಾಸನದ ಕಾಲದಿಂದ ಕವಿರಾಜಮಾರ್ಗದವರೆಗೆ ದೊರಕುವ ಕನ್ನಡ ಶಾಸನಗಳು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯೆ. ಅವುಗಳಲ್ಲಿ ಬಳಕೆಗೊಂಡ ಗದ್ಯವೂ ಸತ್ತ್ವ ಮತ್ತು ಸಾಂದ್ರತೆಯ ದೃಷ್ಟಿಯಿಂದ ಅಷ್ಟಕಷ್ಟೆ.

ಕವಿರಾಜಮಾರ್ಗ ಕನ್ನಡದ ಮೊಟ್ಟಮೊದಲ(ಕ್ರಿ.ಶ.850) ಉಪಲಬ್ಧ ಕೃತಿ. ಇದೊಂದು ಲಕ್ಷಣಗ್ರಂಥ. ಅಲ್ಲದೆ ಕನ್ನಡ ನಾಡು, ನುಡಿ, ನಾಡವರ ಬಗೆಗೆ ಐತಿಹಾಸಿಕ ದಾಖಲೆಯನ್ನು ನೀಡುವ ಮೇರುಕೃತಿ. ಹೀಗಾಗಿ ಕವಿರಾಜಮಾರ್ಗಕಾರ ಕನ್ನಡ ನುಡಿಯನ್ನು ವಿಮಲ, ಉದಯ, ನಾಗಾರ್ಜುನ, ಜಯಬಂಧು ಮತ್ತು ದುರ್ವಿನೀತಾದಿ ಹೆಸರಾಂತ ಗದ್ಯಕವಿಗಳು ದುಡಿಸಿಕೊಂಡು ಬೆಳಸುಗೈದ ಬಗ್ಗೆ ಉಲ್ಲೇಖಿಸುತ್ತಾನೆ. ಆದರೆ ಕಾಲನ ಕಾಲ್ತುಳಿತಕ್ಕೆ ಸಿಕ್ಕಿ ಅವು ನಾಶವಾಗಿರಲಿಕ್ಕೆ ಸಾಕು.

ಹೀಗಾಗಿ ಉಪಲಬ್ಧ ಕನ್ನಡ ಸಾಹಿತ್ಯದಲ್ಲಿ ಗದ್ಯ ಸಾಹಿತ್ಯವು ಕಾಣಿಸಿಕೊಂಡ ಬಗೆಗನುಗುಣವಾಗಿ ಅಧ್ಯಯನದ ದೃಷ್ಟಿಯಿಂದ ಈ ಕೆಳಕಂಡಂತೆ ವಿಭಜಿಸಬಹುದು.

1. ಗದ್ಯ (ಸಂಪೂರ್ಣ) ಕೃತಿಗಳು.
2. ಚಂಪೂ, ರಗಳೆ ಮತ್ತು ಉಗಾಭೋಗಗಳಲ್ಲಿ ಗದ್ಯ ಬಳಕೆಯಾದ ಕೃತಿಗಳು.
3. ಪದ್ಯಗಂಧಿಯಾದ ಗದ್ಯ (ವಚನ) ಕೃತಿಗಳು.

ನಮಗೆ ಸಿಕ್ಕಿರುವ ಆದಿ ಗದ್ಯಗ್ರಂಥ 'ವಡ್ಡಾರಾದನೆ'ಯೆಂಬ ಹೆಸರಿನಿಂದ ಗುರುತಿಸಲ್ಪಡುವ 'ಆರಾಧನಾ ಕರ್ಣಾಟಟೀಕೆ'. ಇದರ ಕರ್ತೃ ಶಿವಕೋಟ್ಯಾಚಾರ್ಯನೆಂದು ನಂಬಲಾಗಿದ್ದರೂ 'ಭ್ರಾಜಿಷ್ಣು' ಎಂದು ಸ್ಥಿರೀಕರಿಸಲಾಗಿದೆ(ವಡ್ಡಾರಾದನೆ: ಸಮಗ್ರಅಧ್ಯಯನ, ಅನುಬಂಧ–3, ಪುಟ–422–434, ಲೇಖಕರು–ಹಂಪ

ನಾಗರಾಜಯ್ಯ, ಮುದ್ರಣ–1999). ಕಾಲ 920. ಇದೊಂದು ಕಥಾಗುಚ್ಛ. ಇದರಲ್ಲಿ ಬಳಕೆಯಾದ ಭಾಷೆ, ತಂತ್ರ, ಶೈಲಿಯನ್ನು ಗಮನಿಸಿದರೆ ಇದಕ್ಕೂ ಪೂರ್ವದಲ್ಲಿ ಗದ್ಯ ಸಾಹಿತ್ಯವು ಪ್ರಫುಲ್ಲವಾಗಿ ಬೆಳೆದಿದ್ದಿರಬೇಕು ಎನ್ನಿಸುತ್ತದೆ. ಹೀಗಾಗಿ ಗದ್ಯ ಸಾಹಿತ್ಯವು 9ನೆಯ ಶತಮಾನದ ಆದಿಯಲ್ಲಿಯೇ ನಿರಾತಂಕವಾಗಿ ಬೆಳೆಯಲು ಅನುವಾಯಿತು.

'ಚಾವುಂಡರಾಯ ಪುರಾಣ'ವು ವಡ್ಡಾರಾಧನೆ ಸಿಗುವುದಕ್ಕೂ ಮೊದಲು ಕನ್ನಡದ ಆದಿ ಗದ್ಯಕೃತಿ ಎಂಬ ಕೀರ್ತಿಗೆ ಭಾಜನವಾಗಿತ್ತು. ವಡ್ಡಾರಾಧನೆ ದೊರೆತ ಮೇಲೆ ಆ ಕೀರ್ತಿ ಇದಕ್ಕೆ ಇಲ್ಲವಾದರೂ, ಅದರ ಆನಂತರದ ಸ್ಥಾನವನ್ನು ಕಾಲದ ದೃಷ್ಟಿಯಿಂದ ಮತ್ತು ಗುಣದ ದೃಷ್ಟಿಯಿಂದ ಪಡೆಯುವುದರಲ್ಲಿ ಸಂದೇಹವಿಲ್ಲ. ಈ ಕೃತಿಯ ಹೆಸರು "ತ್ರಿಷಷ್ಟಿಲಕ್ಷಣ ಮಹಾಪುರಾಣ". ಇದರ ಕರ್ತೃ ಚಾವುಂಡರಾಯ, ಕಾಲ 978.

ಹಸ್ತಿಮಲ್ಲಿಷೇಣಾಚಾರ್ಯ ವಿರಚಿತ "ಪೂರ್ವ ಪುರಾಣವು" ಆದಿಪುರಾಣವನ್ನು ಹೋಲುತ್ತದೆ. ಇಲ್ಲಿನ ಭಾಷೆಯಲ್ಲಿ ಅಚ್ಚಗನ್ನಡದ ಬಿಗುವು ವ್ಯಾವಹಾರಿಕ ಕನ್ನಡದ ಶೈಥಿಲ್ಯವೂ ಕಂಡು ಬರುತ್ತದೆ. ಇದರ ಕಾಲ ಸುಮಾರು 12ನೆಯ ಶತಮಾನದ ಅಂತ್ಯವೆಂದು ಗುರುತಿಸಲಾಗಿದೆ.

ಹೀಗೆ ಹತ್ತನೆಯ ಶತಮಾನದ ಆದಿಯಲ್ಲಿ 'ವಡ್ಡಾರಾಧನೆ', ಅಂತ್ಯದಲ್ಲಿ 'ತ್ರಿಷಷ್ಟಿಲಕ್ಷಣ ಮಹಾಪುರಾಣ' ಮತ್ತು 12ನೆಯ ಶತಮಾನದ ಅಂತ್ಯದಲಿ 'ಪೂರ್ವ ಪುರಾಣ' ದೊರಕಿದ್ದನ್ನು ಬಿಟ್ಟರೆ, ಸುಮಾರು 12ನೆಯ ಶತಮಾನದವರೆಗೆ ಗದ್ಯ ಗ್ರಂಥಗಳು ತಮ್ಮ ಲೋಪತೆಯನ್ನು ತೋರ್ಪಡಿಸುತ್ತವೆ. ಅಷ್ಟೇ ಅಲ್ಲದೆ ಕನ್ನಡ ಸಾಹಿತ್ಯವು ಆರಂಭದಲ್ಲಿ ಉತ್ತರದಲ್ಲಿಂದ ಹೊರಟು ಮಧ್ಯದಲ್ಲಿ ವಿಜಯನಗರದಲ್ಲಿ ಕೆಲಕಾಲ ತಂಗಿದ್ದೂ ಮೈಸೂರಿಗೆ ಬಂದಂತೆ ತನ್ನ ಕ್ರಿಯಾಭೂಮಿಯು ಸ್ಥಳಾಂತರಗೊಂಡುದನ್ನು ನಿರ್ದೇಶಿಸುತ್ತದೆ.

ಹತ್ತನೆಯ ಶತಮಾನದ ನಂತರ, ಕ್ರಿ.ಶ. 12ನೆಯ ಶತಮಾನದವರೆಗೆ ಗದ್ಯ ಗ್ರಂಥಗಳು ವಿರಳವಾದರೂ ಗದ್ಯದ ಬಳಕೆ ಮಾತ್ರ ನಿಲ್ಲಲಿಲ್ಲ. ಚಂಪೂ ಕವಿಗಳು ತಮ್ಮ ಕೃತಿಗಳಲ್ಲಿ ಗದ್ಯವನ್ನು ಕಥಾ ನಿರೂಪಣೆಗೆ, ಸಂಗ್ರಹಕ್ಕೆ ಮತ್ತು ವರ್ಣನೆಗೆ ಬಳಸಿಕೊಂಡಿದ್ದಾರೆ. ಪಂಪನು ಬಳಸಿದ ಗದ್ಯದ ರೀತಿ ಉಳಿದ ಕವಿಗಳಿಗೆ ಆದರ್ಶಪ್ರಾಯವಾಗಿದೆ. ಆದರೆ ಮುಂದೆ ಬಂದಂತಹ ಚಂಪೂ ಕವಿಗಳು ಅಷ್ಟೊಂದು ಒಳ್ಳೆಯ ರೀತಿಯಿಂದ ಗದ್ಯವನ್ನು ದುಡಿಸಿಕೊಳ್ಳಲಿಲ್ಲ. ಹನ್ನೆರಡು ಹದಿಮೂರನೆಯ ಶತಮಾನಕ್ಕೆ ಚಂಪೂ ಕೃತಿಗಳೇ ಅವಗತಿಯ ದಾರಿಯಲ್ಲಿದ್ದುದರಿಂದ ಗದ್ಯಕ್ಕೆ ಸಹಜವಾಗಿಯೇ ಅದೇ ಸ್ಥಿತಿಯೊದಗಿತು.

ಆದರೆ ಈ ಸ್ಥಿತಿಯಲ್ಲಿ ಕನ್ನಡ ಸಾಹಿತ್ಯ ಬಹುಕಾಲ ಇರಬೇಕಾಗಲಿಲ್ಲ. 12ನೆಯ ಶತಮಾನವು ಬಹುಕ್ಷೇತ್ರಗಳಲ್ಲಿ ಕ್ರಾಂತಿಯನ್ನೆಸಗಿದ ವೈಚಾರಿಕ ಕಾಲ. ಹೀಗಾಗಿ ಈ ಅವಧಿಯಲ್ಲಿ ಪದ್ಯಗಂಧಿಯಾದ ಗದ್ಯವು ಗದ್ದುಗೆಯನ್ನೇರಿದ ಸುವರ್ಣ ಕಾಲವೆನ್ನಬಹುದು. ಈ ಒಂದು ಸಂತೋಷ ಗದ್ಯಕ್ಕೆ ಬಹುಕಾಲ ದಕ್ಕಲಿಲ್ಲ. ಮಧುರ ಸ್ವಪ್ನವೊಂದರಂತೆ ಅದೃಶ್ಯವಾಯಿತು. ಬಹುಶಃ ಕಲ್ಯಾಣದಲ್ಲಿ ನಡೆದ ರಾಜಕೀಯ ಕ್ರಾಂತಿಯಿಂದಾಗಿ ವಚನಕಾರರು ಕಂಗೆಟ್ಟು ಚದುರಿದರು. ಅವರ ಜೊತೆಯಲ್ಲಿಯೆ ವಚನಗಳು ದಿಕ್ಕು ಪಾಲಾದವು. ಮುಂದೆ ವಚನಗಳ ಸಂಕಲನ ಕಾರ್ಯ ನಡೆಯಿತೇ ಹೊರತು ಸೃಷ್ಟಿಕಾರ್ಯ ಅಷ್ಟಾಗಿ ನಡೆಯಲಿಲ್ಲ; ನಡೆದರೂ ಅದು ಗಣನೀಯವಾಗಿಲ್ಲ.

ವಚನಗಳ ಆನಂತರ, ಗದ್ಯವು ರಗಳೆಗಳಲ್ಲಿ ಮತ್ತು ಉಗಾಭೋಗಗಳಲ್ಲಿ

ಕಾಣಿಸತೊಡಗಿತು. ರಗಳೆಯ ಸಂಸ್ಥಾಪನಾಚಾರ್ಯನೆಂದು ಕರೆಯಲ್ಪಡುವ ಹರಿಹರನು ರಗಳೆಗಳಲ್ಲಿ ಗದ್ಯವನ್ನು ರಗಳೆಯಷ್ಟೇ ಪ್ರಧಾನವಾಗಿ ತಂದಿದ್ದಾನೆ. ಆದರೆ ಒಂದು ಸ್ಥಲದಲ್ಲಿ ರಗಳೆಯನ್ನೂ ಇನ್ನೊಂದು ಸ್ಥಲದಲ್ಲಿ ಗದ್ಯವನ್ನು ತಂದಿದ್ದಾನೆ. ಹರಿಹರನ ನಂತರ ರಗಳೆಯನ್ನು ಯಾರೂ ಬಳಸಲಿಲ್ಲ. ವಿಧಿಯ ಅಣಕವೊ ಏನೊ, ಗದ್ಯವನ್ನು ಪುರಸ್ಕರಿಸಿದ ಕನ್ನಡದ ಸಾಹಿತ್ಯ ಪ್ರಕಾರಗಳು ಸಂಕಷ್ಟಕ್ಕೊಳಗಾದವು.

ಆದರೆ ಮೈಸೂರು ಒಡೆಯರ ಆಶ್ರಯದಲ್ಲಿ ಅದಕ್ಕೆ ವಿಶೇಷವಾದ ಪ್ರೋತ್ಸಾಹ ಸಿಕ್ಕಿತು. 17ನೆಯ ಶತಮಾನವು ಕನ್ನಡ ಸಾಹಿತ್ಯದ ಪುನರುತ್ಥಾನದ ಕಾಲವೆನ್ನಬಹುದು. ಗ್ರಂಥಸ್ಥವಾಗಿದ್ದ ಹಳಗನ್ನಡವನ್ನು ಅಭ್ಯಾಸದಿಂದ ತಮ್ಮದನ್ನಾಗಿಸಿಕೊಂಡು ಕೃತಿ ರಚಿಸಿದರು. ಮಹಾತ್ಮೆಗಳು ಎಂಬ ಹೊಸ ಪ್ರಕಾರವು ರೂಪುಗೊಂಡಿತು. ಇವು ಬಹುತೇಕ ಗದ್ಯ ಕೃತಿಗಳು.

ಒಡೆಯರ ಕಾಲಕ್ಕೆ ಗಣನೀಯ ಕೃತಿಗಳು ರಚಿಸಿರುವವರಲ್ಲಿ ತಿರುಮಲಾರ್ಯ ಒಬ್ಬ. ಇವನು ಅನೇಕ ಗದ್ಯ ಗ್ರಂಥಗಳನ್ನು ರಚಿಸಿದ್ದಾನೆ. ಅಲ್ಲದೆ ಕೆಂಪುನಾರಾಯಣ ಮತ್ತು ಅಳಿಯ ಲಿಂಗರಾಜರೂ ಈ ಕಾಲಕ್ಕೆ ಸೇರಿದವರೇ. ಚಿಕ್ಕದೇವರಾಯ ವಂಶಾವಳಿ, ಚಿಕ್ಕದೇವರಾಜಬಿನ್ನಪ, ರಾಜಾವಳೀ ಕಥೆ ಮತ್ತು ಮುದ್ರಾಮಂಜೂಷ ಮುಂತಾದವುಗಳು ಈ ಘಟ್ಟದಲ್ಲಿ ಹೆಸರಿಸುವಂತಹ ಕೃತಿಗಳು.

ಆನಂತರ ಕೇಳಿಸುವಂತಹದ್ದು "ಪದ್ಯಂ ವದ್ಯಂ ಗದ್ಯಂ ಹೃದ್ಯಂ" ಎಂಬ ಘೋಷಣೆ. ಅದು ಬಂದುದು ಮುದ್ದಣನ "ರಾಮಾಶ್ವಮೇಧಂ"ನಲ್ಲಿ. 19ನೆಯ ಶತಮಾನದ ಅಂತ್ಯದಲ್ಲಿ ರಚಿತವಾದ ಇವನ ಸಾಹಿತ್ಯವು ವೈವಿಧ್ಯದಿಂದ ಕೂಡಿರುವಂತಹದು. ಅದ್ಭುತರಾಮಯಣ ಮುದ್ದಣನ ಮತ್ತೊಂದು ಗದ್ಯಕೃತಿ "...ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ" ಎಂದು ಸಾರಿದ ಮುದ್ದಣನು ತಕ್ಕಮಟ್ಟಿಗೆ ಅದನ್ನು ಸಾಧಿಸಿದ್ದನ್ನು ಗಮನಿಸಬೇಕು.

ಇನ್ನೂ 20ನೆಯ ಶತಮಾನದ ಸಾಹಿತ್ಯದಲ್ಲಿ ಗದ್ಯವು ಗರಿಗೆದರಿ ಹಾರುವುದನ್ನು ಕಾಣುವುದು. ಅದು ಜಗತ್ತಿನ ನಾನಾ ಭಾಷಾ ಸಾಹಿತ್ಯಗಳ ಸಾರಸತ್ವವನ್ನು ಹೀರಿಕೊಂಡು ಸುಪುಷ್ಟವಾಗಿ ವಿಶ್ವರೂಪಾತ್ಮಕವಾಗಿ ಅನ್ಯ ಭಾಷೆಗಳಿಗೆ ಹೆಗಲೆಣೆಯಾಗಿ ಬೆಳೆಯತೊಡಗಿದೆ.

ಗ್ರಂಥಋಣ:

1. ಕನ್ನಡ ಸಾಹಿತ್ಯಚರಿತ್ರೆ – ರಂ.ಶ್ರೀ. ಮುಗಳಿ
2. ಕನ್ನಡ ಸಾಹಿತ್ಯ ಸಮೀಕ್ಷೆ – ಜಿ.ಎಸ್. ಶಿವರುದ್ರಪ್ಪ
3. ವಡ್ಡಾರಾದನೆ : ಸಮಗ್ರ ಅಧ್ಯಯನ – ಹಂಪ ನಾಗರಾಜಯ್ಯ
4. ಶಾಸನ ಮತ್ತುಗದ್ಯ – ಹು. ಕಾ. ಜಯದೇವ್
5. ಹೊಸಗನ್ನಡ ಸಾಹಿತ್ಯ – ಎಲ್.ಎಸ್. ಶೇಷಗಿರಿರಾವ್

❖❖❖

ಅಲ್ಲಮನ ಬೆಡಗಿನ ವಚನಗಳು

ಡಾ. ಎಸ್. ಸಿದ್ದೇಗೌಡ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನಕಾಲೇಜು (ಸ್ವಾಯತ್ತ), ಮೈಸೂರು

ವಚನಸಾಹಿತ್ಯವು 'ಮಾತು' ಎಂಬ ಸೀಮಿತ ಅರ್ಥವನ್ನು ಮೀರಿ ಅದರಾಚೆಯ ತತ್ವದರ್ಶನವನ್ನು ಪಡೆದು ಪ್ರಸಿದ್ಧಿಯನ್ನು ಪಡೆದಿದೆ. ಈ ವಚನ ಪ್ರಕಾರದ ಉಗಮವನ್ನು ಕುರಿತು ಡಿ.ಎಲ್. ನರಸಿಂಹಾಚಾರ್ಯರು ಇದರ ಮೂಲ ತಮಿಳಿನ ನಾಯನ್ಮಾರರ 'ತೇವಾರಂ' ಎಂಬ ಹಾಡುಗಳೆಂದೂ, ಡಾ. ಎಲ್. ಬಸವರಾಜು ಅವರು ಸಂಸ್ಕೃತದ 'ಛಂಧೋಗಂಧಿಗಳಾದ' ಗದ್ಯ ಪ್ರಕಾರದ ಸೂತ್ರ ಎಂದೂ, ಡಾ. ಎಂ ಚಿದಾನಂದಮೂರ್ತಿ ಅವರು ತ್ರಿಪದಿಯೇ ಮೂಲವಿರಬೇಕೆಂದು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಹೆಚ್ಚಿನ ವಚನಕಾರರು ಪಂಡಿತರಾಗಿರದೆ ತಮಗೆ ಆ ಕ್ಷಣಕ್ಕೆ ಅನಿಸಿದ್ದನ್ನು ಯಥಾವತ್ತಾಗಿ ಬರೆದಿರುವುದರಿಂದ ಬೇರೆ ಮೂಲಗಳ ಪ್ರಭಾವವನ್ನು ಅನುಮೋದಿಸುವುದು ಕ್ಲಿಷ್ಟಕರ. ಸಾಮಾನ್ಯಜನರಿಗೆ ಅರ್ಥವಾಗುವ ಸರಳ ಭಾಷಾ ಶೈಲಿಯ ಮುಖಾಂತರ ತಮ್ಮ ತತ್ತ್ವಗಳನ್ನು ರಚಿಸಿ, ತಿಳಿಸುವ ಪ್ರಯತ್ನವನ್ನು ವಚನಕಾರರು ಮಾಡಿದ್ದಾರೆ.

ಬಸವಣ್ಣನೇ ವಚನ ಚಳವಳಿಯ ನೇತಾರನಾದರೂ ಆತನ ಜೊತೆಯಲ್ಲಿ ಕೈ ಜೋಡಿಸಿ ವಚನ ಸಾಹಿತ್ಯ ಉತ್ತುಂಗ ಸ್ಥಿತಿಯನ್ನು ತಲುಪಲು ಪ್ರಯತ್ನಿಸಿದವರು ಹಲವರು. ಅವರಲ್ಲಿ ಬಹುದೊಡ್ಡ ಹೆಸರೆಂದರೆ ಅಲ್ಲಮಪ್ರಭು. ಶೂದ್ರನಾಗಿ ಜನಿಸಿ, ಕಾಮಲತೆಯೊಂದಿಗಿನ ಪ್ರೇಮ ವೈಪಲ್ಯದ ಕಾರಣ ದೇಶಾಂತರ ಹೊರಟು, ಹಲವಾರು ಶಾಸ್ತ್ರಗಳನ್ನು ಅಧ್ಯಯನ ಮಾಡಿ, ಪಾಂಡಿತ್ಯವನ್ನು ಪಡೆದು, ಕಡೆಗೆ ಬಸವಣ್ಣನ ಅನುಭವ ಮಂಟಪವನ್ನು ಸೇರಿ, ಶೂನ್ಯ ಸಿಂಹಾಸನಾಧೀಶನಾಗಿ ತನ್ನ ವಚನಗಳ ಮೂಲಕ ಸಾಕಷ್ಟು ಪ್ರಸಿದ್ಧಿಯನ್ನು ಪಡೆದನು.

ಅಲ್ಲಮನ ವಚನಗಳಲ್ಲಿ ಎರಡು ಬಗೆಯ ವಚನಗಳನ್ನು ಕಾಣಬಹುದು. ಮೊದಲನೆಯದು ಸಾಮಾನ್ಯ ವಚನ. ಸಾಮಾನ್ಯ ಜನರಿಗೂ ಅತಿ ಸುಲಭವಾಗಿ ಯಾರ ಸಹಾಯ, ಟೀಕೆ, ವ್ಯಾಖ್ಯಾನ, ವಿಮರ್ಶೆಗಳಿಲ್ಲದೆ ಗ್ರಹಿಕೆಗೆ ಬರುವುದು. ಉದಾಹರಣೆಗೆ,

ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಮನದ ಮುಂದಣಆಸೆಯೇಕಾಣಾಗುಹೇಶ್ವರ.

ಈ ರೀತಿಯ ವಚನಗಳಿಗೆ ಯಾವುದೇ ವ್ಯಾಖ್ಯಾನದ ಅವಶ್ಯಕತೆ ಇರುವುದಿಲ್ಲ.

ಎರಡನೆಯದು ಬೆಡಗಿನ ವಚನ. ಗುಪ್ತವಾದ ಭಾಷೆಯನ್ನು ಉಪಯೋಗಿಸಿ, ಪ್ರತಿಮೆಗಳ ಮೂಲಕ ಧ್ವನಿಸುವ ವಚನ. ಬೆಡಗು ಎನ್ನುವ ಪದಕ್ಕೆ ಸೌಂದರ್ಯ

ಎಂಬ ಅರ್ಥ. ಅದೇರೀತಿ ಬೆಡಗು ಎಂದರೆ ವಿಶೇಷವಾದದ್ದು, ವೈಖರಿಯಿಂದ ಕೂಡಿದ್ದು ಎಂಬ ಅರ್ಥಗಳ ಜೊತೆಗೆ ಬೆರಗು, ಆಶ್ಚರ್ಯ ಎಂಬ ಅರ್ಥಗಳೂ ಇವೆ. ಬೆಡಗು ಎಂಬ ಪದದ ಜೊತೆಗೆ ಬೆಗಡು ಎಂಬ ಪದವೂ ಇದೆ. ಬೆಗಡು ಎಂದರೆ ಚಕಿತಗೊಳಿಸು, ಹೆದರಿಸು ಎಂದು ಅರ್ಥವಾಗುತ್ತದೆ. ಬೆಡಗಿನ ವಚನಗಳು ವ್ಯಾಖ್ಯಾನವಿಲ್ಲದೆ ಅರ್ಥವಾಗಲಾರವು; ವ್ಯಾಖ್ಯಾನವೂ ಕೂಡ ಕೆಲವೊಮ್ಮೆ ಸಹಾಯಕ್ಕೆ ಒದಗಿ ಬರದಷ್ಟು ನಿಗೂಡ ರಚನೆಗಳು. "ಯಾವುದನ್ನು ಹಲವಾರು ಮಾತುಗಳಲ್ಲಿ ಬಿಚ್ಚಿ ಹೇಳಬಹುದಿತ್ತೋ ಅದನ್ನು ಕಡಿಮೆ ಮಾತುಗಳಲ್ಲಿ ಮುಚ್ಚಿ ಹೇಳುವುದು ಬೆಡಗಿನ ವಚನಗಳ ವೈಶಿಷ್ಟ್ಯ" ಎಂದು ಎಂ. ಚಿದಾನಂದಮೂರ್ತಿಯವರು ತಿಳಿಸಿದ್ದಾರೆ.

ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಇದನ್ನು 'ಸಂಧ್ಯಾಭಾಷೆ' ಎಂದು ಕರೆಯಲಾಗಿದೆ. ಸಂಧ್ಯಾಭಾಷೆ ಎಂದರೆ ಹಗಲು–ರಾತ್ರಿಗಳ ನಡುವಣ ಸಂಧಿಕಾಲದ ಬೆಳಕಿನಂತೆ, ಮುಚ್ಚು ಮರೆಯ ಲಕ್ಷಣವನ್ನುಳ್ಳ ಭಾಷೆ ಎಂದರ್ಥ. ಕೆಲವರು ಇದನ್ನು 'ಸಂಧ್ಯಾಭಾಷೆ' ಎಂದು ಹೇಳುವುದು ಸರಿಯಲ್ಲ. ಅದು 'ಸಂಧಾಭಾಷೆ' ಎಂದು ಕರೆಯುತ್ತಾರೆ. ಅಂದರೆ 'ಉದ್ದೇಶಿತ ಭಾಷೆ' ಎಂದರ್ಥ. ತಮ್ಮ ಪಂಥದಲ್ಲಿ ದೀಕ್ಷಿತರಾದವರಿಗೆ ಮಾತ್ರ ತಿಳಿಯಲೆಂದು ಕೆಲವು ರಹಸ್ಯಗಳನ್ನು ಹೇಳುವ ಭಾಷೆ. ವೀರಶೈವ ಧರ್ಮದ ಅಧ್ಯಾತ್ಮ ತತ್ವಗಳು ಢಾಂಬಿಕ ವ್ಯಕ್ತಿಗಳಿಗೆ ತಿಳಿಯದಿರಲಿ ಎಂಬ ಉದ್ದೇಶದಿಂದ, ಅಲ್ಲದೆ ಅಪಾರ ಪಾಂಡಿತ್ಯವನ್ನು ಅಲ್ಲಮ ಹೊಂದಿದ್ದರಿಂದ, ತಂತ್ರಶಾಸ್ತ್ರದಲ್ಲಿ ನೈಪುಣ್ಯವನ್ನು ಪಡೆದಿದ್ದರಿಂದ ಆ ಶೈಲಿಯನ್ನು ಕನ್ನಡಕ್ಕೆ ತಂದಿದ್ದಾನೆ.

ಅಲ್ಲಮನ ಬೆಡಗಿನ ವಚನಗಳಲ್ಲಿ ಕೆಲವು ಸಿದ್ಧ ಸಂಕೇತಗಳು ಬಳಕೆಯಾಗುತ್ತವೆ. ಅವುಗಳನ್ನು ಅರಿಯದ ಹೊರತು ವಚನಗಳನ್ನು ತಿಳಿಯುವುದು ಸಾಧ್ಯವಾಗದು. ಅವುಗಳೆಂದರೆ: ಹಂಸ–ಆತ್ಮ, ಕಾಡು–ಸಂಸಾರ, ಅಗ್ನಿ–ಜ್ಞಾನ, ನೀರು–ಚಂಚಲ ಮನಸ್ಸು ಹೀಗೆ. ಆದರೆ ಒಂದು ಸಂಕೇತ ಕೆಲವೊಮ್ಮೆ ಒಂದಕ್ಕಿಂತ ಹೆಚ್ಚಿನ ಅರ್ಥಗಳಲ್ಲಿ ಬಳಕೆಯಾಗಬಹುದು. ಹಾಗಾಗಿ ಬೆಡಗಿನ ವಚನಗಳ ಅರ್ಥೈಸುವಿಕೆ ಒಂದು ಬಗೆಯ 'ಡಿ–ಕೋಡಿಂಗ್' ಇದ್ದಂತೆ. ಸಂಕೇತಿಸಿರುವವರು ಬಳಸಿರುವ ಸಂಕೇತಗಳು ಗೊತ್ತಿದ್ದರೆ ಮಾತ್ರ ಸಂದೇಶವನ್ನು ಒಡೆದು ಅರ್ಥ ತಿಳಿಯಲು ಸಾಧ್ಯ. ಬೆಡಗಿನ ವಚನಗಳ ಸ್ವರೂಪವೆಂದರೆ ಮೇಲ್ನೋಟಕ್ಕೆ ಪರಸ್ಪರ ವಿರೋಧವೂ, ಅಸಾಧ್ಯವೂ ಆದ ಚಿತ್ರಗಳು ಬರುತ್ತವೆ. ಅವುಗಳನ್ನು ಸರಿಯಾಗಿ ಗ್ರಹಿಸಿದಾಗ ಮಾತ್ರ ಆ ವಿರೋಧ ಮಾಯವಾಗುತ್ತದೆ. ಅಂತಹ ಕೆಲವು ವಚನಗಳನ್ನು ನೋಡೋಣ.

ಕಾಗೆಯ ತಿಂದವನಲ್ಲದೆ ಭಕ್ತನಲ್ಲ,
ಕೋಣನ ತಿಂದವನಲ್ಲದೆ ಮಹೇಶ್ವರನಲ್ಲ,
ಕೋಡಗನ ತಿಂದವನಲ್ಲದೆ ಪ್ರಸಾದಿಯಲ್ಲ,
ನಾಯ ತಿಂದವನಲ್ಲದೆ ಪ್ರಾಣಲಿಂಗಿಯಲ್ಲ,
ಹೇಯವ ತಿಂದವನಲ್ಲದೆ ಶರಣನಲ್ಲ,
ಇಂತೈವರ ತಿಂದವನಲ್ಲದೆ ಲಿಂಗೈಕ್ಯನಲ್ಲ ಗುಹೇಶ್ವರ.

ವಚನದ ವಾಚ್ಯಾರ್ಥವನ್ನು ಮಾತ್ರ ಗ್ರಹಿಸಿದರೆ ಪರಸ್ಪರ ವಿರೋಧವೂ, ಅಸಾಧ್ಯವೂ ಆದ ವಿಚಾರ ಅರಿವಿಗೆ ಬರುತ್ತದೆ. ಆದರೆ ಈ ವಚನದಲ್ಲಿ ಅಲ್ಲಮ ಷಟ್ಸ್ಥಲದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾನೆ. ವೀರಶೈವ ಧರ್ಮದಲ್ಲಿ ಅಧ್ಯಾತ್ಮ ಸಾಧಕನು ಏರಬೇಕಾದ ಆರು

ಹಂತಗಳೇ ಷಟ್ಸ್ಥಲಗಳು; ಮೋಕ್ಷ ಸಾಧನೆಯ ಆರು ಹಂತಗಳು.

1. ಭಕ್ತ : ಆರಾಧಕ
2. ಮಹೇಶ : ವಿಶ್ವಾಸದ ಮೂಲಕ ಉಂಟಾಗುವ ನಿಷ್ಠೆಯ ಹಂತ
3. ಪ್ರಸಾದಿ : ಪ್ರತಿಯೊಂದು ಭೋಗ ಪದಾರ್ಥವನ್ನು ಮೊದಲು ಲಿಂಗಕ್ಕೆ ಅರ್ಪಿಸಿ, ಆಮೇಲೆ ಅದನ್ನು ಪ್ರಸಾದರೂಪದಲ್ಲಿ ಸ್ವೀಕರಿಸುವವನು.
4. ಪ್ರಾಣಲಿಂಗಿ : ನಾನು, ನನ್ನದು ಎಂಬ ಮೋಹವನ್ನುತೊರೆದು ಸರ್ವವನ್ನು ಲಿಂಗಮಯವೆಂದು ಭಾವಿಸುವವನು.
5. ಶರಣ : ಶಿವನಿಗೆ ಸಂಪೂರ್ಣವಾಗಿ ಶರಣಾಗುವುದು.
6. ಐಕ್ಯ : ಲಿಂಗ ಬೇರೆ ಅಲ್ಲ, ನಾನು ಬೇರೆ ಅಲ್ಲ ಎಂಬ ಭಾವನೆ (ಶರಣ ಸತಿ ಲಿಂಗ ಪತಿ ಭಾವನೆ)

ಈ ಆರು ಹಂತಗಳನ್ನು ಏರಲು ಇರುವ ಅಡ್ಡಿಗಳನ್ನು ಅಲ್ಲಮ ಮೇಲಿನ ವಚನದಲ್ಲಿ ತಿಳಿಸಿ, ಆ ಅಡ್ಡಿಯನ್ನು ನಿವಾರಿಸಿಕೊಳ್ಳುವ ಮಾರ್ಗವನ್ನು ಸೂಚಿಸಿದ್ದಾನೆ.

- ಕಾಗೆ–ಮಾಯೆ (ಮೋಹ–ವ್ಯಾಮೋಹ): ಕಾಗೆಯನ್ನು ತಿನ್ನುವುದು ಎಂದರೆ ಮಾಯೆ ಎಂಬ ಗುಣವನ್ನು ಕ್ಷಯಿಸುವುದು; ಅಂದರೆ ಗೆಲ್ಲುವುದು. ಹಾಗೆ ಗೆದ್ದಾಗ ಮಾತ್ರ ಭಕ್ತನಾಗಬಲ್ಲ.
- ಕೋಣ–ಅಹಂಕಾರ (ಮದ): ಕೋಣ ಎಂಬುದಂತು ಅಹಂಕಾರ ಮತ್ತು ಮದಗಳಿಗೆ ಹೆಸರಾದದ್ದು, ಅಂತಹ ಅಹಂಕಾರ ಮತ್ತು ಮದಗಳನ್ನು ತಿಂದಲ್ಲದೆ, ಗೆಲ್ಲದೆ ಮಹೇಶ್ವರನಾಗುವುದು ಸಾಧ್ಯವಿಲ್ಲ.
- ಕೋಡಗ–ಚಿತ್ತಚಾಂಚಲ್ಯ: ಕೋಡಗ ಚಿತ್ತಚಾಂಚಲ್ಯಕ್ಕೆ ಹೆಸರಾದದ್ದು. ಅಂತಹ ಚಂಚಲತೆ, ಚಪಲತೆಗಳನ್ನು ಗೆಲ್ಲದಿದ್ದರೆ ಪ್ರಸಾದಿ ಆಗುವುದು ಸಾಧ್ಯವಿಲ್ಲ.
- ನಾಯಿ – ಪಂಚೇಂದ್ರಿಯ: ನಾಯಿಯು ಪಂಚೇಂದ್ರಿಯಗಳ ವ್ಯವಹಾರಕ್ಕೆ ಹೆಸರಾದುದು. ಅಂತಹ ನಾಯಗುಣವನ್ನು, ಪಂಚೇಂದ್ರಿಯಗಳ ಚಾಪಲ್ಯವನ್ನು ಗೆದ್ದರೆ ಪ್ರಾಣಲಿಂಗಿ ಆಗಬಹುದು.
- ಹೇಯತೆ–ಅಸಹ್ಯ: ಅಸಹ್ಯ ಎಂಬುದನ್ನು ಗೆದ್ದರೆ ಮಾತ್ರ ಶರಣ ಆಗಬಹುದು.
- ಐಕ್ಯ: ಮೇಲಿನ ಐದು ಗುಣಗಳನ್ನು ಗೆದ್ದಾಗ ಮಾತ್ರ ಲಿಂಗೈಕ್ಯತೆ ಸಾಧ್ಯ.

ಹೀಗೆ ವಚನದ ಅರ್ಥವನ್ನು ಗ್ರಹಿಸಿದಾಗ ಮಾತ್ರ ವಚನದ ಮಹತ್ವ ಅರಿವಾಗುತ್ತದೆ. ಹಾಗೆಯೇ

ಕೆಂಡದಗಿರಿಯ ಮೇಲೊಂದು
ಅರಗಿನ ಕಂಭವಿದ್ದುದ ಕಂಡೆ
ಅರಗಿನಕಂಭದ ಮೇಲೊಂದು
ಹಂಸೆ ಇದ್ದುದ ಕಂಡೆ
ಕಂಭ ಬೆಂದು ಹಂಸೆ ಹಾರಿತ್ತು
ಕೆಂಡವೆಲೆತ್ತಲಡಗಿತ್ತು ಗುಹೇಶ್ವರ

ಇಲ್ಲಿ ಕೆಂಡ ಎಂಬುದು ತಾಪತ್ರಯಾಗ್ನಿ ಅಥವಾ ಸಂಸಾರಾಗ್ನಿ (ಸಂಸಾರ: ಹುಟ್ಟು ಸಾವುಗಳನ್ನುಳ್ಳದ್ದು, ಹುಟ್ಟು ಸಾವಿನ ನಡುವೆ ಹಲವಾರು ಬಂಧನಕ್ಕೆ ಒಳಗಾಗುವುದು). ಅರಗಿನ ಕಂಭ ಎಂಬುದು ಅಹಂ ಅಥವಾ ನಾನು, ಹಂಸ ಎಂಬುದು ಆತ್ಮದ ಸಂಕೇತಗಳಾಗಿವೆ. ಈ

ಹಿನ್ನಲೆಯಲ್ಲಿ ಸಂಸಾರ ಎಂಬ ಬೆಂಕಿಯ ಮೇಲೆ ಅಹಂ ಭಾವವಿದ್ದು, ಅದರ ಮೇಲೆ ಆತ್ಮ ಇರುವಂತಹುದು. ಅಗ್ನಿಯಲ್ಲಿ ಸಿಕ್ಕ ಅಹಂಭಾವ ನಾಶವಾದಾಗ ಮಾತ್ರ ಆತ್ಮ ಲಿಂಗದಲ್ಲಿ ಐಕ್ಯವಾಗುತ್ತದೆ ಎಂಬುದನ್ನು ಹೀಗೆ ತಿಳಿಸಲಾಗಿದೆ. ಹಾಗೆಯೇ

ಆನೆಯ ಹೆಣ ಬಿದ್ದಿರೆ ಕೋಡಗ ಮುದ್ದಾಡಿಸಿತ್ತ ಕಂಡೆ
ಕಾಡೊಳಗೊಬ್ಬ ಸೂಳೆ ಕರೆಕರೆದೊತ್ತೆಯ ಕೊಂಬುದ ಕಂಡೆ
ಹಾಳೂರೊಳಗೆ ನಾಯಿ ಜಗಳವ ಕಂಡೆ
ಇದೇನು ಸೋಜಿಗ ಹೇಳಾ ಗುಹೇಶ್ವರ!

ಈ ವಚನದಲ್ಲಿ ಐದು ಪ್ರತಿಮೆಗಳಿವೆ. ಆನೆ, ಕೋಡಗ, ಕಾಡು, ಸೂಳೆ ಮತ್ತು ನಾಯಿ. ಆನೆ ಎಂಬುದು ಗರ್ವವನ್ನೂ, ಕೋಡಗ ಎಂಬುದು ಚಾಪಲ್ಯವನ್ನೂ, ಕಾಡು ಎಂಬುದು ಭವಾರಣ್ಯವನ್ನೂ, ಸೂಳೆ ಎಂಬುದು ಮಾಯೆಯನ್ನೂ, ನಾಯಿ ಎಂಬುದು ಇಂದ್ರೀಯವನ್ನೂ ಪ್ರತಿಮಿಸುತ್ತವೆ. ಅಂದರೆ ಗರ್ವದ ಹೆಣ ಬಿದ್ದರೂ ಚಾಪಲ್ಯ ಮುದ್ದಾಡುತ್ತಿದೆ. ಭವಾರಣ್ಯದಲ್ಲಿ ಮಾಯೆ ನೂರಾರು ಆಕರ್ಷಣೆಗಳ ಮೂಲಕ ಜನರನ್ನು ದಾರಿ ತಪ್ಪಿಸುತ್ತಿದ್ದಾಳೆ. ಹಾಗಾಗಿ ಆ ಊರು ಹಾಳೂರಾಗಿದೆ. ಹಾಳೂರಿನಲ್ಲಿಯೂ ಇಂದ್ರೀಯಗಳು ತಮ್ಮ ನಾಯಿತನವನ್ನು ತೋರಿಸುತ್ತ ಆರ್ಭಟಿಸುತ್ತಿವೆ. ಇದೆಂತಹ ಆಶ್ಚರ್ಯ ಎಂದು ಲೋಕವ್ಯವಹಾರದ ವರ್ಣನೆಯನ್ನು ಮಾಡುತ್ತ ವಿಡಂಬಿಸಲಾಗಿದೆ.

ಈ ರೀತಿಯಾಗಿ ಅಲ್ಲಮನು ಹಲವಾರು ಬೆಡಗಿನ ವಚನಗಳನ್ನು ರಚಿಸಿ, ಅದರಲ್ಲಿ ಅಧ್ಯಾತ್ಮದ ತತ್ವಗಳನ್ನು ಅಡಗಿಸಿದ್ದಾನೆ. ಅಲ್ಲಮನ ಅನಂತರ ಅಕ್ಕಮಹಾದೇವಿ, ಬಿದ್ದಿ ಬಾಚಯ್ಯ, ಅರಿವಿನ ಮಾರಿತಂದೆ ಮೊದಲಾದವರು ಬೆಡಗಿನ ವಚನಗಳನ್ನು ರಚಿಸಿದ್ದಾರೆ. ವಚನಕಾರರಅನಂತರ ಕೀರ್ತನಕಾರರಾದ ಪುರಂದರದಾಸ ಮತ್ತು ಕನಕದಾಸರಲ್ಲಿ ಮುಂದುವರೆದಿದೆ. ಆಧುನಿಕರಲ್ಲಿ ಶಿಶುನಾಳ ಷರೀಪರಲ್ಲಿ ಈ ಬಗೆಯ ರಚನೆಗಳನ್ನು ಕಾಣಬಹುದಾಗಿದೆ.

ಕೊನೆ ಟಿಪ್ಪಣಿ

ಎಂ. ಚಿದಾನಂದಮೂರ್ತಿ: ವಚನಸಾಹಿತ್ಯ (ಸಾ.ಸಾ.ಚ ಸಂ–05), ಸಪ್ನ ಬುಕ್‌ಹೌಸ್, 06ನೇ ಮುದ್ರಣ, ಪುಟ ಸಂಖ್ಯೆ: 63–64.

ಪರಾಮರ್ಶನ ಗ್ರಂಥಗಳು

1. ಎಂ. ಚಿದಾನಂದಮೂರ್ತಿ : ವಚನ ಸಾಹಿತ್ಯ (ಸಾಮಾನ್ಯನಿಗೆ ಸಾಹಿತ್ಯಚರಿತ್ರೆ ಸಂ.5) ಸಪ್ನ ಬುಕ್ ಹೌಸ್ ಬೆಂಗಳೂರು, 6ನೇ ಮುದ್ರಣ–2011.
2. ಜಿ.ಎಸ್. ಸಿದ್ದಲಿಂಗಯ್ಯ : ಅಲ್ಲಮಪ್ರಭು ಸಾಹಿತ್ಯಅಕಾಡೆಮಿ, ಮೊದಲ ಮುದ್ರಣ–2009.
3. ಜಿ.ಎಸ್. ಶಿವರುದ್ರಪ್ಪ : ಸಮಗ್ರಗದ್ಯ ಸಂ.1 ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ನಾಲ್ಕನೆಯ ಮುದ್ರಣ–2009
4. ಅ.ನ.ಕೃ : ಅಲ್ಲಮಪ್ರಭು, ಸಾಗರ್ ಪ್ರಕಾಶನ ಬೆಂಗಳೂರು, ಮೂರನೇ ಮುದ್ರಣ–2010.
5. ಡಾ. ಜಯಶ್ರೀ ದಂಡೆ : ಬೆಡಗಿನ ವಚನಗಳ ಪರಿಭಾಷಾಕೋಶ, ಬಸವ ಸಮಿತಿ ಬೆಂಗಳೂರು, ಮೊದಲ ಮುದ್ರಣ–2002

❖❖❖

ಹಸ್ತಪ್ರತಿಗಳ ಪ್ರಕಾರಗಳು ಮತ್ತು ಸಂರಕ್ಷಣೆ

ಡಾ. ರೋಹಿಣಿ ಹಿರೇಶೆಡ್ಡಿ
ಕನ್ನಡ ಸಹ ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪುರ

ಪ್ರಸ್ತಾವನೆ

ಹಸ್ತಪ್ರತಿ ಅಥವಾ ಕೈಯಳತೆ ಎಂದರೆ ಮುದ್ರಿತವಲ್ಲದ ಹಾಗೂ ಇನ್ನಾವುದಾದರೂ ರೀತಿಯಲ್ಲಿ ನಕಲಾದದ್ದು. ಒಬ್ಬರಿಂದ ಅಥವಾ ಕೆಲವು ಜನರಿಂದ ಕೈಯ್ಯಾರೆ ಸೃಷ್ಟಿಸಲ್ಪಟ್ಟದ್ದು. ಕೈಬರಹದಲ್ಲಿ ಬರೆದ ಪತ್ರಗಳಂತಹ ವಿಷಯಗಳ ದಾಖಲಾತಿ ಹೊಂದಿರುವಂತಹ ಪತ್ರ. ಬರವಣಿಗೆಯಲ್ಲದೆ ಕೈಗಳನ್ನು ಬಳಸಿ ವಿಷಯಗಳನ್ನು ದಾಖಲಿಸುವಂತಹ ಇತರ ವಿಧಾನಗಳಿಗೂ ಈ ಪದವನ್ನು ಬಳಸಬಹುದು. ಉದಾಹರಣೆಗೆ ಗಟ್ಟಿಯಾದ ವಸ್ತುಗಳ ಮೇಲೆ ಉಳಿಯಿಂದ ಮಾಡಿದ ಕೆತ್ತನೆಗಳು ಅಥವಾ ಪ್ಲಾಸ್ಟರ್ ಮೇಲೆ ಚಾಕುವಿನಂತಹ ಚೂಪಾದ ತುದಿಯಿಂದ ಕೆರೆಯಲ್ಪಟ್ಟಂತಹವು ಅಥವಾ ಒಂದು ಶಲಾಕೆಯನ್ನು ಬಳಸಿ ಮೇಣದ ಸಣ್ಣ ತುಣುಕುಗಳ ಮೇಲೆ ಕೆತ್ತನೆ ಮಾಡುವುದು. ಅಥವಾ ಚೂಪಾದ ತಿಲಕಾಷ್ಟದಿಂದ ಒತ್ತಿ ಸಮತಟ್ಟಾದ ಸಣ್ಣ ಹಲಗೆಗಳ ಅಥವಾ ಸುಟ್ಟಿರದ ಮಣ್ಣಿನ ಮೇಲೆ ಬರೆಯಲ್ಪಟ್ಟ ಬೆಣ್ಣೆಯಾಕಾರದ ಬರವಣಿಗೆಗಳನ್ನು ಸಹ ಹಸ್ತಪ್ರತಿಯೆಂದು ಕರೆಯುತ್ತಾರೆ. ಭಾರತದಲ್ಲಿ ತಾಳೆಗರಿ ಹಸ್ತಪ್ರತಿಗಳು ವಿಶಿಷ್ಟವಾದ ಆಯತಾಕಾರದ ಉದ್ದನೆಯ ಆಕಾರವನ್ನು ಹೊಂದಿದ್ದು, ಪ್ರಾಚೀನ ಕಾಲದಿಂದ 19ನೆಯ ಶತಮಾನದವರೆಗೂ ಬಳಕೆಯಲ್ಲಿದ್ದವು.

ಹಸ್ತಪ್ರತಿಯಲ್ಲಿ ಕವಿ ನಿರ್ಮಿತ 'ಕೃತಿ', ಲಿಪಿಕಾರನಿರ್ಮಿತ 'ಪ್ರತಿ' ಎಂದು ಎರಡು ಘಟಕಗಳಿವೆ. ಕವಿಯ ಮೂಲನಿರ್ಮಿತಿಯನ್ನು 'ಕೃತಿ'ಯೆಂದು, ಕಾಲಕ್ರಮದಲ್ಲಿ ಲಿಪಿಕಾರನ ನಿರ್ಮಿತಿಗಳನ್ನು 'ಪ್ರತಿ'ಯೆಂದು ಕರೆಯುತ್ತಾರೆ. ಈ ಪ್ರತಿಗಳನ್ನು ಒಂದು ನಿಯಮಬದ್ದವಾಗಿ ಹೊಂದಿಸಿ ಅವುಗಳನ್ನು ಕಟ್ಟಿನಲ್ಲಿ ರಕ್ಷಿಸಿಡಲಾಗುತ್ತಿತ್ತು.ಈ ಕಟ್ಟಿನಲ್ಲಿ ಒಂದು ಪ್ರತಿ ಅಥವಾ ಒಂದಕ್ಕಿಂತ ಹೆಚ್ಚು ಪ್ರತಿಗಳಿರಬಹುದು. ಆದ್ದರಿಂದ ಕೃತಿ ಬೇರೆ, ಪ್ರತಿ ಬೇರೆ, ಕಟ್ಟು ಬೇರೆ ಎಂದು ತಿಳಿಯಬೇಕು.

ಹಸ್ತಪ್ರತಿಗಳು ಸಾಮಾನ್ಯವಾಗಿ ಸಾಹಿತ್ಯ, ಸಮಾಜ, ಭಾಷೆ, ಇತಿಹಾಸ, ಧರ್ಮ, ನಂಬಿಕೆ, ಆಚರಣೆಗಳು, ಆಚಾರ–ವಿಚಾರ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ವೈದ್ಯ–ವೇದ, ಲೌಕಿಕಶಾಸ್ತ್ರ ಹೀಗೆ ಅನೇಕ ಅಂಶಗಳನ್ನು ಒಳಗೊಂಡಿರುತ್ತವೆ. ಹಸ್ತಪ್ರತಿಗಳು ನಾಡಿನ ಸಾಂಸ್ಕೃತಿಕ ಪ್ರತೀಕಗಳು. ಲೌಕಿಕ–ಆಗಮಿಕ, ಶಾಸ್ತ್ರ–ಕಾವ್ಯ ಈ ಮೊದಲಾದ ರೂಪದಲ್ಲಿ ದೊರೆಯುವ ಹಸ್ತಪ್ರತಿಗಳು ನಮ್ಮ ಪ್ರಾಚೀನ ಕನ್ನಡಿಗರ ಜ್ಞಾನ ಸಾಮಗ್ರಿಯ ದ್ಯೋತಕಗಳಾಗಿವೆ. ಇವುಗಳಲ್ಲಿ ತಾಳೆಗರಿ, ಕಾಗದಪ್ರತಿ, ಭೂರ್ಜಪತ್ರ, ಜಲಪತ್ರಗಳು ಅತೀ ಮುಖ್ಯವೆನಿಸುತ್ತವೆ.

ಹಸ್ತಪ್ರತಿಯ ಪ್ರಕಾರಗಳು

ಹಸ್ತಪ್ರತಿಗಳನ್ನು ಕೆಲವು ಗುಂಪುಗಳನ್ನಾಗಿ ವಿಂಗಡಿಸುವುದು ರೂಢಿಗೆ ಬಂದಿದೆ.

ಅದರಂತೆ ಪ್ರತಿಕಾರರಾರು ಎಂಬ ಅಂಶದ ಮೇಲೆಇದರ ನಿರ್ಣಯವಾಗುತ್ತದೆ. ಡಿ.ಎಲ್. ನರಸಿಂಹಚಾರ್ಯರು, ಕವಿಯ ಸ್ವಹಸ್ತಾಕ್ಷರ ಪ್ರತಿ, ಏಕೈಕ ಹಸ್ತಪ್ರತಿ, ಮಾತೃಕೆ, ಪರಂಪರಾಗತ ಹಸ್ತಪ್ರತಿಗಳು, ಮಿಶ್ರಪ್ರತಿಗಳು ಎಂದುಐದು ವಿಭಾಗ ಮಾಡಿದ್ದಾರೆ. ಎಂ.ಎಂ. ಕಲಬುರ್ಗಿ ಅವರು ಮೂಲಪ್ರತಿ, ಪರಂಪರಾಗತ ಪ್ರತಿ, ಇದರಲ್ಲಿ ಎರಡು ಒಳವಿಭಾಗಗಳು: (ಅ) ಶುದ್ಧ ಸಂತಾನ ಪ್ರತಿ, (ಬ) ಅಶುದ್ಧ ಸಂತಾನ ಪ್ರತಿ, ಏಕೈಕ ಹಸ್ತಪ್ರತಿ, ಸಂರಕ್ಷಿತ ಹಸ್ತಪ್ರತಿಎಂದು ವಿಭಾಗಿಸಿದ್ದಾರೆ. ಹಾಗೆಯೇ ಸೀತಾರಾಮ ಜಾಗೀರ್‌ದಾರರು ಸ್ವಹಸ್ತಾಕ್ಷರ ಪ್ರತಿ, ಏಕೈಕ ಹಸ್ತಪ್ರತಿ, ಪರಂಪರಾಗತ ಹಸ್ತಪ್ರತಿ, ಸಂರಕ್ಷಿತ ಹಸ್ತಪ್ರತಿ, ಮಿಶ್ರ ಹಸ್ತಪ್ರತಿಎಂದು ವಿಂಗಡಿಸಿದ್ದಾರೆ.

ಇವುಗಳಲ್ಲಿ ಡಿ.ಎಲ್.ಎನ್. ಮತ್ತುಜಾಗೀರ್‌ದಾರರುಐದು ವಿಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ, ಕಲಬುರ್ಗಿಯವರು ನಾಲ್ಕು ಭಾಗಗಳನ್ನಾಗಿ ಮಾಡಿ ಒಂದರಲ್ಲಿ ಎರಡು ಉಪವಿಭಾಗಗಳನ್ನು ಗುರುತಿಸಿದ್ದಾರೆ. ಕವಿಯ ಸ್ವಹಸ್ತಾಕ್ಷರ ಪ್ರತಿಅಥವಾ ಮೂಲಪ್ರತಿ, ಏಕೈಕ ಹಸ್ತಪ್ರತಿ, ಪರಂಪರಾಗತ ಹಸ್ತಪ್ರತಿ ಎಂಬ ಮೂರು ವಿಧಗಳು ಮೂರರಲ್ಲಿಯೂ ಕಂಡುಬರುತ್ತವೆ. ಉಳಿದಂತೆ ಡಿ.ಎಲ್.ಎನ್. ಅವರ ಮಾತೃಕೆ ಎಂಬುದೂ, ಕಲಬುರ್ಗಿ ಅವರ ಪರಂಪರಾಗತ ಹಸ್ತಪ್ರತಿಯಲ್ಲಿನ ಶುದ್ಧ ಸಂತಾನ, ಅಶುದ್ಧ ಸಂತಾನ ಎಂದು ಬೇರೆಯಾಗಿಯೂ, ಸಂರಕ್ಷಿತಎಂಬುದು ಕಲಬುರ್ಗಿ ಮತ್ತು ಜಾಗೀರ್‌ದಾರರಿಬ್ಬರಲ್ಲಿಯೂ ಮಿಶ್ರ ಹಸ್ತಪ್ರತಿ ಎಂಬುದು ಡಿ.ಎಲ್.ಎನ್. ಮತ್ತು ಜಾಗೀರಾರರಿಬ್ಬರಲ್ಲಿಯೂ ಕಂಡುಬರುತ್ತದೆ. ಸಂರಕ್ಷಿತ ಪ್ರತಿಯನ್ನು ಡಿ.ಎಲ್.ಎನ್. ಅವರು ಮಿಶ್ರಪ್ರತಿ ವಿಭಾಗದಲ್ಲಿಯೇ ಗುರುತಿಸಿದ್ದಾರೆ. ಇವುಗಳನ್ನು ಕೆಳಕಂಡಂತೆ ಪಟ್ಟಿಮಾಡಿ ತೋರಿಸಬಹುದು.

1. ಸ್ವಹಸ್ತಾಕ್ಷರ ಪ್ರತಿ ಅಥವಾ ಮೂಲಪ್ರತಿ

18ನೇ ಶತಮಾನದ ಕೊನೆಯಲ್ಲಿದ್ದ ಬಸವಪ್ಪಶಾಸ್ತ್ರಿ, ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ರಣ) ಇವರ ಮತ್ತು ಅವರಿಗಿಂತ ಈಚಿನವರ ಸ್ವಹಸ್ತಪ್ರತಿಗಳು ದೊರೆಯುತ್ತವೆಯೇ ಹೊರತು, ಇದಕ್ಕೆ ಹಿಂದಿನವು ಇದುವರೆಗೆ ದೊರೆತಿಲ್ಲ. ಇಂತಹವುಗಳು ದೊರೆತಾಗ ಮಾತ್ರ ಪ್ರತಿಗಳು ಸುಸ್ಥಿತಿಯಲ್ಲಿದ್ದ ಯಾವ ಎಡರು ತೊಡರುಗಳೂ ಇಲ್ಲದೆ ಸಂಪಾದಿಸಿ ಪ್ರಕಟಿಸಬಹುದು. ಬೇರೆ ಹಸ್ತಪ್ರತಿಗಳ ಅವಶ್ಯಕತೆಯೇ ಉಂಟಾಗುವುದಿಲ್ಲ. ತಾಮ್ರ ಮತ್ತು ಶಿಲೆಯ ಮೇಲಿರುವ ಸಾಹಿತ್ಯವನ್ನೂ ಸ್ವಹಸ್ತಾಕ್ಷರ ಪ್ರತಿಗಳೆಂದು ಕರೆಯಬಹುದೆಂದು ಹೇಳುತ್ತಾರೆ. ಏಕೆಂದರೆ ಕವಿ ರಚಿಸಿಕೊಟ್ಟು ಸಾಹಿತ್ಯವನ್ನು ತಾಮ್ರ ಅಥವಾ ಶಿಲೆಯ ಮೇಲೆ ಕಂಡರಿಸಿದ ಮೇಲೆ ರಚಕನು ಮತ್ತೊಮ್ಮೆ ಅದನ್ನು ನೋಡುತ್ತಿದ್ದನೆಂಬ ಊಹೆಯೇ ಕಾರಣವಾಗಿದೆ. ಆದರೆ ಇದರಲ್ಲಿಯೂ ಸಮಯಭಾವದಿಂದ ಕವಿ ನೋಡದಿರಲೂಬಹುದೆಂಬ ಶಂಕೆ ಇದಕ್ಕೆ ತೊಡಕಾಗಿದೆ. ಆದರೂ ಇವು ಪ್ರತಿ ಮರುಪ್ರತಿಗಳಾಗುವುದು. ತುಂಬಾ ವಿರಳವಾದುದರಿಂದ ಇವುಗಳನ್ನು ಈ ಗುಂಪಿನಲ್ಲಿ ಪರಿಭಾವಿಸಹುದೆಂದು ಹೇಳಬಹುದು ಬೊಪ್ಪಣ ಪಂಡಿತನ(ಕ್ರಿ.ಶ.ಸು1180) ಕೃತಿ "ಗೊಮ್ಮಟಜನ ಸುತ್ತಿ"ಯನ್ನು ಕವಿಯ ಸ್ವಹಸ್ತಪ್ರತಿ ಅಥವಾ ಮೂಲಪ್ರತಿ ಎಂದು ಹೇಳಬಹುದು.

2. ಏಕೈಕ ಹಸ್ತಪ್ರತಿ

ನಾಗವರ್ಮನ' ಕರ್ಣಾಟಕಕಾದಂಬರಿ', ಬೌಂಡರಸನ 'ನಳಚಂಪು', 2ನೇಯ ನಾಗವರ್ಮನ' ವರ್ಧಮಾನ ಪುರಾಣ', ಬಂಧುವರ್ಮನ 'ಹರೊವಂಶಾಭ್ಯುದಯ', ಮೊದಲಾದ ಗ್ರಂಥಗಳ ಒಂದೊಂದೇ ಪ್ರತಿಗಳು ದೊರೆತು ಸಂಪಾದನಾಕಾರ್ಯ ಬಹುತೊಡಕಾಗಿ ಪರಿಣಮಿಸಿರುವುದು ಕಂಡು ಬರುತ್ತದೆ. ಈ ಹಸ್ತಪ್ರತಿಗಳು ಅಶುದ್ಧವಾಗಿದ್ದರೆ, ಪ್ರಟಿತವಾಗಿದ್ದರೆ ಅವುಗಳನ್ನು ತಿದ್ದುವುದು ಅಥವಾ ತುಂಬುವುದು ತುಂಬಾ ತ್ರಾಸದಾಯಕ. 'ಕರ್ಣಾಟಕ ಕಾದಂಬರಿ' ಗ್ರಂಥದಲ್ಲಿ ತ್ರುಟಿತ ಭಾಗಗಳನ್ನು ತುಂಬಿ ಸರಿಪಡಿಸಲು ಸಂಪಾದಕರಾದ ಬಿ. ಮಲ್ಲಪ್ಪನವರು ಪಟ್ಟಶ್ರಮ ಶ್ಲಾಘನೀಯವಾದುದು. ಇದನ್ನು ಸಂಪಾದಿಸುವಾಗ ಮೂಲಗ್ರಂಥವಾದ ಬಾಣನ 'ಕಾದಂಬರಿಯನ್ನು, ಸಂಸ್ಕೃತ ಪಂಡಿತರ ಸಹಾಯವನ್ನು ಪಡೆದು ಕಾರ್ಯನಿರ್ವಹಣೆ ಮಾಡಿದ್ದಾರೆ. ಏಕೆಂದರೆ ಇಂತಹ ಏಕೈಕ ಹಸ್ತಪ್ರತಿಗಳಲ್ಲಿ ದೊರೆತಗ್ರಂಥ ಶಾಶ್ವತವಾಗಿ ಉಳಿದಂತಾಗುವುದಲ್ಲದೆ ಮತ್ತು ತ್ರುಟಿತವಾಗಿ ಹಾಳಾಗುವುದನ್ನು ತಪ್ಪಿಸಬಹುದು. ಎಷ್ಟೇ ಕಷ್ಟಗಳು ಎದುರಾದರೂ ಇಂತಹ ಕೆಲಸವನ್ನು ಯಾರಾದರೂ ಮಾಡಿಯೇತೀರಬೇಕು. ಇದೇ ಉದ್ದೇಶದಿಂದ ಬಿ.ಎಸ್. ಸಂಗಯ್ಯನವರು 'ಹರಿವಂಶಾಭ್ಯ', 'ವರ್ಧಮಾನ ಪುರಾಣ' ಮೊದಲಾದ ಗ್ರಂಥಗಳ ಕಾರ್ಯವನ್ನು ನಿರ್ವಹಿಸಿದ್ದರೆ.

3. ಮಾತೃಕೆ

ಇದನ್ನು ಡಿ.ಎಲ್.ಎನ್. ಅವರು ಮಾತ್ರ ಗುರುತಿಸಿದ್ದಾರೆ.ಯಾವುದೇ ಗ್ರಂಥದ ಒಂದಕ್ಕಿಂತ ಹೆಚ್ಚು ಹಸ್ತಪ್ರತಿಗಳು ದೊರೆತಾಗ, ದೊರೆತ ಎಲ್ಲವೂ ಬೇರೆ–ಬೇರೆ ಮಾತೃಕೆಗಳ ನಕಲಾಗಿರಬಹುದು. ಇವೆಲ್ಲಕ್ಕೂ ಮೂಲವಾಗಿರಬಹುದಾದ ಹಸ್ತಪ್ರತಿಯನ್ನು ಮಾತೃಕೆ ಎಂದು ಹೇಳಬಹುದು. 'ಕಖಗ' ಸಂಕೇತಗಳ ಮೂರು ಪ್ರತಿಗಳಿಗೆ 'ಯ' ಎಂಬ ಅಲಭ್ಯ ಪ್ರತಿ ಮಾತೃಕೆಯಾಗುತ್ತದೆ. 'ಖಗ'ಗಳಿಗೆ 'ಕ' ಪ್ರತಿ ಮೂಲವಾಗಿದ್ದಲ್ಲಿ 'ಕ' ಎಂಬುದನ್ನು ಲಬ್ಧ ಮಾತೃಕೆಯೆಂದೂ 'ಯ'ಎಂಬುದನ್ನು ಅಲಭ್ಯ ಮಾತೃಕೆಯೆಂದೂ ಹೇಳಲಾಗಿದೆ.

4. ಪರಂಪರಾಗತ ಹಸ್ತಪ್ರತಿಗಳು

ಯಾವುದೇ ಗ್ರಂಥದ ಹಸ್ತಪ್ರತಿಯಾಗಲಿ ಸ್ವಹಸ್ತಪ್ರತಿಯಾಗದಿದ್ದಲ್ಲಿ ಪರಂಪರಾಗತ ಪ್ರತಿಯಾಗುತ್ತದೆ. ಇಂತಹವು ಎಷ್ಟೇ ಪ್ರತಿಗಳು ದೊರೆತರೂ ಅವುಗಳೆವಲ್ಲವೂ ಮೂಲದಿಂದ ಬಂದಿರುತ್ತವೆ. ಇವುಗಳಲ್ಲಿ ಪ್ರತಿ ಮಾಡಿದ ಕಾಲ, ಲಿಪಿಯ ವೈಶಿಷ್ಟ್ಯ, ಅಕ್ಷರ ಸ್ಖಾಲಿತ್ಯ ಮೊದಲಾದವುಗಳ ಆಧಾರದ ಮೇಲೆ ವಿಂಗಡಿಸಿ ಯಾವ ಯಾವ ಪೀಳಿಗೆಗೆ ಸೇರಿದುದೆಂಬುದನ್ನು ಗುರುತು ಮಾಡಬೇಕಾಗುತ್ತದೆ. ಡಿ.ಎಲ್.ಎನ್. ಅವರು ಒಬ್ಬನೇ ಕವಿ ಮತ್ತೊಂದು ಮಗದೊಮ್ಮೆ ತಿದ್ದಿ ಪಾಠಗಳನ್ನು ಬದಲಾಯಿಸಿದಾಗ (ಉದಾ: ಡಿ.ವಿ.ಜಿ. ಅವರ ಬೇಲೂರಿನ ಶಿಲಾಬಾಲಿಕೆಯರು) ಅವುಗಳ ಬೇರೆ–ಬೇರೆ ಪ್ರತಿಗಳನ್ನು ಇದೇ ಗುಂಪಿಗೆ ಸೇರಿಸಿದ್ದಾರೆ. ಕಲಬುರ್ಗಿ ಅವರು ಈ ಪ್ರತಿಗಳಲ್ಲಿ ಶುದ್ಧಸಂತಾನ, ಅಶುದ್ಧ ಸಂತಾನವೆಂಬ ಪ್ರಭೇದಗಳನ್ನು ಮಾಡಿದ್ದಾರೆ. ಒಂದು ಪೀಳಿಗೆಯ ಪರಂಪರಾಗತ ಪ್ರತಿ ಮೂಲಕ್ಕೆ ಪ್ರಾಮಾಣಿಕವಾಗಿದ್ದರೆ ಶುದ್ಧ ಸಂತಾನವೆಂದೂ, ಪೀಳಿಗೆ

ಪರಂಪರೆ ಮೂಲಕ್ಕೆ ಪ್ರಾಮಾಣಿಕವಾಗಿದ್ದಲ್ಲಿ ಅಥವಾ ಒಂದು ಕೃತಿಯ ಪ್ರತಿ ಮಾಡಲು ಹಲವು ಲಿಪಿಕಾರರು ಕೂಡಿ ಬರೆಯುವುದು ಇಲ್ಲವೆ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನು ಉಪಯೋಗಿಸಿ ಒಂದು ಪ್ರತಿ ಮಾಡುವುದು. ಇವುಗಳನ್ನು ಶುದ್ಧ ಸಂತಾನ, ಅಶುದ್ಧ ಸಂತಾನ ಪ್ರತಿಗಳೆಂದು ಹೇಳಿದ್ದಾರೆ. ಅಲ್ಲದೆ ಶುದ್ಧ ಸಂತಾನ, ಅಶುದ್ಧ ಸಂತಾನ ಎರಡರಲ್ಲಿಯೂ ಮಾತೃಕಾ ಪ್ರತಿ, ಪುತ್ರಿಕಾ ಪ್ರತಿ, ಸೋದರ ಪ್ರತಿ, ಸದಸ್ಯ ಪ್ರತಿ ಎಂಬ ಒಳಭೇದಗಳನ್ನು ನೀಡುತ್ತಾರೆ.

5. ಮಿಶ್ರ ಪ್ರತಿಗಳು

ಈ ಐದನೆಯ ವಿಭಾಗದ ಹಸ್ತಪ್ರತಿಗಳನ್ನು ಡಿ.ಎಲ್.ಎನ್. ಮತ್ತು ಜಾಗೀರ್‌ದಾರರು ಗುರುತಿಸಿದ್ದರೆ, ಕಲಬುರ್ಗಿಯವರು ಬಿಟ್ಟಿದ್ದಾರೆ. ಕಲಬುರ್ಗಿಯವರು ಅಶುದ್ಧ ಸಂತಾನ ಎಂದು ಹೇಳಿರುವುದೇ ಮಿಶ್ರಪ್ರತಿಯಾಗಿ ಕಂಡುಬರುತ್ತದೆ. ಬೇರೆ–ಬೇರೆ ಪೀಳಿಗೆಯ ಎರಡು ಅಥವಾ ಹೆಚ್ಚು ಪ್ರತಿಗಳನ್ನು ಉಪಯೋಗಿಸಿ ಒಂದು ಪ್ರತಿಯನ್ನು ತಯಾರು ಮಾಡುವುದು ಅಥವಾ ಒಂದು ಪ್ರತಿಗೆ ಮತ್ತೊಂದು ಪ್ರತಿಯಿಂದ ದೊರೆತ ಬೇರೆ ಪಾಠಗಳನ್ನು ಗುರುತಿಸಿರುವುದು ಮಿಶ್ರಪ್ರತಿಯೆನ್ನಿಸಿಕೊಳ್ಳುವುದು. ಇಲ್ಲವೆ ಕೃತಿ ಸಾಕಷ್ಟು ವಿಸ್ತಾರವಾಗಿದ್ದು ಒಬ್ಬನಿಂದಲೇ ಬರೆಯಲು ಸಾಧ್ಯವಿಲ್ಲದಾದಾಗ ಬೇರೆ–ಬೇರೆ ಭಾಗಗಳನ್ನು ಬೇರೆ–ಬೇರೆ ಪ್ರತಿಕಾರರೂ ಲಿಖಿಸಿರುವುದು ಇದಕ್ಕೆ ಸೇರುತ್ತದೆ. 'ಇಂಥ ಪ್ರತಿಗಳನ್ನು ಬಹುಲಿಪಿಕಾರ ಪ್ರತಿಗಳೆಂದು ಕರೆದಿದೆ' ಎಂದು ಡಿ.ಎಲ್.ಎನ್ ಸೂಚಿಸುತ್ತಾರೆ.

6. ಸಂರಕ್ಷಿತ ಹಸ್ತಪ್ರತಿ

ಡಿ.ಎಲ್.ಎನ್. ಅವರು ಇದನ್ನು ಒಂದು ಬೇರೆ ವಿಭಾಗದಲ್ಲಿ ವಿವರಿಸಿಲ್ಲವಾದರೂ ಮಿಶ್ರಪ್ರತಿ ವಿಭಾಗದಲ್ಲಿಯೇ ಇದನ್ನು ಸೂಚಿಸಿ, ಇದಕ್ಕೆ ಉದಾಹರಣೆಯಾಗಿ 'ವರ್ಜಿಲ ಕವಿಯ 'ಏನಾಡ್' ಎಂಬ ಮಹಾಕಾವ್ಯದ ಮತ್ತು ಅವನವೇ ಆದ ಇತರ ಕಾವ್ಯಗಳ ಹಸ್ತಪ್ರತಿಗಳು ಈ ತೆರನಾದವು– 'ಧವಲಾ', ಎಂಬ ಮಹಾಗ್ರಂಥಗಳ ಅತಿಪ್ರಾಚೀನವೂ, ಅಧಿಕೃತವೂ ಆದ ಹಸ್ತಪ್ರತಿ ಮೂಡಬಿದರೆಯ ಜೈನಭಂಡಾರದಲ್ಲಿದೆ. ಇದರ ಪ್ರತಿಗಳನ್ನು ಮಾಡಲು ಹಲವು ಶತಮಾನಗಳಿಂದ ಯಾರಿಗೂ ಅವಕಾಶವನ್ನು ಕೊಡಲಿಲ್ಲ. ಇದು ಮಠಾಧಿಪತಿಗಳಿಂದ ಒಂದು ರೀತಿಯಲ್ಲಿ ಸುರಕ್ಷಿತವಾಗಿರುವ 'ಕಲಬುರ್ಗಿ ಜಿಲ್ಲೆಯ ಕೊಡೆಕಲ್ಲ ಗ್ರಾಮದ ಬಸವೇಶ್ವರ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಹೊರತೆಗೆದು ಓದಲ್ಪಡುವ, ದೇವರಂತೆ ಗದ್ದುಗೆಯಲ್ಲಿ ಪೂಜೆಗೊಳ್ಳುತ್ತಿರುವ ಶರಣರ ವಚನ ಗ್ರಂಥಗಳಿವೆ. ಇವು ಸಂರಕ್ಷಿತ ಹಸ್ತಪ್ರತಿಗಳು. ಜಾಗೀರ್‌ದಾರರು ಡಿ.ಎಲ್.ಎನ್ ಅವರು ಹೇಳಿರುವ ಎರಡು ಗ್ರಂಥಗಳ ಜೊತೆಗೆ ಏಕನಾಥನೆಂಬುವನು 'ಜ್ಞಾನೇಶ್ವರಿ' ಗ್ರಂಥದ ಕೆಡಬಾರದೆಂದು ಪ್ರಯತ್ನಿಸಿ 1506ರಲ್ಲಿ ಹಲವು ಪ್ರತಿಗಳನ್ನು ಉಪಯೋಗಿಸಿ ಒಂದು ಶುದ್ಧ ಪ್ರತಿ ತಯಾರಿಸಿ ಏಕನಾಥ ಮಠದಲ್ಲಿ ಕಾಪಾಡಿರುವ ಪ್ರತಿಯನ್ನು ಸಂರಕ್ಷಿತ ಪ್ರತಿಯೆಂದು ಹೇಳಿದ್ದಾರೆ.

ಹೀಗೆ ಹಸ್ತಪ್ರತಿಗಳನ್ನು ಬೇರೆ–ಬೇರೆ ಹೆಸರುಗಳಿಂದ ವಿವಿಧ ಗುಂಪುಗಳನ್ನಾಗಿ ಮಾಡಿದರೂ ಕೆಲವು ಹಸ್ತಪ್ರತಿಗಳು ಒಂದಕ್ಕಿಂತ ಹೆಚ್ಚು ಗುಂಪುಗಳಲ್ಲಿ ಗಣನೆಗೆ

ಬರುತ್ತವೆ. ಕವಿಯ ಸ್ವಹಸ್ತಪ್ರತಿ ಏಕೈಕ ಹಸ್ತಪ್ರತಿಯಾಗಿಯೂ, ಸಂರಕ್ಷಿತ ಪ್ರತಿಯಾಗಿಯೂ ಆಗಬಹುದು. ಮಾತೃಕಾ ಪ್ರತಿಯೆಂಬುದು ನಮಗೆ ದೊರೆಯದಿರುವ ಮೂಲವನ್ನೊ, ಕವಿಯ ಸ್ವಹಸ್ತಾಕ್ಷರ ಪ್ರತಿಯನ್ನೊ ಅಥವಾ ದೊರೆತವುಗಳಲ್ಲಿಯೇ ಮೂಲವೆಂದು ಕಂಡುಬಂದುದನ್ನೊ ಹೇಳುವಂತಹ ಮಾತಾಗಿರುವುದರಿಂದ ಇದನ್ನು ಇಲ್ಲಿ ಬಿಡಬಹುದಾಗಿದೆ. ಕಲಬುರ್ಗಿ ಅವರು ಸ್ವಹಸ್ತಾಕ್ಷರ ಪ್ರತಿಯನ್ನೇ ಮೂಲಪ್ರತಿ ಎಂದು ಕರೆದಿದ್ದರೆ, ಇದುಕೂಡ ಮಾತೃಕಾಪ್ರತಿಯೇ ಆಗುತ್ತದೆ. ಶುದ್ಧ ಸಂತಾನ, ಅಶುದ್ಧ, ಸಂತಾನ ಎಂಬ ಪದಗಳೇ ಶುದ್ಧವಾಗಿ ಕಾಣುವುದಿಲ್ಲ. ಅವುಗಳಲ್ಲಿ ಮಾತೃಕಾ, ಸೋದರಾ, ಪುತ್ರಿಕಾ ಮೊದಲಾದವುಗಳನ್ನು ಗುರುತಿಸುವುದುಅಗತ್ಯವಾಗಿ ಕಾಣುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಕವಿಯ ಸ್ವಹಸ್ತಾಕ್ಷರ ಪ್ರತಿ, ಏಕೈಕ ಹಸ್ತಪ್ರತಿ, ಪರಂಪರಾಗತ ಪ್ರತಿ, ಮಿಶ್ರಪ್ರತಿ ಮತ್ತು ಸಂರಕ್ಷಿತ ಪ್ರತಿ ಎಂಬ ಐದು ವಿಭಾಗಗಳನ್ನು ಮಾಡಿಕೊಳ್ಳುವುದು ಸಾಧುವಾಗಿ ಕಾಣುತ್ತದೆ.

ಹಸ್ತಪ್ರತಿ ಸಂರಕ್ಷಣಾ ವಿಧಾನ

ಹಸ್ತಪ್ರತಿಗಳು ಜ್ಞಾನ ಪ್ರಸಾರ ಮಾಡುವ ಸಾಧನಗಳು. ಇವು ಪ್ರಾಚೀನ ಸಾಹಿತ್ಯ ರಚನೆಗೆ ಅತಿ ಮಹತ್ವದ ಕೊಡುಗೆಗಳಾಗಿವೆ. ಹಸ್ತಪ್ರತಿಗಳು ಇರದಿದ್ದರೆ ಸಾಹಿತ್ಯವು ಅಜ್ಞಾತವಾಗುತ್ತಿತ್ತು. ಹಸ್ತಪ್ರತಿಗಳು ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ಭೌತಿಕ ಮತ್ತು ಸಾಂಸ್ಕೃತಿಕ ಜ್ಞಾನ ಸಂಪತ್ತಾಗಿದೆ. ನಮ್ಮ ಪ್ರಾಚೀನರು ಇಂಥ ಹಸ್ತಪ್ರತಿಗಳನ್ನು ಬಹು ವಿಧಾನಗಳಿಂದ ಸಂರಕ್ಷಿಸುತ್ತಾ ಬಂದಿದ್ದಾರೆ. ಒಂದೊಂದು ಕಟ್ಟುಗಳಲ್ಲಿಯೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರತಿಗಳಿವೆ. ಅವು ವ್ಯವಸ್ಥಿತವಾಗಿ ಇರುವಂತೆ ಮತ್ತು ಕೈಯಿಂದ ಅಥವಾ ಬೇರೆ ಕಾರಣಗಳಿಂದ ಕೆಳಗೆ ಜಾರಿ ಬಿದ್ದರೂ ಪ್ರತಿಗಳ ರಕ್ಷಣೆಗಾಗಿ ರಕ್ಷಾಕವಚಗಳನ್ನು ಅಳವಡಿಸುವುದು, ಧೂಳು–ಕ್ರಿಮಿಕೀಟಗಳು ಆಕ್ರಮಿಸದಂತೆ ಹಾಗೂ ಮಳೆ–ಗಾಳಿಗಳಿಂದ ರಕ್ಷಿಸಲು ಹತ್ತು ಹಲವು ಸುರಕ್ಷತೆಯನ್ನು ಅಳವಡಿಸಿಕೊಂಡಿದ್ದರು. ನಮ್ಮ ಪ್ರಾಚೀನರಿಗೆ ಹಸ್ತಪ್ರತಿಗಳ ರಚನೆಯ ಹಿಂದಿನ ಅಪಾರ ಶ್ರಮದ ಅಗಾಧ ಅರಿವಿತ್ತು, ಹೀಗಾಗಿಯೇ ಅವುಗಳನ್ನು ಅತ್ಯಂತ ಭಕ್ತಿ–ಭಾವಗಳಿಂದ ಹಾಳಾಗದಂತೆ ರಕ್ಷಿಸುತ್ತಾ ಬಂದಿದ್ದಾರೆ. ಅಂತೆಯೇ ಲಿಪಿಕಾರರು ತಮ್ಮ ಗ್ರಂಥಗಳಲ್ಲಿ ಹೀಗೆ ಭಿನ್ನವಿಸಿಕೊಂಡಿರುವುದು ಕಂಡುಬರುತ್ತದೆ–

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ

ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಖಂಡಶಃ...

ಪುಸ್ತಕ, ವನಿತೆ, ಸಂಪತ್ತು ಈ ಮೂರು ಇತರರ ಕೈಗೆ ಸೇರಿದರೆ ಅವು ಜೀರ್ಣವಾಗಿರುತ್ತವೆ, ಭ್ರಷ್ಟವಾಗಿರುತ್ತವೆ ಇಲ್ಲವೆ ಅರ್ಧಂಬರ್ಧವಾಗಿರುತ್ತವೆ. ಎಣ್ಣೆ, ನೀರು ಸೋಂಕದ ಹಾಗೆ ಪುಸ್ತಕಗಳನ್ನು ರಕ್ಷಿಸಬೇಕು.ಮತ್ತು ಅವುಗಳನ್ನು ಸಡಿಲವಾಗಿ ಕಟ್ಟಬಾರದು, ಮೂರ್ಖರ ಕೈಗೆ ಕೊಡಬಾರದೆಂದು ಹೇಳಲಾಗಿದೆ.

ಹಸ್ತಪ್ರತಿ ಕಟ್ಟುಗಳಲ್ಲಿರುವ ಗರಿಗಳನ್ನು ಅನುಕ್ರಮವಾಗಿ ಜೋಡಿಸಿ ಅದರ ಮೇಲೆ ಮತ್ತು ಕೆಳಗೆ ಅಂದರೆ ಗರಿಗಳ ಎರಡೂ ಬದಿಗಳಲ್ಲಿ ಮರದ ಹಲಗೆಗಳನ್ನು ಇಟ್ಟು ಕಟ್ಟುತ್ತಿದ್ದರು. ಗರಿಗಳು ಅಸ್ತವ್ಯಸ್ತವಾಗದಂತೆ ಅದರ ಅಂಚುಗಳು ಮುರಿಯದಂತೆ ಓಲೆಗರಿಯ ಆಕೃತಿಗೆ ಕೊರೆದು ಆ ಫಳಿಗಳ ನಡುವೆ ಎರಡೂ ಬದಿಗೆ ರಂಧ್ರ

ಕೊರೆದು ಅದರ ಮೂಲಕ ದಾರ ಪೋಣಿಸಿ ಕಟ್ಟುಗಳನ್ನು ಬಿಗಿಯಾಗಿ ಕಟ್ಟುತ್ತಿದ್ದರು. ದಾರ ಜಗ್ಗುವಿಕೆಯಿಂದ ಗರಿಗೆ ಪೆಟ್ಟು ತಾಗಿ ರಂಧ್ರಗಳು ದಿನದಿಂದ ದಿನಕ್ಕೆ ದೊಡ್ಡದಾಗಬಾರದೆಂಬ ಕಾರಣಕ್ಕಾಗಿ ಬೆಳ್ಳಿಯ ಉಂಗುರ ಮಾಡಿಸಿ ಹಾಕಿರುವ ಪ್ರತಿಗಳು ಸಿಕ್ಕಿವೆ. ಇಂಥ ಪ್ರತಿಗಳು ವಿರಳವೆಂದೆ ಹೇಳಬಹುದು. ರಕ್ಷಾಕವಚವುಳ್ಳ ಕೆಲವು ಹಸ್ತಪ್ರತಿಗಳನ್ನು ಕೆಂಪು, ಹಳದಿ ಅಥವಾ ರೇಷ್ಮೆ ಅರಿವೆಯಿಂದ ಸುತ್ತಿರುತ್ತಾರೆ. ಕಾರಣ ಈ ಕೆಂಪು–ಹಳದಿ ಬಣ್ಣಗಳಿಗೆ ಕ್ರಿಮಿ–ಕೀಟಗಳು ಹತ್ತಿರವೂ ಸುಳಿಯಲಾರದೆಂಬ ನಂಬಿಕೆ. ಹೀಗಾಗಿಯೇ ಇವತ್ತಿಗೂ ಕೆಲವು ಮಠ–ಮಾನ್ಯಗಳ ಹಸ್ತಪ್ರತಿ ಭಂಡಾರಗಳಲ್ಲಿ ಹಳದಿ–ಕೆಂಪು ಬಣ್ಣಗಳ ಅರಿವೆಗಳಿಂದ ಸುತ್ತಿರುತ್ತಾರೆ.

ಸಂದೂಕ(ಪೆಟ್ಟಿಗೆ)

ಹಸ್ತಪ್ರತಿಗಳನ್ನು ಸಂರಕ್ಷಿಸುವ ವಿಧಾನಗಳಲ್ಲಿ ಸಂದೂಕ ಕೂಡ ಒಂದಾಗಿದೆ. ಬಂಗಾರದಂದ ದ್ರವ್ಯಗಳಂತೆ ಹಸ್ರಪ್ರತಿಗಳನ್ನು ಸಂಪತ್ತು ಎಂದೇ ಭಾವಿಸಿ ಅವುಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸುರಕ್ಷಿತವಾಗಿ ಸಾಗುವಂತೆ ನೋಡಿಕೊಳ್ಳುತ್ತಿದ್ದರು. ಆ ಮೂಲಕ ಹಸ್ತಪ್ರತಿಗಳನ್ನು ಉಳಿಸುವ ದೂರದೃಷ್ಟಿ ನಮ್ಮ ಪ್ರಾಚೀನರಿಗೆ ಇದ್ದಂತೆ ತೋರುತ್ತದೆ.

ಹೊಗೆಗೂಡು

ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಹೊಗೆಗೂಡುಗಳ ಪಾತ್ರ ಮಹತ್ವದ್ದು. ಬೆತ್ತದ ಬುಟ್ಟಿಗಳನ್ನು ತಯಾರಿಸಿ ಅದರಲ್ಲಿ ಹಸ್ತಪ್ರತಿಗಳನ್ನು ಇಟ್ಟು ಅಡಿಗೆ ಮನೆಯ ನೇರಕ್ಕೆ ಇಲ್ಲ ಸ್ವಲ್ಪ ಆಚೀಚೆ ಮೇಲಕ್ಕೆ ಎತ್ತರದಲ್ಲಿ ನೇತುಹಾಕಿ ಕಟ್ಟುತ್ತಿದ್ದರು. ಇಂಥ ವ್ಯವಸ್ಥೆ ಮಲೆನಾಡ ಕರಾವಳಿ ಪ್ರದೇಶಗಳಲ್ಲಿ ಬಳಕೆಯಲ್ಲಿತ್ತು. ಈ ವ್ಯವಸ್ಥೆಯಲ್ಲಿ ಒಲೆಯ ಹೊಗೆಯು ನೇರವಾಗಿ ಬುಟ್ಟಿಗಳಿಗೆ ತಾಗುತ್ತಿತ್ತು. ಇದರಿಂದ ಹಸ್ತಪ್ರತಿಗಳು ಕ್ರಿಮಿ–ಕೀಟಗಳಿಂದ ಸುರಕ್ಷಿತವಾಗಿರುತ್ತಿದ್ದವು.

ಕರ್ನಾಟಕದಲ್ಲಿ ಸುಮಾರು 1000 ವರ್ಷಗಳಷ್ಟು ಹಳೆಯದಾದದ ಹಸ್ತಪ್ರತಿಗಳು ಬೇರೆ–ಬೇರೆ ಪ್ರದೇಶಗಳಲ್ಲಿ ಹರಡಿಕೊಂಡಿವೆ. ಇವುಗಳನ್ನು ಅರಕ್ಷಿತ ಹಸ್ರಪ್ರತಿಗಳು ಮತ್ತು ಸಂಗ್ರಹಿತ ಹಸ್ತಪ್ರತಿಗಳೆಂದು ವರ್ಗೀಕರಿಸಬಹುದು. ಯಾವುದಾದರೂ ಮನೆ, ಮಠ–ದೇವಾಲಯಗಳಲ್ಲಿ ಬಹುಕಾಲದಿಂದಲೂ ಬಿಡಿಬಿಡಿ ರೂಪದಲ್ಲಿ ಬಿದ್ದುಕೊಂಡಿರುವ ಹಸ್ತಪ್ರತಿಗಳನ್ನು ಅರಕ್ಷಿತ ಹಸ್ತಪ್ರತಿಗಳೆಂದು ಕರೆಯುತ್ತಾರೆ. ವಾಚನ, ಪ್ರವಚನ, ಅಧ್ಯಯನ ಪ್ರಯೋಜನಾರ್ಥ ಮಠ, ದೇವಾಲಯ, ಅರಮನೆಗಳಂತಹ ಪ್ರಾಚೀನ ಸಂಸ್ಥೆಗಳಲ್ಲಿ ಶೇಖರಿಸಲ್ಪಟ್ಟಂತಹ ಹಸ್ತಪ್ರತಿಗಳು ಸಂಗ್ರಹಿತ ಹಸ್ತಪ್ರತಿಗಳೆಂದು ಕರೆಯುತ್ತಾರೆ.

ಹಸ್ತಪ್ರತಿ ಸಣ್ಣದಿರಲಿ ದೊಡ್ಡದಿರಲಿ, ಉಪಯುಕ್ತವಿರಲಿ, ನಿರುಪಯುಕ್ತವಿರಲಿ ಅಲಕ್ಷಿಸದೇ ಅವುಗಳೆಲ್ಲವನ್ನು ರಕ್ಷಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಕರ್ನಾಟಕದಲ್ಲಿ ಹಸತ್ರಪ್ರತಿಗಳು ಹಾಳಾದದ್ದು ವಿರಳ. ಉಳಿದು ಬಂದದ್ದೇ ಹೇರಳ. ನಮ್ಮ ಪಾಚೀನರು ನಮಗೆ ನೀಡಿದ ಇಂಥ ಶ್ರೀಮಂತ ಹಸ್ತಪ್ರತಿ ಸಂಪತ್ತನ್ನು ಕಾಪಾಡುವ ಕಾರ್ಯವನ್ನು ಎಲ್ಲ ವಿಶ್ವವಿದ್ಯಾಲಯಗಳು, ಸರ್ಕಾರಿ ಸಂಸ್ಥೆಗಳು, ಹಸ್ತಪ್ರತಿ

ಭಂಡಾರಗಳು ಮಾಡಬೇಕಾಗಿದೆ. ಅದೇ ರೀತಿ ಹಸ್ತಪ್ರತಿಗಳನ್ನು ಸ್ಕ್ಯಾನರ್ ಯಂತ್ರದ ಮೂಲಕ ಸ್ಕ್ಯಾನ್ ಮಾಡುವುದು. ಅಥವಾ ಡಿಜಿಟಲ್ ಕಾಮರಾ ಮೂಲಕ ಸೆರೆ ಹಿಡಿಯುವುದು, ಮೈಕ್ರೋಫೋನ್ ಮುಖಾಂತರ ಓದಿ ರೆಕಾರ್ಡ್ ಮಾಡುವುದು, ಡಿ.ಟಿ.ಪಿ ಮಾಡುವುದರ ಮೂಲಕ ಕಾಪಾಡಿಕೊಂಡು ಬರಬಹುದಾಗಿದೆ.

ಪರಾಮರ್ಶನ ಗ್ರಂಥಗಳು

1. ಹಸ್ತಪ್ರತಿ ಶಾಸ್ತ್ರ – ಡಾ ಎಂ.ಎಂ. ಕಲಬುರ್ಗಿ
2. ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ – ಡಾ. ಬಿ.ಕೆ. ಹಿರೇಮಠ
3. ಹಸ್ತಪ್ರತಿ ಸಂರಕ್ಷಣೆಯ ವಿಧಾನಗಳು – ಬಿ.ಎಸ್. ಸಣ್ಣಯ್ಯ

❖❖❖

ರಣಚೆಂಡೆಯು ಮೊಳಗುತಿರಲು
ಅಬ್ಬರವೆ ಎದ್ದು ಬಂದು
ಕುಣಿದು ಹುಡಿಗಟ್ಟುವಂತೆ
ರಂಗ ಮೆರೆಯಿತು
ಚೆಂಡೆ ಬಡಿತ ಕುಣಿತ ಬಿಗಿತ
ಎಡೆಬಿಡದ ನಿನದ ಲಯಕೆ
ಬಡಿತದವನ ಕೈಯು ಸೋತು
ಕುಣಿತದವನ ಕಾಲೆ ಸೋತಿತು

ಅಕ್ಕಮಹಾದೇವಿಯ ವಚನಗಳಲ್ಲಿ ಸಾಹಿತ್ಯ ಸೌಂದರ್ಯ : ಒಂದು ನೋಟ

ಡಾ. ರಂಗಲಕ್ಷ್ಮಿ ಪಿ.ಎ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಲಾಲ್ ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರ್.ಟಿ. ನಗರ, ಬೆಂಗಳೂರು.

ಹನ್ನೆರಡನೆಯ ಶತಮಾನದ ಶರಣರು ತಮ್ಮ ಆಧ್ಯಾತ್ಮಿಕ ಸಾಧನೆಯ ಅನುಭವಗಳನ್ನೂ, ಸಮಾಜದ ರೀತಿ ನೀತಿಗಳನ್ನೂ, ಓರೆ ಕೋರೆಗಳನ್ನೂ, ಎಲ್ಲರಿಗೂ ತಿಳಿಯುವ ಮಾತುಗಳಲ್ಲಿ ಹೇಳಬೇಕಾಗಿತ್ತು. ಪದ್ಯ ಶೈಲಿಯ ಭಾವ ಸೌಂದರ್ಯ, ಗದ್ಯದ ವಿಚಾರ ಪ್ರತಿಪಾದನೆ, ಎಲ್ಲವನ್ನೂ ಒಳಗೊಂಡ ಒಂದು ವಿಶಿಷ್ಟ ರೀತಿಯ ಗದ್ಯ ಗೀತೆಗಳೆಂದು ವಚನಗಳನ್ನು ಕರೆಯಬಹುದು. ಭಾವಕ್ಕೆ ಅನುಗುಣವಾದ ವಿಶಿಷ್ಟ 'ಲಯ' ವಚನಗಳಲ್ಲಿ ಕಂಡು ಬರುತ್ತದೆ. ಅವರು ಕೊಡುವ ಅಲಂಕಾರಗಳು, ಬಳಸುವ ಉಪಮಾನಗಳು, ಹೋಲಿಕೆಗಳು, ಗಾದೆಯಂತೆ ಸೂತ್ರರೂಪವಾದ ಮಾತುಗಳು ಎಲ್ಲವೂ ಅವರ ಅಪಾರವಾದ ಲೋಕಾನುಭವಕ್ಕೂ ಲೋಕಕಾರುಣ್ಯಕ್ಕೂ ಸಾಕ್ಷಿಯಾಗಿದೆ.

ಶರಣರು ಅಲಂಕಾರಗಳನ್ನು ಉಪಯೋಗಿಸುವುದು ತಮ್ಮ ವಚನಗಳು ಸಾಹಿತ್ಯ ಕೃತಿಗಳಾಗಬೇಕೆಂಬುದುಕ್ಕಾಗಿ ಅಲ್ಲ. ಅವರ ಅನುಭವವನ್ನು ಅಭಿವ್ಯಕ್ತಗೊಳಿಸುವ ಸಾಧನವಾಗಿ ಅವು ಮೈವೆತ್ತಿದೆ. ಕೆಲವು ವಚನಗಳಲ್ಲಿ ಅವುಗಳದೇ ಆದ ಒಂದು ಲಯ, ಗತಿ ಕಂಡುಬರುತ್ತದೆ. ಯಮಕ, ಪ್ರಾಸ, ಅನುಪ್ರಾಸ ಶ್ಲೇಷ ಮೊದಲಾದ ಶಬ್ದಾಲಂಕಾರಗಳು ವಚನದ ಅಂಗಗಳಂತೆ ಮೈವೆತ್ತಿರುವುದು ಕಂಡು ಬರುತ್ತದೆ. ವಚನ ಬರಿಯ ಗದ್ಯವಲ್ಲ, ಗದ್ಯಕ್ಕೆ ಲಯ ಸೇರಿ ಅದು ಪದ್ಯಾತ್ಮಕವೂ ಭಾವಸೌಂದರ್ಯ, ಗದ್ಯದ ವಿಚಾರ, ಪ್ರತಿಪಾದನೆ ಎರಡನ್ನೂ ಒಳಗೊಂಡ ಒಂದು ವಿಶಿಷ್ಟ ರೀತಿಯ 'ಗದ್ಯ ಗೀತೆ'ಗಳೇ ವಚನಗಳು ಎನ್ನಬಹುದು. ವಚನಕಾರರು ಪದ್ಯವನ್ನು ಗದ್ಯದ ಮಟ್ಟಕ್ಕಿಳಿಸಿರಲಿಲ್ಲ. ಗದ್ಯವನ್ನೇ ಪದ್ಯದ ಪಟ್ಟಕ್ಕೇರಿಸಿದರು ಎಂಬ ಸಾ.ಶಿ. ಮರುಳಯ್ಯನವರ ಮಾತು ಅರ್ಥಪೂರ್ಣವಾದುದು. ವಚನಗಳಲ್ಲಿ ಪದ್ಯದ ಕ್ರಮಬದ್ಧ ಛಂಧೋಗತಿ ಇಲ್ಲದಿದ್ದರೂ ಅದರ ಲಯವಿದೆ.

ಭಾರತೀಯ ಭಾಷೆಗಳಲ್ಲಿ ಬೇರೆ ಯಾವ ಭಾಷೆಯಲ್ಲೂ ಈ ಪ್ರಕಾರದ ಸಾಹಿತ್ಯವಿಲ್ಲದಿರುವುದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ವಿಶ್ವಸಾಹಿತ್ಯದಲ್ಲಿ, ಇದೊಂದು ಅಪರೂಪದ ಕೊಡುಗೆಯೆಂದು ಕೆಲವರು ಗುರುತಿಸಿದ್ದಾರೆ. ವಚನ ಸಾಹಿತ್ಯದಂತಹ ಉದಾಹರಣೆಗಳು, ಸರಳವಾಗಿ, ಕ್ವಚಿತ್ತಾಗಿ, ಬಿಡಿಬಿಡಿಯಾಗಿ ಇತರ ಭಾಷೆಗಳ ಸಾಹಿತ್ಯದಲ್ಲಿದ್ದ ಸಿಕ್ಕ ಬಹುದಾದರೂ, ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ಮಾರ್ಪಟ್ಟುದು ಕನ್ನಡದಲ್ಲಿಯೂ ಎಂದು ನಿಸ್ಸಂಶಯವಾಗಿ ಹೇಳಬಹುದು. ಹಾಗಿದ್ದರೂ ಅದನ್ನು ಸೃಷ್ಟಿಸಿದವರು ಕೇವಲ ಸಾಹಿತಿಗಳಾಗಿರಲಿಲ್ಲ; ಅವರೆಲ್ಲಾ ಸತ್ಯಾನ್ವೇಷಿಗಳಾಗಿದ್ದರು. ಅಧ್ಯಾತ್ಮ ಸಾಧಕರಾಗಿದ್ದರು.

ವಚನಗಳು ವಚನಕಾರರ ಅನುಭವದ ಮೂಸೆಯಲ್ಲಿ ಮೂಡಿದವುಗಳಾದುದರಿಂದ ಸಾಹಿತ್ಯದ ಗುಣಗಳು ಹೊಂದಿವೆ. ಅಕ್ಕಮಹಾದೇವಿ ವಚಗಾರ್ತಿಯೆನ್ನುವುದಕ್ಕಿಂತ ಅನೇಕ ಕಡೆಗಳಲ್ಲಿ ಕವಿಯತ್ರಿಯಾಗಿ ಕಂಡು ಬರುತ್ತಾಳೆ ಎಂಬುವುದರಲ್ಲಿ ಸಂಶಯವಿಲ್ಲ. ಅವಳ ವಚನಗಳಲ್ಲಿ ಭಾವನಿರ್ಭರತೆ, ಉಪಮೆ, ರೂಪಕ ದೃಷ್ಟಾಂತಗಳು, ಲಯ ಮಾಧುರ್ಯ ಮುಂತಾದುವುಗಳು ಆಕೆಯ ಕವಿತ್ವಕ್ಕೆ ನಿದರ್ಶನಗಳಾಗಿವೆ. ಕನ್ನಡಸಾಹಿತ್ಯದ ಪ್ರಥಮ ಕವಿಯತ್ರಿ ಎಂಬ ಮನ್ನಣೆಗೆ ಪಾತ್ರಳಾಗಿದ್ದಾಳೆ.

ಅಕ್ಕನ ವಚನಗಳು ಅವಳ ಸಾಧನೆಯ ಮಧುರಭಕ್ತಿಯಿಂದ ತುಂಬಿಕೊಂಡು ವಿಶಿಷ್ಟ ರೀತಿಯಲ್ಲಿ ಸಾಗುತ್ತವೆ. ಅವಳ ಜೀವನ ವ್ಯಕ್ತಿತ್ವಕ್ಕೆ, ವಿಕಸನಕ್ಕೆ ಚನ್ನಮಲ್ಲಿಕಾರ್ಜುನನೇ ಆದಿ–ಅಂತ್ಯ. ಅಕ್ಕ ಭಾವುಕಳಾಗಿರುವಂತೆ, ವೈಚಾರಿಕಳೂ, ಜೀವನವನ್ನು ಹೊಸ ರೀತಿಯಲ್ಲಿ ಅರ್ಥೈಸುವ ಚಿಂತನಶೀಲಳೂ ಆಗಿರುವುದು ಗಮನಾರ್ಹವಾಗಿದೆ. ಮಹದೇವಿಅಕ್ಕನ ಶರಣಸತಿತ್ವದ ಅನುಭವ ನಮ್ಮ ಸಾಹಿತ್ಯದಲ್ಲಿಯೇ ಅನನ್ಯವಾಗಿರುವುದನ್ನು ಕಾಣುವುದಕ್ಕೆ ಅವಳ ಸ್ತ್ರೀತ್ವ ಮತ್ತು ಕವಿತ್ವಗಳೆರಡೂ ಕಾರಣವಾಗಿದೆಯೆಂದು ಹೇಳಬಹುದು. ಅನುಭವಗಳು ಇಲ್ಲಿ ಸಂಕೇತಗಳಾಗಿ, ಪ್ರತಿಮೆಗಳಾಗಿ ಆಧ್ಯಾತ್ಮಿಕವಾಗಿ ಅನುಭವವನ್ನು ನೀಡುತ್ತವೆ. ಕೆಳಗಿನ ವಚನಗಳು ಅವಳ ಕವಿಪ್ರತಿಭೆಯನ್ನು ಬಿಂಬಿಸುತ್ತವೆ.

ಅರಿಸಿನಿವನೆ ಮಿಂದು ಹೊಂದೊಡಿಗೆಯನ್ನೇ ತೊಟ್ಟು
ದೇವಾಂಗವನುಟ್ಟು ಪುರುಷ ಬಾರಾ, ಪುರುಷ ರತ್ನವೇ ಬಾರಾ
ನಿನ್ನ ಬರುವನ್ನಸುವಿನ ಬರವು ಬಾರಯ್ಯ

ಆದರೆ ಆಕೆ ನಿರೀಕ್ಷಿಸಿದಂತೆ ಆತ ಬಾರದಿದ್ದಾಗ

ಕಳವಳದ ಮನವು ತಲೆಕೆಳಗಾದುದವ್ವ
ಸುಳಿದು ಬೀಸುವ ಗಾಳಿ ಉರಿಯಾಯಿತವ್ವ
ಬೆಳದಿಂಗಳು ಬಿಸಿಲಾಯಿತ್ತು ಕಳದಿ

ಈ ಬಗೆಯ ತಳಮಳ ಆಕೆಯದು. ಸುಳಿದು ಬೀಸುವ ಗಾಳಿ, ಉರಿಯಾಗುವ, ಬೆಳದಿಂಗಳು ಬಿಸಿಲಾಗುವ ದೃಷ್ಟಾಂತಗಳು ಆಕೆಯ ತೀವ್ರಾನುಭವವನ್ನೇ ಪ್ರತಿನಿಧಿಸುತ್ತವೆ. ಕೊನೆಯವರೆಗೂ ಉಳಿದುಕೊಂಡು ಬಂದಿರುವ 'ಆ' 'ಳ' ಕಾರ ಪ್ರಾಸ ಅವಳ ಕಳವಳವನ್ನು ಅಂತಃಕರಣಕ್ಕೆ ನಾಟಿಸುವಂತೆ ಮಾಡುತ್ತದೆ. ಪ್ರತಿ ಚರಣದ ಅಂತ್ಯದಲ್ಲಿ ಬರುವ ಅವ್ವ ಎಂಬ ಪದವೂ, ಆತ್ಮೀಯ ಭಾವವನ್ನೇ ಮಿಡಿಯುತ್ತಿದೆ. ಇದೊಂದು ಸತ್ವಪೂರ್ಣ ಅಭಿವ್ಯಕ್ತಿಗೆ ನಿದರ್ಶನವಾಗಿದೆ.

ಅದೇ ರೀತಿ ಅಕ್ಕಮಹಾದೇವಿಯ ವಚನಗಳಲ್ಲಿ ಪ್ರಕೃತಿ ಸೌಂದರ್ಯವು ಕಲಾತ್ಮಕವಾಗಿ ಮೂಡಿಬಂದಿವೆ. ತನ್ನ ಪತಿಯೆಂದು ಭಾವಿಸಿದ್ದ ಚೆನ್ನಮಲ್ಲಿಕಾರ್ಜುನನನ್ನು ಕಂಡುಕೊಳ್ಳುವಲ್ಲಿಯೂ, ಅಕ್ಕಮಹಾದೇವಿಯ ಪ್ರಕೃತಿ ಪ್ರೇಮ ನಿಸರ್ಗದ ಬಗೆಗಿನ ಒಲುವುಗಳನ್ನು ವಿಸ್ಮಯ ಭಾವನೆಗಳನ್ನು ಕೆಲವು ವಚನಗಳಿಂದ ನಾವು ನೋಡಬಹುದು.

ಈಳೆ, ನಿಂಬು, ಮಾವು ಮಾದಲಕ್ಕೆ
ಹುಳೀನೀರೆರೆದವರಾರಯ್ಯ
.. ..
ಇಂತೀ ಜಲ ಒಂದೇ, ನೆಲ ಒಂದೆ, ಆಕಾಶ ಒಂದೆ
ತನ್ನ ಪರಿ ಬೇರಾಗಿಹ ಹಾಗೆ

ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನು

ಹಲವು ಜಗಂಗಳ ಕೂಡಿಕೊಂಡಿದ್ದರೇನು? ತನ್ನ ಪರಿಬೇರೆ

ಪ್ರಕೃತಿಯ ಆಂತರ್ಯದಲ್ಲಿಯೇ ತನ್ನ ಆರಾಧ್ಯದೈವವನ್ನು ಕಂಡುಕೊಳ್ಳಲು ಆಕೆ ಪ್ರಯತ್ನಿಸುತ್ತಾಳೆ. ದೃಷ್ಟಾಂತಗಳ ಮೂಲಕ ಪರಮಾತ್ಮನ ಇರುವಿಕೆಯನ್ನು ಚಿತ್ರಿಸಿರುವುದು ಅವಳ ಕಲ್ಪಕ ಶಕ್ತಿಗೆ, ಸಾಹಿತ್ಯ ಪ್ರತಿಭಾಸೃಷ್ಟಿಗೆ ಕುರುಹಾಗಿದೆ.

ಅಕ್ಕನ ಬದುಕು ಹಲವಾರು ಎಡರು ತೊಡರಗಳನ್ನು ಒಳಗೊಂಡ ಆಗರವಾಗಿತ್ತು ಅವುಗಳನ್ನು ಧಿಕ್ಕರಿಸಿ ಸ್ವಾಭಿಮಾನಿ ಅಕ್ಕ ಎನಿಸಿಕೊಂಡಳು.

ಬೆಟ್ಟದ ಮೇಲೊಂದು ಮನೆಯಮಾಡಿ

ಮೃಗಗಳಿಗಂಜಿದಡೆಂತಯ್ಯಾ?

.. .. ..

ಚೆನ್ನಮಲ್ಲಿಕಾರ್ಜುನನನ್ನು ಕದಳೀಬನದಲ್ಲಿ ಹುಡುಕುತ್ತಾ ಪ್ರಕೃತಿಯೊಂದಿಗೆ ಮಾತಾಡುತ್ತಾ ಸಾಗುವಳು ಈ ಸಂದರ್ಭದ ಅವಳ ವಚನಗಳಂತೂ ಅದ್ಭುತವಾಗಿ ಮೂಡಿ ಬಂದಿವೆ.

ಚಿಲಿಮಿಲಿ ಎಂದೋದುವ ಗಿಳಿಗಳಿರಾ,

ನೀವು ಕಾಣಿರೆ, ನೀವು ಕಾಣಿರೆ

.. ..

ಪ್ರಕೃತಿಯಲ್ಲಿ ನಲಿದಾಡುವ ಗಿಳಿ, ಕೋಗಿಲೆ ಹಂಸ, ನವಿಲುಗಳ ವೈಶಿಷ್ಟತೆಯನ್ನು ತಿಳಿಸುತ್ತಾ ವಚನದ ಅಂದ ಹೆಚ್ಚಾಗುವಂತೆ ಅಕ್ಕ ಬರೆಯುವಳು. ಅವುಗಳೊಂದಿಗಿನ ಅವಳ ಆತ್ಮೀಯತೆಯ ಸಂಭೋದನೆ ಚೆನ್ನಮಲ್ಲಕಾರ್ಜುನನ ನೆಲೆಯನ್ನು ಪ್ರಶ್ನಿಸುವ ರೀತಿಯು ಆಪ್ಯಾಯಮಾನವಾಗಿದೆ. ಇಡೀ ವಚನ ಲಯ ಸಂಯೋಜನೆಯನ್ನು ಪಡೆದುಕೊಂಡಿದ್ದು, ವಚನದ ಮಾಧುರ್ಯವನ್ನು ಇನ್ನಷ್ಟು ಹೆಚ್ಚುವಂತೆ ಮಾಡುತ್ತದೆ.

ಚಂದನವ ಕಡಿದು ಕೊರೆದು ತೊದೊಡೆ

ನೊಂದನೆಂದು ಕಂಪ ಬಿಟ್ಟಿತ್ತ ?

ತಂದು ಸುವರ್ಣವ ಕಡಿದೊರೆದೆಡೆ ಬೆಂದು ಕಳಂಕ ಹಿಡಿದೆತ್ತ ?

ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ವಿಚಾರವೆಂದರೆ ಭಾವದ ಅಭಿವ್ಯಕ್ತಿಗೆ ತಕ್ಕಂತೆ, ಪ್ರಾಸವಿರುವುದರಿಂದ ಚರಣಗಳ ಸೌಂದರ್ಯ ಹಿಗ್ಗುವುದು. ಆಕೆಯ ಭಕ್ತಿ ಸ್ಫುರಿಸಿ, ಕಾವ್ಯದ ಸೌಂದರ್ಯವನ್ನು ಹೊತ್ತು ನಿಂತಿದೆ. ಅವಳ ದೃಷ್ಟಿಯಲ್ಲಿ ಕಾಮ ಕ್ರೋಧಗಳೇ ಭವಿಗಳು. ಭವಿತನವನ್ನು ಕುರುತಾದ ಅವಳ ವ್ಯಾಖ್ಯಾನ ಅವಳ ಧಿಮಂತ ವೈಚಾರಿಕತೆಯನ್ನು ಸೂಚಿಸುತ್ತದೆ.

ನಾಳೆ ಬರುವುದು ನಮಗಿಂದೇ ಬರಲಿ

ಇಂದು ಬರುವುದು ನಮಗೀಗಲೆ ಬರಲಿ

ಆಗಾಗ ಎನ್ನದಿರು ಚೆನ್ನಮಲ್ಲಿಕಾರ್ಜುನ

ಅಕ್ಕನ ಈ ರೀತಿಯ ವಚನಗಳು ನೂರಾರಿವೆ. ಸೂಕ್ಷ್ಮ ಸಂವೇದನಾಶೀಲಳಾದ ಅಕ್ಕ ತನ್ನ ಅಂದಂದಿನ ಅನುಭವಗಳನ್ನು ವಚನಗಳ ಮೂಲಕ ಹೇಳಿದ್ದರಿಂದ ವಚನಗಳು ಸಾಕಾರ ಕೊಟ್ಟಿರುವುದರಿಂದ ಅವಳ ವಚನಗಳು ಒಂದಲ್ಲ ಒಂದು ರೀತಿಯಲ್ಲಿ ಕವಿತೆಯ ಹೊಳಹುಗಳಾಗಿ ಕಂಡುಬರುತ್ತವೆ. ಬದುಕಿನ ಚಿರಂತನ

ಮೌಲ್ಯಗಳ ಅನ್ವೇಷಣೆ ನಡೆಸುವ ಅಕ್ಕನ ವಚನಗಳು ಮೇಲ್ನೋಟಕ್ಕೆ ವಾಚ್ಯವೆನಿಸಿದರೂ, ನಿಗೂಢವಾದ ಅರ್ಥಗಳನ್ನು ಹೊರಡಿಸಬಲ್ಲ ಧ್ವನಿಶಕ್ತಿಯಿಂದ ಗಮನಾರ್ಹವಾಗಿದೆ.

ಪರಾಮರ್ಶನ ಗ್ರಂಥಗಳು

1) ವಚನ ಚಳುವಳಿ – ಡಾ. ಬಸವರಾಜ ಸಬರದ
2) ಅಕ್ಕಮಹಾದೇವಿ ಮತ್ತು ಕರಿಕಾಲಮ್ಮ – ಡಾ. ಎಂ.ಎಸ್. ಲಠ್ಠೆ
3) ವಚನಧರ್ಮಸಾರ – ಎಂ.ಆರ್. ಶ್ರೀನಿವಾಸಮೂರ್ತಿ
4) ಅಕ್ಕನ ವಚನಗಳು – ಡಾ. ಎಲ್. ಬಸವರಾಜು (ಸಂಪಾದಕ)
5) ಅಕ್ಕಮಹಾದೇವಿ – ಗುರುಲಿಂಗ ಕಾಪಸೆ.
6) ಶರಣರ ಅನುಭಾವ ಸಾಹಿತ್ಯ – ಡಾ. ಎಚ್. ತಿಪ್ಪೇರುದ್ರಸ್ವಾಮಿ.

❖❖❖

ಉಬ್ಬಸ ಬುಸುಗುಟ್ಟಿತು
ಭರತದ ಈ ರಭಸಕೆ
ಎದುರು ಕುಳಿತು ನೋಡುತಿದ್ದ
ಮನವು ಸೋತು ಸೊರಗಿತು
ಬಸವಳಿದಿಹ ರಂಗಮುಖದ
ತೆರೆಯು ಉಸಿರುಗಟ್ಟಿ ತಾನು
ಆಟ ಮುಗಿಸಲಿಳಿಯಿತು

ವೀಣಾ ಶಾಂತೇಶ್ವರ ಅವರ ಕತೆಗಳಲ್ಲಿ ಸ್ತ್ರೀವಾದ : ಸಾಂಸ್ಕೃತಿಕ ಮುಖಾಮುಖಿ

ಡಾ. ರಾಮರೆಡ್ಡಿ ಎಸ್. ರಡ್ಡೇರ
ಸಹ ಪ್ರಾಧ್ಯಾಪಕರು, ಆರ್.ಟಿ.ಇ.ಎಸ್. ಪದವಿ ಕಾಲೇಜು
ರಾಣೇಬೆನ್ನೂರು–581115, ಹಾವೇರಿ–ಜಿಲ್ಲೆ.

ಆಧುನಿಕ ಕನ್ನಡದ ಪ್ರಮುಖ ಸಣ್ಣ ಕತೆಗಾರ್ತಿಯರಲ್ಲಿ ವೀಣಾ ಶಾಂತೇಶ್ವರ ಅವರೂ ಒಬ್ಬರು. ಕಥಾ ನಿರೂಪಣೆಯ ಕಲೆ ಇವರಲ್ಲಿ ವಿಶೇಷವಾಗಿದೆ. ಕನ್ನಡದ ಮಹತ್ವದ ಸ್ತ್ರೀವಾದಿ ಬರಹಗಾರ್ತಿಯರಲ್ಲಿ ಒಬ್ಬರಾದ ಇವರ ಕೃತಿಗಳಿಗೆ ಬಂಡಾಯ ಮನೋಧರ್ಮವೇ ಮೂಲವಸ್ತುವಾಗಿದೆ. ವೀಣಾ ಅವರು ಮುಳ್ಳುಗಳು(1968), ಕೊನೆಯ ದಾರಿ(1972), ಕವಲು(1976), ಹಸಿವು(1984), ಬಿಡುಗಡೆ(1994)–ಮುಂತಾದ ಸಣ್ಣಕತೆಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಅದೃಷ್ಟ' ಎಂಬ ಅನುವಾದಿತ ಕಥಾ ಸಂಕಲನ ಕೂಡಾ ಪ್ರಕಟಿಸಿದ್ದಾರೆ. ಇವರು ನವ್ಯ–ಬಂಡಾಯ ಘಟ್ಟದ ಪ್ರಮುಖ ಲೇಖಕಿಯಾಗಿದ್ದು, ಇವರ ಕತೆ–ಕಾದಂಬರಿಗಳು ಸ್ತ್ರೀಪರ ಸಂವೇದನೆಗಳಿಂದ ಕೂಡಿವೆ.

ಸಮಕಾಲೀನ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನವನ್ನು ಸೂಕ್ಷ್ಮವಾಗಿ ಅವಲೋಕಿಸಿರುವ ಇವರು ಆಧುನಿಕ ಸ್ತ್ರೀಯರ ಗೊತ್ತುಗುರಿಗಳನ್ನು ತಮ್ಮ ಸಾಹಿತ್ಯದಲ್ಲಿ ಬಿಂಬಿಸಿದ್ದಾರೆ. ಇವರ ಕೃತಿಗಳಲ್ಲಿ "ಮದುವೆಗಾಗಿ ಹಂಬಲಿಸುವ ಅಥವಾ ಗಂಡಿನ ಸಹವಾಸಕ್ಕಾಗಿ ಪರಿತಪಿಸಿ ಅದರಿಂದ ನಿರಾಸೆಗೊಳ್ಳುವ ಹೆಣ್ಣುಗಳ ಬಗ್ಗೆಯೇ ಒತ್ತು ಹಾಕುತ್ತಾರೆ"[1] ಎಂಬ ಶ್ರೀಮತಿ ಬಿ.ಎಸ್. ವೆಂಕಟಲಕ್ಷ್ಮಿ ಅವರ ಅಭಿಪ್ರಾಯ ವಾಸ್ತವವಾಗಿದೆ. ವೀಣಾ ಅವರ ಕಥಾವಸ್ತುವನ್ನು ಕುರಿತು ವಿವೇಚಿಸಿರುವ ಡಾ. ಗಿರಿಜಾ ಶಾಸ್ತ್ರೀಯವರು "ಲೈಂಗಿಕ ಅಸಮಾನತೆಯ ಅಂಶಗಳ ಸೂಕ್ಷ್ಮ ಅವಲೋಕನವೇ ಇವರ ಸಾಹಿತ್ಯದ ಮೂಲವಸ್ತು"[2] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಇವರ 'ಮುಳ್ಳುಗಳು' ಕೃತಿಯಲ್ಲಿ ಒಟ್ಟು ಐದು ಸಣ್ಣಕಥೆಗಳಿವೆ. ಕೃತಿ ಶೀರ್ಷಿಕೆಯ 'ಮುಳ್ಳುಗಳು' ಒಳಗೊಂಡಂತೆ 'ಅತಿಥಿ', 'ಪ್ರಶ್ನೆ', 'ನೆನಪು... ಬರಿ ನೆನಪು', 'ನೀನೇ ತಂತಿ...' ಎಂಬ ಕತೆಗಳು ಇದರಲ್ಲಿವೆ. ಇದರಲ್ಲಿನ 'ಮುಳ್ಳುಗಳು' ಕಥೆಯ ನಾಯಕಿಯಾದ ಗಾಯಕಿ ಶಾಂತಿಯು ತನ್ನ ಸಾಮಿಪ್ಯ–ಸಂಪರ್ಕಕ್ಕೆ ಬಂದ ಪುರುಷರನ್ನೆಲ್ಲಾ ಮುಳ್ಳುಗಳೆಂದೇ ಪರಿಭಾವಿಸುತ್ತಾಳೆ. ಉಪನ್ಯಾಸಕ ವೃತ್ತಿಯ ಶಾಂತಿ ಉಪನ್ಯಾಸ ನೀಡುವಾಗ ತನ್ನ ಕ್ಲಾಸಿನ ಹುಡುಗರು ಉಪನ್ಯಾಸದ ಕಡೆಗೆ ಗಮನ ಕೊಡದೆ ತನ್ನ ಅಂಗಾಂಗಳನ್ನೇ ಅವಲೋಕಿಸುತ್ತಾರೆಂದು ಆಲೋಚಿಸುತ್ತಾಳೆ. "ಅವರ ಹದ್ದಿನ ಕಣ್ಣು ತನ್ನ ಮೇಲೆ–ಮುಖ, ಕೊರಳು, ಎದೆ, ಕಾಲು, ಚಪ್ಪಲಿಯವರೆಗೂ ಹರಿದಾಡುತ್ತದೆ. ಆ ದೃಷ್ಟಿ, ತನಗಾಗ ಮೈಗೆಲ್ಲಾ ಚೂಪಾದ ಮುಳ್ಳು ಚುಚ್ಚುತ್ತಿರುವಂಥ ಅನುಭವವಾಗುತ್ತದೆ"[3] ಎಂದು ಆಲೋಚಿಸುತ್ತಾಳೆ. ಅವಳ ಮನಸಿನಾಳದಲ್ಲಿ ಶಾಶ್ವತವಾಗಿ ನೆಲೆಯೂರಿದ್ದ ಖಳನಾಯಕ 'ಅವನು' ಅವಳನ್ನು ಪ್ರೀತಿಸಿ, ಬಳಸಿ, ತಿರಸ್ಕರಿಸಿದ ಹಳೆಯ ನೆನಪಿನ

ಗೂಡೊಂದಿದೆ. ಅವನೊಮ್ಮೆ "ಶಾಂತಿ, ನನ್ನ ಹೃದಯದಲ್ಲಿ ನಿನ್ನ ಮೂರ್ತಿ ಭದ್ರವಾಗಿ ನೆಲೆಯೂರಿದೆ ಎಂದು ಅಂದು ಹಿಂದೆಂದೋ ಅಂದಿದ್ದ 'ಅವನು' ಮೂರ್ತಿಸಹಿತವಾಗಿ ಹೃದಯವನ್ನು ಕಿತ್ತು ಬಿಸಾಡಿಬಿಟ್ಟ ನಂತರ. ಆ ಅಯೋಗ್ಯನ ಕಣ್ಣಲ್ಲೂ ಮುಳ್ಳಿದ್ದವೇ?"[4] ಎಂದು ಆಲೋಚಿಸುವಲ್ಲಿ ಶಾಂತಿಯ ಬಾಳಿನಲ್ಲಿ ಹಳೆಯ ನೆನಪಿನ ಗಾಯದ ನೋವು ತುರಿಕೆಯಾಗಿ ತೂರುತ್ತದೆ. ಪ್ರೊ. ದೇಸಾಯಿ ಎಂಬ ಹಾಸ್ಟೆಲ್ ವಾರ್ಡನ್ ತನ್ನನ್ನು ನೋಡುವ–ಮಾತನಾಡಿಸುವ ದೃಷ್ಟಿಯಲ್ಲಿ ಮುಳ್ಳು ಕಾಣದಿರುವುದಕ್ಕೆ ಅವನು ಆದರ್ಶದ ಮುಖವಾಡ ಧರಿಸಿರುವನೆಂದು ಶಾಂತಿ ಭಾವಿಸುತ್ತಾಳೆ. 'ಮುಳ್ಳುಗಳು' ಕಥೆಯ ಶಾಂತಿಯ ದೃಷ್ಟಿಯಲ್ಲಿ ಪುರುಷರೆಲ್ಲ ಸ್ತ್ರೀಯರ ಮೇಲೆ ದೌರ್ಜನ್ಯವೆಸಗುವ ಕ್ರೌರ್ಯದ ಸಂಕೇತವಾಗಿ ಕಂಡುಬರುತ್ತಾರೆ. 'ಅತಿಥಿ' ಕಥೆಯ ನಾಯಕಿ ಲೀಲಾವತಿ ಹಾಸ್ಟೆಲ್ ವಾರ್ಡನ್; ಅವಳು ಬಿಂಕದ ಹೆಣ್ಣು. ಪುರುಷನ ಹಂಗಿಲ್ಲದೆ ಬದುಕಬಲ್ಲೆನೆಂಬ ದುರಹಂಕಾರಕ್ಕೆ ಒಳಗಾಗಿ ಅವಿವಾಹಿತೆಯಾಗಿಯೇ ಉಳಿಯುತ್ತಾಳೆ. ವಯಸ್ಸಾದಂತೆ ಅವಳಿಗೆ ಪುರುಷನಿಲ್ಲದ ಬಾಳು ಅಪೂರ್ಣವೆಂದು ಅರ್ಥವಾದರೂ ಅದನ್ನು ಇತರರಿಗೆ ತೋರದಂತೆ ನಡೆದುಕೊಳ್ಳುತ್ತಾಳೆ. ಲೀಲಾವತಿಯ ಪಾತ್ರ ಚಿತ್ರಣದಲ್ಲಿ ಕತೆಗಾರ್ತಿಯ ಸ್ತ್ರೀವಾದಿತನ ಎದ್ದು ಕಾಣುತ್ತದೆ. ಇನ್ನು 'ನೆನಪು.....ಬರಿ ನೆನಪು' ಕಥೆಯಲ್ಲಿ ಬರುವ ಪಾವನಾ ವಿವಾಹದ ಸಂಭ್ರಮದಲ್ಲಿ ಇರುವಾಗ ಭಾವಿ ಪತಿಯ ಬಗೆಗೆ ಮಧುರವಾದ ಕಲ್ಪನೆಗಳನ್ನು ಕಟ್ಟಿಕೊಳ್ಳಬೇಕು; ಆದರೆ ಅದನ್ನು ಬಿಟ್ಟು ಬಾಲ್ಯ ಸ್ನೇಹಿತ ಎಲಿಸನ್‌ನೊಂದಿಗೆ ಕಳೆದ ಹಳೆಯ ಮತ್ತು ಗುಪ್ತ ಸಂಬಂಧದ ಕನವರಿಕೆಯಲ್ಲಿ ಇರುತ್ತಾಳೆ. ಹಾಗೆಯೇ ಈ ಸಂಕಲನದ 'ಪ್ರಶ್ನೆ' ಕಥೆಯಲ್ಲಿ ಗಂಡಿನಿಂದ ನಿರಾಶೆಗೊಳ್ಳುವ ತರುಣಿಯೊಬ್ಬಳ ತುಮುಲ ಅಭಿವ್ಯಕ್ತಗೊಂಡಿದೆ. ಒಟ್ಟಾರೆಯಾಗಿ 'ಮುಳ್ಳುಗಳು' ಸಂಕಲನದ ಕಥೆಗಳೆಲ್ಲ ಪುರುಷರನ್ನು ಮುಳ್ಳುಗಳಿಗೆ ಹೋಲಿಸುವಲ್ಲಿ ಸಫಲವಾಗಿವೆ; ಆದರೆ ಪುರುಷನಿಲ್ಲದ ಸ್ತ್ರೀಯ ಬಾಳು ನಿರರ್ಥಕವೆಂಬ ವಾಸ್ತವವನ್ನು ಮರೆಮಾಚಿದೆ.

ವೀಣಾ ಶಾಂತೇಶ್ವರ ಅವರ 'ಕೊನೆಯ ದಾರಿ' ಇನ್ನೊಂದು ಮಹತ್ವದ ಕಥಾಸಂಕಲನವಾಗಿದೆ. ಇದರಲ್ಲಿ 'ಕೊನೆಯ ದಾರಿ', 'ಹೆಣ', 'ಮಳೆ ಬಂದಾಗ', 'ನೆರಳು' ಮತ್ತು 'ಹೊರಟು ಹೋದವರು'– ಎಂಬ ಕಥೆಗಳಿವೆ. ಈ ಸಂಕಲನದ ಶೀರ್ಷಿಕೆಯ ಕಥೆ 'ಕೊನೆಯ ದಾರಿ'ಯ ನಾಯಕಿ ಲೀಲಾ ಕಟ್ಟಿಕೊಂಡ ಗಂಡನೊಂದಿಗೆ ಹೊಂದಿಕೊಳ್ಳದೆ ಅವನನ್ನು ತಿರಸ್ಕರಿಸಿ, ಸಂಪ್ರದಾಯಕ್ಕೆ ವಿರುದ್ಧವಾದ ತಾಯ್ತನದ ಹಂಬಲವನ್ನು ಹೊಂದುತ್ತಾಳೆ. ಜಾತಿ–ಮತ–ಧರ್ಮಗಳನ್ನು ಲೆಕ್ಕಿಸದೆ ಗೋವಿಂದಮೂರ್ತಿ, ವಿನಯ, ವಿಲಿಯಮ್ಸ್, ಗಡ್ಡದ ಸಾಹೇಬ ಮುಂತಾದ ಗಂಡಸರೊಂದಿಗೆ ಸಂಗಸುಖವನ್ನು ಅನುಭವಿಸುತ್ತಾಳೆ. ಅವರೆಲ್ಲ ಲೀಲಾಳೊಂದಿಗೆ ಅನೈತಿಕ ಸಂಬಂಧವನ್ನು ಬಯಸುತ್ತಾರೆ ಹೊರತು ಅವಳ ತಾಯ್ತನದ ಆಶೆಯನ್ನು ಪೂರೈಸಲು ಹಿಂಜರಿಯುತ್ತಾರೆ. ಕೊನೆಗೆ ಲೀಲಾ ತನ್ನ ತಂದೆಯ ವಯಸ್ಸಿನ ವಿದುರ ಶಂಕರಗೌಡನ ಸಖ್ಯದಲ್ಲಿ ತಾಯ್ತನ ಹೊಂದಲು ನಿರ್ಧರಿಸುತ್ತಾಳೆ. ನಾಗರಿಕತೆಯ ಮುಸುಕಿನಲ್ಲಿ ಅನೈತಿಕವಾಗಿ ಬಾಳುವ ಪುರುಷರ ಮುಖವಾಡವನ್ನು 'ಕೊನೆಯ ದಾರಿ' ಕಥೆ ಬಹಿರಂಗಗೊಳಿಸುತ್ತದೆ. "ಇಂದಿನ ನಾಗರಿಕತೆಯ ಮುಸುಕಿನಲ್ಲಿರುವ ಬೂರ್ಜ್ವಾಗಳನ್ನು ಎಕ್ಸ್‌ಪೋಜ್ ಮಾಡುವ ರೀತಿಯನ್ನು ಮತ್ತು ಸಂಕೀರ್ಣಗೊಳ್ಳುತ್ತಿರುವ ಸಿನಿಕತನಕ್ಕೆ ಒಳಗಾಗುತ್ತಿರುವ ಜನಾಂಗವನ್ನು ಗೋವಿಂದಮೂರ್ತಿ, ಗಡ್ಡದ ಸಾಹೇಬ, ವಿನಯ, ವಿಲಿಯಮ್ಸ್‌ರು

ಪ್ರತಿನಿಧಿಸಿದರೆ, ಗ್ರಾಮಾಂತರ ಪ್ರದೇಶದ ಜಮೀನ್ದಾರಿಕೆಯ ರೀತಿಯನ್ನು ಶಂಕರಗೌಡರು ಬಿಂಬಿಸುತ್ತಾರೆ"[5]– ಎಂಬ ಡಾ. ಮಲ್ಲಿಕಾ ಘಂಟಿಯವರ ಅಭಿಪ್ರಾಯವು 'ಕೊನೆಯ ದಾರಿ' ಕತೆಯ ವಾಸ್ತವಿಕತೆಯನ್ನು ಸೂಕ್ತವಾಗಿ ತಿಳಿಸುತ್ತದೆ.

ವೀಣಾ ಶಾಂತೇಶ್ವರ ಅವರ 'ಕವಲು' ಕಥಾ ಸಂಕಲನ ಇನ್ನೊಂದು ಪ್ರಮುಖ ಕೃತಿಯಾಗಿದೆ. ಈ ಸಂಕಲನದ 'ಕವಲು' ಕಥೆಯು ಸ್ತ್ರೀ ಶೋಷಣೆಯ ಇನ್ನೊಂದು ಬಗೆಯನ್ನು ತೋರಿಸುತ್ತದೆ. 'ಕವಲು' ಕಥೆಯ ನಾಯಕಿ ಮಿನಿಯನ್ನು ವಿವಾಹಿತ ಪುರುಷನೊಬ್ಬ ಪ್ರೀತಿಸುತ್ತಾನೆ. ಅವಳನ್ನು ವಿವಾಹವಾಗುವುದಾಗಿ ನಂಬಿಸುತ್ತಲೇ 20 ವರ್ಷಗಳ ಕಾಲ ಸಖ್ಯ–ಸಂಬಂಧವನ್ನು ಮುಂದುವರೆಸುತ್ತಾನೆ. ಪತ್ನಿ–ಮಕ್ಕಳೊಂದಿಗೆ ಬಾಳುತ್ತಲೇ ನೌಕರನೊಬ್ಬನು ಮಿನಿಯೊಂದಿಗೆ ಅನೈತಿಕ ಸಂಬಂಧ ಬೆಳೆಸಿ, ಅವಳಿಗೆ ಬಾಳು ನೀಡುವ ಬರವಸೆ ತೋರುವುದು; ತನ್ನ ಸ್ವಂತ ಕುಟುಂಬದ ಬಗೆಗೆ ಹೊಂದಿದ್ದ ಅತಿಮೋಹವನ್ನು ಮಿನಿಗೆ ತೋರದೆ ಅದನ್ನು ತ್ಯಜಿಸಿ ಬರುವ ಹುಸಿ ಆಶೆ ಮೂಡಿಸುವುದು ಕಥೆಯುದ್ದಕ್ಕೂ ಸಾಗುತ್ತದೆ. ಜೀವನ ಪರ್ಯಂತರವೂ ಹುಸಿ ಬರವಸೆಯಲ್ಲಿ ಅನೈತಿಕತೆ ಮುನ್ನಡೆಸುವ ಅವನು ತನ್ನನ್ನು ಸೂಳೆಯಂತೆ ಕಾಣುತ್ತಿದ್ದಾನೆ ಎಂಬ ಅರಿವು ಮೂಡಿದ ಮೇಲೆ ಮಿನಿ ಅವನ ಸಖ್ಯವನ್ನು ದಿಟ್ಟಯಾಗಿ ತೊರೆಯುವ 'ಕೊನೆಯ ದಾರಿ'ಗೆ ನಿರ್ಧರಿಸುತ್ತಾಳೆ.

'ಕವಲು' ಸಂಕಲನದಲ್ಲಿ ಬರುವ ಇನ್ನೊಂದು ಕಥೆ 'ಮರ್ಯಾದೆ'. ಈ ಕಥೆಯ ನಾಯಕ ಯಜಮಾನನು ಅತ್ಯಂತ ಶ್ರೀಮಂತ ಮತ್ತು ಪ್ರತಿಷ್ಠಿತ ವ್ಯಕ್ತಿ. ವಯಸ್ಸು 60 ದಾಟಿವೆ; ಆರು ಜನ ಮಕ್ಕಳು; ಪತ್ನಿ ತೀರಿದ್ದಾಳೆ. ಯಜಮಾನರಿಗೆ ಏಕಾಂತ ಕಾಡಬಾರದೆಂದು ಮತ್ತು ಮನೆಯ ಕೆಲಸಕ್ಕಾಗಿ ವಿಧವೆ ಸರಸ್ವತಿಯನ್ನು ನೇಮಿಸಿಕೊಳ್ಳಲಾಗುತ್ತದೆ. ಸರಸ್ವತಿಯು ಯಜಮಾನರನ್ನು ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಾಳೆ. ಊಟ–ವಸತಿ–ಆರೋಗ್ಯ–ಅನಾರೋಗ್ಯಗಳ ಸಂದರ್ಭಗಳಲ್ಲಿ ಸಹಾಯ ಮಾಡುವ ಸರಸ್ವತಿಯ ಬಗೆಗೆ ಯಜಮಾನರಲ್ಲಿ ಒಂದು ರೀತಿಯ ಸಖ್ಯ ಭಾವ ಬೆಳೆಯುತ್ತದೆ. ವಿಧವೆಯಾದ ಅವಳನ್ನು ವಿವಾಹವಾಗಬೇಕೆಂದು ಯಜಮಾನರು ನಿರ್ಧರಿಸುತ್ತಾರೆ. ಮನೆಯ ಸದಸ್ಯರೆಲ್ಲ ಅದಕ್ಕೆ ತೀವ್ರವಾಗಿ ವಿರೋಧಿಸುತ್ತಾರೆ. ತಂದೆಯ ಸಮಸ್ಯೆಯನ್ನು ಅರಿತ ಅವರ ಹಿರಿಯ ಮಗಳು ಕಮಲ ಮನೆಯ ಸದಸ್ಯರೆಲ್ಲರ ವಿರೋಧದ ನಡುವೆಯೂ ತಂದೆಯ ವಿವಾಹಕ್ಕೆ ಸಮ್ಮತಿ ಸೂಚಿಸುತ್ತಾಳೆ. 'ಮರ್ಯಾದೆ' ಎಂಬುದು ಕೇವಲ ಶ್ರೀಮಂತಿಕೆ ಮತ್ತು ಪ್ರತಿಷ್ಠೆಯಲ್ಲಿಲ್ಲ; ಅದು ಬದುಕಿನ ಅಗತ್ಯ ಮತ್ತು ಹೊಂದಾಣಿಕೆಯಲ್ಲೂ ಇದೆ– ಎಂಬುದನ್ನು ಈ ಕಥೆ ಸೊಗಸಾಗಿ ನಿರೂಪಿಸುತ್ತದೆ.

'ಕವಲು' ಸಂಕಲನದಲ್ಲಿ ಬರುವ 'ಹೀಗೊಂದು ಕಥೆ'ಯ ನಾಯಕಿ ವಿವಾಹವಾಗದೆ ಗೆಳೆಯನೊಬ್ಬನೊಂದಿಗೆ ಸಂಬಂಧ ಬೆಳೆಸಿ ಗರ್ಭಿಣಿಯಾಗುತ್ತಾಳೆ. ಸಾಮಾಜಿಕ ರೀತಿ–ನೀತಿ, ಪದ್ಧತಿ–ಪರಂಪರೆ, ನಿಯಮ–ನಿಗ್ರಹಗಳನ್ನು ಲೆಕ್ಕಿಸದೆ ತಾಯ್ತನದ ಉತ್ಸಾಹ ತಳೆಯುತ್ತಾಳೆ. ಆದರೆ ಅವಳ ಗೆಳೆಯ ಮಾತ್ರ ಆತಂಕಕ್ಕೆ ಈಡಾಗಿ ತಾವಿಬ್ಬರೂ ಮಗುವಿನ ಜನನಕ್ಕೆ ಮೊದಲು ವಿವಾಹ ಬಂಧನಕ್ಕೆ ಒಳಗಾಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಅವಳು ವಿವಾಹಬಂಧನವನ್ನು ತಿರಸ್ಕರಿಸಿ "ಮಗು ಹೆರುವುದು ಹೆಂಗಸಿನ ಜನ್ಮಸಿದ್ಧ ಹಕ್ಕು; ನನಗೀಗ ಯಾರ ಅವಶ್ಯಕತೆಯೂ ಇಲ್ಲ" ಎಂದು ಹೇಳುತ್ತಾಳೆ. ಮಹಿಳೆಯ ತಾಯ್ತನದ ಹಕ್ಕಿನ ನೆಪದಲ್ಲಿ ದಿಟ್ಟಿಯಾಗಿ

ನಿಲ್ಲುವ ಈ ಕಥೆಯ ನಾಯಕಿ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಧಿಕ್ಕರಿಸುವಂತೆ ಆಲೋಚಿಸುತ್ತಾಳೆ.

ಶ್ರೀಮತಿ ವೀಣಾ ಅವರ 'ಹಸಿವು' ಕಥಾ ಸಂಕಲನವು ಇನ್ನೊಂದು ಮಹತ್ವದ ಕೃತಿ. ಈ ಸಂಕಲನದಲ್ಲಿನ 'ಕಾಯುತ್ತಲಿದ್ದ ಕರಿಯ' ಎಂಬ ಕಥೆ ಸ್ತ್ರೀ ಬಂಡಾಯದ ಇನ್ನೊಂದು ಮುಖವನ್ನು ಪರಿಚಯಿಸುತ್ತದೆ. ಹಳ್ಳಿಯ ಗೌಡರ ಮನೆಯಲ್ಲಿ ಜೀತದಾಳಾಗಿದ್ದ ಕರಿಯ ಅಸ್ಪೃಶ್ಯನಾದರೂ ಗಟ್ಟಿಮುಟ್ಟಾದ ದೇಹದ ಯುವಕ. ಪಟ್ಟಣದಲ್ಲಿ ನೆಲೆಸಿದ್ದ ಗೌಡರ ತಮ್ಮನ ಮಗಳು ಹಳ್ಳಿಗೆ ಬಂದಾಗ ಕರಿಯನನ್ನು ಕಂಡು, ಆಕರ್ಷಣೆಗೊಂಡು ಕಗ್ಗತ್ತಲಿನ ಅಡವಿಯಲ್ಲಿ ಕರಿಯನನ್ನು ಒತ್ತಾಯಿಸಿ ಕದ್ದು ಲೈಂಗಿಕ ತೃಪ್ತಿಯನ್ನು ಹೊಂದುತ್ತಾಳೆ. ಅದರ ಫಲವಾಗಿ ಅವಳು ಗರ್ಭವತಿಯಾಗುತ್ತಾಳೆ. ಮಗಳ ಗರ್ಭಕ್ಕೆ ಕಾರಣ ತಿಳಿಯದ ಗೌಡರು ಮರ್ಯಾದೆಗೆ ಹೆದರಿ ಬಿಜಾಪುರದಲ್ಲಿ ಮನೆ ಮಾಡಿ ಹೆರಿಗೆ ಮಾಡಿಸುತ್ತಾರೆ. ಹುಟ್ಟಿದ ಹೆಣ್ಣು ಕೂಸನ್ನು ಯಾರಿಗಾದರೂ ದಾನ ಮಾಡಬೇಕೆನ್ನುವಷ್ಟರಲ್ಲಿ ಕರಿಯ ಅದನ್ನು ತನ್ನ ಮಗಳೆಂದು ಗುಟ್ಟಾಗಿ ಸಾಕುವ ಬಯಕೆ ವ್ಯಕ್ತಪಡಿಸುತ್ತಾನೆ. ಮುಂದೆ ಗೌಡರು ತಮ್ಮ ಮಗಳನ್ನು ಬೇರೆ ಕಡೆ ವಿವಾಹ ಮಾಡಿಕೊಡುತ್ತಾರೆ. ಅವಳು ಎಲ್ಲವನ್ನೂ ಮರೆತು ಸುಖವಾಗಿ ಇರುತ್ತಾಳೆ. ಅನಾಥವಾದ ಅವಳ ಮಗಳು ಲಚಮಿ ಗೌಡರ ಮನೆಯ ಹುಡುಗರೊಂದಿಗೆ ಬೆಳೆದು, ಅವರೊಂದಿಗೆ ಪೇಟೆಯಲ್ಲಿ, ವಿದೇಶದಲ್ಲಿ ಓದಿ ತಜ್ಞ ವೈದ್ಯೆಯಾಗಿ ಬೆಳೆಯುತ್ತಾಳೆ. ಅವಳು ಊರಿಗೆ ಮರಳಿ ಬರುತ್ತಾಳೆ; ಆಸ್ಪತ್ರೆ ನಡೆಸುತ್ತಾಳೆ ಎಂಬ ಬರವಸೆ ಇಟ್ಟುಕೊಂಡು ಅವಳ ಬರುವಿಕೆಗಾಗಿ ಕರಿಯ ಕಾಯುತ್ತಾನೆ. ಲಚಮಿ ಬರುವುದೇ ಇಲ್ಲ. ಆದರೆ ಕಥೆಯ ಕೊನೆಯವೆಗೂ ಕರಿಯ ಮಾತ್ರ ಅವಳ ಬರುವಿಕೆಗಾಗಿ ಕಾಯುತ್ತಲೇ ಇದ್ದಾನೆ. ಪೇಟೆಯಲ್ಲಿ ಕಲಿತ ಹೆಣ್ಣೊಬ್ಬಳು ಹೀಗೆ ಸ್ವೇಚ್ಛೆಯಾಗಿ ವರ್ತಿಸುವ ರೀತಿ ಕೂಡಾ ಸ್ತ್ರೀಸ್ವಾತಂತ್ರ್ಯದ ಪ್ರತೀಕವಾಗಿ ಕತೆಯಲ್ಲಿ ಬಿತ್ತರಗೊಂಡಿರುವುದು ಸೋಜಿಗವೆನಿಸುತ್ತದೆ.

ಅಂತೆಯೇ 'ಹಸಿವು' ಸಂಕಲನದ 'ತಿರುಗಿ ಹೋದಳು', 'ಬಿಡುಗಡೆ' ಕಥಾ ಸಂಕಲನದಲ್ಲಿ ಬರುವ 'ಅನಾಥೆ', 'ನಿರಾಕರಣೆ', 'ರಾಧವ್ವ', 'ಒಲವೇ ಜೀವನ', 'ಮರೀಚಿಕೆ'– ಈ ಮುಂತಾದ ಕಥೆಗಳು ಕೂಡಾ ಒಂದಿಲ್ಲೊಂದು ಸ್ತ್ರೀ ಸಂವೇದನೆಯ ವಿಚಾರಗಳನ್ನು ಪ್ರತಿಪಾದಿಸುತ್ತವೆ. ಇವರ 'ಬಿಡುಗಡೆ' ಕಥೆಯಲ್ಲಿ ಬರುವ "ವಾಸ್ತವದ ವ್ಯಾಪ್ತಿ ಕನಸುಗಳ ವ್ಯಾಪ್ತಿಗಿಂತ ಅದೆಷ್ಟೋ ಪಾಲು ಹೆಚ್ಚಿನದು, ಅದೆಷ್ಟೋ ಪಾಲು ಕಹಿಯಾದದ್ದು, ಅಸಹ್ಯವಾದದ್ದು, ಕ್ರೂರವಾದದ್ದು"[6] ಎಂಬ ಲೇಖಕರ ವಿಚಾರದಲ್ಲಿ ಕೌಟುಂಬಿಕ ವ್ಯಾಪ್ತಿಯಲ್ಲಿ ನಡೆಯುವ ಪುರುಷ ದೌರ್ಜನ್ಯವನ್ನು ಕುರಿತಾಗಿದೆ.

ಇವರ ಕತೆಗಳಲ್ಲಿ ಪರಂಪರಾಗತ ಸಾಂಸ್ಕೃತಿಕ ಮೌಲ್ಯಗಳ ಪ್ರತಿರೋಧದ ಅಭಿವ್ಯಕ್ತಿ ಇರುವುದು ಎದ್ದು ಕಾಣುತ್ತದೆ. ಭಾರತೀಯ ಸಂಸ್ಕೃತಿಯು ಪರಂಪರಾಗತವಾಗಿ ಪೋಷಿಸಿಕೊಂಡು ಬಂದಿರುವ ಪಾತಿವೃತ್ಯ ಮತ್ತು ಸ್ತ್ರೀಧರ್ಮವನ್ನು ಇವರ ಕತೆಗಳ ಬಹುತೇಕ ನಾಯಕಿಯರು ಮೀರಿದ್ದಾರೆ. ಸಾಂಸ್ಕೃತಿಕ ಮೌಲ್ಯಗಳನ್ನು ವಿರೋಧಿಸುವ ಇಲ್ಲಿನ ಹಲವು ಸ್ತ್ರೀಪಾತ್ರಗಳು ಅಸಹಜವಾದ ಸ್ತ್ರೀಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತವೆ; ಅದರ ಜೊತೆ ಜೊತೆಗೆ ವಾಸ್ತವವನ್ನು ಉಪೇಕ್ಷಿಸುತ್ತವೆ. ಸ್ತ್ರೀಯರನ್ನು ನಿಕೃಷ್ಟವಾಗಿ ಕಾಣುವ 'ಕೊನೆಯ ದಾರಿ' ಕಥೆಯ ಗೋವಿಂದಮೂರ್ತಿ, ವಿನಯ, ವಿಲಯಮ್ಸ್, ಗಡ್ಡದ ಸಾಹೇಬರಂಥ ವ್ಯಭಿಚಾರಿ ಪುರುಷ ಪಾತ್ರಗಳಿಗೆ ಧಿಕ್ಕಾರವಿರಲಿ; ಅಂಥವರನ್ನೇ

ಮುಖ್ಯವಾಗಿರಿಸಿಕೊಂಡು ಇಡೀ ಪುರುಷ ವರ್ಗವನ್ನು ವಿರೋಧಿಸುವ ವೈಚಾರಿಕತೆ ಸಾಧುವೆ ಎಂಬುದು ಆಲೋಚನಾರ್ಹ ಸಂಗತಿಯಾಗಿದೆ. ತನಗೆ ಇಷ್ಟವಾದ ಪುರುಷರೊಂದಿಗೆ ಅಕ್ರಮವಾಗಿ ಸಂಬಂಧ ಬೆಳೆಸಿ ವಿವಾಹವಾಗದೆ ತಾಯ್ತನದ ಹಂಬಲ ಹೊಂದುವ ಲೀಲಾಳಂತಹ ಸ್ತ್ರೀಪಾತ್ರಗಳು ಪರಂಪರಾಗತ ಸಾಂಸ್ಕೃತಿಕ ಮೌಲ್ಯಗಳಿಗೆ ವ್ಯತಿರಿಕ್ತವಾಗಿ ವರ್ತಿಸಿರುವುದು ಶೋಚನೀಯವೆನಿಸುತ್ತದೆ. ಸಾಹಿತ್ಯವು ಮೌಲ್ಯಗಳ ಪ್ರತಿಪಾದನೆಯ ಮಾಧ್ಯಮವಾಗಬೇಕೇ ಹೊರತು ಸಾಮಾಜಿಕ ಮೌಲ್ಯಗಳನ್ನು ವಿರೋಧಿಸುವ ಸಾಧನವಾಗಬಾರದು.

ಒಟ್ಟಾರೆಯಾಗಿ ಹೇಳುವುದಾದರೆ ವೀಣಾ ಶಾಂತೇಶ್ವರ ಅವರ ಸಣ್ಣ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ಉಸಿರಾಟವಿದೆ; ಸ್ತ್ರೀವಾದವೇ ಇವರ ಕಥೆಗಳ ಜೀವಾಳವಾಗಿದೆ. ಅತಿಯಾದ ಸ್ತ್ರೀ ಸ್ವಾತಂತ್ರ್ಯದ ಬಯಕೆಯ ಅಭಿವ್ಯಕ್ತಿಯಲ್ಲಿ ಈ ಕಥೆಗಳಲ್ಲಿನ ಬಹುತೇಕ ಸ್ತ್ರೀ ಪಾತ್ರಗಳು ಸಂಸ್ಕೃತಿ–ಸದಾಚಾರಗಳನ್ನೂ ಧಿಕ್ಕರಿಸಿವೆ.

ಅಡಿಟಿಪ್ಪಣಿಗಳು:

1. ಬಿ.ಎಸ್. ವೆಂಕಟಲಕ್ಷ್ಮಿ – ಕನ್ನಡ ಲೇಖಕಿಯರ ನೆಲೆ–ಬೆಲೆ, ಪು.130–131, 1999.
2. ಡಾ.ಗಿರಿಜಾ ಶಾಸ್ತ್ರೀ – ಕಥಾ ಮಾನಸಿ, ಪು.149, 2000.
3. ವೀಣಾ ಶಾಂತೇಶ್ವರ – ನಡೆದದ್ದೇ ದಾರಿ, ಪು.6, 1999; ಪ್ರ:ಸುಂದರ ಪುಸ್ತಕ ಪ್ರಕಾಶನ, ಧಾರವಾಡ
4. ಅದೇ, ಪು.7, 1999
5. ಡಾ. ಮಲ್ಲಿಕಾ ಘಂಟಿ – ಕನ್ನಡದಲ್ಲಿ ಮಹಿಳಾ ಸಾಹಿತ್ಯ, ಪು.275.
6. ವೀಣಾ ಶಾಂತೇಶ್ವರ – ನಡೆದದ್ದೇ ದಾರಿ, ಪು.220, 2006.

ಪರಾಮರ್ಶನ ಗ್ರಂಥಗಳು

1. ಡಾ. ಶಕುಂತಲಾ ದುರಗಿ – ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ, 1999; ಪ್ರ: ಉಜ್ವಲ ಪ್ರಕಾರ, ವೆಂಕಟೇಶ ನಗರ, ಗುಲಬರ್ಗಾ–585102.
2. ಕುಲಶೇಖರಿ ಮತ್ತು ವೈ.ಕೆ. ಸಂಧ್ಯಾಶರ್ಮ (ಸಂ:) – ನಮ್ಮ ಲೇಖಕಿಯರು, 1982; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ಕಮಲ ಹೆಮ್ಮಿಗೆ – ಹನ್ನೊಂದು ಕಥೆಗಳು, 1993; ಪ್ರ: ಸಂಕ್ರಮಣ ಪ್ರಕಾಶನ, ಧಾರವಾಡ.
4. ಡಾ. ಶಾಂತಾ ಇಮ್ರಾಪುರ – ಸಾಹಿತ್ಯ ಸಂವೇದನೆ, 2007; ಪ್ರ: ಚಿತ್ತಾರ, ನಿರ್ಮಲ ನಗರ, ಧಾರವಾಡ–3.
5. ಡಾ. ಎಚ್.ಎಸ್. ಶ್ರೀಮತಿ(ಸಂ:) – ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, 2006; ಪ್ರ: ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.
6. ಡಾ. ಜಿ.ಎಸ್. ಅಮೂರ(ಸಂ:) – ಅವಳ ಕಥೆಗಳು, 1999; ಪ್ರ: ಪ್ರಿಸಂ ಬುಕ್ಸ್ ಪ್ರೈ.ಲಿ., ಬೆಂಗಳೂರು–560070

❖❖❖

ಸಿರಿ ಸಂಧಿ : ಸಂಶೋಧನೆಗೊಂದು ಮಾರ್ಗದರ್ಶಿ ಕೃತಿ

ಡಾ. ರೋಹಿಣಾಕ್ಷ ಶಿರ್ಲಾಲು
ಸಹಾಯಕ ಪ್ರಾಧ್ಯಾಪಕರು
ಜಾನಪದ ಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ

ಕರ್ನಾಟಕದ ಪ್ರಾದೇಶಿಕ ಜಾನಪದ ಅಧ್ಯಯನದಲ್ಲಿ ಮುಕುಟಪ್ರಾಯವಾಗಿ ಕಾಣಿಸುವುದು ತುಳುನಾಡಿನ ಜಾನಪದದ ಕುರಿತ ಶಾಸ್ತ್ರೀಯವಾದ ಸಂಶೋಧನೆಯೇ. ಕರ್ನಾಟಕದಲ್ಲಿ ತುಳುನಾಡಿನ ಜನಪದ ಸಾಹಿತ್ಯ, ಆಚರಣೆಗಳು, ರಂಗಭೂಮಿಯ ಕುರಿತಾಗಿ ನಡೆದಷ್ಟು ಅಧ್ಯಯನ ಒಂದು ನಿರ್ದಿಷ್ಟ ಪ್ರದೇಶದ ಜನಪದ ಸಂಸ್ಕೃತಿಯ ಬಗೆಗೆ ನಡೆದಿಲ್ಲ ಎಂದೇ ಹೇಳಬಹುದು. ದೇಶಿಯ ವಿದ್ವಾಂಸರನ್ನು ಮಾತ್ರವಲ್ಲ, ವಿದೇಶಿ ಸಂಶೋಧನಾಸಕ್ತರನ್ನೂ ಆಕರ್ಷಿಸಿದ, ಸೈದ್ಧಾಂತಿಕವಾದ ನೆಲೆಗಟ್ಟಿನಿಂದಲೇ ಅಧ್ಯಯನಕ್ಕೊಳಗಾದ ಭೂತಾರಾಧನೆ, ಯಕ್ಷಗಾನ, ಸಿರಿ ಆಚರಣೆ, ಕಂಬಳಗಳು ಸಂಶೋಧಕರ ಪಾಲಿನ ಬತ್ತದ ಒರತೆಗಳಾಗಿವೆ. ಹೀಗಾಗಿ ಪ್ರತೀ ವರ್ಷವೂ ಈ ಒಂದೊಂದೂ ಪ್ರಕಾರಗಳಲ್ಲಿಯೂ ಹಲವು ಸಂಶೋಧನಾ ಕೃತಿಗಳು ಪ್ರಕಟವಾಗುತ್ತಲೇ ಇದೆ. ಈ ಸಾಲಿಗೆ ಸೇರಿದ ಒಂದು ನೂತನ ಕೃತಿಯೇ ಡಾ. ಚಿನ್ನಪ್ಪ ಗೌಡ ಅವರ **"ಮಾಚಾರು ಗೋಪಾಲ ನಾಯ್ಕ ಹೇಳಿದ ಸಿರಿ ಸಂಧಿ"**. ಉಡುಪಿಯ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ ಪ್ರಕಟಿಸಿರುವ ಈ ಕೃತಿಯು 513 ಪುಟಗಳ ವಿಸ್ತಾರವನ್ನು ಹೊಂದಿದೆ.

ತುಳು ಭಾಷೆಯಲ್ಲಿ ಲಭ್ಯವಿರುವ ಅತ್ಯಂತ ಸುದೀರ್ಘ ಮೌಖಿಕ ಮಹಾಕಾವ್ಯ ಎಂದೇ ಪರಿಗಣಿಸಲಾದ 'ಸಿರಿ ಸಂಧಿ'ಯನ್ನು ಅನೇಕ ಜನ ವಿದ್ವಾಂಸರು ಬೇರೆ ಬೇರೆ ಗಾಯಕರಿಂದ ಸಂಗ್ರಹಿಸಿ ಪ್ರಕಟಿಸಿದ್ದು, ಡಾ. ಕೆ. ಚಿನ್ನಪ್ಪ ಗೌಡ ಅವರ ಈ ಕೃತಿಯು ಮೂಲ ತುಳು ಪಠ್ಯದ ಜತೆಗೆ ಕನ್ನಡ ಗದ್ಯಾನುವಾದ ಹಾಗೂ ಅಧ್ಯಯನ ಪೂರ್ಣವಾದ ಪ್ರಸ್ತಾವನೆಯ ಕಾರಣಕ್ಕೆ ವಿಶೇಷವಾಗಿ ಸಂಶೋಧನಾಸಕ್ತರ ಗಮನ ಸೆಳೆಯುತ್ತದೆ. 290 ಪುಟಗಳಷ್ಟಿರುವ 'ಸಿರಿ ಸಂಧಿ'ಯ ತುಳು ಪಠ್ಯಕ್ಕೆ 213 ಪುಟಗಳಷ್ಟು ಸುದೀರ್ಘವಾದ ಗದ್ಯಾನುವಾದ ಸಹಿತ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಕಾರಣದಿಂದ ಸಿರಿ ಸಂಧಿಯನ್ನು ಅರ್ಥಮಾಡಿಕೊಂಡು, ಈ ಕುರಿತು ಇನ್ನಷ್ಟು ಚರ್ಚೆ ವಾಗ್ವಾದಗಳನ್ನು ಕಟ್ಟಿ ಬೆಳೆಸಲು ಈ ಕೃತಿಯು ಅತ್ಯುಪಯುಕ್ತವಾದ ಪ್ರವೇಶಿಕೆಯಾಗಿದೆ. ಕನ್ನಡದ ಜಾನಪದ ವಿದ್ವಾಂಸರು ಮತ್ತು ಸಾಹಿತ್ಯ ಚಿಂತಕರಲ್ಲಿ ಕೆಲವರು ಸಾಂಧರ್ಬಿಕವಾಗಿ ಸಿರಿ ಕಥನವನ್ನು ಉಲ್ಲೇಖಿಸುತ್ತಾ ಬಂದಿದ್ದರೂ, ಇಷ್ಟೊಂದು ವಿವರವಾದ ವಿಶ್ಲೇಷಣೆ ನಡೆದಿರಲಿಲ್ಲ. ಈ ಕೃತಿಯು ನಮ್ಮ ಜ್ಞಾನಪರಂಪರೆಯ ವಿಸ್ತರಣೆಯ ಒಂದು ಪಠ್ಯವಾಗಿಯೂ ಮಹತ್ವಪೂರ್ಣವಾಗಿ ಕಾಣುತ್ತದೆ.

ಸಿರಿ ಕೇಂದ್ರೀತವಾಗಿ ಈಗಾಗಲೇ ನಡೆದಿರುವ ಅಧ್ಯಯನ ಪರಂಪರೆಯ

ಮುಂದುವರಿಕೆಯಾಗಿಯೇ ಈ ಕೃತಿಯನ್ನು ಗಮನಿಸಬೇಕು. ತುಳುನಾಡಿನ ಸಾಂಸ್ಕೃತಿಕ ಚಿತ್ರಣವನ್ನು, ಚರಿತ್ರೆಯನ್ನು ಕಟ್ಟಿಕೊಡುವ ಯಾವುದೇ ಮಾದರಿಯ ಕೆಲಸವೂ 'ಸಿರಿ'ಯನ್ನು ಬಿಟ್ಟು ಮಾಡಿದರೆ ಅದೊಂದು ಅಪೂರ್ಣ ಕೆಲಸವೇ ಆಗುತ್ತದೆ ಎನ್ನುವಷ್ಟರ ಮಟ್ಟಿಗೆ ಸಿರಿಯು ತುಳುನಾಡಿನ ಜನರ ಸಾಂಸ್ಕೃತಿಕ, ಧಾರ್ಮಿಕ ಬದುಕಿನ ಭಾಗವೇ ಆಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಹೀಗೆ ಸಿರಿ ಪರಂಪರೆ ತುಳುವರ ಬದುಕನ್ನು ಆವರಿಸಿಕೊಂಡಿದೆ. ಈ ಹಿನ್ನೆಲೆಯಿಂದಲೇ ಸಿರಿ ಸಂಧಿಯ ಗಾಯಕ ಮಾಚಾರು ಗೋಪಾಲ ನಾಯ್ಕ ಅವರು ಸಿರಿ ಕಾವ್ಯವನ್ನು 'ತುಳುನಾಡಿನ ಬೆಳಕು' ಎಂದು ಕರೆದಿದ್ದಾರೆ. ಇಂದಿಗೂ ಇದೊಂದು ಜೀವಂತವಾದ ಕಾವ್ಯ ಪರಂಪರೆಯಾಗಿದೆ.

ಸಿರಿ ಸಂಧಿಯ ಪಠ್ಯದ ಜತೆಗೆ ಈ ಕೃತಿಯು ಜಾನಪದ ಅಧ್ಯಯನದ ಸೈದ್ಧಾಂತಿಕ ಸ್ವರೂಪವನ್ನೂ ಕೂಡ ವಿಶ್ಲೇಷಣೆ ಮಾಡುತ್ತದೆ. ಸಂಧಿಯನ್ನು ಹಾಡುವ ಪಠ್ಯಕ್ಕೂ, ಹೇಳಿದ ಪಠ್ಯಕ್ಕೂ ಇರುವ ವ್ಯತ್ಯಾಸ, ಅದಕ್ಕಿರುವ ಕಾರಣ, ಗೋಪಾಲ ನಾಯ್ಕರಿಗಿದ್ದ ಕಾವ್ಯ ಕಟ್ಟುವ ಸಾಮರ್ಥ್ಯ, ಕಥಾವಸ್ತುವೊಂದು ಮೂಲ ಚೌಕಟ್ಟನ್ನು ಉಳಿಸಿಕೊಂಡೇ ಮತ್ತೆ ಮತ್ತೆ ಹಾಡಿದಾಗ ಆಗುವ ವ್ಯತ್ಯಾಸಗಳು, ಬೇರೆ ಬೇರೆ ಗಾಯಕರು ಹಾಡಿದಾಗ ಅವರಲ್ಲಿ ಕಾಣಿಸಿಕೊಳ್ಳುವ ಭಿನ್ನ ಪಠ್ಯಗಳು... ಹೀಗೆ ಅನೇಕ ಜಾನಪದ ಅಧ್ಯಯನದ ಸೈದ್ಧಾಂತಿಕ ಸಂಗತಿಗಳನ್ನು ಪ್ರಸ್ತಾವನೆಯಲ್ಲಿ ಚರ್ಚಿಸಲಾಗಿದೆ.

ಕೃತಿಯ ಆರಂಭದಲ್ಲೇ ಮೂಲತಃ ಈ ಮೌಖಿಕ ಮಹಾ ಕಾವ್ಯದ ವಿವರವಾದ ಕನ್ನಡ ಗದ್ಯಾನುವಾದವನ್ನು ನೀಡಿರುವುದರಿಂದ ತುಳುವೇತರರೂ ಸಿರಿ ಸಂಧಿಯನ್ನು ಅರ್ಥಮಾಡಿಕೊಂಡು ಓದಿಗೆ ಪ್ರವೇಶಿಸಲು ಅನುಕೂಲಕಕರವಾಗಿದೆ. ಲೇಖಕರಾದ ಡಾ.ಚಿನ್ನಪ್ಪ ಗೌಡ ಅವರು ಈ ಗದ್ಯಾನುವಾದದ ಕುರಿತು ಹೇಳಿರುವಂತೆ "ಗೋಪಾಲ ನಾಯ್ಕ ಅವರ ವ್ಯಕ್ತಿಭಾಷೆ, ಕಾವ್ಯ ಶೈಲಿ, ಮತ್ತು ಜನಪದ ಮಹಾಕಾವ್ಯವನ್ನು ಅವರು ಕಟ್ಟುವ ಮತ್ತು ಮರುಕಟ್ಟುವ ಕ್ರಮಗಳು, ಘಟನೆಗಳನ್ನು ಜೋಡಿಸುವ ವಿನ್ಯಾಸಗಳು ಇವುಗಳ ಕಡೆಗೆ ಕನ್ನಡ ಜಾನಪದ ವಿದ್ವಾಂಸರ ಗಮನ ಸೆಳೆಯುವ ಉದ್ದೇಶವನ್ನು ಕೂಡ ಈ ಅನುವಾದ ಹೊಂದಿದೆ" ಎಂದಿದ್ದಾರೆ.

ಸಿರಿ ಸಂಧಿಯನ್ನು ಅಧ್ಯಯನ ಮಾಡಿದ ಲೇಖಕರು ಇಡೀ ಈ ಮಹಾಕಾವ್ಯದೊಳಗೆ ಮೂರು ಕಥಾನಕಗಳಿರುವುದನ್ನು ಗುರುತಿಸಿದ್ದಾರೆ. ಅವೆಂದರೆ, ಮೊದಲನೆಯದು ಸಿರಿ ಕತೆ, ಎರಡನೆಯದು ಸೊನ್ನೆ ಗಿಂಡ್ಯೆಯ ಕತೆ ಹಾಗೂ ಮೂರನೆಯದು ಅಬ್ಬಯ ದಾರಯ ಕತೆ. ಈ ಮೂರು ಕಥಾನಕಗಳು ಮೂರು ತಲೆಮಾರಿನ ಸಂಘರ್ಷದ ಕಥನವೂ ಹೌದು. ಜನಪದ ಮಹಾಕಾವ್ಯ ಒಂದರ ಅತ್ಯಂತ ವ್ಯವಸ್ಥಿತವಾದ ಮತ್ತು ಶಾಸ್ತ್ರೀಯವಾದ ಅಧ್ಯಯನಕ್ಕೆ ಸಿರಿ ಅಧ್ಯಯನದ ಈ ಕೃತಿಯೇ ಒಂದು ಮಾದರಿಯಾಗಿದೆ.

ಸಿರಿಯ ಕತೆ ಮೂಲತಃ ಹೆಣ್ಣೊಬ್ಬಳ ಸ್ವಾಭಿಮಾನದ ಕತೆ. ಮನೆಯೊಳಗಿನ ಆಡಳಿತ, ಭೂಮಿಯ ಮೇಲಿನ ಹಕ್ಕು, ಹೆಣ್ಣಿನ ಸ್ವಾತಂತ್ರ್ಯಕ್ಕಾಗಿ ನಡೆಸುವ ಹೋರಾಟವೇ ಸಿರಿಯ ಪ್ರಧಾನ ಕತೆಯಾಗಿದೆ. ಕುಟುಂಬದೊಳಗೆ ಹೆಣ್ಣಿನ ಮೇಲಿನ ದೌರ್ಜನ್ಯದ ಚಿತ್ರಣವೇ ಸೊನ್ನೆ ಗಿಂಡ್ಯೆಯ ಕತೆ. ಮುಗ್ಧ ಹೆಣ್ಣು ಮಕ್ಕಳಿಬ್ಬರ ಅಕಾಲಿಕ ಸಾವಿನ ದುರಂತದ ಕತೆ ಅಬ್ಬಯ ದಾರಯರ ಕತೆ. ಇದನ್ನು ಮಹಾಕಾವ್ಯದ ಮೂರು ಪ್ರಕರಣಗಳು ಎನ್ನಬಹುದು. ಅಂತಿಮವಾಗಿ ಸಿರಿ, ಕುಮಾರ, ಸೊನ್ನೆ, ಗಿಂಡ್ಯೆ, ಅಬ್ಬಯ, ದಾರಯ.

...ಹೀಗೆ ಎಲ್ಲರೂ ಶರೀರ ಬಿಟ್ಟು ಮಾಯವಾದ ಬಳಿಕ ದೈವತ್ವಕ್ಕೆ ಏರಿ ಆರಾಧನೆಗೆ ಒಳಗಾಗುವುದೇ ಈ ಕಥನದ ವೈಶಿಷ್ಟ್ಯ.

ಸಂತಾನವಿಲ್ಲದ ಸತ್ಯನಾಪುರದ ಅರಮನೆಯ ಅಜ್ಜೆರು ದೈವದೇವರ ಪ್ರಸಾದವಾಗಿ 'ಸಿರಿ'ಎನ್ನುವ ಹೆಣ್ಣು ಮಗುವನ್ನು ಪಡೆಯುವಲ್ಲಿಂದ ಆರಂಭವಾಗುವ ಈ ಸಂಧಿ (ಸಿರಿ ಕಥನ), ದೈವದೇವರ ಅವಕೃಪೆಗೆ ಒಳಗಾಗಿ ಅವಳಿ ಮಕ್ಕಳಾದ ಅಬ್ಬಯ ದಾರಯರನ್ನು ಅಕಾಲಿಕವಾಗಿ ಕಳೆದುಕೊಳ್ಳುವಲ್ಲಿಗೆ ಕತೆ ಮುಕ್ತಾಯವಾಗುತ್ತದೆ. ಇದು ಭಾರತದ ಯಾವುದೇ ಮಹಾಕಾವ್ಯಗಳಿಗೆ ಕಡಿಮೆ ಇಲ್ಲದಂತೆ ಶ್ರೀಮಂತವಾದ ಪಾತ್ರಪ್ರಪಂಚ, ಲೋಕವರ್ಣನೆ, ಜೀವನಾನುಭವಗಳನ್ನು ಒಳಗೊಂಡ ಒಂದು ಮಹಾಕಾವ್ಯವಾಗಿಯೇ ಕಾಣಿಸಿಕೊಳ್ಳುತ್ತದೆ. ಈ ಕೃತಿಯು ಸಿರಿ ಕಥನದ ಬಹು ಆಯಾಮಗಳ ಅಧ್ಯಯನಕೊಂದು ನಿದರ್ಶನವಾಗಿದೆ.

ಸಿರಿ ಕತೆಯು ತನ್ನ ವಿಸ್ತಾರ ಮತ್ತು ವೈವಿಧ್ಯತೆಯ ಕಾರಣವಾಗಿ ತುಳುನಾಡಿನ ಜನಪದ ಕಥೆಗಳ ಸಾಲಿನಲ್ಲಿಯೇ ಬಹು ಎತ್ತರದಲ್ಲಿ ನಿಲ್ಲಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಕೇವಲ ಒಂದು ಕಥೆಯ ಸರಣಿಯಾಗಿ ಮಾತ್ರ ನೋಡಲು ಸಾಧ್ಯವಿಲ್ಲ. ಅದರೊಳಗೆ ತುಳುನಾಡಿನ ಸಾಂಸ್ಕೃತಿಕ, ಧಾರ್ಮಿಕ, ಕೃಷಿ ಬದುಕಿನ ಹಲವು ಮಗ್ಗುಲುಗಳ ಚರ್ಚೆಗೆ ಬೇಕಾದ ಆಕರವೂ ಆಗಿದೆ. ಬಹಳ ಪುರಾತನ ಎನ್ನಬಹುದಾದ ಕಥಾನಕವೊಂದು ವರ್ತಮಾನವೂ ಆಗುವ ಬಗೆ ಎಂದರೆ ಇದೇ ಆಗಿದೆ. ಮೇಲ್ನೋಟಕ್ಕೆ ಇಲ್ಲಿನ ಅರಮನೆ, ಗುತ್ತು ಮನೆತನಗಳ ಒಳಗಿನ ಕತೆಯನ್ನು ಗಮನಿಸಿದರೆ ಇದು ಬಂಟ ಸಮಾಜಕ್ಕೆ ಸೇರಿದ ಕಥೆಯೇ ಆದರೂ, ಆಶಯದ ಕಾರಣಕ್ಕೆ ಇಡೀ ಸಮಾಜವನ್ನು ಆವರಿಸಿಕೊಳ್ಳುತ್ತದೆ. ಸಾಮಾಜಿಕವಾಗಿ ಇಡಿಯ ಕಥೆ ಎತ್ತಿಕೊಳ್ಳುವ ಮುಖ್ಯ ಸಂಗತಿ ಹೆಣ್ಣಿನ ಬದುಕಿಗೆ ಸಂಬಂಧಿಸಿದ್ದಾಗಿದೆ. ಜತೆಗೆ ಒಂದು ಕಾಲದ ತುಳುನಾಡಿನ ನ್ಯಾಯವ್ಯವಸ್ಥೆ, ಅಂತಹ ನ್ಯಾಯಾಂಗ ನಿಷ್ಪಕ್ಷಪಾತವಾಗಿ ನ್ಯಾಯತೀರ್ಮಾನ ಮಾಡದೇ ಸಿರಿಗೆ ಅನ್ಯಾಯವೆಸಗಿದಾಗ ಅಂತಹ ನ್ಯಾಯವಿತರಣಾ ವ್ಯವಸ್ಥೆಯನ್ನು ದಿಕ್ಕರಿಸಿದ ಬಗೆ, ಅದರ ಮುಂದುವರಿದ ಭಾಗವಾಗಿ ಸಿರಿ ತಾನೇ ತೆಗೆದುಕೊಳ್ಳುವ ತೀರ್ಮಾನಗಳು ಎಲ್ಲವೂ ಸೇರಿ ಸಿರಿ ಕತೆಯನ್ನು ಹೆಚ್ಚು ಸಂಕೀರ್ಣಗೊಳಿಸುತ್ತದೆ. ಈ ಕೃತಿಯಲ್ಲಿ ಲೇಖಕರು ಸಿರಿಯ ಕತೆ, ಸೊನ್ನೆ ಗಿಂಡ್ಯೆಯ ಕತೆ, ಅಬ್ಬಯ ದಾರಯ ಕತೆಗಳನ್ನು ಇಡಿಯಾಗಿಯೂ ನೋಡುತ್ತಾ, ಬಿಡಿ ಬಿಡಿಯಾಗಿಯೂ ವಿಶ್ಲೇಷಣೆ ಮಾಡುತ್ತಾರೆ. ಬಿಡಿಯಾಗಿ ನೋಡುವಾಗ ಪ್ರತಿಯೊಂದು ಕತೆಯ ಆಶಯವನ್ನು ವಿವರವಾಗಿ ಚರ್ಚೆಮಾಡುತ್ತಾರೆ. ಒಂದು ಪ್ರಬಂಧದ ರೂಪದಲ್ಲಿ ಈ ಆಶಯಗಳ ಚರ್ಚೆ ಇಲ್ಲಿ ಪ್ರಕಟವಾದರೂ, ಮುಂದೆ ಈ ಆಶಯಗಳ ಕುರಿತಾಗಿಯೇ ಪ್ರತ್ಯೇಕವಾದ ಸಂಶೋಧನೆಯನ್ನು ಮಾಡುವುದಕ್ಕೆ ಬೇಕಾದ ಸೂಕ್ತ ದಿಗ್ದರ್ಶಿಯಂತೆ ಇದೆ. ಜನಪದ ಕಾವ್ಯದ ಅತಿ ಮುಖ್ಯ ಸಂಗತಿಗಳಲ್ಲೊಂದು, ಅದರೊಳಗೆ ಬರುವ ವರ್ಣನೆಗಳು. ಲೇಖಕರು ಗೋಪಾಲ ನಾಯ್ಕರ ಸಿರಿ ಪಠ್ಯದೊಳಗೆ ಬರುವ ಬೇಸಾಯಕ್ಕೆ ಸಂಬಂಧಿಸಿದ ವರ್ಣನೆ, ಪ್ರಯಾಣದ ವರ್ಣನೆ, ಬೇಟೆಯ ವರ್ಣನೆ, ಮದುವೆ – ಹೆರಿಗೆ– ಎಳೆಯ ಮಕ್ಕಳ ವರ್ಣನೆಗಳನ್ನು ವಿಶೇಷವಾಗಿ ಗುರುತಿಸಿ ನೀಡಿರುವುದು ಅಧ್ಯಯನಕಾರರಿಗೂ ಹೆಚ್ಚು ಉಪಯುಕ್ತವೇ ಆಗಿದೆ.

ಸಿರಿ ತುಳುವರಿಗೆ ಕೇವಲ ಒಂದು ಸಾಹಿತ್ಯವಲ್ಲ. ಅದೊಂದು ಆಚರಣೆ, ಆರಾಧನೆ.

ಸಿರಿ ಸಾಹಿತ್ಯ ಪಠ್ಯವು ಸಿರಿಯ ಆಚರಣಾತ್ಮಕ ಆಯಾಮದ ಜತೆಗೆ ನೇರವಾಗಿಯೇ ಸಂಬಂಧವನ್ನು ಹೊಂದಿರುವುದನ್ನು ಲೇಖಕರು ಗುರುತಿಸಿದ್ದಾರೆ. ಸಿರಿ ಸಂಧಿಯೊಳಗಿನ ಮುಖ್ಯ ಪಾತ್ರಗಳಾದ ಸಿರಿ, ಕುಮಾರ, ಸೊನ್ನೆ, ಗಿಂಡ್ಯೆ, ಅಬ್ಬಯ, ದಾರಯರು 'ಸಿರಿ' ಆಚರಣೆಯ ಭಾಗವಾಗಿ ಆರಾಧನೆಗೆ ಒಳಗಾಗುತ್ತಾರೆ. 'ಕುಮಾರ'ನನ್ನು ಹೊರತು ಪಡಿಸಿದರೆ ಉಳಿದೆಲ್ಲಾ ಪಾತ್ರಗಳೂ ಮಹಿಳೆಯರ ಮೈಮೇಲೆಯೇ ಆವೇಶಿತವಾಗಿ ಆರಾಧಿಸಲ್ಪಡುತ್ತಾರೆ. 'ಸಿರಿ'ಯ ಸಂಪೂರ್ಣ ಕಥಾನಕ ಆವೇಶಗೊಂಡವರ ಬಾಯಿಯಿಂದಲೇ ಹೊರಡುವ ಸೊಲ್ಲುಗಳಾಗಿ ನಿರೂಪಣೆಗೊಳ್ಳುತ್ತದೆ. ಈ ಕೃತಿಯು ಸಿರಿ ಸಂಧಿಯನ್ನು ಒಂದು ಪಠ್ಯವಾಗಿ ವಿಶ್ಲೇಷಿಸುವುದರ ಜತೆಗೆ, ಈ ಪಠ್ಯ ನಿರೂಪಣೆಗೊಳ್ಳುವ 'ಆರಾಧನೆ'ಯ ನೆಲೆಯಾದ 'ಸಿರಿ ಜಾತ್ರೆ'ಯ ಪ್ರದರ್ಶನವನ್ನು, ಅದರ ಪ್ರಸರರಣವನ್ನು, ಸಿರಿ ಬಳಗಕ್ಕೆ ಮಹಿಳೆಯರು ಸೇರ್ಪಡೆಗೊಳ್ಳುವ ಬಗೆಯನ್ನು, ಹೆಣ್ಣಿನ ಮೈಮೇಲೆ 'ಸಿರಿ' ಕಥನದ ಒಂದು ನಿರ್ದಿಷ್ಟ ಪಾತ್ರ ಆವೇಶಗೊಳ್ಳುವುದಕ್ಕೆ ಇರುವ ಸಿದ್ಧತೆ, ಆವೇಶದ ಸಂದರ್ಭದಲ್ಲಿ ಮಹಿಳೆಯೇ ತಾನು ಯಾರು ಎನ್ನುವುದನ್ನು ಅಲೌಕಿಕ ಪಾತ್ರಗಳ ಜತೆಗಿನ ಸಂಬಂಧ ಸಾಧಿಸಿಕೊಂಡು ಆ ಪಾತ್ರಗಳ ಚೌಕಟ್ಟಿನೊಳಗೆ ಗುರುತಿಸಿಕೊಳ್ಳುವ ರೀತಿ, ಇದರ ಹಿಂದಿನ ಮಾನಸಿಕತೆ, ವರ್ತಮಾನದಲ್ಲಿ ಹೆಣ್ಣೊಬ್ಬಳು ಈ ನಿರ್ದಿಷ್ಟ ಪಾತ್ರವೊಂದರ ಮೂಲಕ ಅಲೌಕಿಕ ಜಗತ್ತಿಗೆ ಪ್ರವೇಶವಾಗಿ, ತನ್ನ ಲೌಕಿಕದ ಸಮಸ್ಯೆಗಳನ್ನು ಪ್ರಕಟಪಡಿಸುವ, ಅದರಿಂದ ಬಿಡುಗಡೆಗೊಳ್ಳುವ ಒಂದು ಸಂಕೀರ್ಣ ಜಗತ್ತಾದ ಸಿರಿ ಆರಾಧನಾ ಸಂಪ್ರದಾಯದ ವಿವರವಾದ ವಿಶ್ಲೇಷಣೆಯಾಗಿದೆ.

ಸಿರಿ ಕಥನ ಅನಾವರಣಗೊಳ್ಳುವುದು ಸಿರಿ ಜಾತ್ರೆಯಲ್ಲಿ. ಈ ಜಾತ್ರೆಯು ತುಳುನಾಡಿನ ಅನೇಕ ಕಡೆಗಳಲ್ಲಿ ವಾರ್ಷಿಕವಾಗಿ ನಡೆಯುತ್ತದೆ. ಇಲ್ಲಿ ಪ್ರಾತಿನಿಧಿಕ ರೂಪವಾಗಿ ನಿಡ್ಗಲ್ ಜಾತ್ರೆಯನ್ನು ಕುರಿತಾಗಿ ಲೇಖಕರು ಚರ್ಚೆ ನಡೆಸುತ್ತಾರೆ. ನಿಡ್ಗಲ್ ಜಾತ್ರೆಯ ಚರ್ಚೆ ಸಂಶೋಧನೆಯ ಹಂತದ ಒಂದು ಕೇಸ್ ಸ್ಟಡಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇಲ್ಲಿನ ಎಲ್ಲಾ ಆಚರಣಾತ್ಮಕ ವಿವರಗಳನ್ನು ದಾಖಲಿಸುವ ಮೂಲಕ ಸಿರಿ ಕಥನದ ಪ್ರಾಯೋಗಿಕತೆಯನ್ನು ಓದುಗರಿಗೆ ಮನವರಿಕೆ ಮಾಡಿಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಸಿರಿಜಾತ್ರೆಯಲ್ಲಿ ಭಾಗವಹಿಸುವ ಹೊಸ ಸಿರಿ ಪಾತ್ರಗಳು ಕಡಿಮೆಯಾಗುತ್ತಿರುವ ಕಾರಣದಿಂದ ನಮ್ಮೆದುರಿಗೆ ಸಿರಿ ಜಾತ್ರೆಯ ಸಂಪೂರ್ಣ ಸ್ವರೂಪ ಕಾಣುವ ಸಂದರ್ಭವೂ ಕಡಿಮೆಯಾಗುತ್ತಿರುವಾಗ, ಈ ದಾಖಲೆಗಳು ಭವಿಷ್ಯದ ಅಧ್ಯಯನಕಾರರಿಗೂ ಮಹತ್ವದ ಆಕರವಾಗುತ್ತದೆ. ವಿವಿಧ ವಿದ್ವಾಂಸರು, ಮುಖ್ಯವಾಗಿ ಪೀಟರ್ ಜೆ ಕ್ಲಾಸ್, ವಿವೇಕ್ ರೈ, ಎ.ವಿ.ನಾವಡ, ಗಾಯತ್ರಿ ನಾವಡ, ಇಂದಿರಾ ಹೆಗ್ಗಡೆ, ಅರುಣ್ ಕುಮಾರ್ ಎಸ್.ಆರ್., ಆಶೋಕ್ ಆಳ್ವ ಕೆ, ಜ್ಯೋತಿ ಚೇಳ್ಯಾರು ಇವರುಗಳು ಸಿರಿ ಪಠ್ಯವನ್ನು, ಅಲ್ಲಿ ನಿರೂಪಣೆಗೊಳ್ಳುವ ಕಥನವನ್ನು ವಿಶ್ಲೇಷಿಸಿದ ವಿವರಗಳನ್ನು ಲೇಖಕರು ಈ ಕೃತಿಯಲ್ಲಿ ನೀಡಿರುವುದು ಬಹುಆಯಾಮದ, ಬಹುಶಿಸ್ತೀಯ ಅಧ್ಯಯನಕ್ಕೆ ಒಂದು ಮಾರ್ಗಸೂಚಿಯಾಗಿ ತೋರುತ್ತದೆ. ಯಾವುದೇ ಜನಪದ ಸಂಗತಿಗಳ ಅಧ್ಯಯನದಲ್ಲಿ ವಿದ್ವಾಂಸರು ಕೆಲವೊಮ್ಮೆ ಜನರನ್ನು ಕೇವಲ ಮಾಹಿತಿದಾರರು ಎಂಬ ನೆಲೆಗಟ್ಟಿನಲ್ಲಿ ಗುರುತಿಸುವುದೂ ಇದೆ. ಆದರೆ ಈ ಕೃತಿಯಲ್ಲಿ ಗೋಪಾಲ ನಾಯ್ಕರಿಗೆ ಸಂಶೋಧಕನಷ್ಟೇ ಮಹತ್ವದ ಅವಕಾಶ ಲಭಿಸಿದೆ. ಗೋಪಾಲ ನಾಯ್ಕರೇ ಪಠ್ಯದ ಕುರಿತು ಮಾಡುವ ವಿಶ್ಲೇಷಣೆ ಬಹಳ ಮಹತ್ವದ್ದೂ ಕೂಡ.

ಅದರ ಹಿಂದಿನ ಕಾರಣಗಳನ್ನೂ ಅವರೇ ವಿವರಿಸುತ್ತಾರೆ. ಇದು ಸಂಶೋಧಕರ ಮತ್ತು ಆಚರಣೆಯ ಪಾಲುದಾರರ ನಡುವಿನ ಸಂವಾದದವೂ ಆಗಿದೆ. ಈ ಸಂವಾದ ಓದುಗರಿಗೆ ಸಿರಿ ಪಠ್ಯದ ಓದಿಗೆ, ಆರ್ಥೈಸುವಿಕೆಗೆ ಸೂಕ್ತ ಪೀಠಿಕೆಯಾಗಿರುವುದರಿಂದ ಕೃತಿಯ ಮಹತ್ವವನ್ನು ಎತ್ತರಿಸಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಪ್ರಸ್ತುತ ಕೃತಿಯು ಸಿರಿ ಸಂಧಿಯ ಸಾಂಸ್ಕೃತಿಕ ವಿವೇಚನೆಯಾಗಿ, ಈ ಮಹಾ ಕಾವ್ಯವನ್ನು ಅರ್ಥಮಾಡಿಕೊಳ್ಳಲು ಸ್ಪಷ್ಟವಾದ ದಾರಿದೀಪವಾಗಿದೆ. ತುಳುನಾಡಿನ ಸಂಸ್ಕೃತಿ ಚರ್ಚೆಗೆ ಈ ಕೃತಿ ಒಂದು ಅತ್ಯುಪಯುಕ್ತವಾದ ಆಕರ ಗ್ರಂಥವಾಗಿ ವಿದ್ವಾಂಸರ ಗಮನ ಸೆಳೆಯುವುದರ ಜತೆಗೆ ತುಳುನಾಡಿನ ಸಂಸ್ಕೃತಿಯ ಆಸಕ್ತರಾದ ಎಲ್ಲಾ ಸ್ತರದ ಓದುಗರ ಮೆಚ್ಚುಗೆಗೂ ಪಾತ್ರವಾಗಲಿದೆ. ಈ ಕೃತಿಯು ಭವಿಷ್ಯದ ತುಳು ಜಾನಪದ ಅಧ್ಯಯನಕ್ಕೆ ಹೊಸ ದಿಕ್ಕನ್ನು ತೋರಲಿದೆ.

❖❖❖

ಗೂಡಿನಲಿ ಮುದುಡಿ ಕುಳಿತ
ಹಕ್ಕಿ ಹೊರಗೆ ಇಣುಕಿದಾಗ
ಶಾಂತವಾದ ಕೋಪದಂತೆ
ರಂಗ ಆಕಳಿಸಿತು
ಮಕ್ಕಳನ್ನು ರೆಕ್ಕೆಯೊಳಗೆ
ಇಕ್ಕಿ ಕುಳಿತುಕೊಂಡ ಹಕ್ಕಿ
ಕಣ್ಣ ಬಾಗಿಲನ್ನು ಎಳೆದು
ಮುಚ್ಚಿಕೊಂಡಿತು

ಕರ್ನಾಟಕದ ಜೀವನಾಡಿ ಕಾವೇರಿ : ಒಂದು ಐತಿಹಾಸಿಕ ಅಧ್ಯಯನ

ಸರಸ್ವತಿ ಕೆ
ರಾಜ್ಯಶಾಸ್ತ್ರ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರ, ಬೆಂಗಳೂರು–560 036

ಕಾವೇರಿ ನದಿ ನೀರು ರಾಜ್ಯಕ್ಕೆ ಪ್ರಕೃತಿದತ್ತವಾಗಿ ಸಿಗುವ ಸಂಪತ್ತು. ಕಾವೇರಿನದಿಯು ಕರ್ನಾಟಕದಲ್ಲಿ ಹುಟ್ಟಿ ಅನೇಕ ರಾಜ್ಯಗಳನ್ನು ಹರಿದು ಹೋಗುತ್ತಿದೆ. ಮೈಸೂರು ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಮುಂದಾದಾಗ ಮದ್ರಾಸ್ ಪ್ರಾಂತ್ಯವು ಕಾವೇರಿ ನದಿ ನೀರಿನ ಸಮಸ್ಯೆಯನ್ನು ಬ್ರಿಟೀಷರ ಮುಂದೆ ದೂರನ್ನು ಸಲ್ಲಿಸುವುದರ ಮೂಲಕ ಪ್ರಾರಂಭವಾದ ಸಂಘರ್ಷ ಈಗಲೂ ಮುಂದುವರಿದಿದೆ. ಇದು ರಾಜ್ಯ–ರಾಜ್ಯಗಳ ನಡುವೆ ಸಂಘರ್ಷವನ್ನಲ್ಲದೆ ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಘರ್ಷಕ್ಕೂ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ವಿವಾದದ ಕುರಿತು ಇಲ್ಲಿ ಚರ್ಚಿಸಲಾಗಿದೆ.

******

ದಕ್ಷಿಣ ಭಾರತದಲ್ಲಿ ಕಾವೇರಿ ನಾಲ್ಕನೆಯ ಅತಿ ಉದ್ದದ ನದಿಯಾಗಿದೆ. ಕರ್ನಾಟಕದ ಕೊಡಗಿನಲ್ಲಿ 1341 ಮೀಟರ್ ಎತ್ತರದಲ್ಲಿ ಮಡಿಕೇರಿಯಲ್ಲಿ ಹುಟ್ಟಿ ಬಂಗಾಳ ಕೊಲ್ಲಿಗೆ ಸೇರುವ ಮೊದಲು ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಮೂಲಕ ಹರಿಯುತ್ತದೆ. ಉಪನದಿಗಳ ಸೇರ್ಪಡೆಯೊಂದಿಗೆ ಹರಿಯುವ ನೀರು ಹೊಗೆನಕಲ್‌ನಲ್ಲಿ ಸಾಮಾನ್ಯ ಗಡಿಯುದ್ದಕ್ಕೂ ಹರಿದು ತಮಿಳುನಾಡಿನ ಪ್ರಸಿದ್ದ ಮೆಟ್ಟೂರು ಜಲಾಶಯಕ್ಕೆ ಸೇರುತ್ತದೆ. ಮುಂದೆ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಕಾವೇರಿ ನದಿಯ ಒಟ್ಟು ಉದ್ದವು 800 ಕಿ.ಮೀ. (496 ಮೈಲುಗಳು) ವರೆಗೆ ಇರುತ್ತದೆ.

ಕಾವೇರಿ ನದಿ ನೀರಿನ ವಿವಾದ

ಕಾವೇರಿ ಇಂದು ಕರ್ನಾಟಕದ ಮತ್ತು ತಮಿಳುನಾಡಿನ ನಡುವಿನ ಸಂಘರ್ಷದ ಮುಂದುವರಿಕೆಗೆ ಕಾರಣವಾಗಿದೆ. ಕಾವೇರಿ ನದಿ ನೀರಿನ ಸಮಸ್ಯೆಗೆ ಸುದೀರ್ಘ ಇತಿಹಾಸವಿದೆ. ಹಿಂದೆಯೇ ಕರ್ನಾಟಕದ ರಾಜರು ಮತ್ತು ತಮಿಳುನಾಡಿನ ಚೋಳ ಸಮ್ರಾಜ್ಯಗಳ ನಡುವೆ ಸಮಸ್ಯೆ ಪ್ರಾರಂಭವಾಯಿತು. (Midatala Rani, HISTORICAL BACKGROUND OF THE CAUVERY WATER DISPUTE Source: Proceedings of the Indian History Congress, EPW Vol. 63 (2002), pp. 1033-1042). ನಂತರ 19ನೆಯ ಶತಮಾನದ ಮಧ್ಯಭಾಗದಲ್ಲಿ ಮೈಸೂರು ಸರ್ಕಾರವು ತಮ್ಮ ಹಳೆಯ ನೀರಾವರಿ ಕಾರ್ಯಗಳನ್ನು ಮರುಸ್ಥಾಪಿಸಲು ಹೊಸ ನೀರಾವರಿ ಯೋಜನೆಗಳನ್ನು ನಿರ್ಮಿಸಲು ಬಯಸಿತು. ಇದು ಮದ್ರಾಸ್ ರಾಜ್ಯಕ್ಕೆ

ಗಣನೀಯ ಆತಂಕ ಉಂಟುಮಾಡಿ, ಆ ಪ್ರಕರಣವನ್ನು ಮದ್ರಾಸ್ ಸರ್ಕಾರವು ಭಾರತ ಸರ್ಕಾರದ ಮುಂದೆ ತೆಗೆದುಕೊಂಡು ಹೋಯಿತು. ಅಂತಿಮವಾಗಿ 18ನೆಯ ಫೆಬ್ರವರಿ 1892ರಂದು ಭಾರತ ಸರ್ಕಾರ ಇದಕ್ಕೆ ನಿಯಮಗಳನ್ನು ರೂಪಿಸಲಾಯಿತು. ಈ ನಿಯಮಗಳನ್ನು '1892ರ ಮದ್ರಾಸ್ ಮೈಸೂರು ಒಪ್ಪಂದ' ಎಂದು ಕರೆಯಲಾಯಿತು. (ಕಾವೇರಿ ಟ್ರಿಬ್ಯೂನಲ್ ಸಂಪುಟ–1, ಪುಟ–29)

1892ರ ಮದ್ರಾಸ್–ಮೈಸೂರು ಒಪ್ಪಂದ

1892ರ ಒಪ್ಪಂದದ ಪ್ರಕಾರ ಮೈಸೂರು ಸರ್ಕಾರವು ಮದ್ರಾಸ್ ಸರ್ಕಾರದ ಸಮ್ಮತಿಯಿಲ್ಲದೇ ಮುಖ್ಯ ನದಿಗಳ ಯಾವುದೇ ಭಾಗದಲ್ಲಿ ಯಾವುದೇ ಹೊಸ ನೀರಾವರಿ ಜಲಾಶಯಗಳನ್ನು ನಿರ್ಮಿಸಬಾರದು(ಕಾವೇರಿ ಜಲ ವಿವಾದಗಳ ನ್ಯಾಯಾಂಗ ವರದಿ, ಸಂಪುಟ 1, ಹೊಸ ದೆಹಲಿ, 2007, ಪುಟ–31). ಅಂತಹ ಯಾವುದೇ ಕೆಲಸದ ಸಂಧರ್ಭದಲ್ಲಿ ಮದ್ರಾಸ್ ಮತ್ತು ಮೈಸೂರು ಸರ್ಕಾರಗಳ ನಡುವಿನ ಭಿನ್ನಾಭಿಪ್ರಾಯವು ಹುಟ್ಟಿಕೊಂಡಲ್ಲಿ ಸರ್ಕಾರ ಅಥವಾ ಭಾರತ ಸರ್ಕಾರದಿಂದ ನೇಮಕಗೊಂಡ ಮಧ್ಯಸ್ಥಗಾರರ ಅಂತಿಮ ನಿರ್ಣಯವನ್ನು ಅದು ಸೂಚಿಸಬೇಕಾಗಿದೆ.

1924ರ ಒಪ್ಪಂದ

ಕೃಷ್ಣರಾಜಸಾಗರದ ಅಣೆಕಟ್ಟು ಮತ್ತು ಜಲಾಶಯದ ನಿರ್ಮಾಣಕ್ಕೆ ಸಂಬಂಧಿಸಿದಂತೆ 1924ರಲ್ಲಿ ಒಂದು ಒಪ್ಪಂದ ಮಾಡಲಾಯಿತು. ಈ ಯೋಜನೆಯ ವಾಸ್ತುಶಿಲ್ಪಿ ಎಂಜಿನಿಯರ್ – ದಾರ್ಶನಿಕ ಸರ್ ಎಂ. ವಿಶ್ವೇಶ್ವರಯ್ಯ. (ರಾಜೀವ್ ಧವನ್, ಕಾವೇರಿ ರೆಡ್ – ಡಕಿಂಗ್‌ವಿವಾದ – 7, ಆಗಸ್ಟ್, 1991, ಡೆಕ್ಕನ್ ಹೆರಾಲ್ಡ್). 1924ರ ಒಪ್ಪಂದವು ಮೈಸೂರು ಮತ್ತು ಮದ್ರಾಸ್ ಸರ್ಕಾರಗಳಿಂದ ರೂಪಿಸಲ್ಪಟ್ಟಿದೆ. ಮತ್ತು ಸರ್ಕಾರಗಳೆರಡು ಒಪ್ಪಿಕೊಂಡು ಮೈಸೂರು ಸರ್ಕಾರ ಕಾವೇರಿ ನದಿಗೆ ಅಡ್ಡಲಾಗಿ ಕೃಷ್ಣರಾಜಸಾಗರದ ಅಣೆಕಟ್ಟು ನಿರ್ಮಿಸಲು ಮತ್ತು ಕಾವೇರಿನದಿಯ ನೀರಿನ ಹರಿವುಗಳನ್ನು ಬಳಸಿಕೊಳ್ಳುವ ಮೂಲಕ ಎರಡೂ ರಾಜ್ಯಗಳಲ್ಲಿ ನೀರಾವರಿ ಪ್ರದೇಶಗಳನ್ನು ವಿಸ್ತರಿಸುವುದು. (ಕಾವೇರಿ ಟ್ರಿಬ್ಯೂನಲ್ ಸಂಪುಟ–1, ಪುಟ–6–7).

ಆದರೆ ಇದುವರೆವಿಗೂ ಕಾವೇರಿ ನದಿ ನೀರಿನ ವಿವಾದವು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವಲ್ಲಿ ವಿಫಲವಾಗಿದೆ. ವಿವಾದಾತ್ಮಕ ವಿಷಯವೆಂದರೆ, ಕಾವೇರಿಯ ನದಿಯಿಂದ ಬಿಡುಗಡೆಯಾದ ನೀರಿನ ಅಳತೆಯ ವಿಧಾನ ಮತ್ತು ನೀರಿನ ಪ್ರಮಾಣದ ವ್ಯತ್ಯಾಸಗಳು (J. Jeyaranjan, Cauvery Dispute: Changing Paradigms Economic and Political Weekly, Vol. 33, No. 46 Nov. 14-20, 1998), pp. 2900-2901). ತಮಿಳುನಾಡು 1892 ಮತ್ತು 1924ರ ಐತಿಹಾಸಿಕ ಒಪ್ಪಂದ ಶಾಶ್ವತವಾದದ್ದು ಮತ್ತು ಅದನ್ನು ಕಾಪಾಡಿಕೊಳ್ಳಬೇಕು ಎಂದು ವಾದಿಸಿದರೆ, ಬದಲಾದ ಪರಿಸ್ಥಿತಿಯಲ್ಲಿ ಇದನ್ನು ಒಪ್ಪಲಾಗದು ಎಂಬುದು ಕರ್ನಾಟಕದ ನಿಲುವು.

ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವೆ ಅನೇಕ ಮಾತುಕತೆಗಳು ನಡೆದು ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಯತ್ನಗಳು ನಡೆದಿವೆ. ಉದಾಹರಣೆಗೆ ಕರ್ನಾಟಕದಲ್ಲಿ 1983ರಲ್ಲಿ ರಾಮಕೃಷ್ಣ ಹೆಗಡೆಯವರು

ಮುಖ್ಯಮಂತ್ರಿಯಾದ ನಂತರ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಬೆಂಗಳೂರಿನಲ್ಲಿ ಆಯೋಜನೆ ಮಾಡಿರುವುದು (21ನೆ ಮಾರ್ಚ್ 1983, ಡೆಕ್ಕನ್ ಹೆರಾಲ್ಡ್) ಹಾಗೂ 1986ರಲ್ಲಿ ನಡೆದ ಸಭೆಗಳು. (ಎಸ್.ಗುಹನ್, ಕಾವೇರಿಯ ನದಿಯ ವಿವಾದ ಸಂಧಾನದ ಕಡೆಗೆ, ಪುಟ–27) (ಕಾವೇರಿ ಟ್ರಿಬ್ಯೂನಲ್ ಸಂಪುಟ–1, ಪುಟ 18–19).

ಭಾರತ ಸರ್ಕಾರವು ಜೂನ್ 2, 1990ರಂದು ಕಾವೇರಿ ವಾಟರ್ಸ ಟ್ರಿಬ್ಯುನಲ್‌ನ್ನು ಸ್ಥಾಪಿಸಿತು. ಆದರೆ, ಕಾವೇರಿ ನದಿ ನೀರಿನ ಸಮಸ್ಯೆಗೆ ಒಂದು ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಮುಂದೆ ಕರ್ನಾಟಕ ಟ್ರಿಬ್ಯುನಲ್ ನಿರ್ಧಾರಕ್ಕೆ ಬದ್ದವಾಗಿರಲು ನಿರಾಕರಿಸಿದ್ದರಿಂದ, ತಮಿಳುನಾಡು ಸರ್ಕಾರ ಮತ್ತೆ ಸುಪ್ರಿಂಕೋರ್ಟ ಮೆಟ್ಟಿಲೇರಿತು. ಕರ್ನಾಟಕ ನಂತರ ಅಫಿಡೆವಿಟ್ ಸಲ್ಲಿಸಿ ಜೊತೆಯಲ್ಲಿ, ಹಿಂದೆ ಕೇಂದ್ರ ಸರ್ಕಾರ ಗೆಝೆಟ್ನಲ್ಲಿ ಟ್ರಿಬ್ಯುನಲ್ ಮಧ್ಯಂತರ ಆದೇಶ ಹೊರಡಿಸಿದ ನಂತರ 1991–92ರಲ್ಲಿ ವ್ಯಾಪಕ ಹಿಂಸಾಚಾರ ನಡೆದಿದ್ದಿನ್ನು ನೆನಪಿಸಿತು; ಕರ್ನಾಟಕಕ್ಕೆ ನೀರಿನ ಬಿಡುಗಡೆಗೆ ಆದೇಶಿಸಿದರೆ ಮತ್ತೆ ಆ ಘಟನೆಗಳು ಪುನರಾವರ್ತಿಸಬಹುದು ಎಂದು ಮನವರಿಕೆ ಮಾಡಲು ಯತ್ನಿಸಿತು(7 ಜನವರಿ ಡೆಕ್ಕನ್ ಹೆರಾಲ್ಡ್).

ಕಾವೇರಿ ಸಮಸ್ಯೆ 2002ರಲ್ಲಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ರವರ ಅವಧಿಯಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕಾವೇರಿ ನದಿ ಪ್ರಾಧಿಕಾರದ ಸಭೆಯೊಂದನ್ನು ಕರೆದು ಸುಪ್ರಿಂಕೋರ್ಟಿನ ಆದೇಶದಂತೆ ತಮಿಳುನಾಡಿಗೆ 1.25 ಟಿ.ಎಂ.ಸಿ ನೀರನ್ನು ಬಿಡುವಂತೆ ಇದ್ದುದನ್ನು 9,000 ಕ್ಯುಸೆಕ್ಸ ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಿದರು. ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರು ಕಾವೇರಿ ನದಿಯಿಂದ ತಮಿಳುನಾಡಿಗೆ ನೀರಿನ ಬಿಡುಗಡೆಯ ವಿರುದ್ದ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆಯನ್ನು ಪ್ರಾರಂಭಿಸಿದರು.

ಕಾವೇರಿ ವಿವಾದಗಳ ಟ್ರಿಬ್ಯುನಲ್ 5ನೇ ಫೆಬ್ರವರಿ 2007ಕ್ಕೆ ಆದೇಶವನ್ನು ಮಾಡಿ ಎಲ್ಲ ದಕ್ಷಿಣ ರಾಜ್ಯಗಳಿಗೆ ನೀರಿನ ಹಂಚಿಕೆಯನ್ನು ಮಾಡಿತು. ಕೇರಳ–30 ಟಿ.ಎಂ.ಸಿ, ಕರ್ನಾಟಕಕ್ಕೆ 270 ಟಿ.ಎಂ.ಸಿ, ತಮಿಳುನಾಡಿಗೆ 419 ಟಿ.ಎಂ.ಸಿ, ಮತ್ತು ಪಾಂಡಿಚೆರಿಗೆ 7 ಟಿ.ಎಂ.ಸಿ. ಹೀಗೆ. ಆದರೆ 1980 ರಿಂದ ಕಾವೇರಿ ನದಿ ನೀರಿನ ವಿವಾದ ಕರ್ನಾಟಕ ಮತ್ತು ತಮಿಳುನಾಡು ನಡುವೆ ಅಷ್ಟೇ ಅಲ್ಲದೆ ಕೇಂದೆ ಮತ್ತು ರಾಜ್ಯದ ಸಂಬಂಧಗಳ ನಡುವೆ ಘರ್ಷಣೆಯ ವಿಷಯ ಆಗಿದೆ. ಕೇಂದ್ರ ಬಹುತೇಕ ಎಲ್ಲಾ ವರ್ಷಗಳಲ್ಲಿ ಅದರ ಉಳಿವಿಗಾಗಿ ಡಿ.ಎಮ್.ಕೆ. ಅಥವಾ ಇತರ ತಮಿಳು ಪಕ್ಷಗಳ ಊರುಗೋಲನ್ನು ಹೊಂದಿದ್ದ ಕಾರಣ ತಮಿಳುನಾಡಿನ ಒತ್ತಡಕ್ಕೆ ಒಳಗಾಗಬೇಕಾಗುತ್ತಿತ್ತು.

ಉಪಸಂಹಾರ

ಈ ವಿವಾದವನ್ನು ಸ್ವಾತಂತ್ರ್ಯ ಬಂದ ನಂತರವಾದರೂ ತಮಿಳುನಾಡು ಮತ್ತು ಕರ್ನಾಟಕ ಉಭಯ ಸರ್ಕಾರಗಳು ರೈತರನ್ನು ಜೊತೆಗೆ ಸೇರಿಸಿಕೊಂಡು ತಾವೇ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದಾಗಿದ್ದಿತು. ಈ ವಿವಾದವನ್ನು ಬಗೆಹರಿಸುವ ನಿಟ್ಟಿನಲ್ಲಿ ರೈತ ಪ್ರತಿನಿಧಿಗಳಿಗೆ ಸಿಗಬೇಕಾದಷ್ಟು ಮಹತ್ವ ಸಿಗದೇ ಇದ್ದುದರಿಂದ ಇದು ಇನ್ನೂ ಮುಂದುವರಿಯುತ್ತಿದೆ ಎನಿಸುತ್ತದೆ.

ಪರಾಮರ್ಶನ

S. Guhan, H. N. Nanje Gowda, S. Manavalan, M. D.Nanjundaswamy and N. Ram. 1992, Joint Appeal on Cauvery, Economic and Political Weekly. 27:10/11:7-14

Channabasapa. H.M. 1975 Water Rights and Cauvery Dispute. Bangalore: Government of Karnataka. 14-15

Chatterji, Rakhahari. 2001. Politics India: The State-Society Interface. New Delhi: South Asia Publishers

Chaubey, R.K. 2007. Federalism, Autonomy & Centre-State Relations: Allahabad: Satyam.

Chawla, Prabhu. 1986. Resignation of Karnataka Chief Minster Ramakrishna Hegde takes nation by storm. India Today. 28 February.

Guhan, Sanjivi. 1993. The Cauvery River Dispute towards Conciliation. Madras:

2007. The Report of the Cauvery Water Disputes Tribunal. New Delhi: New Delhi: Publications Division, GOI. 1:5.

2005. Report of the Second Administrative Reforms Commission. New Delhi: New Delhi: Publications Division, GOI.

2002. Report of the National Commission to Review the Working of the Constitution. New Delhi: New Delhi: Publications Division, GOI.

1990. All India Reporters. New Delhi. 77

1969. Report of the Study Team Administrative Reforms Commission on Centre State Relations. New Delhi: Publications Division, GOI.

1988. Report of the Commission on Centre-State Relations. New Delhi: New Delhi: Publications Division, GOI. 1:2.

Iyer, Ramaswamy R. 2013. Cauvery Dispute: A Lament and a Proposal, Economic and Political Weekly. 48:30:48-53 2011.

Mullaperiyar: A Plea for Sanity, Economic and Political Weekly, 46:5:12-13. 2001.

Water: Charting a Course for the Future, Economic and Political Weekly. 36:31-4:1122

Midatala Rani, 2002, HISTORICAL BACKGROUND OF THE CAUVERY WATER DISPUTE , Proceedings of the Indian History Congress, EPW Vol. 63

Sheshadri, C.S. and Amal Ray. 1990. Cauvery Water Dispute: Saga of a Century old thirst for Water, Published by Irrigation Department, Bangalore.

ಎಸ್.ಎಸ್. ಮೀನಾಕ್ಷಿಸುಂದರಂ, ಪ್ರಿಯಾ ರಾಘವನ್, ಎಂ ಅಮರ್ಜಿತ್ ಸಿಂಗ್, ಕಾವೇರಿ ಕಾನ್ಫ್ಲಿಕ್ಟ್, 2010, ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು, ಭಾರತ

❖❖❖

ಮಹಾದಾರ್ಶನಿಕ ಬಸವಣ್ಣ

ಡಾ. ಶಂಕರೇಗೌಡ ಎನ್.ಎಸ್.
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹಲಗೂರು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ

ತಮ್ಮ ಜೀವಿತಾವಧಿಯಲ್ಲಿ ಬಸವಣ್ಣನವರು ಮಾಡಿದ ಕ್ರಾಂತಿ ಒಂದು ಪವಾಡವೇ ಆಗಿದೆ. ದೇಜಗೌ ಹೇಳುವಂತೆ "ಮನುಷ್ಯನ ಅಂತರಂಗ ಮತ್ತು ಬಹಿರಂಗ ಜೀವನಗಳೆರಡರ ಶುದ್ಧೀಕರಣಕ್ಕಾಗಿ, ಮಾನವನಿರ್ಮಿತ ಜಾತಿ, ಮತ, ಕಸುಬು, ಅಂತಸ್ತುಗಳ ತಾರತಮ್ಯ ನಿವಾರಣೆಗಾಗಿ ತಮ್ಮ ಇಡೀ ಬದುಕನ್ನು ಒಂದು ಅದ್ಭುತ ಪ್ರಯೋಗ ರಂಗವನ್ನಾಗಿ ಮಾಡಿಕೊಂಡು ನಡೆದಂತೆ ನುಡಿದು, ನುಡಿದಂತೆ ನಡೆದು ಲೋಕದ ಬಹು ಬಗೆಯ ಕತ್ತಲೆಯನ್ನು ಬೆಳಕುಗೊಳಿಸಲು ಅಹರ್ನಿಶ ಶ್ರಮಿಸಿದ ಮಹಾದಾರ್ಶನಿಕರು ಶ್ರೀ ಬಸವೇಶ್ವರರು."[1]

ಮಹಾಪುರುಷರು ಜನ್ಮ ಎತ್ತುವ ಕಾಲ ಬಹಳ ಸಂದಿಗ್ಧವಾಗಿರುತ್ತದೆ. ಬಸವಣ್ಣನವರು ಜನ್ಮ ತಾಳಿದ ಸಮಯ ಇದಕ್ಕೇನೂ ಹೊರತಾಗಿರಲಿಲ್ಲ. ಅನೀತಿ, ಅನಾಚಾರ, ಅಸ್ಪೃಶ್ಯತೆ, ಮಾತಿನಲ್ಲಿ ಕೃತ್ರಿಮತೆ ಕಂಡುಬರುತ್ತಿದ್ದ ವಿಷಮ ಕಾಲದಲ್ಲಿ ಬಸವಣ್ಣನವರು ಜನ್ಮ ತಾಳಿದ್ದು. ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಅನಿಷ್ಟ, ಜಡ, ವ್ಯವಸ್ಥೆಯನ್ನು ಛಿದ್ರಗೊಳಿಸಿ, ಸಕಲ ಜೀವಾತ್ಮಗಳ ಲೇಸನ್ನೇ ಬಯಸುವ ಆಶಯ ಬಸವಣ್ಣನವರದಾಗಿತ್ತು. ಬಸವಣ್ಣನವರು ಕಟ್ಟ ಬಯಸಿದ ಸಮಾಜ ಸರ್ವಾಂಗ ಸುಂದರವಾದುದು. ಜಾತಿ ಭೇದಗಳಿಲ್ಲದ, ಮೇಲು–ಕೀಳುಗಳಿಲ್ಲದ, ಬಡವ–ಬಲ್ಲಿದನೆಂಬ ಅಂತರವಿಲ್ಲದ ಸಮಾಜ.

ಹಳೆಯ ವ್ಯವಸ್ಥೆಗೆ ವಿಮುಖವಾದ, ಹೊಸ ಪರ್ಯಾಯ ವ್ಯವಸ್ಥೆಗೆ ಕಾರ್ಯೋನ್ಮುಖವಾಗಿ, ಯಾವುದೇ ಶಸ್ತ್ರಾಸ್ತ್ರಗಳನ್ನು ಬಳಸದೇ ಕ್ರಾಂತಿಯನ್ನು ಮಾಡಿದವರು ಬಸವೇಶ್ವರರು. ನೂತನ ಸಮಾಜದ ನಿರ್ಮಾಣಕ್ಕೆ ಕಂಕಣಬದ್ಧರಾಗಿದ್ದ ಬಸವಣ್ಣನವರಿಗೆ 'ಕಾಯಕ' ಪ್ರಧಾನವೇ ಹೊರತು ಜಾತಿ–ಕುಲಗಳಲ್ಲ

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಅನ್ಯರಿಗೆ
ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಬೇಡ, ಇದೇ
ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ
ಸಂಗಮ ದೇವನೊಲಿಸುವ ಪರಿ.

ಬಸವಣ್ಣನವರ ಪ್ರಕಾರ ಮಡಿ–ಮೈಲಿಗೆ, ಏಣಿ–ಶ್ರೇಣಿ, ಅಸ್ಪೃಶ್ಯತೆ, ಕಳ್ಳತನ, ಮೋಸ, ಢಾಂಬಿಕ ಭಕ್ತಿ ಇವೆಲ್ಲ ವ್ಯಕ್ತಿಯ ಆಧ್ಯಾತ್ಮಿಕ ಏಳಿಗೆಗೆ ಅಡ್ಡಿಯಾಗುತ್ತವೆ; ಸಮಾಜವನ್ನು ಹಾಳುಮಾಡುತ್ತವೆ. ಶರಣತ್ವದ ಅಂತಿಮ ಉದ್ದೇಶ ಕೂಡಲಸಂಗಮನನ್ನು ಒಲಿಸುವುದು. "ಶರಣರು ಈ ವಾಸ್ತವತೆಯಲ್ಲಿನ ದುಷ್ಟ ಪರಿಣಾಮವನ್ನು ಗುರುತಿಸಿ, ವ್ಯಕ್ತಿ ಕ್ರಿಯೆ ಮತ್ತು ಸಮಾಜದ ರಚನೆಗಳು ಕ್ರಾಂತಿಕಾರಕವಾಗಿ ಪರಿವರ್ತನೆಗೊಳ್ಳಬೇಕೆಂದು

ಬಯಸಿದ್ದುದಲ್ಲದೆ, ಅದನ್ನು ವಾಸ್ತವಗೊಳಿಸಲು ಪ್ರಯತ್ನಿಸಿದರು."[2]

ಬಸವಣ್ಣನವರು ಅಂತರಂಗ – ಬಹಿರಂಗ ಸಾಮರಸ್ಯದೊಡನೆ, ಪರವನ್ನು ಮೆರೆಯದೆ ಇಹ ಜೀವನದ ಶುದ್ಧಿಗೆ ಒತ್ತು ನೀಡುತ್ತಾರೆ. "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ". ವೈಯಕ್ತಿಕವಾದ ಡೊಂಕನ್ನು ತಿದ್ದುಕೊಳ್ಳದ ಹೊರತು, ಸಮಾಜದ ಉದ್ಧಾರ ಸಾಧ್ಯವಿಲ್ಲ. ಬರೀ ಉಪದೇಶದಿಂದ ಯಾವುದೇ ಪ್ರಯೋಜನವಿಲ್ಲ. ನುಡಿಯೊಳಗಾನು ನಡೆಯ ಬೇಕೆಂಬುದು ಬಸವಣ್ಣವರ ನಿಲುವು. ಸಮಾಜದಲ್ಲಿನ ದೋಷಗಳನ್ನು ತಿದ್ದಲು ಹೆಣಗಾಡಿರುವುದಕ್ಕೆ ಅವರ ವಚನಗಳೇ ಸಾಕ್ಷಿಗಳಾಗಿವೆ. ಉಪದೇಶ, ವಿಡಂಬನೆ, ಉಗ್ರವಾದ ಎಚ್ಚಕೆಗಳ ಮೂಲಕ ಸಮಾಜವನ್ನು ಬಡಿದೆಬ್ಬಿಸಿದ್ದಾರೆ. ಸಮಾಜದಲ್ಲಿ ಜವಾಬ್ದಾರಿಯ ಸ್ಥಾನದಲ್ಲಿರಬೇಕಾದವರೇ ಸರಿಯಿಲ್ಲದಿದ್ದರೆ ಯಾರಿಗೆ ದೂರುವುದು?

ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ
ಧರೆ ಹತ್ತಿಯುರಿದೊಡೆ ನಿಲಬಾರದು
ಏರಿ ನೀರುಣ್ಣೊಡೆ, ಬೇಲಿ ಕೆಯ್ಯಮೇವೊಡೆ
ನಾರಿ ತನ್ನ ಮನೆಯಲ್ಲಿ ಕಳುವೊಡೆ
ತಾಯ ಮೊಲೆವಾಲು ನಂಜಾಗಿ ಕೊಲುವೊಡೆ
ಇನ್ಯಾರಿಗೆ ದೂರುವೆ, ಕೂಡಲಸಂಗಮ ದೇವಾ ?

ಬಸವಣ್ಣನವರ ಬಂಡಾಯದಲ್ಲಿ ಸಮಾಜದ ಎಲ್ಲಾ ಮುಖಗಳ ದರ್ಶನವಿದೆ. ಅಧ್ಯಾತ್ಮದ ಗಟ್ಟಿ ತಳಹದಿಯ ಮೇಲೆ ವರ್ಗರಹಿತ ವರ್ಣರಹಿತ ಸಮಾಜವೊಂದನ್ನು ನಿರ್ಮಿಸುವುದು ಅವರ ಧ್ಯೇಯ. "ಜೀವಪರ ಚಿಂತನೆ ಮತ್ತು ಜನಪರ ಸಂಘಟನೆಯಲ್ಲಿ ಬಸವಣ್ಣ ಒಬ್ಬ ಕ್ರಾಂತಿಕಾರಿ ಎಂಬುದು ನಿಜವಿರಬಹುದು. ಅವರೊಬ್ಬ ಸಕಾರಣವಾದಿ ಎಂಬುದನ್ನು ಒಪ್ಪಬಹುದು. ಅವರೊಬ್ಬ ಮಹಾನ್ ಮಾನವತಾವಾದಿ ಎಂಬುದನ್ನು ನಾಡಿನ ಇತಿಹಾಸ ಸಾರುತ್ತಿರಬಹುದು; ಹೀಗೆ ಬಸವಣ್ಣನನ್ನು ವಿವಿಧ ಬಣ್ಣನೆಗಳಿಂದ ಬಣ್ಣಿಸಿದಾಗ್ಯೂ ಅವೆಲ್ಲಕ್ಕೂ ಮಿಗಿಲಾಗಿ ಮತ್ತು ಮೊದಲಾಗಿ ಬಸವಣ್ಣನು ಮಾತೆ; ಕಾವ್ಯದ ವಿದ್ಯಾರ್ಥಿ ಎಂಬುದನ್ನು ಮರೆಯುವಂತಿಲ್ಲ"[3] ಎಂಬ ಮಾತು ಸತ್ಯ.

ಅಸ್ಪೃಶ್ಯತೆ ನಿರ್ಮೂಲನೆ, ಜಾತಿವಿನಾಶ ಬಸವಣ್ಣನವರ ಪ್ರಧಾನ ಕಾರ್ಯಗಳಲ್ಲಿ ಒಂದಾಗಿತ್ತು. ಅವರ ಪಾಲಿಗೆ ಜಾತಿ ವಿನಾಶವು ಮಾತಿಗೆ ಸೀಮಿತವಾಗಿರಲಿಲ್ಲ. ಕಾರ್ಯತಃ ಆಚರಣೆಯಾಗಿತ್ತು. ಸಮಾಜಕ್ಕೆ ಚಿಕಿತ್ಸೆ ನೀಡಲು ಬಸವಣ್ಣ ಶರಣರ ಸಮೂಹವನ್ನು ಒಗ್ಗೂಡಿಸಿದರು. "...ಬಸವಣ್ಣನವರ ಮುಂದಾಳುತನದಲ್ಲಿ ನಡೆದ ಕಲ್ಯಾಣ ಕ್ರಾಂತಿಯು ಮುನ್ನುಗ್ಗಬೇಕಾದರೆ, ಅದರಲ್ಲಿ ಹಲವಾರು ಪ್ರಾಂತ್ಯದ ಹಲವಾರು ಕಾಯಕದ ಜನರೆಲ್ಲರೂ ಒಂದು ಸೇರಿ ಆ ಕ್ರಾಂತಿಯ ಪ್ರವಾಹವನ್ನು ದೊಡ್ಡ ಸಾಗರವನ್ನಾಗಿ ಮಾಡಿದರು. ಹಿಂದುಳಿದವರು ಕೂಡ ದ್ವಿಜರಷ್ಟೇ ಹಿರಿಯರಾಗಿ ಮೋಕ್ಷ ಪಡೆಯಬಹುದು. ಜಾತಿಮತ ಪಂಥಗಳ ಭೇದವಿಲ್ಲದ ಮಾನವನು ನೀತಿವಂತನಾಗಿದ್ದರೆ ಪೂಜ್ಯರು, ನೀತಿವಂತನೇ, ಶ್ರೇಷ್ಠ ಕುಲಜಾತ"[4]

ಬಸವಣ್ಣನವರ ಮುಂದಿದ್ದ ಸಮಸ್ಯೆ ಸರಳವಾಗಿರಲಿಲ್ಲ. ಹಲವು ಸಂಕೀರ್ಣತೆಗಳಿಗೆ ಅವರು ಉತ್ತರ ಕಂಡುಕೊಂಡಿದ್ದು ಖಡ್ಗದಿಂದಲ್ಲ. ವಿಚಾರದ ಪ್ರಭೆಯಿಂದ. ಸ್ತ್ರೀ ಸ್ವಾತಂತ್ರ್ಯವನ್ನು ಎತ್ತಿ ಹಿಡಿದ ಬಸವಣ್ಣ, ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ

ಪುರುಷನಿಗೆ ಸ್ತ್ರೀ ಸಮಾನವೆಂಬ ನಿಲುವಿಗೆ ಬದ್ಧವಾಗಿದ್ದರು. ಅಂದಿನ ಸಮಾಜವನ್ನು ಉದ್ದೇಶಿಸಿ ಅವರ ವಚನಗಳಿದ್ದರೂ, ಅವು ಸಮಕಾಲೀನ ಜಗತ್ತಿಗೂ ಸಾರ್ವಕಾಲಿಕ ಸಂದೇಶಗಳಾಗಿವೆ. "ಶ್ರೀ ಬಸವೇಶ್ವರರು ...ಕಡೆಗೊಮ್ಮೆ ಭವದಿಂದ ಮೇಲೆದ್ದು ತಮ್ಮನ್ನು ತಾವು ಗೆದ್ದು ಸಿದ್ಧರಾದರು."[5] ಬಸವಣ್ಣನವರು ಸಹಕಾರ ತತ್ವಕ್ಕೆ ನೀಡಿದ ಪ್ರಾಮುಖ್ಯತೆಯನ್ನು ಅವರ ವಚನಗಳೇ ಚಿತ್ರಿಸುತ್ತದೆ. 'ಕಾಗೆಯೊಂದಗುಳ ಕಂಡರೆ ಕರೆಯದೇ ತನ್ನ ಬಳಗವೆಲ್ಲವ? ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೇ ತನ್ನ ಕುಲವೆಲ್ಲವ?....'

ವ್ಯಕ್ತಿಯ ವಿಶಿಷ್ಟತೆಯನ್ನು ವಿವರಿಸುವಲ್ಲಿ ಹುಟ್ಟಿಗೂ, ವೃತ್ತಿಗೂ, ಜಾತಿಗೂ ಸಂಬಂಧವಿರ ಬಾರದೆಂಬುದು ಉನ್ನತ ಮೌಲ್ಯವಾಗಿದೆ. 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ; ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ; ಪ್ರತಿ ವೃತ್ತಿಯೂ ಗೌರವಯುತವಾದುದು. ಹೊರತು ಜಾತಿಯಲ್ಲ. ಬಸವಣ್ಣನವರು ಬದುಕನ್ನು ನಿರಾಕರಿಸಿದವರಲ್ಲ. ಆದರೆ ಅದರ ಮೇಲೆ ಅವರಿಗೆ ವ್ಯಾಮೋಹವಿಲ್ಲ. ಭಕ್ತಿ, ಕಾಯಕ, ದಾಸೋಹ ಇತ್ಯಾದಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳದ ಜನರ ಜೀವನ ನಿರರ್ಥಕವೆಂದು ನಂಬಿದವರು.

ದೇಶಕ್ಕೆ ಗಡಿಗಳಿಲ್ಲದ ಮಾನವ ಸಮಾಜ ನಿರ್ಮಾಣ ಮಾಡಬೇಕೆಂಬ ಕಾರ್ಲ್‌ಮಾರ್ಕ್ಸ್‌ನ ಸಮಾಜದ ಮುನ್ಸೂಚನೆಯೇ ಬಸವಣ್ಣನವರು ಕಟ್ಟಬಯಸಿದ ಸಮಾಜವಾದಿ ಸಮಾಜ.[6] "ವೀರಶೈವರು ಜಾತಿರಹಿತ, ವರ್ಗರಹಿತ ಮತ್ತು ಸಮಾನ ದೃಷ್ಟಿಕೋನದ ಸೃಷ್ಟಿಗೆ ದುಡಿದವರು. ಜಾತಿರಹಿತ ಸಮಾಜ ಕಟ್ಟಲು ಹೋರಾಡಿದ ಮೊದಲ ಧರ್ಮವೆಂದರೆ ಅತಿಶಯೋಕ್ತಿಯಾಗಲಾರದು. ಈ ಧರ್ಮಕ್ಕೆ ಎಲ್ಲಾ ವೃತ್ತಿ ಸೂತಕ ಮತ್ತು ಜಾತಿ ಸೂತಕದ ಜನರನ್ನು ಸೇರಿಸಿಕೊಂಡರು."[7] ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ ಮುಂತಾದ ವಚನಕಾರರೆಲ್ಲರೂ ಬಸವಣ್ಣನವರು ತೋರಿಸಿದ ದಾರಿಯಲ್ಲಿಯೇ ನಡೆದರು. ಋಷಿವಂಶದವರೆಂದು ಸ್ವಜಾತಿ ಉತ್ತಮಿಕೆಯನ್ನು ತೋರಿಸುವವರಿಗೆ ಅವರ ವಚನದಲ್ಲಿನ ವಿಡಂಬನೆ ಇದು.

ಹೊಲೆಯೊಳಗೆ ಹುಟ್ಟಿ ಕುಲವನರಸುವ
ಎಲವೊ, ಮಾತಂಗಿಯ ಮಗ ನೀನು
.. ..
ವ್ಯಾಸ ಬೋಯಿತಿಯ ಮಗ
ಮಾರ್ಕಂಡೇಯ ಮಾತಂಗಿಯ ಮಗ

ಹನ್ನೆರಡನೆಯ ಶತಮಾನದಲ್ಲಿ ನಡೆದ ಮಹಾ ಆಂದೋಲನ ಪ್ರಪಂಚಕ್ಕೆ ದೀವಟಿಗೆಯಾಗಿದೆ. ಯಾವುದೋ ಒಂದು ಮತದ ಪರಿಧಿಗೆ ಒಳಗಾಗದೇ ತನ್ನ ಉದಾತ್ತ ಮೌಲ್ಯಗಳನ್ನೇ ವಿಶ್ವಧರ್ಮಕ್ಕೆ ಕೊಡುಗೆ ನೀಡಿದೆ. ಜಾತಿಯನ್ನು ಮೀರಿದ ಬಸವಣ್ಣನವರನ್ನು ಇವತ್ತು ಒಂದು ಜಾತಿಗೆ ಮೀಸಲಾಗಿರಿಸಿಕೊಂಡಿರುವುದು ದುರದೃಷ್ಟಕರ ಸಂಗತಿ. ಮಾತಿಗೆ ಬಸವ ಬೇಕು. ಆದರೆ ಕೃತಿಯಲ್ಲಿ ಆತನ ನುಡಿಗಳಾವುವು ಬೇಕಾಗಿಲ್ಲ. ಇದು ವೈರುಧ್ಯ. ಬಸವಣ್ಣನವರು ಹಚ್ಚಿದ ಆ ದಿವ್ಯಜ್ಯೋತಿಯ ಬೆಳಕು ಮತ್ತೊಮ್ಮೆ ಮಾರ್ಗದರ್ಶಕವಾಗಬೇಕಾಗಿದೆ. ಬಸವ ಬಯಸಿದ ಸಮಾಜ ಸೃಷ್ಟಿಯಾಗಬೇಕಾಗಿದೆ.

ಅಡಿಟಿಪ್ಪಣಿಗಳು

1. ಶ್ರೀ ಬಸವೇಶ್ವರರು : ದೇಜಗೌ – ಮುನ್ನುಡಿ.
2. ಡಿ. ಮೃತ್ಯುಂಜಯ ರುಮಾಲೆ : ಬಸವ ಸಾಹಿತ್ಯ ಸಂ ಪುಟ. 45
3. ಡಾ. ಮನಜ – ಹತ್ತು ಶತಮಾನಗಳ ಕನ್ನಡ ಸಾಹಿತ್ಯ.
4. ಎಸ್.ಬ.ಹೊಸಮುನಿ – ಶರಣ ಸನ್ನಿಧಿ – ಪುಟ. 32
5. ಸಿ.ಪಿ.ಕೆ. – ವಚನ ವಿಲೋಕನ – ಪುಟ 81
6. ಡಾ. ಎಚ್. ತಿಪ್ಪೇರುದ್ರಸ್ವಾಮಿ – ವೀರಶೈವ ದೀಪ್ತಿ, ಪುಟ. 5
7. ದಾಸನೂರು ಕೂಸಣ್ಣ – ಶೋಷಿತ ಜಂಗಮರ ಮೀಸಲಾತಿ, ಪುಟ. 76

ಪರಾಮರ್ಶನ ಗ್ರಾಂಥಗಳು

1. ಡಾ. ಎಚ್. ತಿಪ್ಪೇರುದ್ರಸ್ವಾಮಿ: ವೀರಶೈವ ದೀಪ್ತಿ ಅಖಿಲ ಭಾರತ ಶರಣಾಸಾಹಿತ್ಯ ಪರಿಷತ್ತು ಮೈಸೂರು. 1999.
2. ಸಿ.ಪಿ.ಕೆ.: ವಚನವಿಲೋಕನ–ಸಂವಹನ ಪ್ರಕಾಶನ ಶಿವರಾಂಪೇಟೆ, ಮೈಸೂರು. 1996.
3. ಸಂ. ಡಾ. ಮೃತ್ಯುಂಜಯ ರೂಮಾಲೆ: ಬಸವ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 2004.
4. ಡಾ. ಮನಜ: ದಲಿತ ವರ್ಗದ ಶರಣರು ಮತ್ತು ಶಿವಶರಣೆಯರು, ಸಿದ್ಧಾರ್ಥ ಗ್ರಂಥಮಾಲೆ, ಕುವೆಂಪು ನಗರ, ಮೈಸೂರು 1998
5. ದೇಜಗೌ: ಶ್ರೀ ಬಸವೇಶ್ವರರು.

❖❖❖

ರಂಗ ಸ್ತಬ್ಧವಾಯಿತು
ಬಾನು ವೇಷ ಕಳಚಿತು
ಮರಳಿ ಮನೆಗೆ ಹೋಗಲೆಂದು
ಮೋಡ ತೆರಳಿತು
ತೆಳುಗಾಳಿಯ ಜೋಗುಳಪದ
ಗೂಡಿನೊಳಗೆ ನುಸುಳುತ
ಜಗವೆ ತೊಟ್ಟಿಲಾಯಿತು

ಕುವೆಂಪು ಅವರ 'ರೈಲ್ ರಸ್ತೆ' ಕವಿತೆಯಲ್ಲಿನ ಆಧುನಿಕತೆಯ ಪ್ರತಿನಿಧೀಕರಣ ಹಾಗೂ ಪರಿಣಾಮಗಳು

ಡಾ. ಸಂಗೀತ ಪಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೂಲಿಬೆಲೆ
ಹೊಸಕೋಟೆ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕುವೆಂಪು ಅವರು ಕನ್ನಡದ ವಿಶಿಷ್ಟ ಧ್ವನಿ. ತಮ್ಮ ವೈವಿಧ್ಯಪೂರ್ಣವಾದ ಸೃಜನಶೀಲ ಅಭಿವ್ಯಕ್ತಿಯಿಂದ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಮಹಾಕಾವ್ಯ, ಆತ್ಮಕಥೆ – ಹೀಗೆ ಪ್ರತಿಯೊಂದು ಪ್ರಕಾರದಲ್ಲೂ ವಾಸ್ತವತೆಗೆ ಕನ್ನಡಿ ಹಿಡಿದಂತೆ ಕೃತಿಗಳನ್ನು ಕಲಾತ್ಮಕವಾಗಿ ರಚಿಸಿದ್ದಾರೆ. ಮಾನವನ ಮೂಲಭೂತ ಸಮಸ್ಯೆಗಳಾದ ಅನ್ನ, ಅರಿವೆ, ಆಶ್ರಯಗಳಂತೆಯೇ ಈಚಿನ ದಿನಗಳಲ್ಲಿ 'ಪರಿಸರ' ಅಥವಾ 'ಪ್ರಕೃತಿ'ಯೆಂಬ ಪರಿಕಲ್ಪನೆ ಕೂಡ ಮಾನವಕಾಳಜಿಯ ವಿಷಯವಾಗಿದೆ.

ಆದಿ ಮಾನವರು ಪ್ರಕೃತಿಯ ಮಡಿಲಲ್ಲಿಯೇ ಹುಟ್ಟಿ ಬೆಳೆದು ಅದರ ನಿಕಟ ಸಹವಾಸದಲ್ಲಿಯೇ ಜೀವಿಸುತ್ತಿದ್ದರು ಎಂಬುದು ನಮಗೆಲ್ಲ ತಿಳಿಗ ವಿಚಾರ. ಅಂತೆಯೇ ಮಾನವ ಪರಿಪೂರ್ಣನೆನಿಸಿಕೊಳ್ಳಬೇಕಾದರೆ ಅಥವಾ ಪೂರ್ಣತ್ವದೆಡೆಗೆ ಚಲಿಸಬೇಕಾದರೆ ಎಂದೆಂದಿಗೂ ಪರಿಸರದೊಂದಿಗೆ ಸ್ನೇಹಭಾವನೆಯನ್ನು ಉಳಿಸಿಕೊಂಡಿರಬೇಕು. ಪ್ರಕೃತಿ ಮತ್ತು ಮನುಷ್ಯ ಒಂದೇ ಎಂಬ ಸಮತಾಭಾವವನ್ನು ಬೆಳೆಸಿಕೊಳ್ಳಬೇಕು.

ವಿಜ್ಞಾನ–ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಮನುಷ್ಯನ ಮಹತ್ವಾಕಾಂಕ್ಷೆಯೂ ಬೆಳೆಯಿತು. ಹಾಗೆ ನೋಡಿದರೆ ಇವೆರಡು ಒಂದನ್ನೊಂದು ಪರಸ್ಪರ ಬೆಳೆಸಿದವು. ತಂತ್ರಜ್ಞಾನ ಬೆಳೆದಂತೆ ಮಹತ್ವಾಕಾಂಕ್ಷೆ ಹೆಚ್ಚಿತು. ಮಹತ್ವಾಕಾಂಕ್ಷೆಯು ಮತ್ತಷ್ಟು ಹೊಸ ಯಂತ್ರಗಳನ್ನು ಹುಟ್ಟುಹಾಕಿತು. ಹಲವು ಬಗೆಯ ಆವಿಷ್ಕಾರಗಳಿಗೆ ಅನುವು ಮಾಡಿಕೊಟ್ಟಿತು. ಅದರ ಕೊಡುಗೆಯಾಗಿ ಬಂದದ್ದೇ ರೈಲು ಹಾಗೂ ಅದರ ರಸ್ತೆ. ರೈಲು ಆಧುನಿಕತೆಯ ಒಂದು ರೂಪಕವೇ ಹೌದು. ಆಧುನಿಕ ತಂತ್ರಜ್ಞಾನವನ್ನು ಮತ್ತು ಯಂತ್ರೋಪಕರಣಗಳನ್ನು ಅನುಮಾನದಿಂದ ನೋಡುತ್ತಿದ್ದ ಗಾಂಧೀಜಿಯವರು ರೈಲನ್ನೂ ಅನುಮಾನದಿಂದಲೇ ನೋಡುತ್ತಿದ್ದರು.

ಕುವೆಂಪು ಅವರ 'ರೈಲ್ ರಸ್ತೆ' ಕವಿತೆ 16.03.1934ರಂದು ಅಕ್ಷರ ರೂಪವನ್ನು ಕಂಡಿತು. ಇದು 1944ರಲ್ಲಿ ಪ್ರಕಟವಾದ 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಕವನ ಸಂಕಲನದ ಒಂದು ಗರಿಯೂ ಹೌದು. ಮೇಲ್ನೋಟಕ್ಕೆ ಸರಳವಾದ ಕವಿತೆಯಾಗಿ ಕಂಡರೂ ಹಲವು ರೀತಿಯ ಅರ್ಥ ಪರಂಪರೆಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಈ ಕವಿತೆಗೂ ಆಧುನಿಕ ಮಾನವನ ನಿತ್ಯ ನಿರಂತರ ಬೆಳವಣಿಗೆಗೂ ತೀರಾ ಹತ್ತಿರದ ಸಂಬಂಧವಿದೆ. ಪರಿಸರ ದೃಷ್ಟಿಕೋನದಿಂದ ಕವಿತೆಯನ್ನು ಓದುತ್ತಾ ಹೋದರೆ

ಒಳಾರ್ಥಗಳು ಓದುಗರ ಗ್ರಹಿಕೆಗೆ ಬಾರದಿರವು. ಆದ್ದರಿಂದಲೇ ಇಂಥ ಕವಿತೆಯ ಮರು ಓದು ಅಗತ್ಯವಾಗಿದೆ.

ರೈಲು ಹರಿಯುವ ಕಂಬಿ ದಾರಿ ಬಿಟ್ಟೂ ಬಿಡದೆ ತನ್ನ ನಿರಂತರತೆಯನ್ನು ಸ್ಥಾಪಿಸಿಕೊಂಡಿದೆ. ಕರ್ಣಕಠೋರವಾದ ಕರ್ಕಶ ಶಬ್ದವನ್ನು ಪಸರಿಸುತ್ತಾ ಒಂದು ಎಲ್ಲೆಯಿಂದ ಮತ್ತೊಂದು ಎಲ್ಲೆಗೆ ತನ್ನ ಪಯಣವನ್ನು ಬೆಳೆಸಿದೆ. ನಿತ್ಯನೂತನ ನಾಗರೀಕತೆಯ ಕೊಡುಗೆಯೆಂಬಂತೆ ದಿಕ್ಕುದಿಕ್ಕುಗಳಿಗೆ ಹರಿಯುತ್ತಿದೆ. ಮಾನವನ ಬೌದ್ಧಿಕತೆಯ ಸಂಕೇತವಾಗಿರುವ ರೈಲ್ ರಸ್ತೆಯ ಆಗಮನವೆಷ್ಟು ಆಕರ್ಷಕವಾಗಿದೆಯೋ ಅದರ ಮುಂದುವರಿಕೆಯೂ ಕೂಡ ಅನೂಹ್ಯವಾಗಿದೆ. ಈ ಪ್ರಕ್ರಿಯೆಯಿಂದ ಎದುರಾಗುವ ಸಮಸ್ಯೆಗಳ ಸರಮಾಲೆಯಂತೂ ಊಹಾತೀತ.

ಈ ಮಧ್ಯೆ ರೈಲಿನ ರೂಪ ಆಕಾರಗಳನ್ನು ಕವಿ ಕುವೆಂಪು ಮನಮುಟ್ಟುವ ಹಾಗೆ ಚಿತ್ರಿಸಿದ್ದಾರೆ.

ಕರಿಯ ತಲೆ, ಗಾಜುಗಣ್ಣು;
ಬಾಯಲ್ಲಿ ಹೊಗೆ, ಮೂಗಿನಲ್ಲಿ ಕಿಡಿ, 'ರೈಲಿನೆಂಜಿಣ್ಣು'!
ಹರಿಯುತಿದೆ ಗಡಗಡನೆ ಸದ್ದುಮಾಡಿ
ದೊಡ್ಡದೊಂದೊನಕೆ ಹುಳು! ಹೊಟ್ಟೆಯಲ್ಲಾ ಗಾಡಿ!
ಸಿಳ್ಳು ಹಾಕುತಿದೆ; ಕಿಡಿಯ ಸೂಸುತಿದೆ
ಹೊಗೆಯನೂದುತಿದೆ; ನುಗ್ಗಿಯೋಡುತಿದೆ!

ಎಂಬ ಸಾಲುಗಳು ಕುತೂಹಲಕಾರಿಯಾಗಿ ರೈಲು ಕ್ರಮಿಸುವ ರೀತಿಯನ್ನು ಕಟ್ಟಿಕೊಟ್ಟಿವೆ. ರೈಲು ಜನರ ಪರಿವೆಯೇ ಇಲ್ಲದೆ ಭಾವಶೂನ್ಯವಾಗಿ ಯಂತ್ರರೂಪಿಯಾಗಿ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಕುವೆಂಪು ಅವರು ಗಾಂಧೀಜಿಯಂತೆ ಆಧುನಿಕ ಯಂತ್ರ ನಾಗರಿಕತೆಯನ್ನು ಕಟುವಾಗಿ ಟೀಕಿಸಿದವರಲ್ಲ. ಆಧುನಿಕ ಇಂಗ್ಲಿಷ್ ಶಿಕ್ಷಣವು ಧನಾತ್ಮಕ ಬದಲಾವಣೆಯನ್ನು ತಂದಿದೆಯೆಂದೇ ಕುವೆಂಪು ಭಾವಿಸುವವರು. ಗಾಂಧೀಜಿಯವರ ಪ್ರಕಾರ ಆಧುನಿಕ ಇಂಗ್ಲಿಷ್ ಶಿಕ್ಷಣ ಕೂಡ ಭಾರತಕ್ಕೆ ಹಾನಿಯನ್ನೇ ಮಾಡಿದೆ.

ಕುವೆಂಪು ಅವರು ಆಧುನಿಕತೆಯ ಕಟುಟೀಕಾಕಾರರಲ್ಲದಿದ್ದರೂ ಅವರ ನಿಸರ್ಗಪ್ರೀತಿ ಬಹಳ ವಿಶೇಷವಾದದ್ದು. ಹೋಗವೆನು ನಾನು ಮಲೆಯನಾಡಿಗೆ ಎಂದು ಕುವೆಂಪು ಮತ್ತೆ ಮತ್ತೆ ಹಾಡಿದ್ದಾರೆ. ಆ ಹಿನ್ನೆಲೆಯಲ್ಲಿಯೇ ಅವರು ಸುಸ್ಥಿರವಾದ ಪರಿಸರವನ್ನು ಅಥವಾ ಮಲೆನಾಡನ್ನು ಕಾಣಲು ಅಪೇಕ್ಷಿಸಿದವರು. ಆಧುನಿಕ ಬದುಕಿನ ಧಾವಂತವು ನಿಸರ್ಗವನ್ನು ಬಲಿತೆಗೆದುಕೊಳ್ಳುತ್ತಿರುವುದರ ಸ್ಪಷ್ಟ ಕಲ್ಪನೆ ಅವರಿಗಿತ್ತು. ಈ ಪದ್ಯದಲ್ಲಿ ಬಳಸಲಾದ ಪದಗಳನ್ನೇ ನೋಡಿದರೂ ಗೊತ್ತಾಗುತ್ತದೆ; ಕುವೆಂಪು ರೈಲನ್ನು ಚಿತ್ರಿಸಿದ ಬಗೆಯನ್ನು ನೋಡಿದರೆ ಅವರು ಅದನ್ನು ಕೇವಲ ಸಂಚಾರ ಸಾಧನವಾಗಿ ಕಾಣುತ್ತಿಲ್ಲ ಎಂದು ಗೊತ್ತಾಗುತ್ತದೆ.

ಈ ಪದ್ಯದಲ್ಲಿ ಮೊದಲು ರೈಲು ಒಂದು ವ್ಯಕ್ತಿಯೇ ಆಗುತ್ತದೆ. ಇಂಗ್ಲಿಷಿನಲ್ಲಿ ಪರ್ಸಾನಿಫಿಕೇಶನ್ ಎನ್ನುವ ಅಲಂಕಾರವಿದೆಯಲ್ಲ, ಹಾಗೆ. ಕರಿಯ ತಲೆ, ಗಾಜುಗಣ್ಣು ಎಂದಾಗ ನಮಗೆ ಮನುಷ್ಯರ ಕಲ್ಪನೆ ಬರುತ್ತದೆ. ಬಾಯಲ್ಲಿ ಹೊಗೆಯಿದೆ. ಮೂಗಿನಲ್ಲಿ ಬುಸುಗುಡುತ್ತಿರುವುದಷ್ಟೇ ಅಲ್ಲ; ಕಿಡಿಯನ್ನೇ ಹೊರಸೂಸುತ್ತಿದೆ. ಮುಂದೆ ಹೋದಂತೆ, ಅದೊಂದು ದೊಡ್ಡ ಹುಳುವಾಗಿಬಿಡುತ್ತದೆ. ಹುಳು ಸಾಮಾನ್ಯವಾಗಿ ನಿಧಾನವಾಗಿ

ಚಲಿಸುವುದು. ಹುಳುಗಳು ಸಾಮಾನ್ಯವಾಗಿ ಓಡುವುದು ಎಂದಿಲ್ಲ. ಆದರೆ ಇಲ್ಲಿ ಅದಕ್ಕೆ ವಿರುದ್ಧವಾಗಿ ಹೊಗೆಯನ್ನು ಬಿಡುತ್ತ ನುಗ್ಗಿ ಓಡುತ್ತಿದೆ. ಇದು ಕುವೆಂಪು ಅವರ ಪದಚಮತ್ಕಾರ. ಈ ರೈಲು ಅಥವಾ ಹುಳು ಮುಂದೆ ಜಗನ್ನಾಥರಥದಂತೆ (ಇಂಗ್ಲಿಷಿನಲ್ಲಿ ಜಗ್ಗರ್‌ನಾಟ್ ಎಂಬ ಪದವಿದೆ) ಎಲ್ಲವನ್ನು ಅಡಿಗೆ ಹಾಕಿಕೊಂಡು ಓಡಬಲ್ಲದು ಎನ್ನುವ ಸೂಚನೆ ಇಲ್ಲಿದೆ. ಆಧುನಿಕತೆಯ ಸೆಳೆತ ಅಂತಹದು. ಮೊದಲು ನಾವು ಅದನ್ನು ಬರಮಾಡಿಕೊಳ್ಳುತ್ತೇವೆ. ಆನಂತರ ಅದುವೇ ನಮ್ಮನ್ನೇ ಸೆಳೆಯುತ್ತದೆ. ಮೊದಮೊದಲು ನಾವು ಕಂಡುಹಿಡಿದ ಯಂತ್ರಗಳು ನಮ್ಮ ಸೇವಕರು ಎಂದು ನಾವು ಭಾವಿಸುತ್ತೇವೆ. ಕ್ರಮೇಣ ನಾವೇ ಯಂತ್ರಗಳ ದಾಸರಾಗುತ್ತೇವೆ. ಈ ಕವನವನ್ನು ಈಗ ಓದಿದರೆ ಆಧುನಿಕತೆಯ ದಾಸರಾಗಿ ಮುಂದೆ ನಾವು ಸ್ವಂತಿಕೆಯನ್ನು ಕಳೆದುಕೊಳ್ಳಲಿದ್ದೇವೆ ಎನ್ನುವ ದಾರ್ಶನಿಕ ದೃಷ್ಟಿಯನ್ನು ನೀಡಿರುವಂತೆ ಭಾಸವಾಗುತ್ತದೆ.

ಪರಾಮರ್ಶನ ಕೃತಿಗಳು :

1. ಕುವೆಂಪು ಸಮಗ್ರ ಕಾವ್ಯ ಸಂಪುಟ–01, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ವಿದ್ಯಾರಣ್ಯ. 2000.
2. ಚಂದ್ರ ಪೂಜಾರಿ ಎಂ, ಪರಿಸರ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ವಿದ್ಯಾರಣ್ಯ. 1988.
3. ಪುಟ್ಟಯ್ಯ ಈ.ಟಿ., ಪರಿಸರ ಮತ್ತು ಮಾನವ, ಸಂಕಲನ, ವಿದ್ಯಾರಣ್ಯಪುರ, ಮೈಸೂರು. 1988.
4. ಮೋಹನಕೃಷ್ಣ ರೈ. ಕೆ., ನಗರೀಕರಣ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ವಿದ್ಯಾರಣ್ಯ. 1997.
5. ಡಾ. ಸಂಗೀತ ಪಿ.(ಲೇ), ಇಳೆಯೆಂದರೆ ಬರಿ ಮಣ್ಣಲ್ಲ., ವಿಹಾಪುಸ್ತಕ, 2021.

❖❖❖

ಸತ್ಯಕ್ಕನ ವಚನಗಳಲ್ಲಿ ಭಕ್ತಿ

ಡಾ. ಪಿ.ಬಿ. ಪ್ರಸನ್ನ
ಕನ್ನಡ ಸಹಪ್ರಾಧ್ಯಾಪಕರು
ಜಿ ಶಂಕರ್ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ
ಅಧ್ಯಯನ ಕೇಂದ್ರ ಅಜ್ಜರಕಾಡು, ಉಡುಪಿ 576101

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ಚಳುವಳಿಯನ್ನು ಕಾಯಕ ಜೀವಿಗಳ ಚಳವಳಿ ಎಂದು ಕರೆಯಲಾಗಿದೆ.[1] ಅವರ ಮಾತುಗಳಿಗೆ ಅವರು ಗಳಿಸಿದ ಆ ಕಾಲಘಟ್ಟದ ಜೀವನ ಅನುಭವವೇ ಪ್ರಮಾಣ. ಆ ಪ್ರಮಾಣಬದ್ಧವಾದ ಮಾತೇ ವಚನ ಎಂದು ಕರೆಯಲ್ಪಟ್ಟಿತು. ವಚನ ಎಂದರೆ ಮಾತು ಎಂಬ ಅರ್ಥವಿದೆಯಷ್ಟೇ. ಅದು ಕೇವಲ ಕಾಲಹರಣದ ಮಾತು ಎಂದು ಅರ್ಥವಲ್ಲ. ಅದು ಪ್ರಮಾಣಬದ್ಧವಾದ ಮಾತು. ಕಾಯಕ ಜೀವಿಗಳಾದ ನೂರಾರು ಮಂದಿ ತಮ್ಮ ತಮ್ಮ ಜೀವನದ ಅನುಭವಗಳನ್ನು ನಿರೂಪಿಸಿದ ಪ್ರಮಾಣಬದ್ಧವಾದ ಮಾತು ವಚನ ಎಂದು ಕರೆಯಲ್ಪಟ್ಟಿತು.

ವಚನ ಚಳುವಳಿಯ ಮಹತ್ವದ ಅಂಶವೆಂದರೆ ಹಲವಾರು ಮಂದಿ ಹೆಣ್ಣುಮಕ್ಕಳು ಕೂಡ ತಮ್ಮ ತಮ್ಮ ಅನುಭವಗಳನ್ನು ಹೇಳಿಕೊಳ್ಳಲು ಅವಕಾಶ ಸಿಗುವಂತೆ ಆದದ್ದು. ಅಕ್ಕಮಹಾದೇವಿಯೇ ಮೊದಲಾಗಿ ನೂರಾರು ಮಂದಿ ಶಿವಶರಣೆಯರು ತಮ್ಮ ತಮ್ಮ ಅನುಭವಗಳನ್ನು ಹೇಳಿಕೊಂಡರು. ಅಂತಹ ಶಿವಶರಣೆಯರ ಪೈಕಿ ಸತ್ಯಕ್ಕ ಕೂಡ ಒಬ್ಬಳು.

ಸತ್ಯಕ್ಕನ ವಿಚಾರವನ್ನು ಅನೇಕ ವೀರಶೈವ ಕಾವ್ಯಗಳು ಪ್ರಸ್ತಾಪ ಮಾಡಿವೆ. ಲಿಂಗಾರ್ಚನೆಯ ರಗಳೆಯಲ್ಲಿ ಈಕೆಯ ಹೆಸರು ಪ್ರಸ್ತಾಪಗೊಂಡಿದೆ. ಇವಳು ಮನೆಮನೆಗಳ ಕಸ ತೆಗೆಯುವ ಕೆಲಸದಾಕೆ ಆಗಿದ್ದಳು ಎಂದು ತಿಳಿದು ಬರುತ್ತದೆ.[2] ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಹಿರೇಜಂಬೂರು ಇವಳ ಸ್ಥಳ. ಈಕೆಯ ವಚನಗಳ ಅಂಕಿತ ಶಂಬುಜಕ್ಕೇಶ್ವರ. ಈ ಅಂಕಿತದಲ್ಲಿ ಒಟ್ಟು 27 ವಚನಗಳು ಲಭ್ಯ ಆಗಿವೆ.

ಸಂಸಾರದಿಂದ ದೂರವೇ ಉಳಿಯಲು ನಿರ್ಧರಿಸಿ ಅವಿವಾಹಿತೆಯಾಗಿಯೇ ಉಳಿದು ಅಧ್ಯಾತ್ಮ ಸಾಧನೆ ಮಾಡಿದ ಶಿವಶರಣೆ ಇವಳು. ತನ್ನ ಬದುಕಿನಲ್ಲಿ ಒಳ್ಳೆಯ ನಡತೆಯನ್ನು ತಾನು ಹೊಂದಿರಬೇಕು, ಯಾವ ಕಾರಣಕ್ಕೂ ಬೇರೆಯವರ ಒಡವೆ ವಸ್ತುಗಳನ್ನು ಮುಟ್ಟಬಾರದು, ಅದಕ್ಕಾಗಿ ಕೀಳು ಆಸೆಯನ್ನು ಹೊಂದಬಾರದು ಎನ್ನುವ ದೃಢ ಮನಸ್ಸನ್ನು ಮಾಡಿಕೊಂಡು ಅದರಂತೆಯೇ ಬಾಳಿ ಬದುಕಿದವಳು ಸತ್ಯಕ್ಕ. ಸತ್ಯಕ್ಕನದು ದೃಢ ನಿಲುವಿನ ನಿಷ್ಠೆಯ ಭಕ್ತಿ.[3] ಹೆಸರಿಗೆ ತಕ್ಕಂತೆ ಆಕೆ ಸತ್ಯ ಆಗಿದ್ದಳು. ಲಭ್ಯ ಇರುವ ಅವಳ 27 ವಚನಗಳಲ್ಲಿ ಎಲ್ಲವನ್ನೂ ವಿಮರ್ಶಿಸಲು ಅಥವಾ ವಿವರಿಸಲು ಈ ಲೇಖನದ ವ್ಯಾಪ್ತಿಯಲ್ಲಿ ಸಾಧ್ಯ ಆಗದೇ ಇರುವ ಕಾರಣ ಒಟ್ಟಾಗಿ ಭಕ್ತಿಯ ಕುರಿತು ಆಕೆಯ ನಿಲುವು ಏನಿದೆ ಎನ್ನುವುದನ್ನು ಸ್ಥೂಲವಾಗಿ ಚರ್ಚಿಸಬಹುದು.

ಶರಣು ಎನ್ನುವುದು ಸತ್ಯಕ್ಕನಿಗೆ ಕೇವಲ ತೋರಿಕೆಯ ಡಂಬಾಚಾರದ ಮಾತು ಅಲ್ಲ. 'ಓಡು ದೇಹದ ಶಿರ ಬಿಗಿದು ಮಡುಗಟ್ಟಿ ಕಂಬನಿಯ ಕಡಲೊಳಗೆ ತೇಲಾಡುತ

ಎಂದಿಪ್ಪೆನೋ'[4] ಎಂದು ಕೇಳಿಕೊಂಡಿದ್ದಾಳೆ. ತನಗೆ ಬೇರೆ ನುಡಿ ಇಷ್ಟವಾಗುವುದಿಲ್ಲ. ಬೇರೆ ಬೋಧನೆ ಪದ್ಯವಾಗುವುದಿಲ್ಲ. ತನ್ನದು ಶರಣಾಗತಿಯ ಭಕ್ತಿ. ಹಾಗಾಗಿ ತನ್ನ ಶರಣು ಎನ್ನುವ ಪದ ಒಡಲಿನಿಂದಲೇ ಹೊರಡುವಂಥದ್ದು ಎಂದು ಹೇಳಿದ್ದಾಳೆ. ಇದು ಕೇವಲ ಸತ್ಯಕ್ಕನ ವಿಷಯ ಮಾತ್ರವಲ್ಲ ವಚನಕಾರರ ಸಂದರ್ಭದಲ್ಲಿ ಎಲ್ಲರೂ ಡಾಂಭಿಕ ಭಕ್ತಿಯನ್ನು ವಿರೋಧಿಸಿದವರೇ ಆಗಿದ್ದಾರೆ.

ಗುರು ಯಾವ ಜಾತಿಯಲ್ಲಿ ಜನಿತವಾದರೆ ಏನು ಎಂದು ಪ್ರಶ್ನಿಸಿದ ಆಕೆ'ಶಿವಾಜ್ಞೆಯಿಂದ ತೊಟ್ಟು ಬಿಟ್ಟಹಣ್ಣಿನಂತೆ ಶಿವ ಭಕ್ತ ಮತ ಮೊದಲಾಗಿ ಆವ ಜಾತಿಯಲ್ಲಿ ಜನಿತವಾದಡೇನು?'[5] ಎಂದು ಪ್ರಶ್ನಿಸಿದ್ದಾಳೆ. ಮಾತ್ರವಲ್ಲ ದ್ರವ್ಯದ ಅಭಿಲಾಷೆಯಿಂದ ತ್ರಿವಿಧ ದೀಕ್ಷೆಯ ಮಾಡುವ ಗುರು ಹುಟ್ಟು ಅಂಧಕ[6] ಎಂದು ಆಕೆ ಕರೆದಿದ್ದಾಳೆ. ಗುರು ಮತ್ತು ಶಿಷ್ಯ ಇಬ್ಬರೂ ಕೂಡ ಮನಸ್ಸು ಮಾತು ಹಾಗೂ ದೇಹ ಮೂರರಲ್ಲಿಯೂ ಕೂಡ ಪರಿಶುದ್ಧರಾಗಿರಬೇಕು. ಮನಸ್ಸಿನಲ್ಲಿ ಒಂದು ಮಾತಿನಲ್ಲಿ ಮತ್ತೊಂದು ದೈಹಿಕವಾಗಿ ಇನ್ನೊಂದು ಆಗಿರಬಾರದು ಎನ್ನುವುದು ಈಕೆಯ ನಿಲುವು.

ವೈದಿಕ ಪರಂಪರೆಯ ದೇವ ಆರಾಧನೆಯ ಬಗ್ಗೆ ಸತ್ಯಕ್ಕಳಿಗೆ ಯಾವುದೇ ಒಲವು ಇಲ್ಲ. ಹಾಗಾಗಿ ಆಕೆ

'ಅರ್ಚನೆ ಪೂಜನೆ ನೇಮವಲ್ಲ
ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ'

ಎಂದು ಖಚಿತವಾದ ನೆಲೆಯಿಂದಲೇ ಆಡಿದ್ದಾಳೆ. ಶಿವಭಕ್ತ ಎನಿಸಿಕೊಳ್ಳಬೇಕಾದರೆ ಪರಧನ, ಪರಸ್ತ್ರೀ ಹಾಗೂ ಪರದೈವಗಳಿಗೆ ಎರಗದೆ ಇರಬೇಕು. ಅದೇ ನೇಮ. ಈ ಮಾತನ್ನು ಹೆಚ್ಚಿನ ವಚನಕಾರರು ಕೂಡ ಹೇಳಿರುವುದನ್ನು ನಾವು ಗಮನಿಸಬಹುದು. ಪರಸ್ತ್ರೀ, ಪರಧನ ಇವುಗಳನ್ನು ಶೂಲಕ್ಕೆ ಹೋಲಿಸಿದ್ದನ್ನು ನಾವು ಗಮನಿಸಬಹುದಾಗಿದೆ.

ವೇದ ಉಪನಿಷತ್ತುಗಳು ದೇವನ ಇರುವಿಕೆಯ ಬಗ್ಗೆ ಹೇಳಿವೆ ಎನ್ನುವ ಮಾತುಗಳನ್ನು ಕೂಡ ಎಲ್ಲ ವಚನಕಾರರಂತೆ ಸತ್ಯಕ್ಕಳು ಒಂದು ಪುಟ್ಟದಾದ ರೆಫರೆನ್ಸ್‌ಗೆ ಮಾತ್ರವೇ ತೆಗೆದುಕೊಳ್ಳುತ್ತಾಳೆ. 'ವೇದಿಗಳು ಪರಬ್ರಹ್ಮಯೆಂದೆಂಬರು, ನಾದ ಬಿಂದು ಕಳಾತೀತ ಎಂದೆಂಬರು' ಎಂದು ಉಲ್ಲೇಖಿಸುತ್ತಾ ಸಾಧು ಸಜ್ಜನ ಭಕ್ತರ ಇಚ್ಛೆಗೆ ದೊರಕುವ ಕಾರಣ ಶಿವನು ದೇವರಾಗಿ ದೊರಕಿದ್ದಾನೆ ಎಂದು ಅಭಿಪ್ರಾಯ ಪಟ್ಟಿದ್ದಾಳೆ.

ಅಕ್ಕಮಹಾದೇವಿಯ ವಚನಗಳಂತೆಯೇ ಸತ್ಯಕ್ಕನ ವಚನಗಳಲ್ಲಿಯೂ ಕೂಡ ಶಿವನೇ ತನ್ನ ಪತಿ ಎನ್ನುವ ಭಾವ ಕಂಡುಬರುತ್ತದೆ. ತನ್ನ ಅಂತರಂಗದಲ್ಲಿ ಇರುವ ಶಿವನೊಂದಿಗೆ ಅವಳೇ ಮಾತನಾಡಿಕೊಳ್ಳುತ್ತಾಳೆ.

'ಏಕೆ ಎನ್ನ ಬಾರದ ಭವಂಗಳಲ್ಲಿ ಬರಿಸಿದೆ? ಏಕೆನ್ನ ಸಂಸಾರದಲ್ಲಿರಿಸಿದೆ?' ಎಂದು ಪ್ರಶ್ನಿಸುತ್ತ ಕುತ್ತಿಗೆಗೆ ಕೈ ಹಾಕಿ ತನ್ನನ್ನು ಹೊರಗೆ ದಬ್ಬಿದರೂ ತಾನು ಬಿಡುವವಳಲ್ಲ. ತನ್ನ ಭಕ್ತಿ ಶಿವನಿಗೆ ನಿಷ್ಠವಾದದ್ದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಳೆ. ಸತ್ಯಕ್ಕನ ಅಭಿಪ್ರಾಯದಲ್ಲಿ ಶಿವ ಗಂಡರಿಗೆ ಗಂಡ. ಗಂಡರಿಗೆ ಗಂಡನಾದ ಶಿವನು ನಡೆದದ್ದೇ ದಾರಿ. ಅವನು ರೂಪಾತೀತ ಎನ್ನುವುದು ಆಕೆಯ ಅಭಿಪ್ರಾಯ.[7]

ಶಿವನನ್ನು ಆಕೆ ಅನುಭಾವಿ ಎಂದು ಗ್ರಹಿಸಿ ಶಬ್ದಕ್ಕೂ ಆಚೆಗೆ ಇರುವ ದೈವ ಸ್ವರೂಪಿ ಎಂದು ಪರಿಗಣಿಸಿದ್ದಾಳೆ. ಆತ ಮಾತಿಗೆ ದಕ್ಕುವವನಲ್ಲ. ಅದಕ್ಕೂ ಮೀರಿದ

ವ್ಯಾಪ್ತಿಯಲ್ಲಿ ಇರುವಾತ ಎನ್ನುವುದು ಅವಳ ಅಭಿಪ್ರಾಯ. ತನ್ನ ಪ್ರಾಣವೇ ಶಿವ[8] ಎಂದು ಗ್ರಹಿಸುವ ಆಕೆ ಶಿವನನ್ನು ಕಂಡರೆ ಸಾಕು ಕಡೆಯದ ಕೀಲು ಕಳೆದಂಥ ಅನುಭವವಾಗುತ್ತದೆ ಎಂದಿದ್ದಾಳೆ.

ಈಗಾಗಲೇ ವಿವರಿಸಿದಂತೆ ವೈದಿಕ ದೇವರ ಸ್ವರೂಪಗಳನ್ನು ಎಲ್ಲ ವಚನಕಾರರಂತೆ ಈಕೆಯೂ ನಿರಾಕರಿಸುತ್ತಾಳೆ. ಶಿವನ ಐದು ತಲೆ, ಹಣೆಯ ಕಣ್ಣು, ಕೊರಳಲ್ಲಿ ವಿಷದ ಗುರುತು ಇತ್ಯಾದಿಗಳನ್ನು ಎಲ್ಲವನ್ನೂ ಆಕೆ ನಿರಾಕರಿಸುತ್ತಾಳೆ.[9] ಅಂದರೆ ದೇವರ ಬಗ್ಗೆ ತಿಳಿವಳಿಕೆಯನ್ನು ಪಡೆಯುತ್ತಾ ಹೋದಂತೆ ಆದ ಚಿದಾನಂದ ಸ್ವರೂಪ ಎನ್ನುವ ಜ್ಞಾನ ಮೂಡಿ ಬರಬೇಕು. ಏಕದೇವ ನಿಷ್ಠೆಯಿಂದ ಶಂಬುಜಕೇಶ್ವರನನ್ನೇ ದೇವರು ಎಂದು ಪರಿಗಣಿಸಿ ಎಂದು ಆಕೆ ಧೈರ್ಯದಿಂದ ನುಡಿದಿದ್ದಾಳೆ. ವಚನಕಾರರೆಲ್ಲರೂ ಕಾಯಕದ ಪರಿಶುದ್ಧತೆಗೆ ಗಮನಕೊಟ್ಟಂತೆ ಭಕ್ತಿಯ ಪರಿಶುದ್ಧತೆಗೆ ಬದುಕಿನ ಪರಿಶುದ್ಧತೆಗೆ ಗಮನಕೊಟ್ಟವರು. 'ಭವಿಯ ಬೆರೆಸಿದ ಭಕ್ತಿ ಹವಿಯ ಬೆರಸಿದ ಬೀಜ ಉದಕ ಬೆರಸಿದ ಎಣ್ಣೆ ಜ್ಯೋತಿ ಪ್ರಜ್ವಲಿಸುವುದೇ'[10] ಎಂದು ಆಕೆ ಪ್ರಶ್ನಿಸಿದ್ದಾಳೆ.

ಸತ್ಯಕ್ಕನ ವಚನಗಳಲ್ಲಿ ಕಂಡು ಬರುವ ಕುತೂಹಲಕರವಾದ ಇನ್ನೊಂದು ಅಂಶ ಎಂದರೆ ಆಕೆ ಮಂತ್ರ ತಂತ್ರದ ಭಾರೀ ದ್ವೇಷಿ ಅಲ್ಲ. ಮಂತ್ರದ ನಡುವೆಯೇ ಶಿವನನ್ನು, ಲಿಂಗದ ನಡುವೆಯೇ ಮಂತ್ರವನ್ನು ಯಾರು ಕಂಡುಕೊಳ್ಳಬಲ್ಲನೋ ಅಂಥವನಿಗೆ ಮಂತ್ರ ದಕ್ಕುತ್ತದೆ. ಇಲ್ಲದೇ ಇದ್ದರೆ ಅಂಥವನಿಗೆ ಮಂತ್ರ ಎನ್ನುವುದು ಕೇವಲ ತೋರಿಕೆಯ ವಸ್ತುವಾಗಿ ಮಾತ್ರ ಇರುತ್ತದೆ. ಎನ್ನುವುದು ಆಕೆಯ ಅಭಿಪ್ರಾಯ.

ಶಿವನನ್ನು ತನ್ನ ಭಾವನನ್ನಾಗಿ ಗ್ರಹಿಸುವ ವಿಶಿಷ್ಟ ಒಂದು ಚಿಂತನೆ ಒಂದು ವಚನದಲ್ಲಿ ವ್ಯಕ್ತವಾಗಿದೆ. 'ಭಾವನೇಕೆ ಬಾರನು ಎನ್ನ ಮನೆಗೆ? ಎಂದು ಪ್ರಶ್ನಿಸುವ ಒಂದು ವಚನದಲ್ಲಿ ದಕ್ಷನ ರುಂಡವನ್ನು ಕತ್ತರಿಸಿದ್ದು, ತ್ರಿಪುರ ಮಥನವನ್ನು ಮಾಡಿದ್ದು ಇತ್ಯಾದಿ ಶಿವನ ಎಲ್ಲ ಸಾಹಸಗಳ ಬಗ್ಗೆ ವಿವರಣೆಗಳಿವೆ. ಅಂಥ ಶಿವನು ಗಂಗೆ ಗೌರಿಯರನ್ನು ಕೂಡಿಕೊಂಡು ಪರ ವಧುವಿಗೆ ಕೀಳು ಆಸೆಯನ್ನು ವ್ಯಕ್ತಪಡಿಸಿದ್ದಾನೆ. ಅಂಥವನಿಗೆ ಸರಿಯಾದ ಪಾಠ ಕಲಿಸಬೇಕಾದರೆ ತಾನೇ ಅವನನ್ನು ಕೂಡಬೇಕು ಎನ್ನುವ ಆರ್ತ ಭಾವನೆ ಈ ವಚನದಲ್ಲಿ ವ್ಯಕ್ತವಾಗಿದೆ. ಶಿವನನ್ನು ತನ್ನ ನಲ್ಲ, ಪ್ರಿಯಕರ ಎಂದೆಲ್ಲ ಪರಿಭಾವಿಸಿ ಆಕೆ ಸಂವಾದವನ್ನು ನಡೆಸಿದ್ದಾಳೆ.

ವಚನಕಾರರ ಇನ್ನೊಂದು ಬಹುಮುಖ್ಯ ಪರಿಕಲ್ಪನೆ ಎಂದರೆ ಸ್ತ್ರೀ ಪುರುಷತನವನ್ನು ಮೀರುವ ಒಂದು ಪರಿಕಲ್ಪನೆ. ಮೊಲೆ ಮುಡಿ ಕಂಡು ಬಂದರೆ ಹೆಣ್ಣಾಗುವ, ಮೀಸೆ ಗಡ್ಡ ಕಂಡು ಬಂದರೆ ಗಂಡಾಗುವ ದೈಹಿಕ ವ್ಯತ್ಯಾಸಗಳಿಗೆ ಯಾವುದೇ ಪ್ರಾಮುಖ್ಯವನ್ನು ವಚನಕಾರರು ಕೊಡುವುದಿಲ್ಲ. ಸತ್ಯಕ್ಕಳು ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾಳೆ.

'ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರ ಇದ್ದುದೆ ಗಂಡಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆಯ ಬಲ್ಲವರ ನೀತಿ ಅಲ್ಲ
ಏತರ ಹಣ್ಣಾದರೂ ಮಧುರವೇ ಕಾರಣ
ಅಂದವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ
ಇದರ ಅಂದವ ನೀನೇ ಬಲ್ಲೆ ಶಂಭುಜಕೇಶ್ವರ'[11]

ತಾನು ಹೊರ ರೂಪದಲ್ಲಿ ಹೆಣ್ಣಾದರೂ ಕೂಡ ತನ್ನ ಅಂತರಂಗದಲ್ಲಿರುವ ಭಕ್ತಿ

ಸ್ತ್ರೀತನವನ್ನೂ ಪುರುಷತನವನ್ನೂ ಮೀರಿದ್ದು ಎಂದಿದ್ದಾಳೆ.

ಸತ್ಯಕ್ಕ ಸತ್ಯ ಮಾರ್ಗದಲ್ಲೇ ನಡೆಯುವ ಪಣವನ್ನು ತೊಟ್ಟವಳು. ತಾನು ಅನ್ಯರ ಹಣಕ್ಕೆ ಒಡವೆ ವಸ್ತುಗಳಿಗೆ ಒಂದೊಮ್ಮೆ ಆಸೆ ಪಟ್ಟಿದ್ದರೆ ಶಿವನಾದ ನಿಮ್ಮ ಮೇಲೆ ಆಣೆ ಅಥವಾ ಶಿವಭಕ್ತರ ಮೇಲೆ ಆಣೆ. ಎಂದಿದ್ದಾಳೆ.[12] ತನ್ನ ಕೆಲಸಕ್ಕೆ ಪ್ರತಿಯಾಗಿ ಸಿಗುವ ಹಣ ಏನಿದೆಯೋ ಅದನ್ನೇ ತಾನು ಭಿಕ್ಷೆ ಎಂದು ಗ್ರಹಿಸುತ್ತೇನೆ. ಇದಕ್ಕೆ ಮೀರಿ ತಾನು ವರ್ತಿಸಿದರೆ, ಶಿವನೇ ನೀನು ನನ್ನನ್ನು ನರಕಕ್ಕೆ ತಳ್ಳಬಹುದು ಎಂದು ಶಿವನಿಗೆ ಸವಾಲು ಹಾಕುವಷ್ಟು ಪರಿಶುದ್ಧವಾದ ನಡೆ ನುಡಿಯನ್ನು ಆಕೆ ಹೊಂದಿದ್ದಳು ಎನ್ನುವುದು ಆಕೆಯ ವಚನವನ್ನು ಅವಲೋಕಿಸಿದಾಗ ಕಂಡುಬರುತ್ತದೆ.

ಹೀಗೆ ಸತ್ಯಕ್ಕ ತನ್ನ ವೃತ್ತಿಯ ಪರಿಭಾಷೆಯನ್ನು ಸಮರ್ಪಕವಾಗಿ ಕಲಾತ್ಮಕವಾಗಿ ತನ್ನ ವಚನಗಳಲ್ಲಿ ಬಳಸಿಕೊಂಡಿದ್ದಾಳೆ, ಬಸವಣ್ಣನಿಂದ ಪ್ರೇರಣೆಯನ್ನು ಪಡೆದು ಶರಣರ ಅಪೂರ್ವವಾದ ವಚನ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿ ಶರಣರ ಇತಿಹಾಸ ಪುಟಗಳಲ್ಲಿ ವಿಶೇಷ ಸ್ಥಾನ ಪಡೆದಿದ್ದಾಳೆ.[13]

****

ಕೊನೆ ಟಿಪ್ಪಣಿಗಳು

1 ಸಿ ವೀರಣ್ಣ ಅವರು ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಸಂಪುಟ ಎರಡು ಇದರಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.
2 ಸಿ ವೀರಣ್ಣ, ಈ ಮೇಲಿನದೇ.
3 ವಾಣಿಜ್ಯ ಮಂಗಳ ನಾಲ್ಕು ಮಂಗಳೂರು ವಿಶ್ವವಿದ್ಯಾನಿಲಯ ಬಿಕಾಂ ಪದವಿ ತರಗತಿ ಕನ್ನಡ ಪಠ್ಯ. ಪುಟ 15
4 ಸಮಗ್ರ ವಚನ ಸಂಪುಟ 15 ಪುಟ 306, 5 ಈ ಮೇಲಿನದೇ ಪುಟ 307
6 ಈ ಮೇಲಿನದೇ ಪುಟ 306, 7 ಈ ಮೇಲಿನದೇ ಪುಟ 306
8 ಈ ಮೇಲಿನದೇ ಪುಟ 307, 9 ಈ ಮೇಲಿನದೇ ಪುಟ 308
10 ಈ ಮೇಲಿನದೇ ಪುಟ 308, 11 ಈ ಮೇಲಿನದೇ ಪುಟ 309
12 ಈ ಮೇಲಿನದೇ ಪುಟ 309,
13 ವಾಣಿಜ್ಯ ಮಂಗಳ ನಾಲ್ಕು ಮಂಗಳೂರು ವಿಶ್ವವಿದ್ಯಾನಿಲಯ ಬಿಕಾಂ ಪದವಿ ತರಗತಿ ಕನ್ನಡ ಪಠ್ಯ. ಪುಟ 15

ಗ್ರಂಥ ಋಣ

1 ವನಿತಾ, ಡಾ ಜ್ಯೋತಿಪ್ರಿಯ, ನವೀನ್ ಕುಮಾರ್(ಸಂ.) – ವಾಣಿಜ್ಯ ಗಂಗೋತ್ರಿ–4 ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾನಿಲಯ– 2022
2 ವೀರಣ್ಣ ಸಿ – ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ–2, ನವ ಕರ್ನಾಟಕ, ಬೆಂಗಳೂರು, 2011
3 ವೀರಣ್ಣರಾಜೂರ (ಸಂ)– ಸಮಗ್ರ ವಚನ ಸಂಪುಟ 15, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು –2001

❖❖❖

ಕರ್ನಾಟಕ ಏಕೀಕರಣ ಹೋರಾಟ ರಾಜಕೀಯ–ಚಾರಿತ್ರಿಕ ಬೆಳವಣಿಗೆ

ಡಾ. ಹೇಮಲತ ಹೆಚ್.ಆರ್
ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸ.ಪ್ರ.ದ. ಕಾಲೇಜು, ನಂಜನಗೂಡು –571301

ಕರ್ನಾಟಕದ ಏಕೀರಣವು ದೀರ್ಘವಾದ ವಿಶಿಷ್ಟ ಹೋರಾಟದ ಫಲವಾಗಿದೆ. ಇದು ಭಾಷೆ ಮತ್ತು ಸಾಂಸ್ಕೃತಿಕ ಗಟ್ಟಿ ನೆಲೆಯ ಮೇಲೆ ರೂಪುಗೊಂಡಿದೆ. ಇದರ ಮೇಲೆ ಉಂಟಾದ ಪ್ರಭಾವ ಮತ್ತು ಸೆಳೆತಗಳನ್ನು ಅನೇಕ ಹಿನ್ನೆಲೆಗಳಲ್ಲಿ ಗುರುತಿಸಬಹುದು. ಇದು ಜನಸಮೂಹದ ಸ್ವಾತಂತ್ರ್ಯದ ಹೋರಾಟದೊಂದಿಗೆ ಹಾಸುಹೊಕ್ಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಏಕೀಕರಣ ಸಾಧನೆಯ ವಿವಿಧ ಹಂತಗಳನ್ನು ಗುರುತಿಸಬಹುದು.

ಮೈಸೂರು ಸಂಸ್ಥಾನದಲ್ಲಿ ಏಕೀಕರಣಕ್ಕಾಗಿ ಹೋರಾಟ

ಮೈಸೂರಿನಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಅಲ್ಲಿ ಸಂಯುಕ್ತ ಪ್ರಜಾಪಕ್ಷವು ಹೋರಾಟವನ್ನು ನಡೆಸುತ್ತಲೇ ಇತ್ತು. ಇದು 1937ರ ಅಕ್ಟೋಬರ್ 16ರಂದು ಸಂಯುಕ್ತ ಕರ್ನಾಟಕ ಪ್ರಾಂತ ರಚನೆಗೆ ಗೊತ್ತುವಳಿಯನ್ನು ಮಂಡಿಸಿತು. ಅಂದಿನಿಂದ ಏಕೀಕರಣಕ್ಕಾಗಿ ಮೈಸೂರು ಸಂಸ್ಥಾನದಿಂದ ಸ್ವಾಗತಾರ್ಹ ಪ್ರತಿಕ್ರಿಯೆ ದೊರೆಯಿತು. ಪ್ರಧಾನವಾಗಿ ಮೈಸೂರು ಸಂಸ್ಥಾನದ ಜನತೆಯ ಚಳುವಳಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದಾಗಿತ್ತು. ಗಾಂಧೀಜಿಯವರ ನಾಯಕತ್ವದಲ್ಲಿ ಭಾಷಾವಾರು ಪ್ರಾಂತಗಳ ರಚನೆಗೆ ಕಾಂಗ್ರೆಸ್ ಪಕ್ಷವು ಒಪ್ಪಿಕೊಂಡಿತು ಹಾಗೂ ರಾಷ್ಟ್ರವನ್ನು 21 ಭಾಷಾ ಪ್ರಾಂತಗಳನ್ನಾಗಿ ಮಾಡಿತು. ಇದೇ ಸಮಯದಲ್ಲೇ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು (ಕೆ.ಪಿ.ಸಿ.ಸಿ.) ಸ್ಥಾಪನೆಯಾಯಿತು. ಇದು ಕರ್ನಾಟಕ ಏಕೀಕರಣದ ದೀರ್ಘ ಹೋರಾಟದಲ್ಲಿ ಒಂದು ಮಹತ್ವದ ಮೈಲಿಗಲ್ಲಾಯಿತು.

ಕರ್ನಾಟಕಕೇಸರಿ ಎಂದು ಹೆಸರಾದ ಗಂಗಾಧರರಾವ್ ದೇಶಪಾಂಡೆಯವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮೊದಲ ಅಧ್ಯಕ್ಷರಾದರು. ಗದಗು ಕೆಪಿಸಿಸಿಯ ಕಾರ್ಯಕೇಂದ್ರವಾಯಿತು. ಮೈಸೂರು ಸಂಸ್ಥಾನವನ್ನೇ ಒಂದು ಜಿಲ್ಲೆಯನ್ನಾಗಿ ಪರಿಗಣಿಸಿ ನ್ಯಾಯಾಧೀಶರಾದ ಸೆಟ್ಟೂರರನ್ನು ಅಲ್ಲಿನ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಇದರಿಂದ ವಿವಿಧ ಭಾಗಗಳಲ್ಲಿದ್ದ ಕರ್ನಾಟಕದ ಜನತೆ ನಾನಾ ಕಾರಣಗಳಿಂದ ಸಮ್ಮಿಲನವಾಗಲು ಸಾಧ್ಯವಾಯಿತು. ಖಾದಿ ಪ್ರಚಾರಕರು, ಆಯುರ್ವೇದ ಪಂಡಿತರು, ಪತ್ರಕರ್ತರು, ಕೈಗಾರಿಕಾತಜ್ಞರು, ವ್ಯಾಯಾಮತಜ್ಞರು, ರಂಗಕಲಾವಿದರು ಮುಂತದವರ ಅಖಿಲ ಕರ್ನಾಟಕ ಸಮ್ಮೇಳನಗಳು ನಡೆದು ಜನತೆ ಒಂದುಗೂಡಲು ಈ ಬೆಳವಣಿಗೆಗಳು ನೆರವಾದವು.

ಕರ್ನಾಟಕದ ಏಕೀಕರಣ ಸಭಾ

1924ರ ಕಾಂಗ್ರೆಸ್ಸಿನ ಬೆಳಗಾಂ ಮಹಾಧಿವೇಶನವು ಕರ್ನಾಟಕ ಏಕೀಕರಣ

ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ವದ ಬದಲಾವಣೆಗೆ ನಾಂದಿಯನ್ನು ಹಾಡಿದ ಘಟ್ಟ. ಈ ಅಧಿವೇಶನದಲ್ಲಿ ಗಾಂಧೀಜಿಯವರು ಅಧ್ಯಕ್ಷರಾಗಿದ್ದರು. ಈ ಸಂದರ್ಭದಲ್ಲಿ ಹುಯಿಲುಗೋಳ ನಾರಾಯಣರಾಯರು "ಉದಯವಾಗಲಿ ನಮ್ಮ ಚಲುವ ಕನ್ನಡನಾಡು" ಎಂಬ ನಾಡಗೀತೆಯನ್ನು ಹಾಡಿ ಜನರನ್ನು ಪುಲಕಿತಗೊಳಿಸಿದರು. ಈ ಅಧಿವೇಶನದಲ್ಲಿ ಧಾರವಾಡದ ಕರ್ನಾಟಕ ಸಭಾವನ್ನು, ಕಡಪ ರಾಘವೇಂದ್ರರಾಯರ ಪ್ರಯತ್ನದಿಂದ ಕರ್ನಾಟಕ ಏಕೀಕರಣ ಸಭಾವಾಗಿ ಪರಿವರ್ತಿಸಲಾಯಿತು. ಇವರು ಅಧ್ಯಕ್ಷರಾಗಿ, ಶಂ.ಬಾ. ಜೋಶಿ ಮತ್ತು ಮಂಗಳವೇಢ ಶ್ರೀನಿವಾಸರಾಯರು ಕಾರ್ಯದರ್ಶಿಗಳಾಗಿ ಆಯ್ಕೆಯಾದರು. ಆರ್.ಆರ್. ದಿವಾಕರರು ಇದನ್ನು ಪ್ರದೇಶ ಕಾಂಗ್ರೆಸ್ ಸಮಿತಿಯೊಂದಿಗೆ ಸಮೀಕರಿಸಿದ್ದುಂಟು. ಈ ಸಭೆಯು ವಾರ್ಷಿಕ ಸಮ್ಮೇಳನಗಳನ್ನು ಏರ್ಪಡಿಸಿ ಏಕೀಕರಣಕ್ಕಾಗಿ ಶ್ರಮಿಸಿತು. ಇದರ ಎರಡು ಮತ್ತು ಮೂರನೇ ಸಮ್ಮೇಳನಗಳು 1926ರಲ್ಲಿ ಬಳ್ಳಾರಿಯಲ್ಲಿ ಕ್ರಮವಾಗಿ ತಮ್ಮಣ್ಣ ಚಿಕ್ಕೋಡಿ ಮತ್ತು ಶ್ರೀನಿವಾಸ ಆಯ್ಯಂಗಾರರ ಅಧ್ಯಕ್ಷತೆಯಲ್ಲಿ ನಡೆದವು. ನಾಲ್ಕನೇ ಸಮ್ಮೇಳನವು 1928ರಲ್ಲಿ ಧಾರವಾಡದಲ್ಲಿ ಜರುಗಿತು. ಮುಂಬೈಯ ಪ್ರತಿಷ್ಠಿತ ನ್ಯಾಯವಾದಿಗಳಾದ ನಾರಿಮನ್‌ರು ಅಧ್ಯಕ್ಷತೆ ವಹಿಸಿದ್ದರು. ಐದನೇ ಸಮ್ಮೇಳನಕ್ಕೆ ಫ.ಗು. ಹಳಕಟ್ಟಿಯವರು ಅಧ್ಯಕ್ಷರಾದರು.

ಭಾರತಕ್ಕೆ ಹೊಸ ಸಂವಿಧಾನವನ್ನು ರೂಪಿಸಲು ಕಾಂಗ್ರೆಸ್ ಪಕ್ಷವು ಮೋತಿಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಇದು ಭಾಷಾವಾರು ಪ್ರಾಂತದ ರಚನೆಗೆ ಒತ್ತಾಸೆ ನೀಡಿತು. 1930ರಲ್ಲಿ ಮಂಗಳವೇಢೆ ಮತ್ತು ಕಮಲಾಪುರರು ಏಕೀಕರಣ ಸಮಸ್ಯೆಯನ್ನು ವೈಸರಾಯಿಗೆ ನಿವೇದಿಸಿದರು. ಎಸ್.ಕೆ. ಹೊಸಮನಿಯವರು ದೆಹಲಿಯ ಕೇಂದ್ರೀಯ ಶಾಸನ ಸಭೆಯಲ್ಲಿ ಈ ಸಮಸ್ಯೆಯನ್ನು ಪ್ರಸ್ತಾಪಿಸಿದರು. ಮುಂಬೈ ಮತ್ತು ಮದ್ರಾಸ್ ಪ್ರಾಂತೀಯ ಶಾಸನ ಸಭೆಗಳಲ್ಲೂ ಇದು ಮಾರ್ದನಿಗೊಂಡಿತು. ಯೂ.ರಾಮರಾವ್, ಬೆಳ್ಳಪ್ಪ, ಎ.ಎನ್. ಜೋಶಿ, ಸಿದ್ಧಪ್ಪ ಕಂಬಳಿ, ಅಂದಾನಪ್ಪ ದೊಡ್ಡಮೇಟಿ, ಜಿನರಾಜ ಹೆಗ್ಗಡೆ ಮುಂತಾದವರು ಪ್ರಾಂತೀಯ ಶಾಸನ ಸಭೆಗಳಲ್ಲಿ ಈ ವಿಷಯವನ್ನು ಚರ್ಚೆಗೆ ಎತ್ತಿಕೊಂಡರು. 1937ರ ಅಕ್ಟೋಬರ್ 10ರಂದು ಕರ್ನಾಟಕ ಏಕೀಕರಣ ದಿವಸವೆಂದು ಕರ್ನಾಟಕದ ಆದ್ಯಂತ ಆಚರಿಸಲಾಯಿತು. ಅನಂತರದಲ್ಲಿ ಎಸ್. ನಿಜಲಿಂಗಪ್ಪ, ಜಿ. ವಿ.ಹಳ್ಳಿಕೇರಿ, ಡಾ.ಆರ್. ನಾಗನಗೌಡ, ಪಂಡಿತ ಶಿವಮೂರ್ತಿಶಾಸ್ತ್ರಿ, ಬೆನಗಲ್ ರಾಮರಾವ್, ಜಿನರಾಜ ಹೆಗ್ಗಡೆ, ಮಂಗಳವೇಢ ಶ್ರೀನಿವಾಸರಾವ್, ಎಸ್.ಎಸ್. ಮಳಿಮಠ ಶ್ರೀರಂಗ, ಕೆ.ಆರ್. ಕಾರಂತ ಮುಂತಾದವರು ಸಾರ್ಥಕ ಹೋರಾಟವನ್ನು ನಡೆಸಿದರು.

ಸಾಹಿತಿಗಳು ಮತ್ತು ಪತ್ರಿಕೆಗಳ ಪಾತ್ರ

ವಿಜಯನಗರದ ಆರನೇ ಶತಮಾನೋತ್ಸವವನ್ನು ಹಂಪಿಯಲ್ಲಿ 1936ರಲ್ಲಿ ಆಚರಿಸಲಾಯಿತು. ಇದು ಕನ್ನಡಿಗರ ಪೂರ್ವ ಸಂಸ್ಕೃತಿಯ ಬಗ್ಗೆ ಸ್ಮೃತಿಯನ್ನು ಮೂಡಿಸಿತು. ಇದರಿಂದ ಕನ್ನಡಿಗರಲ್ಲಿ ಹೋರಾಟಕ್ಕೆ ಮಾಂತ್ರಿಕ ಸದೃಶವಾದ ಪ್ರಭಾವವನ್ನು ಬೀರಿತು. ಯಾವುದೇ ಹೋರಾಟಕ್ಕೆ ಮಾನಸಿಕ ವೇದಿಯನ್ನು ಸಿದ್ಧಪಡಿಸುವವರು ಸಾಹಿತಿಗಳು ಮತ್ತು ಬರಹಗಾರರು. ಇವರು ತಮ್ಮ ಬರಹಗಳ ಮೂಲಕ ಜನತೆಗೆ ಹೋರಾಟದ ಶಿಕ್ಷಣವನ್ನು ಪರೋಕ್ಷವಾಗಿ ನೀಡಿದವರು. ಆಲೂರು

ವೆಂಕಟರಾಯರಕರ್ನಾಟಕ ವೈಭವ, ಕರ್ನಾಟಕ ವೀರ ರತ್ನಗಳು ಮುಂತಾದ ಕೃತಿಗಳು ಕನ್ನಡಿಗರಲ್ಲಿ ಹೋರಾಡುವ ಸಚೇತನ ಶಕ್ತಿಗಳಾದವು. ಹುಯಿಲುಗೊಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು' ಎಂಬ ನಾಡಗೀತೆಯು ಕನ್ನಡಿಗರ ತಾರಕಮಂತ್ರವಾಯಿತು. ಫ.ಗು. ಹಳಕಟ್ಟಿ, ಗೋವಿಂದ ಪೈ, ಪಂಜೆ ಮಂಗೇಶರಾಯರು, ಎಸ್.ಎಸ್. ಬಸವನಾಳ, ಬಿ. ಶಿವಮೂರ್ತಿಶಾಸ್ತ್ರಿ, ಬಿ.ಎಂ.ಶ್ರೀ, ಆರ್.ಆರ್. ದಿವಾಕರ್, ದ.ರಾ. ಬೇಂದ್ರೆ, ಕುವೆಂಪು, ಮಾಸ್ತಿ ನರಸಿಂಗರಾವ್, ಡಿ.ವಿ.ಜಿ. ಮುಂತಾದವರು ತಮ್ಮ ಕೃತಿಗಳ ಮೂಲಕ ಹೋರಾಟವನ್ನು ಸ್ಥಾಯಿಗೊಳಿಸಿದರು. ಕರ್ನಾಟಕದ ಸಂಸ್ಕೃತಿಯನ್ನು ಅತ್ಯಂತ ಸಮರ್ಥವಾಗಿ ಪ್ರತಿಬಿಂಬಿಸುವ ನಾಡಗೀತೆ, ಕುವೆಂಪುರವರ 'ಜಯ್ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಮನೆಮಾತಾಯಿತು. ಶಿವರಾಮ ಕಾರಂತ, ಆ.ನ. ಕೃಷ್ಣರಾವ್, ಬಿ.ಎಂ.ಶ್ರೀ. ಮುಂತಾದವರು ನಾಡಹಬ್ಬದ ಸಮಯದಲ್ಲಿ ನಾಡಿನಲ್ಲಿ ಸಂಚರಿಸಿ, ಏಕೀಕರಣಕ್ಕಾಗಿ ಜನಜಾಗೃತಿ ಮೂಡಿಸಿದರು. ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘವು ಈ ಸಂದರ್ಭದಲ್ಲಿ ಮಾಡಿದ ಸಾಧನೆ ಕಡಿಮೆಯೇನಿಲ್ಲ.

ಬೆಂಗಳೂರಿನ ತಿ.ತಾ. ಶರ್ಮರ 'ವಿಶ್ವಕರ್ನಾಟಕ,' ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ,' ಧಾರವಾಡದ 'ವಿಶಾಲ ಕರ್ನಾಟಕ,' ಹುಬ್ಬಳ್ಳಿಯ 'ತರುಣಕರ್ನಾಟಕ,' ಬೆಂಗಳೂರಿನ ಶಿವಮೂರ್ತಿಶಾಸ್ತ್ರಿಗಳ 'ಸ್ವತಂತ್ರಕರ್ನಾಟಕ,' ಮಂಗಳೂರಿನ ಕಂಠೀರವ ಮತ್ತು ನವಭಾರತ, ದಾವಣಗೆರೆಯ ನೇತಾಜಿ, ಮೈಸೂರಿನ 'ಸಾಧ್ವಿ' ಮುಂತಾದ ಪತ್ರಿಕೆಗಳು ಏಕೀಕರಣ ಹೋರಾಟವನ್ನು ಕ್ರಿಯಾಶೀಲವಾಗಿಟ್ಟು ಮುಂದುವರೆಸಿದವು.

ಒಟ್ಟಿನಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟ ಇವು ಒಂದಕ್ಕೊಂದು ಪೂರಕವಾಗಿಯೇ ನಡೆದವು. ಯಾಕೆಂದರೆ, ಅನೇಕ ಸಾಹಿತಿಗಳು ಇವೆರಡೂ ಹೋರಾಟಗಳಲ್ಲಿ ಇದ್ದರು. ಹೀಗೆ ಏಕೀಕರಣ ಹೋರಾಟ ಭಾರತದ ರಾಜಕೀಯ ಕ್ಷೇತ್ರದ ಮೇಲೂ ಪ್ರಭಾವ ಬೀರಿತ್ತು. ಆದರೆ ಏಕೀಕರಣವು ಸ್ವಾತಂತ್ರ್ಯಾನಂತರವಷ್ಟೇ ರೂಪವನ್ನು ಪಡೆಯಿತು. 1956ರ ನವೆಂಬರ್ 01ರಂದು ವಿಶಾಲ ಮೈಸೂರುರಾಜ್ಯ ಎಂಬ ಹೆಸರಿಂದ ಅಸ್ಥಿತ್ವಕ್ಕೆ ಬಂದಿತು. ನಂತರ 1973 ನವೆಂಬರ್ 01 ರಂದು ಮೈಸೂರು ರಾಜ್ಯವನ್ನು ಕರ್ನಾಟಕವೆಂದು ಕರೆಯಲಾಯಿತು. ದೀರ್ಘ ಹೋರಾಟದ ನಂತರ, ಕನ್ನಡ ಜನತೆಯ ಅಭೀಪ್ಸೆಯಂತೆ ಕರ್ನಾಟಕ ರಾಜ್ಯ ಮರುಹುಟ್ಟು ಪಡೆಯಿತು.

ಗ್ರಂಥಋಣ

1. ದಿವಾಕರ, ರಂ.ರಾ, ಕರ್ನಾಟಕದ ಏಕೀಕರಣ ಕಥೆ 1992, ಹುಬ್ಬಳ್ಳಿ– ಬೆಂಗಳೂರು
2. ಚಿದಾನಂದಮೂರ್ತಿ, ಎಂ, ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ 1966, ಮೈಸೂರು
3. ಡಾ.ಎಸ್ಎನ್. ಶಿವರುದ್ರಸ್ವಾಮಿ, ಕರ್ನಾಟಕದ ಪ್ರೌಢ ಇತಿಹಾಸ & ಸಂಸ್ಕೃತಿ – 2000 ಮೈಸೂರು
4. Shastry KA. N . History of south India, London 1971

❖❖❖

ಅಲೆಮಾರಿ ಸಮುದಾಯಗಳ ಪ್ರದರ್ಶನಾತ್ಮಕ ಕಲೆಗಳಲ್ಲಿ ಬದುಕಿನ ಸಂಕಥನ

ಡಾ. ಪಾಪಯ್ಯ. ಬಿ
ಕನ್ನಡ ಉಪನ್ಯಾಸಕರು, ಹೆಚ್.ಪಿ.ಪಿ.ಸಿ. ಸರಕಾರಿ ಪ್ರಥಮ ದರ್ಜೆ ಕಾಲೇಜು
ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ– 577522

ನಮ್ಮ ಮನಸ್ಸಿನಲ್ಲಿ ರಸಾನುಭವವನ್ನು ಉಂಟುಮಾಡುವ ಕಾವ್ಯ, ಚಿತ್ರ, ಸಂಗೀತ, ಅಭಿನಯ ಮುಂತಾದವುಗಳನ್ನು ಕಲೆ ಎನ್ನುವ ವಿಭಾಗದಲ್ಲಿ ಪರಿಗಣಿಸುತ್ತೇವೆ. ಕಲೆಗಳನ್ನು ಸ್ಥೂಲವಾಗಿ ಜನಪದ ಕಲೆ ಮತ್ತು ಶಾಸ್ತ್ರೀಯ ಕಲೆ ಎಂದು ವಿಭಾಗಿಸುವುದೂ ಇದೆ. ಕಲೆಯು ಮಾನವನಿಗೆ ಸಿದ್ಧಿಸಿದ ವಿಶಿಷ್ಟ ಕೌಶಲ. ಮನುಷ್ಯನ ಕಲಾಕೌಶಲವೂ ಅತ್ಯಂತ ಪ್ರಾಚೀನವಾದುದು. ಗುಹೆಗಳಲ್ಲಿ ವಾಸಿಸುತ್ತಿದ್ದ ಕಾಲದಲ್ಲಿಯೇ ಮಾನವನಿಗೆ ಕಲೆ ಒಲಿದಿತ್ತು ಎಂದು ಗೊತ್ತಾಗುತ್ತದೆ. ಹಾಡು, ನೃತ್ಯ, ಅಭಿನಯ, ಅಣಕು ಮುಂತಾದವುಗಳನ್ನು ನಾಗರಿಕತೆಯ ಆರಂಭಕ್ಕೂ ಮುನ್ನವೇ ಮನುಷ್ಯ ರೂಢಿಸಿಕೊಂಡಿದ್ದ ಎಂದು ಇತಿಹಾಸವು ದಾಖಲಿಸಿದೆ. ಈ ಹಿನ್ನೆಲೆಯಲ್ಲಿ ಅಲೆಮಾರಿ ಸಮುದಾಯಗಳಾದ ಬುಡ್ಗಜಂಗಮ, ದೊಂಬಿದಾಸ, ಗೊಂದಲಿಗ, ಅರ್ಜುನಜೋಗಿ ಮುಂತಾದ ಸಮುದಾಯಗಳು ಮೌಖಿಕ ಪರಂಪರೆಯ ಪ್ರಜ್ಞೆಯಿಂದ ಸಮುದಾಯದ ಐಡೆಂಟಿಟಿಯಾಗಿ ತಮ್ಮದೇ ಆದ ಬಹುರೂಪಿ ಪ್ರದರ್ಶನಾತ್ಮಕ ಕಲೆಗಳನ್ನು ಜೀವನೋಪಾಯಕ್ಕಾಗಿ ಪ್ರದರ್ಶಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

ಗೊಂದಲಿಗರ ಆಟದಲ್ಲಿ ಮುಖ್ಯವಾಗಿ ಆಟಕ್ಕೆ ರಂಗಸ್ವರೂಪವನ್ನು ತಂದುಕೊಡುವುದೇ ಹಿಮ್ಮೇಳ ಮತ್ತು ಅವುಗಳನ್ನು ಬಳಸಿಕೊಳ್ಳುವ ಪರಿಕರಗಳು. ಆಟವನ್ನು ನಡೆಸುವವರು ಇಬ್ಬರೇ ಆದರೂ ವಹಿಸುವ ಪಾತ್ರಗಳು ಬಹುವಿಧ. ಆಯಾ ಪಾತ್ರಕ್ಕೆ ತಕ್ಕಂತೆ ಆ ಇಬ್ಬರೇ ವಿವಿಧ ರೂಪಗಳನ್ನು ತಾಳುತ್ತಾರೆ. ಗೊಂದಲಿಗರ ಆಟಕ್ಕೆ ಒಂದು ನಿರ್ದಿಷ್ಟ ರಂಗಸ್ಥಳ ಇರುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ಊರಿನ ಚಾವಡಿಯೋ, ಗುಡಿಯ ಬಯಲೋ, ಓಣಿಯ ಯಾವುದೋ ಕಟ್ಟೆಯೋ, ಇಲ್ಲವೇ ಯಾವುದೋ ಬಯಲು ಜಾಗದಲ್ಲಿ ಇವರು ಆಟ ನಡೆಸಲಿಕ್ಕೆ ಸಾಕು. ಸಾಮಾನ್ಯವಾಗಿ ಗೊಂದಲಿಗರ ಆಟವೆಲ್ಲ ನಡೆಯುವುದು ರಾತ್ರಿಯ ವೇಳೆಯಲ್ಲಿ. ಹಾಗಾಗಿ ಬೆಳಕಿನ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಮಾಡಿಕೊಳ್ಳುತ್ತಾರೆ. ಇದರ ಹೊರತಾಗಿ ಯಾವುದೇ ವಿಶೇಷ ರಂಗ ವ್ಯವಸ್ಥೆ ಇರುವುದಿಲ್ಲ. ತಾವು ಬಯಸುವ ಸೀಮಿತ ರಂಗಸ್ಥಳವನ್ನು ಆಟಗಾರರು ಅರಮನೆಯನ್ನಾಗಿಯೋ, ಅಡವಿಯಾಗಿಯೋ, ಸರೋವರವನ್ನಾಗಿಯೋ, ನದಿಯಾಗಿಯೋ ಹೀಗೆ ಸಂದರ್ಭಾನುಸಾರ ವಿವಿಧ ರೂಪಗಳನ್ನಾಗಿ ಬದಲಿಸಿಕೊಳ್ಳುತ್ತಾರೆ. ಮೊದಲೇ ತಿಳಿಸಿದಂತೆ ಇಡೀ ಕಥೆಯನ್ನು ಇಬ್ಬರೇ ನಿರ್ವಹಿಸುತ್ತಾರೆ. ಒಬ್ಬನು ಮುಮ್ಮೇಳದವನಾಗಿ ಹಾಡಿದರೆ, ಇನ್ನೊಬ್ಬ ಹಿಮ್ಮೇಳದವನಾಗುತ್ತಾನೆ. ಒಮ್ಮೊಮ್ಮೆ ಇಬ್ಬರೂ ಒಂದೊಂದು ಪಾತ್ರಗಳನ್ನು

ನಿರ್ವಹಿಸುತ್ತಾರೆ. ಇಬ್ಬರೂ ಆಯಾ ಪಾತ್ರಗಳಿಗೆ ಅನುಸಾರವಾಗಿ ಕುಣಿಯುವ, ನೃತ್ಯ ಮಾಡುವ, ವಾದ್ಯ ಬಾರಿಸುವ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಮುಮ್ಮೇಳದವನಿಗೆ ಹಿಮ್ಮೇಳದವನು ಕಥೆಯನ್ನು ಮುಂದುವರೆಸಲು ಸಹಾಯಕನಾಗುತ್ತಾನೆ. ಹೀಗೆ ಕಥೆ ದಾರಿತಪ್ಪದಂತೆ ನೋಡಿಕೊಳ್ಳುವ ಹೊಣೆ ಈ ಇಬ್ಬರದೂ ಆಗಿರುತ್ತದೆ.

ಜನರನ್ನು ನಗಿಸುವ, ಛೇಡಿಸುವ, ಅಳಿಸುವ ವಿಷಯದಲ್ಲಿ ಹಿಮ್ಮೇಳದವನು ಮಹತ್ವದ ಪಾತ್ರವಹಿಸುತ್ತಾನೆ. ಕಥೆ ಸಾಗಿದಂತೆ ಅಹುದು, ಆಹಾ, ಓಹೋ, ಅಯ್ಯೋ, ಶಾಂಭವಿ ಮುಂತಾದ ಉದ್ಗಾರಗಳನ್ನು ಹಿಮ್ಮೇಳದವನೇ ನುಡಿಯುತ್ತಾನೆ. ಹಿಮ್ಮೇಳದವನು ಸೂತ್ರದಾರನಾಗಿ ಪ್ರೇಕ್ಷಕರ ಪ್ರತಿನಿಧಿಯಾಗಿ ಎರಡು ಕೆಲಸಗಳನ್ನು ಏಕಕಾಲಕ್ಕೆ ನಿರ್ವಹಿಸುವುದು ಗಮನಾರ್ಹವಾದ ವಿಷಯ. ಭಾವಕ್ಕೆ ತಕ್ಕಂತೆ ಹಾಡುವ, ಮುಮ್ಮೇಳದವನ ಕಥೆಯ ಹಾಡುಗಳ ಪ್ರತಿಕೊನೆಯ ಸಾಲುಗಳನ್ನು ಹಿಮ್ಮೇಳದವನು ನುಡಿಯುತ್ತಾನೆ. ಹೀಗೆ ನುಡಿಯುವ ಮೂಲಕ ಮುಮ್ಮೇಳದವನಿಗೆ ಸ್ವಲ್ಪ ವಿಶ್ರಾಂತಿ ಕೊಡುವ ಕೆಲಸ ಮಾಡುತ್ತಾನೆ. ಹಾಗೆ ಮುಂದಿನ ಯಾವ ಸಾಲನ್ನು ಎತ್ತಿಕೊಂಡು ಹಾಡಬೇಕೆನ್ನುವ ಸೂಚನೆಯನ್ನು ಪರೋಕ್ಷವಾಗಿ(ಹಿಮ್ಮೇಳದವನು) ಮುಮ್ಮೇಳದವನಿಗೆ ಕೊಡುತ್ತಾನೆ. ಒಟ್ಟಿನಲ್ಲಿ ಕಥೆಗೆ ಮುಮ್ಮೇಳದವನು ಎಷ್ಟು ಮುಖ್ಯವೋ ಹಿಮ್ಮೇಳದವನೂ ಅಷ್ಟೇ ಮುಖ್ಯವಾಗಿರುತ್ತಾನೆ.

ಗೊಂದಲಿಗರ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಎಂದು ಗುರುತಿಸಬಹುದಾದ, ಪ್ರದರ್ಶನಾತ್ಮಕ ಕಲೆ ಜನಪದ ರೂಪಗಳನ್ನೇ ಹೋಲುತ್ತವೆ. ಇವರು ಹಾಡುವ ಸತಿ ಸುಲೋಚನ, ಸಿರಿಯಾಳಶೆಟ್ಟಿ, ಹೇಮರೆಡ್ಡಿ ಮಲ್ಲಮ್ಮ, ಎಲ್ಲಮ್ಮ, ಹುಲಿಗೆಮ್ಮ ಮುಂತಾದವು ಪೌರಾಣಿಕ ಕಾವ್ಯಗಳಾದರೆ, ಕುಮಾರರಾಮ, ಶೀಲಾವತಿ ಮುಂತಾದವು ಐತಿಹಾಸಿಕ ಹಿನ್ನೆಲೆಯಿಂದ ಬಂದ ಕಾವ್ಯಗಳು. ಇತರ ಮೂರು ಸಮುದಾಯಗಳಿಗಿಂತ ಇವರ ಪ್ರದರ್ಶನಾತ್ಮಕ ಕಲೆ ಭಿನ್ನವಾಗಿ ಕಂಡುಬರುತ್ತದೆ.

ಅಲೆಮಾರಿ ಬುಡ್ಗಜಂಗಮ ಸಮುದಾಯದ ಅಲೆಮಾರಿತನವು ತಮ್ಮಲ್ಲಿರುವ ಪಾರಂಪರಿಕ ವೃತ್ತಿ ಕಸುಬಿನಿಂದ ರೂಪಿತಗೊಂಡಿದೆ. ಜೀವನ ನಿರ್ವಹಣೆಗಾಗಿ ವಿಶಿಷ್ಟವಾದ ಪ್ರದರ್ಶನಾತ್ಮಕ ಕಲೆಗಳನ್ನು ಪ್ರದರ್ಶಿಸಿ ಜನರನ್ನು ಆಕರ್ಷಿಸಿ ಜನ ಮನ್ನಣೆಗೆ ಒಳಗಾಗುತ್ತಾರೆ. ಇವರು ತಾವು ಹೋದ ಪ್ರಾದೇಶಿಕತೆಗೆ ಅನುಗುಣವಾಗಿ ತಮ್ಮ ವೇಷವನ್ನು ಧರಿಸಿಕೊಂಡು ಜನರಿಂದ ವೇಷಗಾರರು ಎಂದು ಕರೆಸಿಕೊಂಡವರು. ಪ್ರಾಚೀನ ಕಾಲದಿಂದಲೂ ಇತಿಹಾಸ, ಸಂಸ್ಕೃತಿ ಮತ್ತು ಧಾರ್ಮಿಕತೆ ಮತ್ತು ಸಾಮಾಜಿಕತೆಯ ಪ್ರಜ್ಞೆಗಳನ್ನು ತಮ್ಮ ಪ್ರದರ್ಶನಾತ್ಮಕ ಕಲೆಗಳ ಮೂಲಕ ಜಾಗೃತಿಗೊಳಿಸಿ ಜನರಲ್ಲಿ ಅರಿವನ್ನು ಮೂಡಿಸುತ್ತಾ ಬಂದಿದ್ದಾರೆ. ಇವರು ಆಂಧ್ರ ಮೂಲದವರಾದರೂ ಕರ್ನಾಟಕ ಭಾಗದಲ್ಲಿ ಮೂಲ ಮಾತೃಭಾಷೆ ತೆಲುಗನ್ನು ಬಿಟ್ಟುಕಲೆಯನ್ನು ಪ್ರದರ್ಶಿಸುವುದು ವಿಶೇಷವಾಗಿದೆ. ಇವರು ಪ್ರಾದೇಶಿಕತೆಗೆ ತಕ್ಕಂತೆ ವೇಷ ಹಾಕುವುದರಿಂದ ಇವರನ್ನು ಬಹುರೂಪಿಗಳು, ಸಿದ್ಧರು ಕೊಂಡಮಾಮ, ವೇಷಗಾರರು, ಬಾಲಸಂತರು, ಹಗಲುವೇಷದವರಂತಲೂ ಕರೆಯುತ್ತಾರೆ. ಚಿತ್ರದುರ್ಗದ ಭಾಗದಲ್ಲಿ ಇವರನ್ನು ಹಗಲುವೇಷದವರೆಂದು ಕರೆಯುತ್ತಾರೆ. ಇದು ಪಾರಂಪರಿಕ ವೃತ್ತಿಯಾವಲಂಬಿತ ಸಮುದಾಯವನ್ನು 'ಜಾತಿ'ಯ ಹೆಸರಿನಿಂದ ಗುರುತಿಸಿರುವುದಕ್ಕೆ ಸಾಕ್ಷಿಯಾಗಿದೆ.

ಬುಡ್ಗಜಂಗಮ ಸಮುದಾಯ ಪ್ರದರ್ಶಿಸುವ ಪ್ರದರ್ಶನಾತ್ಮಕ ಕಲೆಗಳೆಂದರೆ, ಬುರ್ರಕಥೆ, ಹಗಲು ವೇಷಗಾರಿಕೆ, ಬೈರಾಗಿ ವೇಷಗಾರಿಕೆ, ಬೈರಾಗಿ ವೇಷ, ಸನ್ಯಾಸಿ, ಜಗ್ಗಾಲಿ, ಇತ್ಯಾದಿ. ಇವುಗಳ ಜೊತೆಗೆ ವಿಶ್ವಾಮಿತ್ರತಪೋಭಂಗ, ಮೋಹಿನಿ ಭಸ್ಮಾಸುರ, ಸುಂದೋಪಸುಂದ, ಭೀಮಾಂಜನೇಯಯುದ್ಧ, ರಾಮ–ರಾವಣಯುದ್ಧ, ಕಿರಾತಾರ್ಜುನ, ವಾಲಿಸುಗ್ರಿವ ಮುಂತಾದ ವೇಷಗಳನ್ನು ಧರಿಸಿ ಇವರು ಪ್ರದರ್ಶಿಸುವ ಕಲೆಗೆ ಮೆರಗು ತರುತ್ತಾರೆ. ಅಲ್ಲದೆ ಸಾಮಾಜಿಕ ಪೌರಾಣಿಕ ವ್ಯಕ್ತಿಗಳ ವೇಷಗಳು ಆಧುನಿಕ ಮಾನವನ ಸಣ್ಣತನದ ಬದುಕನ್ನು ವಿಡಂಬಿಸುವ ದೃಷ್ಟಿ ಇವರ ಕಲೆಗಳಿಂದ ತಿಳಿದಂತೆ ಭಾಸವಾಗುತ್ತದೆ. ಬುಡ್ಗಜಂಗಮರು ಹಗಲು ಸಮಯದಲ್ಲಿ ಹೆಚ್ಚು ತಮ್ಮ ವೇಷಗಳ ಕಲೆಯನ್ನು ಪ್ರದರ್ಶಿಸುತ್ತಾರೆ. ಆದ್ದರಿಂದ ರಾತ್ರಿ ಸಮಯದಲ್ಲಿ ದೊಂಬಿದಾಸರು ಪ್ರದರ್ಶಿಸುವ ಬಯಲಾಟಗಳಂತೆ ಇವು ದೀರ್ಘವಾಗಿರದೇ ಚುಟುಕು ಪ್ರದರ್ಶನ ಕಲೆಗಳಾಗಿವೆ. ಇವರ ಪಾತ್ರಗಳ ದೃಷ್ಟಿ ದೊಂಬಿದಾಸರಲ್ಲೂ ಕಾಣಬಹುದು. ಸ್ತ್ರೀ ವೇಷಗಳನ್ನು ಧರಿಸುವ ಹಗಲುವೇಷದವರ ವಿವೇಚನೆ ತಾತ್ವಿಕವಾಗಿ ದೊಂಬಿದಾಸರಲ್ಲೂ ಇದೆ. ಹೀಗಾಗಿ ಇವರನ್ನು ಹೆಣ್ಣು ವೇಷದವರು ಎಂದು ಕರೆಯುತ್ತಾರೆ. ಈ ಕಲಾದೃಷ್ಟಿ ಜೋಗಿ ಸಮುದಾಯದಲ್ಲೂ ಬೇರೊಂದು ಪರಿಕಲ್ಪನೆಯಲ್ಲಿ ಕಾಣಬಹುದು.

ಇನ್ನು ದೊಂಬಿದಾಸರು ರಾಮಾಯಣ, ಮಹಾಭಾರತ ಮತ್ತು ಭಾಗವತಗಳಿಂದ ಅಸಂಖ್ಯಾತ ಬಿಡಿ ಬಿಡಿ ಭಾಗಗಳನ್ನು ತಮ್ಮ ಪ್ರದರ್ಶನಾತ್ಮಕ ಕಲೆಯಲ್ಲಿ ಬಳಸಿಕೊಳ್ಳುತ್ತಾರೆ. ಪಾರಂಪರಿಕವಾಗಿ ಇವರು ಜೀವನ ನಿರ್ವಹಣೆಗಾಗಿ ಹಳ್ಳಿ ಹಳ್ಳಿಗೆ ಹೋಗಿ ಬಯಲಾಟಗಳನ್ನು ಪ್ರದರ್ಶಿಸಬೇಕಾಗಿತ್ತು. ಬಯಲಾಟಗಳನ್ನು ಪ್ರದರ್ಶಿಸುವಾಗ ಜನರನ್ನು ರಂಜಿಸಲೂ, ಮೆಚ್ಚಿಸಲೂ ಪಾತ್ರಧಾರಿಗಳು ಪ್ರೇಕ್ಷಕರ ನಡುವೆ ಕಾಣಿಸಿಕೊಂಡು ಒಂದು ರೀತಿಯ 'ಗದ್ದಲ' ಎಬ್ಬಿಸಿ ದೊಂಬಿ ಸೃಷ್ಟಿ ಮಾಡುತ್ತಿದ್ದರು. ಕೆಲವು ಬಾರಿ ನಾಟಕದ ಪರದೆಯ ಹಿಂದೆ ತಮ್ಮೊಳಗೆಯೇ ಗದ್ದಲ ಅಥವಾ ಗಲಾಟೆ ಏರ್ಪಡುತ್ತಿತ್ತು. ಇದರಿಂದ ಜನ ಇವರನ್ನು ದೊಂಬಿದಾಸರು ಎಂದು ಕರೆಯುತ್ತಿದ್ದರು. ಇವರು ಕರಿಭಂಟನ ಕಾಳಗ, ಗಿರಿಜಾಕಲ್ಯಾಣ, ಶನಿ ಮಹಾತ್ಮೆ, ದ್ರೌಪದಿಯ ವಸ್ತ್ರಾಪಹರಣ ಇತ್ಯಾದಿ ಬಯಲಾಟಗಳನ್ನು ಪ್ರದರ್ಶಿಸುತ್ತಾರೆ. ಸಾಮಾಜಿಕ ನಾಟಕಗಳ ಮೂಲಕವಾಗಿಯೂ ಯುವಕರು ಇತ್ತೀಚೆಗೆ ಗಮನ ಸೆಳೆಯುತ್ತಿದ್ದಾರೆ.

ಅರ್ಜುನಜೋಗಿ ಸಮುದಾಯದವರು ಮಹಾಭಾರತದ ಕಥೆಯನ್ನು ಅನೇಕ ಭಾಗಗಳಾಗಿ ಮಾಡಿಕೊಂಡು ಹಲವಾರು ರಾತ್ರಿಗಳವರೆಗೂ ಹಾಡಬಲ್ಲರು. ಇವರ ಏಕೈಕ ಮೇಳ ಎಂದರೆ ಅದು ಕಿನ್ನರಿಮೇಳ. ಇದು ಜೀವನಕ್ಕಾಗಿ ಮತ್ತು ಹವ್ಯಾಸಕ್ಕಾಗಿ ಮಾಡುವ ಪಾರಂಪರಿಕ ಜೀವನ ವೃತ್ತಿ, ಏಕವ್ಯಕ್ತಿ ಭಿಕ್ಷಾಟನೆಗೆ ಹೋದಾಗ ಹಾಡುತ್ತಾರೆ. ಇಲ್ಲದೇ ಗುಂಪು ಕಟ್ಟಿಕೊಂಡು ಹಾಡುತ್ತಾರೆ. ಹಾಡುವಂತಹ ಸಂದರ್ಭದಲ್ಲಿ ಬಿಳಿಯ ಕಚ್ಚೆಪಂಚೆ, ಕರಿಯ ನಿಲುವಂಗಿ, ಮೇಲೆ ಅಡ್ಡೆ ಶಲ್ಯ ಕಿವಿಗೆ ಮುದ್ರೆಯ ಓಲೆ, ಕೈಯಲಿ ಕಿನ್ನರಿ, ಚಿಟಿಕೆ, ತಾಳ, ಕಾಲಿಗೆ ಗೆಜ್ಜೆ, ಹೆಗಲಿಗೆ ಜೋಳಿಗೆ ಕಟ್ಟಿಕೊಂಡು ಶೃಂಗರಿಸಿಕೊಂಡು ರಸಭರಿತವಾಗಿ ಕಲೆಯನ್ನು ಪ್ರದರ್ಶಿಸಿ ನೋಡುಗರನ್ನು ಕೇಳುಗರನ್ನು ಆಕರ್ಷಿಸುತ್ತಾರೆ. ಕೆಲವು ಹಬ್ಬ–ಹರಿದಿನಗಳ ಸಂದರ್ಭಗಳಲ್ಲಿ ಇವರು ಹವ್ಯಾಸಕ್ಕಾಗಿ ಮಹಾಭಾರತದ ಖಂಡಗಳನ್ನು ವಸ್ತುವಾಗಿಸಿಕೊಂಡು ಬುಡ್ಗಜಂಗಮ ಮತ್ತು ದೊಂಬಿದಾಸರಂತೆ ಬಯಲಾಟವನ್ನು ಚಿತ್ರದುರ್ಗದ ಭಾಗದಲ್ಲಿ ಪ್ರದರ್ಶಿಸುತ್ತಾರೆ.

ಅರ್ಜುನ ಜೋಗಿಯರು ಹಾಡುವುದರ ಜೊತೆಗೆ ಲಘುವಾಗಿ ನೃತ್ಯ ಮಾಡುತ್ತಾರೆ. ಹಾಡುಗಾರ ಮುಮ್ಮೇಳ ಹಾಡುತ್ತಾ ಜೊತೆಗೆ ನೃತ್ಯ ಮಾಡುತ್ತಾನೆ. ಇವನ ಜೊತೆ ಹಿಮ್ಮೇಳದ ಹಾಡುಗಾರರು ಸಹ ನರ್ತಿಸುತ್ತಾ ಪ್ರೇಕ್ಷಕರಿಗೆ ಮನರಂಜನೆಯನ್ನು ನೀಡುತ್ತಾರೆ. ಇವರ ನೃತ್ಯ ಗೊಂದಲಿಗರು ಗೊಂದಲ ಹಾಕುವ ಸಂದರ್ಭದಲ್ಲಿ ನರ್ತಿಸುವ ಲಘು ನೃತ್ಯದಂತೆ ಕಂಡುಬರುತ್ತದೆ.

ಅನಕ್ಷರಸ್ಥ ಅಲಕ್ಷಿತ ಅಲೆಮಾರಿ ಸಮುದಾಯಗಳಲ್ಲಿ ಹುಟ್ಟಿ ಬಂದ ಪ್ರದರ್ಶನಾತ್ಮಕ ಕಲೆಗಳ ಮೂಲ ದೃಷ್ಟಿ ಈ ಸಮುದಾಯಗಳಲ್ಲಿ ಜೀವನೋಪಾಯದ ಒಂದು ನೆಲೆಯಾದರೆ ಬೇರೆಯವರಿಗೆ ಆನಂದಪಡಿಸಿ ತಾವೂ ಆನಂದಭರಿತರಾಗುವುದು ಮತ್ತೊಂದು ನೆಲೆ. ಪ್ರದರ್ಶನಾತ್ಮಕ ಕಲೆಗಳನ್ನು ಕೇವಲ ಪುಕ್ಕಟೆಯಾಗಿ ಜನತೆಗೆ ಮನರಂಜನೆ ನೀಡುವುದಾಗಿರದೇ ಅನುಭವಿಸಿದ ಆನಂದಕ್ಕೆ ಪ್ರತಿಯಾಗಿ ಜನತೆ ಪ್ರತಿಫಲಗಳನ್ನು ನೀಡಿ ಗೌರವಿಸುವುದು ಸಂಸ್ಕೃತಿಯಾಗಿದೆ.

ಗೊಂದಲಿಗ, ಬುಡ್ಗಜಂಗಮ, ದೊಂಬಿದಾಸ ಮತ್ತು ಅರ್ಜುನಜೋಗಿ ಸಮುದಾಯಗಳು ಪ್ರದರ್ಶಿಸುವ ಕಲೆಗಳಲ್ಲಿ ಭಿನ್ನತೆ ಕಂಡು ಬಂದರೂ ಇವರೆಲ್ಲರ ಕಲೆ ಸಾಹಿತ್ಯದ ವಸ್ತುಗಳನ್ನು ಅವಲಂಬಿಸಿರುತ್ತವೆ. ಇವರೆಲ್ಲಾ ಪ್ರದರ್ಶಿಸುವ ಕಲೆಗಳ ಕಥಾವಸ್ತು ಪೌರಾಣಿಕ ಅಥವಾ ಐತಿಹಾಸಿಕವಾದವುಗಳಾಗಿರುತ್ತವೆ. ಇತ್ತೀಚಿನ ಯುಗಧರ್ಮಕ್ಕೆ ಅನುಗುಣವಾಗಿ ಸಾಮಾಜಿಕವಾದ ವೇಷಭೂಷಣಗಳನ್ನು ಧರಿಸಿ ಜನರನ್ನು ರಂಜಿಸುವುದನ್ನು ಕೂಡ ಕಾಣಬಹುದು. ಇದನ್ನು ವಿಶೇಷವಾಗಿ ಬುಡ್ಗಜಂಗಮರಲ್ಲಿ ಕಾಣಬಹುದು.

ಹೀಗೆ ದೊಂಬಿದಾಸ, ಗೊಂದಲಿಗ, ಅರ್ಜುನಜೋಗಿ, ಬುಡ್ಗಜಂಗಮ ಮುಂತಾದ ಅಲೆಮಾರಿ ಸಮುದಾಯಗಳು ಯಾವ ಗುರುವಿನಿಂದಲೂ ಕಲಿಯದಿದ್ದರೂ ವಂಶಪಾರಂಪಾರ್ಯವಾಗಿ ತಲೆಮಾರಿನಿಂದ ತಲೆಮಾರಿಗೆ ಬಂದ ಕಲೆಗಳನ್ನು ಪ್ರದರ್ಶಿಸಿ ದವಸ, ಧಾನ್ಯ, ಹಣ, ಬಟ್ಟೆ, ದನ, ಕರು, ಮೊದಲಾದ ಕಾಣಿಕೆಗಳಾಗಿ ಪಡೆದುಕೊಂಡು ಜೀವಿಸುವುದನ್ನು ಕಾಣುತ್ತೇವೆ. ಆದರೆ ಆಧುನಿಕತೆಯ ಪ್ರವೇಶ ಈ ಸಮುದಾಯಗಳ ಬದುಕಿನಲ್ಲೂ ಆಗಿದೆ. ಇವರ ಪಾರಂಪರಿಕ ವೃತ್ತಿ ಬದುಕಿಗೆ ಬದಲಾಗಿ ಇಂದಿನ ಯುವಕರು ವೃತ್ತಿಗಳ ಆಯ್ಕೆಯಲ್ಲಿ ಬದಲಾವಣೆ ಬಯಸಿ ಬೇರೆ ಬೇರೆ ಜೀವನೋಪಾಯ ಮಾರ್ಗಗಳನ್ನು ಕಂಡುಕೊಂಡಿರುವುದು ಸಹಜವೇ ಆಗಿದೆ.

ಪರಾಮರ್ಶನ ಗ್ರಂಥಗಳು

ಬೋರಲಿಂಗಯ್ಯ. ಹಿ.ಚಿ., ದಾಸಪ್ಪ–ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1981

ಬಾಲಗುರು ಮೂರ್ತಿ, ಬುಡ್ಗನಾದ (ನಾಟಕ), ಅಲೆಮಾರಿ ಪ್ರಕಾಶನ, ಮೇಡಹಳ್ಳಿ, ಬೆಂಗಳೂರು, 2015

ಬಾಲಗುರುಮೂರ್ತಿ, ಪ್ರತಾಪರಾ, ಬಹುರೂಪಿ, ಬುಡ್ಗಜಂಗಮ, ಅಲೆಮಾರಿಗಳ ಅಧ್ಯಯನಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2008.

ಬಾಲಗುರುಮೂರ್ತಿ, ಅಲೆಮಾರಿ ಬುಡಕಟ್ಟುಗಳ ಆತ್ಮಕಥನಗಳು, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, 2013.

ಪರಮಶಿವಯ್ಯ ಜೀ.ಶಂ, ದೊಂಬಿದಾಸರು, ಐಬಿಹೆಚ್ ಪ್ರಕಾಶನ, ಬೆಂಗಳೂರು, 1980.

ಪರಮಶಿವಯ್ಯ ಜೀ.ಶಂ, (ಸಂ) ಕನ್ನಡ ವೃತ್ತಿಗಾಯಕ ಕಾವ್ಯಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 1982.

ಪರಮಶಿವಯ್ಯ ಜೀ.ಶಂ, ಕರ್ನಾಟಕದ ಜಾನಪದ ವಾದ್ಯಗಳು, ಐಬಿಹೆಚ್ ಪ್ರಕಾಶನ, ಬೆಂಗಳೂರು, 1984.

ಪ್ರಭಾಕರ ಎ.ಎಸ್, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2000.

ಪ್ರಭಾಕರ ಎ.ಎಸ್., ಆದಿವಾಸಿ ಆಖ್ಯಾನ. ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, 2006.

ಪರಮಶಿವಯ್ಯ ಜೀ.ಶಂ, ದಕ್ಷಿಣ ಕರ್ನಾಟಕದ ಜಾನಪದ ಕಾವ್ಯ ಪ್ರಕಾರಗಳು, ಅಭಿನವ ಪ್ರಕಾಶನ, ಬೆಂಗಳೂರು, 2015.

ತಿಪ್ಪೇಸ್ವಾಮಿ ಎನ್.ಡಿ.(ಸಂ), ವಿಭೂತಿಗುಂಡಪ್ಪ ನವರ ಪೌರಣಿಕ ಹಗಲುವೇಷದ ರೂಪಕಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, 2015.

ದಾಸರ ಪ್ರತಿಭಾ, ಚೆನ್ನದಾಸರ ಸಾಹಿತ್ಯ: ಅಲೆಮಾರಿ ಸಂಕಥನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, 2018.

❖❖❖

ಎಲೆಯ ಮರೆಯ ಹಸಿರು ಗಿಳಿಯ
ಎಳೆಯ ಕಣ್ಣು ಹುಡುಕಿದೆ
ಹೊಳೆವಗೊಕ್ಕು ಎಸಳನಂತೆ
ಗಿಳಿಯ ಸುಳವ ನೀಡಿದೆ
ಅದರ ಇರವ ಸಾರಿದೆ

ಮಕ್ಕಳ ಕವಿ ಈಶ್ವರ ಕಮ್ಮಾರ

ಡಾ. ಎ. ಅಯ್. ಹಂಜಗಿ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪುರ

ಪ್ರಸ್ತಾವನೆ

ಲೇಖಕನೊಬ್ಬನ ಸಾಹಿತ್ಯ ಸೃಷ್ಟಿಯ ವಿಭಿನ್ನ ನೆಲೆಗಳನ್ನು ಅರಿಯುವ, ಶೋಧಿಸುವ, ವಿಶ್ಲೇಷಿಸುವ ಪ್ರಕ್ರಿಯೆಯಲ್ಲಿ ಅವನ ಬದುಕಿನ ಹಿನ್ನಲೆ, ಬೆಳೆದ ಪರಿಸರ, ಪ್ರಭಾವ–ಪ್ರೇರಣೆಗಳ ಪಾತ್ರ ವಿಶೇಷವಾಗಿ ಗಮನಾರ್ಹವಾದವು. ಲೇಖಕರ ಬದುಕಿನ ವಿವರಗಳ ಮೂಲಕ ಅವರ ಜೀವನಾಸಕ್ತಿ, ಸೃಜನಶೀಲ ಮನೋಭಾವಗಳು ರೂಪುಗೊಂಡ ಬಗೆಯನ್ನು ಶೋಧಿಸಿಕೊಳ್ಳಲು ಅವಕಾಶವಾಗುತ್ತದೆ. ಈ ಹಿನ್ನೆಲೆಯಲ್ಲಿ ಈಶ್ವರ ಕಮ್ಮಾರರ ಬದುಕು ಬರಹಗಳನ್ನು ನೋಡಬಹುದು. ಅವರ ಜೀವನದ ಹಿನ್ನಲೆ ಹಾಗೂ ಬದುಕಿನ ವಿಭಿನ್ನ ಹಂತಗಳನ್ನು ಅರಿಯುವ ಪ್ರಕ್ರಿಯೆಯೇ ಸಾಮಾಜಿಕ ಮೌಲ್ಯಗಳ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನದ ಭಾಗವೇ ಎನಿಸುತ್ತದೆ.

ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಬದುಕನ್ನು ರೂಪಿಸುವ ಸಾಹಿತ್ಯ ಸೃಷ್ಟಿಯ ಕೊರತೆ ಎದ್ದುಕಾಣುತ್ತದೆ. ಅಲ್ಲದೆ ಮಕ್ಕಳ ಸಾಹಿತ್ಯ–ಮಕ್ಕಳ ಸಾಹಿತಿ ಎಂದು ಗುರುತಿಸಿಕೊಳ್ಳುವುದು ಅವಮಾನಕರ ಎಂಬ ಭಾವನೆ ಸಾಹಿತ್ಯಿಕ ವಲಯದಲ್ಲಿ ಪ್ರಚಲಿತವಿದೆ. ಆದರೆ ಮಕ್ಕಳ ಸಾಹಿತಿ ಎನಿಸಿಕೊಳ್ಳುವುದು ಗೌರವದ, ಹೆಮ್ಮೆಯ ಸಂಗತಿ ಎಂಬ ಭಾವನೆಯಿಂದ ಅದನ್ನೇ ಜೀವನದ ಪರಮ ಗುರಿಯಾಗಿಸಿಕೊಂಡ ಸಾಹಿತಿಗಳು ಅಪರೂಪ. ಅಂಥ ಅಪರೂಪದ ವರ್ಗಕ್ಕೆ ಸೇರಿರುವ ಈಶ್ವರ ಕಮ್ಮಾರ ಅವರ ಬದುಕಿನ ಹೆಜ್ಜೆಗಳನ್ನು, ನಡಿಗೆಯ ಲಯಗಳನ್ನು, ಆಯ್ಕೆ–ಆಶೋತ್ತರಗಳನ್ನು ಅರಿಯುವುದು ಅಗತ್ಯವಾಗಿದೆ. ಮಕ್ಕಳ ಸಾಹಿತ್ಯ–ಸಾಹಿತಿಗಳೊಂದಿಗೆ ತಮ್ಮ ಸಂಬಂಧ ಒದಗಿಬಂದದ್ದನ್ನು ತಮ್ಮ ಭಾಗ್ಯವೆಂದು ಭಾವಿಸಿ ಅದಕ್ಕಾಗಿ ಅಹರ್ನಿಶಿ ದುಡಿದ ಕುಮ್ಮಾರರ ಬದುಕಿನ ಬೇರುಗಳು ಹಳ್ಳಿಯ ಪರಿಸರದಲ್ಲಿವೆ. ಅವರಿಗೆ ದಟ್ಟವಾದ ಮನೆತನದ ಹಿನ್ನಲೆ, ಕೌಟುಂಬಿಕ ವಾತಾವರಣ, ಹಿರಿಯರ ವೃತ್ತಿ ಮತ್ತು ಆರ್ಥಿಕ ಸ್ಥಿತಿಗತಿಗಳು, ಆಸಕ್ತಿ ಅಭಿರುಚಿಗಳು, ಅವರು ಪಡೆದ ಸಂಸ್ಕಾರಗಳು, ಜೀವನದಲ್ಲಿ ಒದಗಿಬಂದಂತೆ ಸ್ವೀಕರಿಸುವ ಸಹಜ ಮನೋಭಾವಗಳು ಕವಿಯ ವ್ಯಕ್ತಿತ್ವ ರೂಪುಗೊಳ್ಳುವಿಕೆಯಲ್ಲಿ ಮಹತ್ವದ ಪಾತ್ರವಹಿಸಿವೆ.

ಕಮ್ಮಾರವರ ಕಮ್ಮಾರರ ಬದುಕು

ಈಶ್ವರ ಕಮ್ಮಾರ ಅವರು ಹುಟ್ಟಿ ಬೆಳೆದದ್ದು ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಚಿಕ್ಕ ಗ್ರಾಮ ಹಿರೇನಂದಿಹಳ್ಳಿಯಲ್ಲಿ. ಕಮ್ಮಾರಿಕೆಯ ವೃತ್ತಿಯೊಂದಿಗೆ ಒಕ್ಕಲುತನವನ್ನು ಆಶ್ರಯಿಸಿದ ಕುಟುಂಬ ಅದು. ಆದರೂ ಜೀವನೋಪಾಯಕ್ಕಾಗಿ ನಿರಂತರ ಹೋರಾಟ ಮಾಡುವ ಸ್ಥಿತಿಯೇ ಇತ್ತು. ಇಂಥ ಕೌಟುಂಬಿಕ ಪರಿಸರದಲ್ಲಿ

ಶಂಕ್ರೆಪ್ಪ–ಶಿವಬಸವ್ವ ದಂಪತಿಗಳ ಎರಡನೆಯ ಮಗನಾಗಿ ಈಶ್ವರ ಕಮ್ಮಾರ ಅವರು 4–1–1933 ರಂದು ಜನಿಸಿದರು.

ಸ್ವಚ್ಛಂದವಾದ ಗ್ರಾಮೀಣ ಪರಿಸರದಲ್ಲಿ ಕಮ್ಮಾರರು ತಮ್ಮ ಬಾಲ್ಯವನ್ನು ಕಳೆದಿದ್ದರೂ ತಂದೆ–ತಾಯಿಗಳಿಗೆ ಕಮ್ಮಾರಿಕೆ ಹಾಗೂ ಮನೆಕೆಲಸದಲ್ಲಿ ಸಹಕಾರಿಯಾಗಿಯೇ ಇದ್ದು, ಜವಾಬ್ದಾರಿಯುತ ನಡವಳಿಕೆ ಅವರಿಗೆ ಆ ಕಾಲದಲ್ಲಿಯೇ ರೂಢಿಯಾಗಿತ್ತು. ತಂದೆ–ತಾಯಿಗಳ ಧಾರ್ಮಿಕ ಸ್ವಭಾವ ಹಾಗೂ ಮಾನವೀಯ ಸೇವಾ ಮನೋಭಾವಗಳು ಕಮ್ಮಾರರನ್ನು ಪ್ರಭಾವಿಸಿದ್ದವು. ಶ್ರೀ ವೀರಭದ್ರಸ್ವಾಮಿಗಳ ಹಾಗೂ ಶ್ರೀ ನಾಗವಿಭೂಷಣ ಸ್ವಾಮಿಗಳ ನೇರ ಸಂಪರ್ಕದ ಪ್ರಭಾವ ತಂದೆಯವರ ಮೇಲೆ ಆದಂತೆ ಎಳೆಯ ವಯಸ್ಸಿನ ಕಮ್ಮಾರರ ಮೇಲೆಯೂ ಆಗಿತ್ತು. ಹೀಗಾಗಿ ಅವರು ಪೂಜೆ–ಪುನಸ್ಕಾರ ಪ್ರವಚನಾದಿಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು.

ಆರಂಭದ ಶಿಕ್ಷಣವನ್ನು ತಮ್ಮ ಊರಲ್ಲಿಯೇ ಪಡೆದ ಕಮ್ಮಾರರು ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೈಲಹೊಂಗಲಕ್ಕೆ ಹೋಗಬೇಕಾಯಿತು. ಮುಂದೆ ಧಾರವಾಡದಲ್ಲಿದ್ದುಕೊಂಡು ಎಸ್.ಎಸ್.ಎಲ್.ಸಿ. ಮುಗಿಸುತ್ತಾರೆ. ಆನಂತರ ಕೆಲಸಗಳ ಬೆನ್ನು ಹತ್ತಿ ಅಲೆಯುತ್ತಲೇ ಟಿ.ಸಿ.ಎಚ್. ತರಬೇತಿಯನ್ನು ಪಡೆದು ನಂತರ ಇಂಟರ್‌ಮಿಡಿಯೇಟ್ ಪರೀಕ್ಷೆ ಉತ್ತೀರ್ಣರಾಗುತ್ತಾರೆ. ಅಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದು, ಎಂ.ಎ. ಪದವಿಯನ್ನು ಪಡೆಯುತ್ತಾರೆ. ಮುಂದೆ ಸ್ವಲ್ಪೇ ದಿನಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಹ ನಿರ್ದೇಶಕರಾಗಿ ಆಯ್ಕೆಗೊಂಡು ನಂತರ ನಿರ್ದೇಶಕರೂ ಆಗಿ ನಿವೃತ್ತರಾಗುತ್ತಾರೆ.

ಕಮ್ಮಾರವರು ಸಾಹಿತ್ಯ ಸಂಸ್ಕೃತಿಗಳ ಸೇವೆ ಸಲ್ಲಿಸುವ ಮಹತ್ವಾಕಾಂಕ್ಷೆಯನ್ನು ಜೀವಂತವಾಗಿಟ್ಟುಕೊಂಡು ತಮ್ಮದೇ ಟ್ರಸ್ಟ್ ಸ್ಥಾಪಿಸಿಕೊಂಡು, ಧಾರವಾಡ ತಾಲೂಕಿನ ಮರೇವಾಡದಲ್ಲಿ ಸ್ವಂತ ಮನೆ ಕಟ್ಟಿಕೊಂಡು ನೆಮ್ಮದಿಯೊಂದಿಗೆ ಕ್ರಿಯಾಶೀಲರಾಗಿ ಬದುಕಿ, ಬಾಳಿ 86 ನೇ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದ್ದಾರೆ.

ಈಶ್ವರ ಕಮ್ಮಾರ ಅವರ ಸಾಹಿತ್ಯ ಸೃಷ್ಟಿ

ಈಶ್ವರ ಕಮ್ಮಾರವರು ರಚನೆ ಮಾಡಿರುವ ಸಾಹಿತ್ಯದ ಹಿಂದಿನ ತಾತ್ತ್ವಿಕ ಭೂಮಿಕೆ, ಸಾಮಾಜಿಕ ಆಶಯ, ಶೈಕ್ಷಣಿಕ ನಿಲುವುಗಳು ಪರಸ್ಪರ ಅಂತರ್‌ಸಂಬಂಧಿಗಳಾಗಿವೆ. ಸುಮಾರು ಆರು ದಶಕಗಳಿಗೂ ಮೀರಿ ನಿರಂತರ ಸಾಹಿತ್ಯ ರಚನೆಯಲ್ಲಿ ತೊಡಗಿದ್ದ ಕಮ್ಮಾರರು ಮಕ್ಕಳ ಕವನ, ಕಾದಂಬರಿ, ನಾಟಕ ಮತ್ತು ವ್ಯಕ್ತಿ ಪರಿಚಯ ಗ್ರಂಥಗಳನ್ನು ರಚಿಸಿದ್ದಾರೆ. ಜೊತೆ ಜೊತೆಗೆ ಈ ಅವಧಿಯ ಕನ್ನಡ ಸಾಹಿತ್ಯದ ಪಲ್ಲಟಗಳನ್ನು ಮಗುವಿನ ಮುಗ್ಧ ಮನೋಭೂಮಿಕೆಯಿಂದಲೇ ಅರಗಿಸಿಕೊಳ್ಳುತ್ತ, ಅಭಿವ್ಯಕ್ತಿಸುತ್ತ ಸಾಗಿದ್ದರು.

1) ಮಕ್ಕಳ ಕವನ ಸಂಗ್ರಹಗಳು

i) ಪಾಪಾ (1960) : 1960ರಲ್ಲಿ ಪ್ರಕಟಗೊಂಡ ಪಾಪಾ ಸಂಕಲನವು ಈಶ್ವರ ಕಮ್ಮಾರ ಅವರ ಮೊದಲ ಮಕ್ಕಳ ಕವನ ಸಂಕಲನ. ಈ ಸಂಕಲನದಲ್ಲಿ ಒಟ್ಟು 18 ಕವಿತೆಗಳಿದ್ದು, ಭಿನ್ನ ವಿಷಯ ವಸ್ತುಗಳ ಮಕ್ಕಳ ಮನಸ್ಥಿತಿಯನ್ನು ಬಿಂಬಿಸುವಂತೆ

ನಿರೂಪಿತವಾಗಿವೆ. ಗ್ರಾಮೀಣ ಜೀವನದ ಆಸಕ್ತಿಗಳನ್ನು ಅವು ಪ್ರತಿನಿಧಿಸುತ್ತಿದ್ದರೂ ಬದಲಾವಣೆಯ ಹೊಸ ಮಜಲುಗಳನ್ನು ಸೂಚಿಸುವ ಸಾಂದರ್ಭಿಕ ಹೊಳಹುಗಳನ್ನು ಅಲ್ಲಲ್ಲಿ ಗುರುತಿಸುಹುದು.

ii) ಮಕ್ಕಳ ಲೋಕ (1965) : ಸಂಕಲನದಲ್ಲಿಯೂ 18 ಕವಿತೆಗಳಿದ್ದು, ಕೆಲವು ಕಥನ ಕವನದ ಮಾದರಿಗಳನ್ನು ಇಲ್ಲಿ ಸೇರಿಸಲಾಗಿದೆ.

iii) ಎಡತಾಕ ಪಟ್ಟಿ (1984) : ಸಂಕಲನದಲ್ಲಿ 24 ಕವನಗಳಿದ್ದು, ಸುಮಾರು ಎರಡು ದಶಕಗಳ ಅಂತರದಲ್ಲಿ ಸಂಭವಿಸಿದ ಪರಿವರ್ತನೆಯ ಪ್ರಭಾವಗಳನ್ನು ಇಲ್ಲಿನ ವಸ್ತು ಹಾಗೂ ಅಭಿವ್ಯಕ್ತಿಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

iv) ಕೊಟ್ಟಿಗೆಯೊಳಗಿನ ಕೋಣಪ್ಪ (2004) : ಸಂಕಲನದಲ್ಲಿ 31 ಕವನಗಳಿವೆ.

2) ಚಂದ್ರಹಾಸ ಹಾಗೂ ಇತರ ಸಂಗೀತ ರೂಪಕಗಳು (2011)

ಇಲ್ಲಿ ಮೂರು ಸಂಗೀತ ರೂಪಕಗಳಿದ್ದು, ಇವು ಮಕ್ಕಳ ಆಸಕ್ತಿಗೆ ತಕ್ಕಂತ ವಸ್ತು ಹಾಗೂ ನಿರೂಪಣೆಗಳನ್ನು ಒಳಗೊಂಡಿವೆ. ಇವುಗಳಲ್ಲಿ ಸಂಗೀತ ಹಾಗೂ ನಾಟಕೀಯ ಗುಣಗಳು ಪ್ರಾಮುಖ್ಯ ಪಡೆದಿವೆ.

3) ಮಕ್ಕಳ ನಾಟಕಗಳು

i) ಶಾಲಾರಂಗ (1964): ಈ ನಾಕಟವು ಸುಮಾರು 1960ರಷ್ಟೊತ್ತಿಗೆ ರಚನೆಯಾಗಿದ್ದರೂ ಮೊದಲು ಪ್ರಕಟಗೊಂಡದ್ದು 1964ರಲ್ಲಿ. 1969ರಲ್ಲಿ ಇದು ಮರು ಮುದ್ರಣಗೊಂಡಿದ್ದು, ಕೆಲವು ಬದಲಾವಣೆಗಳನ್ನು ಪಡೆದು ಮರು ಸಂಯೋಜನೆಗೊಂಡಿದೆಯೆಂದು ಕಮ್ಮಾರರು ಹೇಳಿಕೊಂಡಿದ್ದಾರೆ.

ii) ಚೂಡಾರತ್ನ (1966): ಈ ನಾಟಕವು ಮಕ್ಕಳು ದೇಶದ ಸಂಪತ್ತಾಗಿದ್ದು ಅದನ್ನು ಸಾರ್ಥಕವಾಗಿ ರೂಪಿಸಿ ದೇಶದ ಏಳ್ಗೆಗೆ ಬಳಸುವಂತಾಗಬೇಕೆಂದು ಕಮ್ಮಾರರು ಈ ನಾಟಕದ ಮೂಲಕ ಪ್ರತಿಪಾದಿಸಿದ್ದಾರೆ.

iii) ದಾರಿದೀಪ (1672) : ಈ ನಾಟಕವು 1964ರಲ್ಲಿ ರಚಿತವಾಗಿ ಅಭಿನಯಿಸಲ್ಪಟ್ಟಿದ್ದರೂ ಪ್ರಕಟಗೊಂಡದ್ದು 1972ರಲ್ಲಿ. ಇದು ಜವಾಹರಲಾಲ್ ನೆಹರೂರವರ ಬದುಕು ಮಕ್ಕಳಿಗೆ ದಾರಿ ದೀಪವಾಗಬಲ್ಲದೆಂಬ ಸಂದೇಶವನ್ನು ಒಳಗೊಂಡಿದೆ.

iv) ಭಾಗೀರಥಿ (1964): ಇದೊಂದು ಸಾಮಾಜಿಕ ಏಕಾಂತ ನಾಟಕ. ಮಕ್ಕಳನ್ನು ದೃಷ್ಟಿಯಲ್ಲಿಟ್ಟಕೊಂಡೇ ಇದು ರಚಿತವಾಗಿದೆ.

V) ರಕ್ಷಾಬಂಧನ (2011): ರಕ್ಷಾಬಂಧನವನ್ನು ಒಳಗೊಂಡಂತೆ ಒಟ್ಟು ಆರುನಾಟಕಗಳ ಸಂಗ್ರಹ ಇದು. ಇಲ್ಲಿ ಸೇರಿರುವ ಇತರ ಐದು ನಾಟಕಗಳೆಂದರೆ ನಳದ ಗ್ರಹಚಾರ ಮತ್ತು ಸ್ವಾತಂತ್ರ್ಯ ಹೋರಾಟಗಾರರ ವಿಚಾರ, ಕೊರವಂಜಿ ಕಥೆ ಮತ್ತು ಶಿಕ್ಷಕ ವೃತ್ತಿ, ಗುರಸ್ಯಾದೋಷ್ಟ, ಪೆನ್‌ಶನ್‌ದಾರರ ಪರದಾಟ, ಬೆರಕಿಜನಾ ಹಣಗಳಿಸೋ ಜಾಣತನ, ವಿವಿಧ ಸಾಮಾಜಿಕ, ರಾಜಕೀಯ, ಆರ್ಥಿಕ ಸಮಸ್ಯೆಗಳು ಇಲ್ಲಿ ಪ್ರಸ್ತಾಪಿತ ವಿಷಯಗಳಾಗಿವೆ.

VI) ಕೋರ್ಟಿನಲ್ಲಿ ಶಟವಿ: ಈ ಸಂಗ್ರಹವೂ ಕೃಷ್ಣಮೂರ್ತಿ ಪುರಾಣಿಕರ

ಜನ್ಮಶತಮಾನೋತ್ಸವದ ಅಂಗವಾಗಿ 2011ರಲ್ಲಿ ಪ್ರಕಟಗೊಂಡ ಕೃತಿಮಾಲಿಕೆಯಲ್ಲಿ ಹೊರಬಂದಿದೆ. ಇಲ್ಲಿನ ಒಂಭತ್ತು ನಾಟಕಗಳಲ್ಲಿ ಈಗಾಗಲೇ ಮೇಲೆ ಪ್ರಸ್ತಾಪಿಸಲ್ಪಟ್ಟ ಶಾಲಾರಂಗ ನಾಟಕವೂ ಸೇರ್ಪಡೆಯಾಗಿದೆ. ಕೋರ್ಟಿನಲ್ಲಿ ಶಟವಿ, ಉಂಡು ಉಪವಾಸಿ, ಪರೀಕ್ಷಾ ಕಿತಾಪತಿ, ಸರಸ್ವತಿಯ ಪ್ರಭಾವ, ಗಣಪತಿ ಚಂದ್ರರ ಆಲಾಪ, ನಮ್ಮ ತಂದೆ ಗಮನಿಸಿಸಬೇಕು, ಶಾಲೆಗೆ ಯಾಕೆ–ಹೋಗಬೇಕು, ಕಂಡಕ್ಟರ್ ಕಾಂಡ, ಇಳಕಲ್ಲ ಗುಡ್ಡದ ಮೇಲೆ, ಇವೇ ಇಲ್ಲಿ ಸಂಗ್ರಹಗೊಂಡಿರುವ ಇತರ ನಾಟಕಗಳು ಹೆಸರುಗಳೇ ಇಲ್ಲಿ ವಸ್ತು ವೈವಿಧ್ಯವನ್ನು ಸೂಚಿಸುವಂತಿವೆ.

VII) ಜೋಗಮ್ಮಗಳ ಜಾತಕ: ಇಲ್ಲಿ ಸಂಗ್ರಹಗೊಂಡಿರುವ 6 ನಾಟಕಗಳು ಹೀಗಿವೆ. ಜೋಗಮ್ಮಗಳ ಜಾತಕ, ಲಗ್ನದ ವಿಚಾರ, ಜಾತ್ರೆಗಳು, ಮೂಢನಂಬಿಕೆಗಳು, ರಾಜಕಾರಣಿಗಳು ಮತ್ತು ಭವಿಷ್ಯ, ಮಕ್ಕಳ ಭವಿಷ್ಯದ ಚಿಂತನೆ ನಮ್ಮ ಪರಿಸರ ಬಾನಗಡಿತನಾ ಕೃಷ್ಣಮೂರ್ತಿ ಪುರಾಣಿಕರ ಶತಮಾನೋತ್ಸವ ಮಾಲಿಕೆಯಲ್ಲಿಯೇ ಈ ಸಂಗ್ರಹವೂ ಪ್ರಕಟಗೊಂಡಿದೆ.

VIII) ಸೂರಪನ್ನಕ್ಕಿ, ತಂದೂರಿ ಶಾಮಾ : ಈ ನಾಟಕ ಪಂಚಾಯತಿ ಪುರಾಣ ಎಂಬ ಹೆಸರಿನ ಸಂಗ್ರಹದಲ್ಲಿ ಸೇರ್ಪಡೆಯಾಗಿದೆ. ಈ ಸಂಗ್ರಹದಲ್ಲಿ ಒಂಬತ್ತು ನಾಟಕಗಳಿವೆ. ಸಮಗ್ರ ಕಾವ್ಯದಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ಸೂರಪನ್ನಕ್ಕಿ ತಂದೂರಿ ಶಾಮಾ ಎಂಬುದೇ ಸಂಗ್ರಹದ ಹೆಸರೆಂದು ತಪ್ಪಾಗಿ ನಮೂದಿಸಲಾಗಿದೆ. ಪಂಚಾಯತಿ ಪುರಾಣ ಎಂಬುದು ಸಂಗ್ರಹದ ಹೆಸರಾಗಿದ್ದು, ಅಲ್ಲಿ ಸಂಗ್ರಹಗೊಂಡಿರುವ ನಾಟಕಗಳು ಹೀಗಿವೆ. ಸೂರಪನ್ನಕ್ಕಿ ಹಾಗೂ ತಂದೂರಿ ಶಾಮಾ, ಲಾರೀ ಡ್ರೈವರ್, ತಾರತಮ್ಯ, ಪಂಚಾಯ್ತಿ ಪುರಾಣ, ಒಬ್ಬನಗಂಡ, ಕಲ್ಲು–ಮಲ್ಲು, ಓ! ಒಂದ್ ಐಡಿಯಾ, ಬೆಂಗಳೂರಿನಲ್ಲಿ ಯಕ್ಷ, ನಾವು ಇರೋದೆ ಹೀಗೆ.

5) ಮಕ್ಕಳ ಕಾದಂಬರಿಗಳು

i) ಸಂಕಲ್ಪ : 1992ರಲ್ಲಿ ಪ್ರಕಟವಾದ ಅವರ ಮೊದಲ ಮಕ್ಕಳ ಕಾದಂಬರಿ. ಇಲ್ಲಿ ಶ್ರೀಮಂತ ಮುಸ್ಲಿಂ ದಂಪತಿಗಳಿಗೆ ಮಕ್ಕಳಾಗದೆ ಅವರು ಸಾವಳಗಿಮಠ, ಮಸೀದಿ ಒಂದೇ ಕಡೆಗಿರುವ ಧರ್ಮ ಸಾಮರಸ್ಯದ ಕೇಂದ್ರ ಮಠಕ್ಕೆ ಹರಕೆ ಹೊತ್ತುಕೊಂಡು ಗಂಡು ಮಗುವಿಗೆ ಜನ್ಮಕೊಡುತ್ತಾರೆ. ಆ ಮಗು ಬೆಳೆದು ದೊಡ್ಡವನಾಗಿ ಸನ್ಯಾಸಿಯಾಗುವ ಕಥೆ ಇಲ್ಲಿನ ವಸ್ತು.ನವರಸಪುರ ಉತ್ಸವಕ್ಕೆ ಹೊರಟ ಮಕ್ಕಳ ಚರ್ಚೆಯಲ್ಲಿ ಈ ಕಥೆ ಆಕಾರ ತಳೆಯುವುದು ಇಲ್ಲಿನ ವಿಶೇಷ.

ii) ತಿಪ್ಪಮಾಡಿದ ತಪಸ್ಸು(2006) : ಎರಡನೆಯ ಕಾದಂಬರಿಯಾಗಿದ್ದು, ತಿಪ್ಪನೆಂಬ ಬಾಲಕ ಹಣ ಕಳೆದುಕೊಂಡು ದುಃಖದಲ್ಲಿರುವಾಗ ಸ್ವಾಮೀಜಿಯೊಬ್ಬರನ್ನು ಕಂಡು ಬೇಡಿಕೊಳ್ಳುತ್ತಾನೆ. ಕಳೆದುಕೊಂಡ ದುಡ್ಡು ಸಿಗುವುದಲ್ಲದೆ ಗುರುಗಳಿಂದ ದೀಕ್ಷೆ ಹಾಗೂ ಆಧ್ಯಾತ್ಮಿಕ ಬೋಧನೆಯೂ ಒದಗುತ್ತದೆ. ಸಾಧನೆಯ ಬಲದಿಂದ ತಿಪ್ಪ ಸಿದ್ಧಿಪುರುಷನಾಗುತ್ತಾನೆ. ಮಕ್ಕಳಿಗೆ ನೀತಿ ಬೋಧಕ ಹಾಗೂ ಸಾಧನೆಗೆ ಪ್ರೇರೇಪಿಸುವ ಈ ಕಥೆ ಕಮ್ಮಾರವರ ಊರು ಹಾಗೂ ಅಲ್ಲಿನ ಪಾತ್ರ ಪರಿಸರಗಳನ್ನೊಳಗೊಂಡಿವೆ.

iii) ಗಿಳಿಯು ಹೇಳಿದ ಗುಲಾಬಿ ಕಥೆ(2011) : ಇದು ಮೂರನೆಯ ಕಾದಂಬರಿಯಾಗಿದ್ದು, ಕೃಷ್ಣಮೂರ್ತಿ ಪುರಾಣಿಕರ ಜನ್ಮಶತಮಾನೋತ್ಸವ ಮಾಲಿಕೆಯಲ್ಲಿ

ಪ್ರಕಟಗೊಂಡಿದೆ. ಗಿಳಿ ಕಥೆ ಹೇಳುವುದು ಇಲ್ಲಿನ ತಂತ್ರಗುಲಾಬಿಕೂಡ ನಾಲ್ಕು ಹೆಣ್ಣು ಮಕ್ಕಳಿಗೆ ಹೋಲಿಕೆಯಾಗಿದೆ. ಒಂದೇ ಗಿಡದ ಗುಲಾಬಿ ನಾಲ್ಕು ರೀತಿಯಲ್ಲಿ ಬೇರೆ ಬೇರೆ ಉದ್ದೇಶಗಳಿಗೆ ಬಳಸಲ್ಪಡುವಂತೆ ಒಂದೇ ಕುಟುಂಬದ ನಾಲ್ಕು ಹೆಣ್ಣು ಮಕ್ಕಳು ಬೇರೆ ಬೇರೆ ಸ್ವಭಾವ ಹಿನ್ನೆಲೆಗಳನ್ನುಳ್ಳವರನ್ನು ಮದುವೆಯಾಗಿ ಬೇರೆ ಬೇರೆ ರೀತಿಯಲ್ಲಿ ಬದುಕನ್ನು ಸಾಗಿಸಬೇಕಾಗುವ ಸಾಂಕೇತಿಕ ಕಥಾನಕವನ್ನು ಇಲ್ಲಿ ಕಾಣಬಹುದು.

ಮಕ್ಕಳ ಸಾಹಿತ್ಯದ ಸಮಗ್ರ ಮುಖಗಳಲ್ಲಿ ಸ್ವತಃ ತಮ್ಮನ್ನು ಸೃಜನಶೀಲವಾಗಿ ತೊಡಗಿಸಿಕೊಂಡು ಗಮನಾರ್ಹ ಕೊಡುಗೆ ನೀಡಿರುವ ಕಮ್ಮಾರರು ವಿಮರ್ಶೆ–ಸಂಶೋಧನೆಗಳಲ್ಲಿಯೂ ಅಷ್ಟೇ ಗಮನಾರ್ಹ ಸಾಧನೆ ಮಾಡಿದ್ದಾರೆ. ಅದಾಗ್ಯೂ ಈಶ್ವರ ಕಮ್ಮಾರವರು ಉಪೇಕ್ಷಿತ ಸಾಹಿತಿಯಾಗಿಯೇ ಉಳಿದಿರುವುದು ವಿಷಾದನೀಯ.

ಪರಾಮರ್ಶನ ಗ್ರಂಥಗಳು

1. ಈಶ್ವರ ಕಮ್ಮಾರ ಅವರ ಅಪ್ರಕಟಿತ ಆತ್ಮಕಥೆ
2. ಈಶ್ವರ ಕಮ್ಮಾರ, ಮಕ್ಕಳ ಸಾಹಿತ್ಯ ಸಂಪದ
3. ಈಶ್ವರ ಕಮ್ಮಾರ, ಮಕ್ಕಳ ಕವನ ಸಾಹಿತ್ಯ
4. ಈಶ್ವರ ಕಮ್ಮಾರ, ತಿಪ್ಪ ಮಾಡಿದ ತಪ್ಪಸ್ಸು
5. ಈಶ್ವರ ಕಮ್ಮಾರ, ಶಾಲಾರಂಗ

❖❖❖

ಗಾಳಗಲೆವ ಎಲೆಗಳಂತೆ
ಗಿಳಿಯ ಕೊರಲು ಕೊಂಕಿದೆ
ಗರಿಯ ತೀಡುತಿರುವ ಕೊಕ್ಕು
ಕೆಂಪು ರಂಗು ಎಸೆದಿದೆ
ಕಮಲದಂತೆ ಮಿನುಗಿದೆ

ಪುರಂದರದಾಸರು ಕಂಡ ಸಮಾಜ

ಡಾ. ಎಚ್. ಜೆ. ಭೀಮೇಶ್
ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು

ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ದೊಡ್ಡಕ್ರಾಂತಿಯನ್ನೇ ಉಂಟುಮಾಡಿದವರು ಶರಣರು. ಶರಣರ ಪ್ರಭಾವ ಕಡಿಮೆಯಾಗತೊಡಗಿದಂತೆಯೇ ಮತ್ತೆ ಸಮಾಜ ಅಂಧಕಾರದ ಕಡೆಗೆ ಸಾಗತೊಡಗಿತು. ಆಗ ಸಮಾಜವನ್ನು ಪರಿವರ್ತಿಸಲು ಪ್ರಯತ್ನಿಸಿದವರು ಹರಿದಾಸರು. ಇವರು ಶರಣರಂತೆ ಕ್ರಾಂತಿಯನ್ನು ಮಾಡಲಿಲ್ಲವಾದರೂ ತಾವು ಕಂಡ ಸಮಾಜವು ಉತ್ತಮ ರೀತಿಯಲ್ಲಿ ಸಾಗಲು ಅನುಕೂಲವಾಗುವಂತೆ ಮಾರ್ಗದರ್ಶನ ಮಾಡಿದರು. ಸಮಾಜದ ಓರೆಕೋರೆಗಳನ್ನು ತಿದ್ದಿ ಅದರ ಕೊಳೆಯನ್ನು ತೊಳೆಯುವ ಕೆಲಸವನ್ನು ಅತ್ಯುತ್ಸಾಹದಿಂದ ಕೈಗೊಂಡು ನಿರ್ವಹಿಸಿದರು. ಸುಲಭವಾದ ಸುಂದರ ಕೀರ್ತನೆಗಳನ್ನು ಸೊಗಸಾಗಿ ಹಾಡುತ್ತಾ ಇಡೀ ಕನ್ನಡ ನಾಡನ್ನೇ ಸುತ್ತಿದರು.

ಪ್ರಾರಂಭದ ಹರಿದಾಸರು ಅಧ್ಯಾತ್ಮಕ್ಕೇ ಹೆಚ್ಚು ಒತ್ತು ನೀಡಿದರೆ, ಪುರಂದರದಾಸರು ಮತ್ತು ಕನಕದಾಸರು ಅಧ್ಯಾತ್ಮದ ಜೊತೆಗೆ ಲೌಕಿಕಕ್ಕೂ ಹೆಚ್ಚು ಒತ್ತುಕೊಟ್ಟರು. ಇವರ ಕೀರ್ತನೆಗಳ ಒಂದು ಮುಖ ಅಧ್ಯಾತ್ಮವನ್ನು ಹೇಳಿದರೆ, ಇನ್ನೊಂದು ಮುಖ ಸಮಾಜದ ಲೋಪ ದೋಷಗಳನ್ನು ತಿದ್ದುವ ಕಡೆಗಿತ್ತು. "ಸಮಾಜದ ಬಗೆಗಿನ ಅವರ ಅನುಶೀಲನ, ಕಳಕಳಿ, ಪ್ರೀತಿ, ಕೋಪ, ವಿಮರ್ಶೆ, ವಿಡಂಬನೆ, ವಿಚಿಕಿತ್ಸೆಗಳು ಅವರ ಸೃಜನ ಶಕ್ತಿಯ ಸಜೀವ ದಾಖಲೆಗಳಾದ ಕೀರ್ತನೆಗಳಲ್ಲಿ ಅತ್ಯಂತ ನೈಜವಾಗಿ, ತೀವ್ರವಾಗಿ, ಪರಿಣಾಮಕಾರಿಯಾಗಿ ಮಿಡಿಯುತ್ತಿರುವುದನ್ನು ನಿಚ್ಚಳವಾಗಿ ಗುರುತಿಸಬಹುದು"[1]

ಸಮಾಜವನ್ನು ಒಡೆಯುತ್ತಿದ್ದ ಜಾತಿ ಪದ್ಧತಿಯನ್ನು ದಾಸರು ಖಂಡಿಸಿದರು. ಆಚಾರ ಹೀನರಾದವರು ಹೀನರು ಹೊರತು ಹುಟ್ಟಿನಿಂದ ಯಾರೂ ಹೀನರಲ್ಲ. ಸದಾಚಾರಿಗಳೆಲ್ಲ ಶ್ರೇಷ್ಠರೇ ಎಂದು ಪುರಂದರದಾಸರು ಪ್ರತಿಪಾದಿಸಿದ್ದಾರೆ. "ಜಾತಿಯೆಂಬುದೇ ಹುಸಿ ಎಂಬ ಸತ್ಯವನ್ನು ಪರಿಣಾಮಕಾರಿಯಾಗಿ ಬಿಂಬಿಸುವ ಮೂಲಕ, ಕೇವಲ ಜಾತಿಯ ಕಾರಣದಿಂದಲೇ ಲೋಕದಲ್ಲಿ ಯಾರೂ ಮಹಾನುಭಾವರಾಗಿ ಬೆಳೆಯದೆ ಅವರಜ್ಞಾನ, ಪರಿಶ್ರಮ, ಪರಿಶುದ್ಧ ಹೃದಯ, ಸಾಧನೆಗಳಿಂದ ಮಾತ್ರ ವಿಭೂತಿ ಪುರುಷರಾಗಿ ಮೆರೆಯುವರೆಂಬುದನ್ನು ಬುದ್ಧಿಗಮ್ಯವಾಗಿ ಮನೋಗತವಾಗಿ ಮೂಡಿಸುವ ಈ ಜಾತಿಯನ್ನು ವಿನಾಶ ಮಾಡಬಹುದೆಂಬ ಭಾವನೆ ದಾಸರಲ್ಲಿ ಬಲವಾಗಿ ಬೇರೂರಿತ್ತೆಂಬುದನ್ನು ಇಂಥ ಕೀರ್ತನೆಗಳು ಸತ್ವಪೂರ್ಣವಾಗಿ ಸೂಚಿಸುತ್ತೇವೆ."[2]

ದಾಸರು ಮೇಲ್ಜಾತಿಯವರು ಅನುಸರಿಸುತ್ತಿದ್ದ ಡಂಬಾಚಾರದ ಆಡಂಬರದ 'ಮಡಿ'ಯನ್ನು ಕಟುವಾಗಿ ಟೀಕಿಸಿದ್ದಾರೆ. ಶರೀರ ಹುಟ್ಟುವಾಗ ಸಾಯುವಾಗ ಸೂತಕವೆನಿಸಿಕೊಂಡಿತ್ತು. ಇನ್ನು ನಡುವಿನ ಕಾಲದಲ್ಲಿ ಮಾತ್ರ ಅದಕ್ಕೆ ಮಡಿ ಹೇಗೆ

ಬಂತು ಎಂದು ಛೇಡಿಸಿದ್ದಾರೆ. ಮಡಿ ಎಂಬುದು ಕೇವಲ ದೇಹಕ್ಕಲ್ಲ ಮುಖ್ಯವಾಗಿ ಮನಸ್ಸಿಗೆ ಬೇಕು. ಮನಸ್ಸು ಮಡಿಯಾಗಿದ್ದರೆ ಸಕಲವೂ ಮಡಿಯಾಗಿರುತ್ತದೆ. ಎಂದು ಮಡಿ ಮಾಡುವ ಬಗೆಯನ್ನು ಹೇಳುತ್ತಾರೆ.

'ಮಡಿಮಡಿಮಡಿಯೆಂದಡಿಗಡಿಗ್ಹಾರುತಿ
ಮಡಿ ಮಾಡುವ ಬಗೆ ಬೇರುಂಟು
ಪೊಡವಿ ಪಾಲಕನ ಪಾದಧ್ಯಾನವನು
ಬಿಡದೆ ಮಾಡುವುದು ಅದು ಮಡಿಯು
.. ..
(ಹ.ಕೀ.ತ. ಭಾಗ–1,2, ಪು.– 123)

ಮನುಷ್ಯನು ತಾನು ಅನೇಕ ಪಾಪ ಕಾರ್ಯಗಳನ್ನು ಮಾಡಿ ಬಾಹ್ಯ ಶುದ್ಧನಾಗಿ ಬೂಟಾಟಿಕೆ ವ್ರತಗಳನ್ನು ಮಾಡಿದರೆ ಉದ್ಧಾರನಾಗುತ್ತಾನೆಯೆ? ಚರ್ಮ ತೊಳೆದರೆ ಕರ್ಮ ಹೋದೀತೇ? ಎಂದು ಪ್ರಶ್ನಿಸಿ.

'ಮುಸುರೆ ತೊಳೆಯ ಬೇಕೋ
ಈ ಮನಸ್ಸಿನ ಮುಸುರೆ ತೊಳೆಯ ಬೇಕು'
'ಸ್ನಾನ ಮಾಡಿರೋ ಜ್ಞಾನತೀರ್ಥದಲಿ
ನಾನು ನೀನೆಂಬಹಂಕಾರವ ಬಿಟ್ಟು'
(ಹ.ಕೀ.ತ. ಭಾಗ–1,2, ಪು.–311)

ಎಂದು ಉಪದೇಶೀಸಿದ್ದಾರೆ.

ಹೀಗೆ ದಾಸರು ಸಮಾಜಕ್ಕೆ ನೀತಿ ಬೋಧಿಸಿದರೂ ಎಚ್ಚೆತ್ತುಕೊಳ್ಳದೆ ತಮ್ಮ ಮೂಢದಾರಿಯಲ್ಲೇ ನಡೆಯುವವರನ್ನು ಕಂಡು–

ಮಲವತೊಳೆಯ ಬಲ್ಲರಲ್ಲದೆ
ಮನವ ತೊಳೆಯಬಲ್ಲರೆ
ಹಲವು ತೀರ್ಥಗಳಲ್ಲಿ ಮುಳುಗಿ ಹಲುಬಿದರೆ ಫಲವೇನು?
ತಂದೆತಾಯಿ ತಿರಿದು ತಿನ್ನಲು ಒಂದು ದಿನ ಕೇಳಲಿಲ್ಲ
ಮಂದಗಮನೆರೊಡನೆ ಆನಂದದಿಂದಲಿರುವರು
ತಂದೆ ಸತ್ತ ಮೇಲೆ ನೂರು ಮಂದಿ ವಿಪ್ರರಿಗುಣಿಸಿ ತಮ್ಮ
ತಂದೆ ತೃಪ್ತನಾದನೆಂಬರು ಮಂದ ಮತಿಯ ಜನಗಳು'
(ಹ.ಕೀ.ತ. ಭಾಗ–1,2, ಪು.–124)

ಇಂಥ ಮರುಳ ಜನರನ್ನು ಶ್ರೀನಿವಾಸನು ಮೆಚ್ಚುವನೆ ಎಂದು ಪ್ರಶ್ನಿಸಿದ್ದಾರೆ. ಅರ್ಥವಿಲ್ಲದ ಆಚಾರ ವಿಚಾರಗಳನ್ನು ಮಾಡುತ್ತ ಮನದಲ್ಲಿ ಹೊಲಸು ತುಂಬಿಕೊಂಡು ದೇವರದಯೆ ಕೋರುವ ಜನಗಳನ್ನುದ್ದೇಶಿಸಿ–

'ಹೃದಯದ ಮಲವನು ತೊಳೆಯಲಾರದೆ ವ್ಯರ್ಥ
ಉದಯಾಸ್ತಮಾನ ನೀರೊಳು ಮುಳುಗುವರು
ಅದಕ್ಕಿಂತ ಸರ್ವದ ನೀರೊಳುಗಿರುತಿಪ್ಪ
ಮುದಿ ಕಪ್ಪೆ ಮಾಡಿದತಪ್ಪೇನಯ್ಯ'
(ಹ.ಕೀ.ತ. ಭಾಗ–1,2, ಪು.– 178)

ಹೀಗೆ ಪುರಂದರದಾಸರು ಜನಗಳ ತೋರಿಕೆಯ ಭಕ್ತಿ ಆಚಾರ–ವಿಚಾರ

ಇವುಗಳನ್ನು ಖಂಡಿಸಿ, ಸರ್ವವನ್ನು ತೊರೆದು ಹರಿಯ ಧ್ಯಾನ ಮಾಡಿದರೆ ವರವನ್ನು ಕೊಡುವನು ನಮ್ಮ ಪುರುಂದರ ವಿಠಲ ಎಂದು ಜನರಿಗೆ ಮಾರ್ಗದರ್ಶನ ನೀಡಿದ್ದಾರೆ. ಕೇವಲ ಹೊಟ್ಟೆಯ ಪಾಡಿಗಾಗಿ ವೈರಾಗ್ಯದ ವೇಷ ತೊಟ್ಟು ಜಗತ್ತನ್ನು ಮೋಸಗೊಳಿಸುವ ಜೀವನವನ್ನು ಕಂಡು ಅವರು ಮರುಗಿದ್ದಾರೆ.

'ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ'
(ಹ.ಕೀ.ತ. ಭಾಗ–1,2, ಪು.– 127)

ಬಾಹ್ಯವೇಷ ಅಥವಾ ಆಚಾರಗಳಿಗಿಂತ ಆಂತರಿಕವಾದ ಹೃದಯ ಶುದ್ಧಿಯೇ ಅತ್ಯಂತ ಶ್ರೇಷ್ಠವೆಂಬ ಸತ್ಯವನ್ನು ನಿರ್ಭೀತರಾಗಿ ಘೋಷಿಸಿದ್ದಾರೆ. ಹೆಣ್ಣು,ಹೊನ್ನು, ಮಣ್ಣುಗಳಿಗೆ ಮರುಳಾಗಿರುವ ಮಾನವರನ್ನು ಪುರಂದರದಾಸರು ಬಹಳ ಜಾಣತನದಿಂದ ಎಚ್ಚರಿಸಿರುವರು.

'ಯಾರು ಹಿತವರು ನಿನಗೆ ಮೂರು ಮಂದಿಗಳೊಳಗೆ
ನಾರಿಯೋ, ಧಾರುಣಿಯೋ, ಬಲುತನದ ಸಿರಿಯೋ.'
(ಹ.ಕೀ.ತ. ಭಾಗ–1,2, ಪು.– 87)

ಎಂದು ನಮ್ಮನು ಪ್ರಶ್ನಿಸಿದ್ದಾರೆ. ಹಾಗೆಯೇ ಲೌಕಿಕ ಬದುಕನ್ನು ಕುರಿತು ದಾಸರು ತುಚ್ಛ ಮನೋಭಾವ ತಳೆಯುತ್ತಾರೆ.

'ಸಾಕುಸಾಕಿನ್ನು ಸಂಸಾರ ಸುಖವು
ಶ್ರೀಕಾಂತ ನೀನೊಲಿದುಕರುಣಿಸೈ ಹರಿಯೇ'
(ಹ.ಕೀ.ತ. ಭಾಗ–1,2, ಪು.– 289)

ಹೀಗೆ ಹಲವು ಕೀರ್ತನೆಗಳ ಮೂಲಕ ಸಂಸಾರದ ನಿಸ್ಸಾರತೆಯನ್ನೂ, ಭೋಗಜೀವನದ ನಶ್ವರತೆಯನ್ನು ಸಾರಿದ್ದಾರೆ. ಈ ಸಂಸಾರವೆಂಬುದು ಸುಲಭವಲ್ಲವೆಂಬುದು ನಿಜ. ಆದರೆ ಇದಕ್ಕೆ ಹೆದರಿ ಹೇಡಿಯಾಗಿ ಓಡಿಹೋಗಿ, ಯಾವು ಯಾವುದೋ ಸೋಗು ಹಾಕಿ, ಜಪತಪಯಾತ್ರೆಗಳ ಹೆಸರಿನಲ್ಲಿ ಕರ್ತವ್ಯ ಭ್ರಷ್ಟನಾಗುವುದು ಸಲ್ಲದು ಎಂಬುದುದಾಸರ ಅಭಿಪ್ರಾಯ. ಮನುಷ್ಯನು ಭಗವಂತನನ್ನು ನೆನೆಯುತ್ತ ತನ್ನ ಸಾಂಸಾರಿಕ ಕರ್ತವ್ಯಗಳನ್ನು ಪ್ರಮಾಣಿಕವಾಗಿ ಪಾಲಿಸಿದರೆ ಸಂಸಾರವೆಂಬುದು ಹಾವಿನ ಹುತ್ತವಾಗದೆ ಹೂವಿನಂತೆ ಅಪ್ಯಾಯಮಾನವಾಗಿರುತ್ತದೆ ಎಂದು ವಿವರಿಸುತ್ತಾರೆ.

'ಈಸಬೇಕು ಇದ್ದುಜೈಸಬೇಕು ಈ
ಹೇಸಿಗೆ ಸಂಸಾರದಲಿ ಆಶಾಲೇಶ ಮಾಡದ್ದಾಂಗೆ'
(ಹ.ಕೀ.ತ. ಭಾಗ–1,2, ಪು.– 90)

ಹೀಗೆ ಸಂಸಾರದಲ್ಲಿ ತೊಡಗಬೇಕು, ಆದರೆ ಅದರಲ್ಲೇ ಮುಳುಗಬಾರದು. ಸಂಸಾರದಲ್ಲಿದ್ದರೂ ಬಿಡದೆ ವಿಠಲನನ್ನು ಜ್ಞಾನಿಸಿದರೆ ಮುಕ್ತಿ ಪಡೆಯಬಹುದೆಂದು ದಾಸರು ಹೇಳಿದ್ದಾರೆ.

ದಾಸರು ಅಂದಿನ ಸಮಾಜದಲ್ಲಿ ಸ್ತ್ರೀಗೆ ಸ್ವತಂತ್ರ ಅಸ್ತಿತ್ವ ಕೊಟ್ಟಿಲ್ಲ. ಅವಳು ಪುರುಷನನ್ನು ಅವಲಂಬಿಸಿ ಬದುಕಬೇಕು, ಅವಳೊಂದು ಭೋಗದ ವಸ್ತು, ಅವಳ ಸಂಗ ಮಾಡಿದರೆ ಅಧ್ಯಾತ್ಮದಿಂದ ದೂರವಿರಬೇಕಾಗುತ್ತದೆ, ಅವಳು ಸಂಸಾರಕಷ್ಟೇ ಸೀಮಿತ, ವೈರಾಗ್ಯವನ್ನು ಹೊಂದಬೇಕಾದರೆ ಮೊದಲು ಹೆಣ್ಣಿನಿಂದ ದೂರವಿರಬೇಕು

ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಜೊತೆಗೆ ಅಂದಿನ ಸಮಾಜದಲ್ಲಿ ಹೆಣ್ಣು ಅನುಭವಿಸುತ್ತಿದ್ದ ನೋವು, ಹಿಂಸೆ ಇವುಗಳನ್ನು ಚಿತ್ರಿಸಿ ಅವರ ಸಂಕಷ್ಟಗಳಿಗೆ ಮರುಕವನ್ನೂ ವ್ಯಕ್ತಪಡಿಸುತ್ತಾರೆ.

ಸ್ತ್ರೀ ಬಗೆಗಿನ ಅವರ ಕೆಲವು ನೇತ್ಯಾತ್ಮಕ ನಿಲುವುಗಳು ನಿಜವಾಗಿಯೂ ದಾಸರ ಅಭಿಪ್ರಾಯವೋ, ಅಥವಾ ಪ್ರಕ್ಷಿಪ್ತವೋ ಎಂದು ನಿಖರವಾಗಿ ತಿಳಿದುಬಂದಿಲ್ಲ. ಸ್ತ್ರೀಯರಿಗೆ ಸ್ವಾತಂತ್ರ್ಯಕೊಟ್ಟ ಶರಣರ ಅನಂತರ ಬಂದ ದಾಸರು ಹೆಣ್ಣನ್ನು ಕೇವಲ ಸಂಸಾರಕ್ಕೆ ಸೀಮಿತಗೊಳಿಸಿರುವುದನ್ನು ನಂಬಲು ಸಾಧ್ಯವಿಲ್ಲ. ಅಥವಾ ಮುಸ್ಲಿಮರ ಧಾಳಿಯಿದ್ದ ಆ ಕಾಲದಲ್ಲಿ ಹೆಣ್ಣು ಮನೆಯೊಳಗಿದ್ದರೆ ಕ್ಷೇಮ ಎಂದು ಹೇಳಿದ್ದರೂ ಹೇಳಿರಬಹುದು. ಅಂದಿನ ಸಮಾಜವನ್ನು ಪರಿಗಣಿಸಿ ದಾಸರು ವ್ಯಕ್ತಪಡಿಸಿರುವ ಹೆಣ್ಣಿನ ಬಗೆಗಿನ ಅಭಿಪ್ರಾಯಗಳು ಪ್ರಸ್ತುತ ಸಮಾಜಕ್ಕೆ ಹೊಂದುವುದಿಲ್ಲ ಮತ್ತು ಅಗತ್ಯವೂ ಇಲ್ಲ

'ಸತಿಗೆ ಸ್ವಾತಂತ್ರ್ಯವಕೊಡದಿರು ನಿನ್ನ
ಮತಿಗೆಟ್ಟು ಬಾಯಿ ಬಿಡದಿರಣ್ಣ'
(ಹ.ಕೀ.ತ. ಭಾಗ–1,2, ಪು.– 135)

ಹೀಗಿದ್ದರೂ ದಾಸರು ಅಂದಿನ ಕಾಲದಲ್ಲಿ ಸ್ತ್ರೀಯರು ಪಡುತ್ತಿದ್ದ ಕಷ್ಟವನ್ನು ಕಂಡು ಅವರ ಬಗೆಗೆ ಮರುಕವನ್ನೂ ವ್ಯಕ್ತಗೊಳಿಸಿದ್ದಾರೆ. ಬರಿಯ ಸಂಪ್ರದಾಯಬದ್ಧ ನಿಯಮಗಳಲ್ಲಿ ನಿರತನಾಗಿರುವ ಪತಿಯನ್ನು ಕಟ್ಟಿಕೊಂಡ ಅಥವಾ ಮುಪ್ಪಿನ ಗಂಡನನ್ನು ಕಟ್ಟಿಕೊಂಡ ಸತಿಯ ಮನದ ತೊಳಲಾಟವನ್ನು ಹೇಳುತ್ತಾರೆ.

'ಒಲ್ಲೆನ ವೈದಿಕ ಗಂಡನ ನಾ
ನೆಲ್ಲಾದರೂ ಕಲ್ಲ ಹಾಯುವೆನಮ್ಮಾ?'
(ಹ.ಕೀ.ತ. ಭಾಗ–1,2, ಪು.– 68)
'ಮುಪ್ಪಿನ ಗಂಡನ ಒಲ್ಲೆನು ನಾನು
ತಪ್ಪದೆ ಪಡಿಪಾಟ ಮಾಡಲಾರೆನಕ್ಕ'.
(ಹ.ಕೀ.ತ. ಭಾಗ–1,2, ಪು.– 80)

".. ..ಹೆಣ್ಣಿನ ಬಗೆಗೆ ದಾಸರು ನಿಷ್ಠುರ ಹಾಗು ಮಧುರ ಭಾವನೆಗಳೆರಡನ್ನೂ ಹೊಂದಿರುವುದನ್ನು ನಾವು ಕಾಣಬಹುದು**"**.[3] ದಾಸರ ಮುಖ್ಯ ಉದ್ದೇಶ ಧರ್ಮ (ಮಾನವಧರ್ಮ) ಪ್ರಸಾರವಾದರೂ, ಧರ್ಮದ ಮೂಲಕ ಸಮಾಜ ಸುಧಾರಿಸುವ ಪ್ರಯತ್ನ ಮಾಡಿದರು. ಸಾಮಾಜಿಕ ಜೀವನವನ್ನು ಅತ್ಯಂತ ನಿಕಟವಾಗಿ ನೋಡಿ ಅನುಭವಿಸಿ ಅದರ ಅಂತರಾಳದಲ್ಲಿ ಹರಿಯತೊಡಗಿದ್ದ ಜೀವಘಾತಕವಾದ ಭ್ರಷ್ಟ ಮೌಲ್ಯಗಳ ವಿಷವಾಹಿನಿಯ ಬಗ್ಗೆ ಜನತೆಯನ್ನು ಎಚ್ಚರಿಸಿದರು. ಜಾತಿ ಪದ್ಧತಿ ಮೂಢನಂಬಿಕೆ ಮುಂತಾದ ದುಷ್ಟ ಪದ್ಧತಿಗಳ ವಿರುದ್ಧ ಜನತೆಗೆ ಅರಿವು ಮೂಡಿಸಲು ಪ್ರಯತ್ನಿಸಿದರು. ಇವುಗಳ ವಿರುದ್ಧ ಬಂಡಾಯ ಹೂಡಿ ವಿಜಯ ಸಾಧಿಸಲು ಸಾಧ್ಯವಾಗದಿದ್ದರೂ, ಸಮಸ್ಯೆಗಳನ್ನು ಪರಿಶೀಲಿಸಿ ಅವುಗಳಿಗೆ ಪರಿಹಾರ ಸೂಚಿಸಿದರು.

ವಿಸಮಾಜ ಬದ್ಧನಾಗಿ ಬರೆಯುವ ಯಾವನೇ ಲೇಖಕನ ಯಶಸ್ಸಿಗಿಂತ ಅವನ ಪ್ರಯತ್ನದ ಪ್ರಾಮಾಣಿಕತೆ ಶ್ಲಾಘನೀಯವಾದುದ್ದು, ಈ ನಿಟ್ಟಿನಿಂದ ದಾಸರ ಕೀರ್ತನೆಗಳಲ್ಲಿ ಕಣ್ಣು ತೆರೆದಿರುವ ಅವರ ಸಾಮಾಜಿಕ ದೃಷ್ಟಿ ತುಂಬಾ ಪ್ರಗತಿಪರವಾದದ್ದು, ರಚನಾತ್ಮಕವಾದದ್ದು, ಶುಭಾಕಾಂಕ್ಷಿಯಾದದ್ದು, ಜನಪ್ರೀತಿಯಿಂದ ಆವಿರ್ಭವಿಸಿದ್ದು

ಎನ್ನುವುದರಲ್ಲಿ ಸಂದೇಹವಿಲ್ಲ."[4] ಈ ನಿಟ್ಟಿನಲ್ಲಿ ಪುರಂದರದಾಸರು ರಚಿಸಿರುವ ಸಾಮಾಜಿಕ ಚಿಕಿತ್ಸಕ ಕೀರ್ತನೆಗಳು ಪ್ರಸ್ತುತ ಕಾಲಕ್ಕೂ ಅನ್ವಯವಾಗಿ ಸಮಾಜಿಕ ಜಾಗೃತಿ ಮೂಡಿಸಲು, ಸಮ ಸಮಾಜವನ್ನು ನಿರ್ಮಿಸಲು ಸಹಕಾರಿಯಾಗಿವೆ.

ಕೊನೆಟಿಪ್ಪಣಿಗಳು

1. ಬಿ.ಎಸ್. ಸಣ್ಣಯ್ಯ, 1984, ದಾಸಸಾಹಿತ್ಯದಲ್ಲಿ ಜನಪ್ರಿಯ ಮೌಲ್ಯಗಳು, ದಾಸ ಸಾಹಿತ್ಯದರ್ಶನ, ಮಂಗಳಭಾರತಿ ಪ್ರಕಾಶನ. ಪು.–400
2. ಎಚ್ಚೆಸ್ಕೆ, 1984, ದಾಸಸಾಹಿತ್ಯ ದರ್ಶನ, ಮಂಗಳಭಾರತಿ ಪ್ರಕಾಶನ. ಪು–46
3. ಬಿ.ಎಸ್. ಸಣ್ಣಯ್ಯ, 1984, ದಾಸಸಾಹಿತ್ಯದಲ್ಲಿ ಜನಪ್ರಿಯ ಮೌಲ್ಯಗಳು, ದಾಸ ಸಾಹಿತ್ಯದರ್ಶನ, ಮಂಗಳಭಾರತಿ ಪ್ರಕಾಶನ. ಪು.–401
4. ಡಾ. ಎಚ್.ಜೆ. ಲಕ್ಕಪ್ಪಗೌಡ, 1990, ಕನಕದಾಸರು–ಸಾಮಾಜಿಕ ದರ್ಶನ, ವಿಲೋಕನ ಪು.–27

ಪರಾಮರ್ಶನ ಗ್ರಂಥಗಳು

1. ಸುಬೋಧ ಎಂ. ರಾಮರಾವ್(ಸಂ), ಹರಿದಾಸ ಕೀರ್ತನ ತರಂಗಿಣಿ (ಶ್ರೀಪುರಂದರದಾಸ ಮತ್ತು ಕನಕದಾಸರ ಕೃತಿಗಳು)ಭಾಗ–1,2,3, ಸುಬೋದ ಪ್ರಕಟನಾಲಯ, ಬೆಂಗಳೂರು, 1964.
2. ಡಾ.ಎಚ್ಜೆ. ಲಕ್ಕಪ್ಪಗೌಡ, ವಿಲೋಕನ, ಸುರುಚಿ ಪ್ರಕಾಶನ. ಮೈಸೂರು, 1990.
3. ಸಿ.ಪಿ.ಕೆ., ಕಾವ್ಯಗೌರವ, ವಾಗ್ದೇವಿ ಎಂಟರ್ ಪ್ರೈಸಸ್, ಮೈಸೂರು, 1981.
4. ಡಾ.ವ.ಅ. ದಿವಾಣಜಿ, ಪ್ರಸಾದ ಯೋಗ, ಉಷಾಸಾಹಿತ್ಯ ಮಾಲೆ, ಮೈಸೂರು, 1979.
5. ಉ.ಕಾ.ಸುಬ್ಬರಾಯಾಚಾರ್, ಸಹೃದಯ ಸ್ಪಂದನ ಸುರುಚಿ ಪ್ರಕಾಶನ, ಮೈಸೂರು, 1968.
6. ಎಚ್ಚೆಸ್ಕೆ, ದಾಸಸಾಹಿತ್ಯದರ್ಶನ, ಮಂಗಳಭಾರತಿ ಪ್ರಕಾಶನ. ಮೈಸೂರು,1984.
7. ಬಿ.ಎಸ್. ಸಣ್ಣಯ್ಯ, ದಾಸ ಸಾಹಿತ್ಯದರ್ಶನ, ಮಂಗಳಭಾರತಿ ಪ್ರಕಾಶನ, 1984

❖❖❖

ಮಹಮೂದ್ ಗಾವಾನ್ : ರಾಜಕೀಯ ಕ್ರೌರ್ಯ

ಡಾ. ಅಶ್ವಿನಿ ಆರ್.ಎಸ್.
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು–570023

ಮಹಮೂದ್ ಗಾವಾನ್ ಕಂಬಾರರ ಸೃಜನಶೀಲ ಪ್ರತಿಭೆಯಲ್ಲಿ ಮೂಡಿದ ಐತಿಹಾಸಿಕ ನಾಟಕ. ಇದು ಕಂಬಾರರ ಐತಿಹಾಸಿಕ ನಾಟಕಗಳ ಸಾಲಿಗೆ ಸೇರುವ ಕೃತಿ. ಇಲ್ಲಿ ಇತಿಹಾಸದ ವಾಸ್ತವಾಂಶಗಳು ನಾಟಕಕಲೆಯ ಕಲ್ಪನೆಯೊಂದಿಗೆ ನಾಟಕಕಾರನ ಕೌಶಲ್ಯದಲ್ಲಿ ಮೂಡಿಬಂದಿವೆ. ಐತಿಹಾಸಿಕ ಘಟನೆಯನ್ನು ಸಮಕಾಲೀನ ಪ್ರಜ್ಞೆಗೆ ಅಳವಡಿಸಿ ಭೂತ–ವರ್ತಮಾನದ ನಡುವೆ ಸಂಪರ್ಕ ಏರ್ಪಡಿಸುವ ಪ್ರಯತ್ನವಿದು.

ಮಹಮೂದ್ ಗಾವಾನ್ ಒಬ್ಬ ಪರ್ಶಿಯನ್ನ ವ್ಯಾಪಾರಿಯಾಗಿದ್ದು ಇರಾನಿನಿಂದ ದೆಹಲಿಗೆ ಬಂದು ಅನಂತರದಕ್ಷಿಣ ಭಾರತದ ಬೀದರ್ ತಲುಪಿ ಬಹುಮನಿ ಸಾಮ್ರಾಜ್ಯದ ಪ್ರಧಾನಿಯಾದವನು. ಮೂರು ತಲೆಮಾರಿನ ರಾಜರ ಕೆಳಗೆ ಕೆಲಸಮಾಡಿ ತನ್ನ ಸ್ವಾಮಿನಿಷ್ಠೆಯನ್ನು ಮೆರೆದವನು. ಶ್ರೀಮಂತ ವರ್ತಕನಾದ ಇವನು ವಿದ್ವಾಂಸ, ಶಿಕ್ಷಣ ತಜ್ಞ ಮತ್ತು ಕಲೆಯಲ್ಲಿ ಆಸಕ್ತಿ ಉಳ್ಳವನು, ಇಸ್ಲಾಂ ಸಂಸ್ಕೃತಿಯಲ್ಲಿ ಗೌರವ ಉಳ್ಳವನು. ಪರ್ಶಿಯನ್ ಭಾಷೆ ಹಾಗೂ ಗಣಿತಶಾಸ್ತ್ರದಲ್ಲಿ ನಿಪುಣನಾಗಿದ್ದನು. ಕಾನೂನು ಶಿಕ್ಷಣ, ನೀರಾವರಿ ಸೌಲಭ್ಯ, ವಿದ್ಯಾರ್ಥಿಗಳ ಉಚಿತ ಶಿಕ್ಷಣ, ಯುದ್ಧ ಕೌಶಲ ಹಾಗೂ ಆಡಳಿತ ಸುಧಾರಣೆಯಲ್ಲಿ ಪ್ರಬಲನಾಗಿದ್ದನು. ಇಷ್ಟಿದ್ದರೂ ಮೂರನೇ ಅಹಮದ್ ಷಾನ ಆಳ್ವಿಕೆಯಲ್ಲಿ ರಾಜದ್ರೋಹಿ ಎಂಬ ಆರೋಪಕ್ಕೆ ಒಳಗಾಗಿ ಗಲ್ಲು ಶಿಕ್ಷೆಗೆ ಗುರಿಯಾಗಿ ದುರಂತ ಸಾವಿಗೀಡಾಗುತ್ತಾನೆ. ಇತಿಹಾಸದ ಈ ರೋಚಕ ಎಳೆಯನ್ನು ಕಂಬಾರರು ತಮ್ಮ ಪ್ರತಿಭಾ ನೈಪುಣ್ಯದಲ್ಲಿ ಸೆರೆಹಿಡಿದಿದ್ದಾರೆ. ಬಹುಮನಿ ಸಾಮ್ರಾಜ್ಯದ ಸಾಂಸ್ಕೃತಿಕ–ಶೈಕ್ಷಣಿಕ ಮಹತ್ವವನ್ನು ಸಾರಿದ ಮಹಮೂದ್ ಗಾವಾನನ ಜೀವನ ಸಾಧನೆಯನ್ನು ನಾಟಕರೂಪಕ್ಕೆ ಅಳವಡಿಸಿದ ಪ್ರಯತ್ನ ಕಂಬಾರರದು.

ಉತ್ತರ ಕರ್ನಾಟಕದ ಸಹಜ ಭಾಷೆಗಿಂತ ಭಿನ್ನವಾದ ಆಧುನಿಕ ಕನ್ನಡ ಬಳಕೆಯ ಹೊಸತನ ಈ ನಾಟಕದಲ್ಲಿದೆ. ಅಲ್ಲಲ್ಲಿ ಆಡುನುಡಿಯ ಸೊಬಗು ಮೇಳೈಸಿದೆ. ಸ್ಥಳೀಯ ನುಡಿಗಟ್ಟುಗಳು, ಬೈಗುಳಗಳು, ವ್ಯಂಗ್ಯೋಕ್ತಿಗಳ ಬಳಕೆ ನಾಟಕದ ವೈಶಿಷ್ಟ್ಯವಾಗಿದೆ. ಹತ್ತು ದೃಶ್ಯಗಳ ಹರಹಿನಲ್ಲಿ ನಾಟಕ ಮೈದುಂಬಿಕೊಂಡಿದ್ದು, ಬಹುಮನಿ ದೊರೆಗಳ ಆಡಳಿತಾತ್ಮಕ ಕಾರ್ಯವೈಖರಿಯ ಸಮೃದ್ಧ ವಿವರಣೆ ಇದೆ. ಸಶಕ್ತ ಸಂಭಾಷಣೆಗಳು ನಾಟಕದ ಆತ್ಮವೂ ಹೌದು. ದೃಶ್ಯ ಸಂಯೋಜನೆ, ಪಾತ್ರರಚನೆ, ನಿರ್ವಹಣಾ ಕೌಶಲ ಇವೆಲ್ಲವುಗಳಿಂದ ಕಂಬಾರರು ನಾಟಕವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ.

ನಾಟಕದ ಮೊದಲ ದೃಶ್ಯ ಬೀದರ್‌ನ ಮಹಮೂದ್ ಗಾವಾನನ ಮದರಸದ ಆವರಣದಲ್ಲಿ ಆರಂಭವಾಗುತ್ತದೆ. ಶೈಕ್ಷಣಿಕ ಪ್ರವಾಸಕ್ಕೆಂದು ಬಂದ ಮಕ್ಕಳು ಕಟ್ಟಡದ ಸೌಂದರ್ಯವನ್ನು ನೋಡಿ ಬೆರಗಾಗಿ ಅದರ ಹಿನ್ನೆಲೆಯನ್ನು ತಿಳಿಯಲು ಗೈಡ್‌ಗಾಗಿ

ಹುಡುಕುತ್ತಿರುತ್ತಾರೆ. ಆಗ ಅವರನ್ನು ಆಗಂತುಕನೊಬ್ಬ ಒಬ್ಬ ಹಣ್ಣು ಹಣ್ಣು ಮುದುಕನಲ್ಲಿಗೆ ಕರೆದೊಯ್ಯುತ್ತಾನೆ. ಅವನು ಕಣ್ಣಿಗೆ ಕಟ್ಟುವ ಹಾಗೆ ತಾನೇ ಸ್ವತಃ ಗಾವಾನ್ ಎಂದು ಭಾವಿಸಿ ಇಡೀ ಕತೆಯನ್ನು ವಿವರಿಸುವುದೇ ನಾಟಕದ ವಿಶೇಷವಾಗಿದೆ. ಇದೊಂದು ಯಶಸ್ವೀ ತಂತ್ರವೂ ಹೌದು.

ಇರಾನಿನ ದೊರೆಯ ಬಳಿ ಗಾವಾನನ ಚಿಕ್ಕಪ್ಪ ಮಂತ್ರಿಯಾಗಿರುತ್ತಾನೆ. ಗಾವಾನ್ ಚಿಕ್ಕಪ್ಪನಿಗೆ ಸಹಾಯ ಮಾಡಲು ಅವನ ಕಛೇರಿ ಸೇರಿ ಅಲ್ಲಿ ಅಪಾರ ಆಡಳಿತದ ಅನುಭವ ಪಡೆಯುತ್ತಾನೆ. ಆದರೆ ಅಷ್ಟರಲ್ಲಿ ರಾಜಕೀಯ ಅಸ್ಥಿರತೆಯಿಂದ ರಾಜ್ಯ ಕುಸಿದು ಗಾವಾನ್ ತನ್ನ ಚಿಕ್ಕಪ್ಪನೊಂದಿಗೆ ವಾಪಾಸ್ ಹುಟ್ಟೂರಿಗೆ ಹೋಗುತ್ತಾನೆ. ಅಲ್ಲಿ ಆಕಸ್ಮಿಕವಾಗಿ ಖ್ವಾಜಾ ಕೀರ್ಮಾನಿಯವರನ್ನು ಭೇಟಿಯಾಗುತ್ತಾನೆ. ಅವರಿಂದ ದೊಡ್ಡ ಸಂತರು, ದೇವರನ್ನು ತಿಳಿದವರು, ಅಪಾರ ಅನುಭವಿಗಳು ಆದ ಖ್ವಾಜಾ ಬಂದೇನವಾಜರ ವಿಷಯ ತಿಳಿದು ಅವರನ್ನು ಕಾಣಲು ಹಿಂದೂಸ್ತಾನಕ್ಕೆ ಬರುತ್ತಾನೆ. ಮುಂದೆ ಗವಾನ್ ಬೀದರಿಗೆ ಬರುತ್ತಾನೆ.

ಈಗಾಗಲೇ ಕಾಯಿಲೆಯಿಂದ ನರಳುತ್ತಿದ್ದ ಬಹುಮನಿ ರಾಜ ಅಲ್ಲಾವುದ್ದೀನ್ ಗಾವಾನನ ಶೌರ್ಯ ಚತುರತೆಯನ್ನು ಮೆಚ್ಚಿ ದಿವಾನನಾಗಿ ನೇಮಿಸಿಕೊಳ್ಳುತ್ತಾನೆ. ಇದು ಬಹುಮನಿ ಸಾಮ್ರಾಜ್ಯದ ತರಫ್‌ದಾರ ಟರ್ಕ್, ದಖನೀಯರು, ರಾಜಮಾನ್ಯರು, ಖಿಲ್ಲೇದಾರರು, ಅಮೀರರು ಹಾಗೂ ಆಡಳಿತಗಾರರ ನಿದ್ದೆಕೆಡಿಸುತ್ತದೆ. ರಾಜ್ಯದಲ್ಲಿ ದಖನೀಯರು–ವಿದೇಶಿಯರು ಎಂಬ ಎರಡು ಪಂಗಡಗಳು ಇದ್ದು ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುತ್ತಿರಲಿಲ್ಲ. ಇದೆಲ್ಲದರ ಪರಿಣಾಮವಾಗಿ ಘಟನಾವಳಿಗಳು ನಡೆದು ಮುಂದೆ ಅಹಮದ್ ಶಾಹ್‌ನ ಸಿಂಹಾಸನಾರೋಹಣ ನಡೆಯುತ್ತದೆ. ಖ್ವಾಜಾ ಗಾವಾನರೇ ಅಹಮದ್ ಶಾಹ್‌ನ ಗುರುವಾಗಿ ಮುಂದೆ ಅವನನ್ನು ಪ್ರಬಲ ಸುಲ್ತಾನನನ್ನಾಗಿಸುತ್ತಾರೆ. ಕರಾವಳಿ ಹಾಗೂ ವಿಜಯನಗರವನ್ನು ವಶಪಡಿಸಿಕೊಳ್ಳಲು ಐವತ್ತು ಸಾವಿರ ಸೈನ್ಯ ಸಂಘಟನೆ ಮತ್ತು ಹಣಸಂಗ್ರಹಣೆ ಕಾರ್ಯವನ್ನು ತರಫ್‌ದಾರರಿಗೆ ವಹಿಸುತ್ತಾರೆ.

ಗಾವಾನರ ಸಾಮರ್ಥ್ಯದಿಂದ ವಿಜಯನಗರ ಮತ್ತು ಕರಾವಳಿ ಬಹುಮನಿ ರಾಜ್ಯಕ್ಕೆ ಸೇರುತ್ತದೆ. ಗೆಲುವಿನ ಸಂಕೇತವಾಗಿ ಅಹಮದ್ ಶಾಹ್ ಗಾವಾನರಿಗೆ 'ಜಹಾನ್' ಪದವಿ ಹಾಗೂ ದಿವಾನ ಹುದ್ದೆಯನ್ನು ನೀಡಿ ದಿವಾನರ ರಾಜಮುದ್ರೆ ಕೊಟ್ಟು ಗೌರವಿಸುತ್ತಾನೆ. ಅನಂತರದ ದಿನಗಳಲ್ಲಿ ಟರ್ಕ್‌ನ ಕೊಲೆಯಾಗುತ್ತದೆ. ಗಾವಾನನ ಸೇವಕಿ ನೀಲಿ ಸಿಕಂದರ್‌ನನ್ನು ಕೊಂದ ರಾತ್ರಿ ಹುಮಾಯೂನ್ ತನ್ನನ್ನು ಬಲಾತ್ಕರಿಸಲು ಬಂದಿದ್ದರಿಂದ ಅವನನ್ನು ಕೊಂದೆನೆಂದು ಗಾವಾನನಿಗೆ ತಿಳಿಸುತ್ತಾಳೆ. ಟರ್ಕ್ ನೀಲಿಯಿಂದ ರಾಜಮುದ್ರೆ ಒತ್ತಿದ ಕಾಗದವನ್ನು ತೆಗೆದುಕೊಂಡು ಬಾ ಇಲ್ಲವಾದರೆ ರಾಜನನ್ನು ಕೊಂದಿರುವ ವಿಷಯವನ್ನು ಎಲ್ಲರಿಗೂ ತಿಳಿಸುತ್ತೇನೆ ಎಂದು ಬೆದರಿಸಿ, ಪತ್ರ ಪಡೆದಿರುವ ವಿಷಯವನ್ನೂ ತಿಳಿಸಿ ಮುಂದೆ ಅವನನ್ನೂ ತಾನೇ ಕೊಂದಿರುವುದಾಗಿ ಎಲ್ಲಾ ಸಂಗತಿಗಳನ್ನು ತಿಳಿಸುತ್ತಾಳೆ. ಆದರೆ ಈಗಾಗಲೇ ನಿಜಾಮುಲ್ಮುಲ್ಕ್ ಗಾವಾನರು ಬಿಹಾರದ ದೊರೆಗೆ ಬರೆದ ಖಾಸಗಿ ಕಾಗದವನ್ನು ಅಹಮದ್ ಶಾಹ್‌ನಿಗೆ ತೋರಿಸಿ ಗಾವಾನನ ವಿರುದ್ಧ ಎತ್ತಿಕಟ್ಟುತ್ತಾನೆ. ಅಹಮದ್ ಶಾಹ್ ಮದರಸದ ಖರ್ಚುವೆಚ್ಚ, ತೆರಿಗೆ ವಸೂಲಾದ ಲೆಕ್ಕ ಹಾಗೂ ಖಾಸಗಿ ಪತ್ರ ಬರೆದ ಮಾಹಿತಿಗಾಗಿ ಗಾವಾನನನ್ನು ತನಿಖೆಗೆ ಗುರಿಪಡಿಸುತ್ತಾನೆ. ಗಾವಾನರೂ ಖಾಸಗಿಪತ್ರ ತಾನು ಬರೆದಿಲ್ಲವೆಂದು

ಅಲ್ಲಾಹ್‌ನ ಸಾಕ್ಷಿ ಮಾಡಿದರೂ ಅಹಮದ್ ಶಾಹ್ ನಂಬುವುದಿಲ್ಲ ಹಾಗೂ ಗಾವಾನರ ಪರವಾಗಿ ಮಾತನಾಡಿದ ತಾಯಿಯನ್ನೂ ಅನುಮಾನಿಸುತ್ತಾನೆ.

ಮುಂದೆ ಖೇಳಣದ ಮಹಾರ್ ಬಂದು (ಮಹಾರ್ ವಿಠ್ಠಲ) ಮೂರು ವರ್ಷ ಬಾಕಿಯಿರುವ ತೆರಿಗೆಯಾಗಿ ದೊಡ್ಡ ಪ್ರಮಾಣದ ಚಿನ್ನದ ನಾಣ್ಯಗಳ ಚೀಲವನ್ನು ಕೊಡುತ್ತಾನೆ. ಅಷ್ಟರಲ್ಲಿ ಪಂತರು ಕೂಗುತ್ತಾ ಬಂದು ಮಳೆಬೆಳೆ ಆಗಿಲ್ಲವಾದ್ದರಿಂದ ಈ ವರ್ಷವೂ ತೆರಿಗೆ ಕೊಡಲಾಗದು ಎಂದು ಬೇಡುತ್ತಾರೆ. ಆಗ ಗಾವಾನರು ಮಹಾರ್ ವಿಠ್ಠಲನು ವಿಠಲನಾಗಿ ತನಗೆ ದರ್ಶನವಿತ್ತಿರುವ ಅರಿವಾಗಿ ಮೌನವಾಗಿ ನಿಂತಿರುವಾಗ, ಪಂತರು 'ವಿಠಲನಾಗಿ ಗವಾನರಿಗೆ ದರ್ಶನ ಕೊಟ್ಟಿರಾ ಸ್ವಾಮಿ' ಎಂದು ಮರುಗುತ್ತಾರೆ. ದೇವರೇ ಪ್ರತ್ಯಕ್ಷವಾದರೂ ಹಣದ ಮದ ಹಾಗೂ ಚಾಡಿಮಾತುಗಳ ಅಮಲಲ್ಲಿ ಇದ್ದ ಅಹಮದ್ ಶಾಹ್‌ನಿಗೆ ಇದಾವುದೂ ಕಣ್ಣಿಗೆ ಕಾಣದೆ ಗಾವಾನರಿಗೆ ರಾಜದ್ರೋಹದ ಆರೋಪಮಾಡಿ ಮರಣದಂಡನೆ ಶಿಕ್ಷೆಗೆ ಗುರಿಪಡಿಸುತ್ತಾನೆ. ಈ ನಾಟಕದಲ್ಲಿ ಕಂಬಾರರ ಅಚಲ ದೈವಪ್ರಜ್ಞೆ ವೈಚಾರಿಕತೆಯೊಂದಿಗೆ ಸೆಣಸಾಡಿದೆ. ರಾಜಕೀಯ ಅದರೊಳಗಿನ ಹಿಂಸೆ ನಿರಂತರ ಪ್ರಕ್ರಿಯೆಯಾಗಿದ್ದು ಉತ್ತರಕಾಣದ ಸಮಸ್ಯೆಯಾಗಿದೆ ಎಂಬ ಸತ್ಯವನ್ನು ನಾಟಕ ಮನದಟ್ಟು ಮಾಡುತ್ತದೆ.

ಹೀಗೆ ನಾಟಕ ಕಂಬಾರರ ಸೃಜನಶೀಲ ನೆಲೆಯಲ್ಲಿ ವಿಸ್ತಾರಗೊಂಡಿದ್ದು ಬಹುಮನಿ ಸುಲ್ತಾನರ ಕ್ರೌರ್ಯ, ಅಟ್ಟಹಾಸ, ಕನಸು, ಸೋಲು, ವಿಷಾದ ಮೊದಲಾದ ಆಡಳಿತ ವೈಖರಿಯ ಸಮೃದ್ಧ ವಿವರಗಳು ತೆರೆದುಕೊಳ್ಳುತ್ತವೆ. ಅಲ್ಲಾವುದ್ದೀನ್, ಹುಮಾಯೂನ್, ನರ್ಗಿಸ್ ಬೇಗಂ, ಅಹಮದ್ ಶಾಹ್, ಖ್ವಾಜಾಗಾವಾನ್, ನೀಲಿ, ನಿಜಾಮುಲ್ಮುಲ್ಕ್, ಟರ್ಕ್, ಪಂತ, ಮಹಾರ್ ವಿಠ್ಠಲ, ಮುದುಕ, ಸೇವಕ, ತರಫ್‌ದಾರ, ಅಮೀರ, ರಾಜಮಾನ್ಯ, ಸೇನಾಪತಿ, ಡಂಗುರದವ, ವಿದ್ಯಾರ್ಥಿಗಳು, ಆಗಂತುಕ – ಮುಂತಾದ ಪಾತ್ರ ನಿರ್ಮಿತಿಯ ಮೇಲೆ ನಾಟಕ ಕ್ರಿಯಾಶೀಲವಾಗುತ್ತದೆ. ಮಹಮೂದ್ ಗಾವಾನ್ ಪ್ರಸ್ತುತಯುಗದ ಆಶಯವನ್ನು ಹೊತ್ತ ರೂಪಕವಾಗಿದ್ದು, ರಾಜಕೀಯ ಅಟ್ಟಹಾಸ ಮೇರೆ ಮೀರಿದರೆ ಅದು ಹಿಂಸೆಯ ರೂಪ ತಾಳಿ ಜನಸಮುದಾಯದ ನಂಬಿಕೆ, ಆಶೋತ್ತರಗಳ ಮೇಲೆ ಬಲವಾದ ಪೆಟ್ಟುನೀಡುತ್ತದೆ ಎಂಬ ಸತ್ಯವನ್ನು ಜಾಗೃತಗೊಳಿಸಿದೆ. ವೈಚಾರಿಕತೆಯೊಳಗಿನ ದೈವಿಕ ಪ್ರಜ್ಞೆ ನಾಟಕದಲ್ಲಿ ಅಭಿವ್ಯಕ್ತಗೊಂಡಿರುವುದು ನಾಟಕಕ್ಕೆ ಭಿನ್ನ ಆಯಾಮ ಒದಗಿಸಿದೆ. ಇತಿಹಾಸಕ್ಕೆ ಸೀಮಿತವಾದ ಹೆಣಿಗೆಯೊಳಗೆ ಸಿಗುವ ವರ್ತಮಾನದ ಸುಳುಹುಗಳು ಕಂಬಾರರ ಚಿಂತನಾಶೀಲ ನೆಲೆಯನ್ನು ವಿಸ್ತರಿಸುವಲ್ಲಿ ಯಶಸ್ವಿಯಾಗಿದೆ.

ನಾಟಕದಲ್ಲಿ ಕಂಬಾರರ ವಿಭಿನ್ನ ನೆಲೆಯ ಪಾತ್ರಸೃಷ್ಟಿಯಾಗಿ ಗಾವಾನರ ಪರಿಚಾರಿಕೆಯಾದ 'ನೀಲಿ' ಕಾಣಸಿಗುತ್ತಾಳೆ. ನಾಟಕದಲ್ಲಿ ಗಾವಾನರೇ ಹೇಳುವಂತೆ 'ಅವಳ ಕಣ್ಣಲ್ಲಿ ನೀಲಿ ನಕ್ಷತ್ರಗಳ ಕಾಂತಿಇದೆ.' ಕಂಬಾರರ ಸಾಹಿತ್ಯದ ಶಕ್ತಿಶಾಲಿ ಸ್ತ್ರೀಪಾತ್ರಗಳಂತೆ ನೀಲಿಯ ಪಾತ್ರವೂ ಒಂದು. ಇಡೀ ನಾಟಕದ ಕೇಂದ್ರವಾಗಿ ಚಿತ್ರಣಗೊಂಡಿರುವ ನೀಲಿ, ಸುಲ್ತಾನ್ ಹುಮಾಯೂನ್ ಮತ್ತು ಖ್ವಾಜಾಜಹಾನ್ ಟರ್ಕ್ ಇವರ ಹತ್ಯೆಗೆ ಕಾರಣವಾಗುತ್ತಾಳೆ. ವ್ಯವಸ್ಥೆಯ ಪಿತೂರಿಗೆ ಒಳಪಟ್ಟು ಈ ಕೊಲೆಗಳಿಗೆ ಆಕೆ ನಾಂದಿಯಾದರೂ ಅವಳಿಂದ ಇಡೀ ನಾಟಕಕ್ಕೆ ಮಾನವೀಯ ಮಜಲು ಲಭ್ಯವಾಗುತ್ತದೆ. 'ರಾಜಕಾರಣ ನೀತಿ ಗೆಟ್ಟಾಗ ಪ್ರತಿಭಟನೆ ಕರ್ತವ್ಯವಾಗುತ್ತದೆ' ಎಂಬ

ಮಾತಿಗೆ ಅವಳು ಸಾಕ್ಷಿಯಾಗುತ್ತಾಳೆ ಅಲ್ಲದೆ ಸೂತ್ರವಿರದ ರಾಜಕೀಯ ದುರವಸ್ಥೆಗೆ ಹೋರಾಟದ ಕಿಚ್ಚನ್ನು ಹೊತ್ತಿಸುತ್ತಾಳೆ.

ಭಾರತೀಯ ಇತಿಹಾಸ ಪರಂಪರೆಯೊಳಗೆ ಅಡಗಿರುವ ಪೌರಾಣಿಕ ಪ್ರಜ್ಞೆಯ ಎಳೆಯೊಂದು ಮಹಮೂದ್ ಗಾವಾನ್ ನಾಟಕದಲ್ಲಿ ಗೋಚರಿಸಿದೆ. ಭಾರತೀಯ ಭಕ್ತಿಪಂಥದ ಕೇಂದ್ರಪ್ರಜ್ಞೆಯೊಂದಿಗೆ ಸ್ಥಳೀಯ ಇತಿಹಾಸ ಮೈದಾಳಿದೆ. ಪಂಡರಾಪುರದ ವಿಠಲನು ಮಹಾರ್ ವಿಠ್ಠಲನ ರೂಪದಲ್ಲಿ ದರ್ಶನ ನೀಡುವ ಪ್ರಸಂಗ ಮಹಮೂದ್ ಗಾವಾನರ ವೃತ್ತಿ ಬದುಕಿನ ಪ್ರಾಮಾಣಿಕತೆಯನ್ನು ಎತ್ತಿ ಹಿಡಿದಿದೆ. ರಾಜನ ಭಂಡಾರಕ್ಕೆ ಸಲ್ಲಬೇಕಿದ್ದ ಬಡವರ ಕಾಳು–ಕಡ್ಡಿ ಹಾಗೂ ಸಂದಾಯವಾಗ ಬೇಕಿದ್ದ ಬಾಕಿಹಣವನ್ನು ತಂದು, ಅದೇ ಚಿನ್ನದ ನಾಣ್ಯಗಳಿಂದ ಒಂದು ನಾಣ್ಯ ಕೂಲಿಪಡೆದು ಹೊರಟು ಹೋಗುವ ಪುರಾಣ ವ್ಯಕ್ತಿಯ ಮೂಲಕ ಮಾನವೀಯತೆಯನ್ನು ಮೆರೆಯುವ ಕಂಬಾರರ ಮನೋಧರ್ಮ ನಾಟಕದಲ್ಲಿ ಮತ್ತೆ ಮತ್ತೆ ಕಾಡುವಂಥದ್ದಾಗಿದೆ. ಇಷ್ಟಿದ್ದರೂ ಮಹಮೂದ್ ಗಾವಾನರ ತ್ಯಾಗದ ಅರಿವಾಗದ ಸುಲ್ತಾನ ಅವರ ಶಿರಚ್ಛೇದಕ್ಕೆ ಆಜ್ಞೆ ನೀಡುವುದು ನಾಟಕದ ದುರಂತವೇ ಆಗಿದೆ. ಪುರಾಣ ಪ್ರಜ್ಞೆಯನ್ನು ವಾಸ್ತವ ಪ್ರಜ್ಞೆಯೊಂದಿಗೆ ಸಂಘರ್ಷಿಸಿರುವ ಕಂಬಾರರ ಈ ನಾಟಕದಲ್ಲಿ ಪ್ರಸ್ತುತ ರಾಜಕೀಯ ವ್ಯವಸ್ಥೆ, ವೈಚಾರಿಕ ಧೋರಣೆಗಳು ದೈವಬಲದ ವಿಶ್ವಾಸದ ಮುಂದೆ ಸೋತಿವೆ ಎನ್ನುವುದು ಮೇಲ್ನೋಟಕ್ಕೆ ಕಾಣಿಸಿದರೂ ತಾತ್ವಿಕನಿಷ್ಠೆಯಿಂದಲೇ ಭಾರತದ ಇತಿಹಾಸದಲ್ಲಿ ಹುತಾತ್ಮರಾದವರನ್ನು ನೆನಪಿಸುತ್ತದೆ.

❖❖❖

ಹಗಲಗನಸ ಕಾಣುತಿರುವ
ಗಿಳಿಯ ಬಗಲ ಜಗ್ಗುತ
ಎಳೆಯ ಕಣ್ಣು ಹೊಂಚುತಿದೆ
ಎಂದು ಉಸುರಿ ಸರಿದಿದೆ
ಎಲರ ತಂಪು ತಿವಿದಿದೆ

ನಿಸಾರ್ ಅಹಮದ್–ಪಾಬ್ಲೋ ನೆರೂಡ : ಕಾವ್ಯಾನುಸಂಧಾನ

ಡಾ. ಅಮರೇಂದ್ರ ಶೆಟ್ಟಿ ಆರ್.
ಕನ್ನಡ ಸಹಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು

ಪಾಬ್ಲೋ ನೆರೂಡ ಲ್ಯಾಟಿನ್ ಅಮೇರಿಕಾದ ಚಿಲಿ ದೇಶದ ಸ್ಪ್ಯಾನಿಷ್ ಭಾಷೆಯ ಕವಿ. ಹುಟ್ಟಿದ್ದು 12 ಜುಲೈ 1904ರಲ್ಲಿ. ನಿಜವಾದ ಹೆಸರು ನೆಫ್ತಾಲಿ ರಿಕಾರ್ಡೋರೇಯಿಸ್. ರೆಸಿಡೆನ್ಸ್ ಆಫ್ ಅರ್ಥ್, ಕ್ಯಾಂಟೋಜನರಲ್, ಒನ್ ಹಂಡ್ರೆಡ್ ಲವ್ ಸಾನೆಟ್ಸ್, ಎಕ್ಸ್‌ಟ್ರಾ ವಗೇರಿಯ, ಎಲಿಮೆಂಟಲ್‌ಓಡ್ಸ್, ಫುಲ್ಲಿಎಂಫವರ್ಡ್ – ಇವು ನೆರೂಡನ ಮುಖ್ಯ ಕೃತಿಗಳು. ನೆರೂಡ 40 ಮುಖ್ಯ ಕಾವ್ಯಕೃತಿಗಳನ್ನು–ಒಟ್ಟಾರೆ ನಾಲ್ಕು ಸಾವಿರ ಕವಿತೆಗಳನ್ನು ಬರೆದಿದ್ದಾನೆ. ಆತ್ಮಕತೆಯೊಂದನ್ನು ಬಿಟ್ಟರೆ ನೆರೂಡ ಜೀವನದುದ್ದಕ್ಕೂ ಕಾವ್ಯವನ್ನಷ್ಟೇ ಬರೆದ. ಅವನು ಸಂಪೂರ್ಣಕಾವ್ಯಮಾರ್ಗಿ.

ಪಾಬ್ಲೋ ನೆರೂಡನ ಸಾಹಿತ್ಯ ಸಾಕಷ್ಟು ಪ್ರಮಾಣದಲ್ಲಿ ಕನ್ನಡಕ್ಕೆ ಬಂದಿದೆ. ನಿಸಾರರು ಮಾಡಿದ ನೆರೂಡನ ಪದ್ಯಗಳ ಅನುವಾದಗಳು 1970ಕ್ಕಿಂತ ಮುಂಚೆಯೇ ಪ್ರಬುದ್ಧ ಕರ್ನಾಟಕ, ಕೆಂಬಾವುಟ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದವು. 1976 ರಲ್ಲಿ ತೇಜಸ್ವಿನಿ ನಿರಂಜನ ಅನುವಾದ ಮಾಡಿದ ನೆರೂಡನ 25 ಕವನಗಳು 'ಮರಳಿ ಬರುವೆ' ಎನ್ನುವ ಹೆಸರಿನಲ್ಲಿ ಪ್ರಕಟವಾಯಿತು. 1983ರಲ್ಲಿ ನಿಸಾರರು 43 ಕವಿತೆಗಳನ್ನು ಅನುವಾದಿಸಿ 'ಬರೀ ಮರ್ಯಾದಸ್ಥರೇ' ಎನ್ನುವ ಹೆಸರಿನಲ್ಲಿ ಪ್ರಕಟಿಸಿದರು. ಜ.ನಾ. ತೇಜಶ್ರೀ ಯವರು ಅನುವಾದಿಸಿದ ನೆರೂಡನ ಪದ್ಯಗಳ ಸಂಕಲನಗಳು–2009ರಲ್ಲಿ 'ಕಡಲ ತಡಿಯ ಗುಡಾರ' ಹಾಗೂ 2015ರಲ್ಲಿ 'ನನ್ನೊಳಗೆ ನಿನ್ನ ನಡಿಗೆ' ಪ್ರಕಟವಾದವು. 2017ರಲ್ಲಿ ಡಾ. ಓ.ಎಲ್. ನಾಗಭೂಷಣಸ್ವಾಮಿಯವರು ನೆರೂಡನ ಆತ್ಮಕತೆ 'ಮೆಮಾಯರ್ಸ್' ಕೃತಿಯನ್ನು 'ಪಾಬ್ಲೋ ನೆರೂಡ ನೆನಪುಗಳು' ಎನ್ನುವ ಹೆಸರಿನಲ್ಲಿ ಅನುವಾದಿಸಿದರು. ಇನ್ನುಳಿದಂತೆ ನಯನಾ ಕಾಶ್ಯಪ್ ನೆರೂಡನ ಜೀವನಸ್ಮೃತಿಗಳ ಕೆಲವು ಭಾಗಗಳನ್ನು ಅನುವಾದಿಸಿದ್ದಾರೆ. ನಿಸಾರ್, ತೇಜಸ್ವಿನಿ ನಿರಂಜನ, ಜ.ನಾ. ತೇಜಶ್ರೀ, ಓ.ಎಲ್. ನಾಗಭೂಷಣ, ಲಂಕೇಶ್, ಕಾಳೇಗೌಡ ನಾಗವಾರ, ಬಾಗೇಶ್ರೀ– ಇವರೆಲ್ಲರೂ ಅನುವಾದ ಮಾಡಿರುವ ನೆರೂಡನ ಪದ್ಯಗಳ ಸಂಖ್ಯೆ ಸುಮಾರು 150 ಇದ್ದಿರಬಹುದು. ಸ್ವಾರಸ್ಯವೆಂದರೆ, ನೆರೂಡನ ಪದ್ಯಗಳ ಸಂಖ್ಯೆ ನಾಲ್ಕು ಸಾವಿರ. (ನೆರೂಡನ ಸಮಗ್ರಕಾವ್ಯದ ಸಂಪುಟಗಳು ಎರಡು ಸಾವಿರಕ್ಕೂ ಹೆಚ್ಚು ಪುಟಗಳನ್ನು ಹೊಂದಿವೆ)

ತೇಜಸ್ವಿನಿ ನಿರಂಜನರವರು ಅನುವಾದಕ್ಕಾಗಿ ಆಯ್ಕೆ ಮಾಡಿರುವ ನೆರೂಡನ ಪದ್ಯಗಳು ನಿಸಾರ್, ತೇಜಶ್ರೀಯವರ ಆಯ್ಕೆಗಿಂತ ಭಿನ್ನವಾಗಿವೆ. ತೇಜಸ್ವಿನಿ ನಿರಂಜನರ ಅನುವಾದಗಳಲ್ಲಿ ಬಹುಪಾಲು ನೆರೂಡನ ರಾಜಕೀಯ ತಾತ್ವಿಕತೆಯನ್ನು ಬಿಂಬಿಸುವ ಅಥವಾ ಪ್ರತಿನಿಧಿಸುವ ಪದ್ಯಗಳೇ ಹೆಚ್ಚಿವೆ. ನಿಸಾರರಲ್ಲೂ ನೆರೂಡನ ರಾಜಕೀಯ

ನಿಲುವಿನ ಪದ್ಯಗಳೇ ಹೆಚ್ಚಿದ್ದರೂ ಆಯ್ಕೆಯಲ್ಲಿ ಸ್ವಲ್ಪಎಚ್ಚರ ವಹಿಸಿದ್ದಾರೆ.

ಯಾವುದೇ ಕೃತಿಯನ್ನು ಪಠ್ಯವೊಂದರ ಮೂಲಭಾಷೆಯಿಂದ ಅನುವಾದ ಮಾಡುವುದು ಯಾವಾಗಲೂ ಅರ್ಥಪೂರ್ಣ. ತನ್ನ ಮಣ್ಣಿನ ಜೊತೆಗೆ ಗಾಢ ನಂಟನ್ನು ಕಟ್ಟಿಕೊಂಡ ಪಾಬ್ಲೋ ನೆರೂಡನಂತಹ ಕವಿಯ ಪದ್ಯಗಳು ಮೂಲ ಸ್ಪ್ಯಾನಿಷ್ ಭಾಷೆಯ ಬದಲು ಇಂಗ್ಲಿಷಿನ ಮೂಲಕ ಕನ್ನಡದಂತಹ ಭಾಷೆಗೆ ಬಂದರೆಅಲ್ಲಿ ಹೇಗೆ ತಾನೇ ಸ್ಪ್ಯಾನಿಷ್ ಭಾಷೆಯ ಶಬ್ದ ಲಯ ಹಾಗೂ ಅರ್ಥ ಲಯಗಳು ಉಳಿದಿರಲು ಸಾಧ್ಯ? ಅದರೂ ಏನೂ ಮಾಡುವಂತಿಲ್ಲ. ಸ್ಪ್ಯಾನಿಷ್ ಬಾರದವರಿಗೆ ಆ ಭಾಷೆಯಕೃತಿಯನ್ನು ತಮ್ಮ ಭಾಷೆಗೆ ತಂದುಕೊಳ್ಳಲು ಇಂಗ್ಲಿಷ್ ಅನಿವಾರ್ಯವಾಗಿದೆ.

ನಿಸಾರ್ ಕನ್ನಡದ ಮುಖ್ಯ ಕವಿಗಳಾಗಿರುವಂತೆ ಅತ್ಯುತ್ತಮ ಅನುವಾದಕರು ಕೂಡ ಹೌದು. ಕವನದ ಭಾವವಾಹಕದಂತೆ ಕೆಲಸ ಮಾಡುವ ಶಬ್ದ, ಕವನದ ಆಶಯವನ್ನು ಸಮರ್ಥವಾಗಿದಾಟಿಸುವ ಭಾಷೆಯ ಆಂಗಿಕತೆ, ಮೂಲ ಕವನದ ಧ್ವನಿಯ ಏರಿಳಿತಗಳ ಸರಿಯಾದ ಗ್ರಹಿಕೆ, ಮುಖ್ಯವಾಗಿ ಯಾವುದೇ ಮುಕ್ತ ಛಂದದ ಕಾವ್ಯಕ್ಕೆ ಸಲೀಸಾಗಿ ಒಗ್ಗಿಕೊಳ್ಳುವ ಕಾವ್ಯಶೈಲಿ – ಇವೆಲ್ಲ ಅನುವಾದಕರಾಗಿ ನಿಸಾರರಿಗೆ ಇರುವ ಅನುಕೂಲಗಳು. ಹಾಗಾಗಿಯೇ ನಿಸಾರ್ ನೆರೂಡನನ್ನು ತುಂಬ ಸೊಗಸಾಗಿ ಕನ್ನಡಕ್ಕೆ ತರಲು ಸಾಧ್ಯವಾಗಿದೆ. ನಿಸಾರ್ ಅನುವಾದದಲ್ಲಿ ಕೆಲವು ಕುತೂಹಲಕರ ತಂತ್ರಗಳನ್ನು ಬಳಸುತ್ತಾರೆ. ಅಂದರೆ ಛಂದಸ್ಸಿನ ಮರು ವಿನ್ಯಾಸ, ದೇಶೀಯ ನುಡಿಗಳ ಬಳಕೆ, ಪ್ರಾಸ ಬಳಕೆ, ಅರ್ಥದ ರೂಪಾಂತರ ಇತ್ಯಾದಿ.

ನೆರೂಡನ Residence on Earth-II ಎನ್ನುವ ಕವನ ಸಂಕಲನದಲ್ಲಿ Death alone ಎನ್ನುವ ಪದ್ಯವಿದೆ. ಅದನ್ನು ನಿಸಾರ್ 'ಕೇವಲ ಸಾವೊಂದೇ' ಎನ್ನುವ ಶೀರ್ಷಿಕೆ ನೀಡಿ ಅನುವಾದಿಸಿದ್ದಾರೆ. ಸಾವಿನ ದಟ್ಟ ಅನುಭವವನ್ನು, ತೀವ್ರ ತಲ್ಲಣಗಳನ್ನು ದಾಖಲಿಸುವ ಪದ್ಯ ಇದು.

'Death alone'
I see when alone at times,
coffins under sail
setting out with the pale dead,
women in their dead braids
.....

ನಿಸಾರರ ಅನುವಾದ

'ಕೇವಲ ಸಾವೊಂದೇ':
ಕೆಲವೊಮ್ಮೆ ಒಬ್ಬನೇ ವೀಕ್ಷಿಸುತ್ತೇನೆ:
ಹಾಯಿಪಟವಿರದ ಚಟ್ಟಗಳು
ಸತ್ತು ಸುಣ್ಣವಾದವರ, ನಿರ್ಜೀವ ಹೆರಳಿನ ಸುಮಂಗಲಿಯರ,
ಅಪ್ಸರೆಯರಂತೆ ಬಿಳಿದಾದ ಅಡಿಗೆಭಟ್ಟರ,
ಸಾರ್ವಜನಿಕ ಅಧಿಕಾರಿಗಳ ಕೈ ಹಿಡಿದ ಶೋಕತಪ್ತ
ಕನ್ಯೆಯರ ಹೊತ್ತ ಚಟ್ಟಗಳು
ಕೆಂಪುನದಿಯಲ್ಲಿ ಊರ್ಧ್ವಗಾಮಿ ಮೃತರ ನದಿಯನ್ನು

ಸಾವಿನಾರ್ಭಟದಿಂದ ಪಟಪಟಿಸುವ ಹಾಯಿಪಟಗಳಿಂದ,
ಮೃತ್ಯುವಿನ ಮೌನಮಯ ಸದ್ದಿನಿಂದ ಎದುರು ಹಾಯುವುದನ್ನು
ಒಬ್ಬನೇ ವೀಕ್ಷಿಸಿದ್ದೇನೆ.

–ಮತ್ತೆ ಮತ್ತೆ ಹಾಜರಾಗುವ ಪ್ರಾಸ, ದೀರ್ಘಸ್ವರಗಳು, ಪದ ಹಾಗೂ ವಾಕ್ಯಗಳಲ್ಲಿನ ಸರಾಗ ಚಲನೆ ಮತ್ತು ವಿಶಿಷ್ಟ ಲಯಬದ್ಧತೆಯ ಕಾರಣದಿಂದ ಗಾಢ ವಿಷಾದದ ಈ ಪದ್ಯಕ್ಕೆ ಒಂದು ಘನತೆಯ ನಡಿಗೆದಕ್ಕಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಚಟ್ಟಗಳು, ಸತ್ತು ಸುಣ್ಣವಾದವರು, ಸುಮಂಗಲಿಯರು, ಅಡಿಗೆಭಟ್ಟರು ಇವೇ ಮುಂತಾದ ಸ್ಥಳೀಯ ನುಡಿಗಳು ಪದ್ಯವನ್ನು ಕನ್ನಡದ ಸಂವೇದನೆಗೆ ಹತ್ತಿರವಾಗಿಸಿವೆ.

ಇನ್ನೊಂದು ಮಾತು: ನೆರೂಡನ ಕಾವ್ಯವೆಂದರೆ ಪ್ರತಿಮೆ– ರೂಪಕಗಳಿಂದ ಕಿಕ್ಕಿರಿದ ಕಾವ್ಯ. ಹಾಗಾಗಿ ನೆರೂಡನ ಕಾವ್ಯವನ್ನು ಕನ್ನಡಕ್ಕೆ ತರುವಾಗ ನಿಸಾರರಿಗೆ ಇದ್ದಿರಬಹುದಾದ ಸವಾಲು ದೊಡ್ಡದೇ ಹೌದು. ನೆರೂಡನ Residence on Earth-III ಸಂಕಲನದ I'm Explaining A Few Things ಎನ್ನುವ ಪದ್ಯವನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

I'm Explaining A Few Things:
You are going to ask; and where are the lilacs?
and the poppy-petalledmetaphysitÄUÀcs?
and the rain repeatedly spattering
it's words and drilling them full
of a apertures and birds?
I'll tell you all the news.

ನಿಸಾರರ ಅನುವಾದ:

'ನೀವು ಕೇಳುತ್ತೀರಿ'
ನೀವು ಕೇಳುತ್ತೀರಿ : ಸರಿಯಪ್ಪ, ಅವನ ಪದ್ಯಗಳಲ್ಲಿ ಲೈಲ್ಯಾಕ್ ಪುಷ್ಪಗಳೆಲ್ಲಿ?
ಅಫೀಮು ಹೂವಲ್ಲಿ ಮುಸುಕು ಹಾಕಿ ಮಲಗಿರುವಅಧ್ಯಾತ್ಮವೆಲ್ಲಿ?
ಹಚ್ಚನೆ ಕಣಿವೆ, ಹಕ್ಕಿಗಳು ಹೊರಹೊಮ್ಮಿ ನಿಲುವನಕ
ತನ್ನ ಶಬ್ದಗಳನ್ನು ಆಗಿಂದಾಗ್ಗೆಜಡಿವ ಮಳೆಯೆಲ್ಲಿ?

– ಕನ್ನಡದ ನುಡಿಗಟ್ಟು, ಲಯ ಹಾಗೂ ವಿಶಿಷ್ಟ ಸಂವಹನ ಗುಣವನ್ನು ಸೊಗಸಾಗಿ ದುಡಿಸಿಕೊಂಡಿರುವ ಅನುವಾದವಿದು.

ನೆರೂಡನ ಮತ್ತೊಂದು ಪ್ರಸಿದ್ಧ ಪದ್ಯವಿದೆ. ಅದರ ಹೆಸರು 'The People'. ಇದನ್ನು ನಿಸಾರ್ ಅನುವಾದಿಸಿಲ್ಲ. ಆದರೆ ತೇಜಸ್ವಿ ನಿರಂಜನ ಅದ್ಭುತವಾಗಿ ಅನುವಾದಿಸಿದ್ದಾರೆ. ಅದರ ಒಂದು ಭಾಗ ಹೀಗಿದೆ:

ಅವನು ಜೀವಿಸಿದ್ದ ಕಡೆ
ಮನುಷ್ಯ ಮುಟ್ಟಿದ್ದೆಲ್ಲ ಬೆಳೆಯುತ್ತಿತ್ತು; ಸ್ನೇಹಪರವಲ್ಲದ ಕಲ್ಲುಗಳನ್ನು
ಆತನ ಕೈಗಳು ಕಡೆದಾಗ
ಅವು ರೂಪ ತಳೆದು ಆಕಾರ ತಳೆದು
ಕಟ್ಟಡಗಳ ಸೂಕ್ಷ್ಮ ಸ್ಪಷ್ಟತೆಯನ್ನು ಒಂದೊಂದಾಗಿ ಪಡೆದವು.

.. .. ..

ಮಾರುಕಟ್ಟೆಯೊಳಗೆ ವಸಂತ ಹರಿದು ಬಂತು.

– ನೆರೂಡನ ಕಾವ್ಯದ ಸೂಕ್ಷ್ಮಗಳೆಲ್ಲವನ್ನೂ ಈ ಅನುವಾದ ದಕ್ಕಿಸಿಕೊಂಡಂತೆ ಭಾಸವಾಗುತ್ತದೆ. ನೆರೂಡನ ಪ್ರಕಾರ, ಅವನ ಚಿಲಿ ದೇಶದ ಜನತೆ ಮಹಾ ಕಷ್ಟ ಸಹಿಷ್ಣುಗಳು. ಎಷ್ಟು ಸಲ ಸೋತರೂ ಮತ್ತೆ ಮತ್ತೆ ಪುಟಿದೇಳುವ ಅನನ್ಯಚೇತನರು. ಬಹುಮುಖ್ಯವಾಗಿ ಮಹಾ ಆತ್ಮಾಭಿಮಾನಿಗಳು ಅವರು. ಚಿಲಿ ಪ್ರಜೆಯ ಸೃಷ್ಟ್ಯಾತ್ಮಕತೆಯನ್ನು, ಜೀವಪರತೆಯನ್ನು, ಕ್ರಿಯಾಶೀಲತೆಯನ್ನು, ಬಹುಮುಖ್ಯವಾಗಿ ಅವರ ಘನತೆವೆತ್ತ ಬದುಕನ್ನು ನೆರೂಡ ಮೈದುಂಬಿ ವರ್ಣಿಸುತ್ತಾನೆ. ಅದೂ ವಿದೇಶೀ ಬಂಡವಾಳಶಾಹಿಗಳ ಆಕ್ರಮಣಕ್ಕೆ ಸಿಲುಕಿ ಬದುಕು ನಜ್ಜುಗುಜ್ಜಾಗಿದ್ದರೂ ತನ್ನ ಜನರ ಮುಖದಲ್ಲಿ ಮಂದಹಾಸ ಮಾಸುವುದಿಲ್ಲ ಎನ್ನುವ ನಂಬಿಕೆ ಅವನದು. ತನ್ನ ನಾಡಿನ ಬಗೆಗೆ ನೆರೂಡನಿಗೆ ಸಿನಿಕತನ ಇಲ್ಲವೇಇಲ್ಲ.

ನೆರೂಡನ ಈ ಪದ್ಯದ ಜೊತೆಗೆ ನಿಸಾರರ ಬಹು ಜನಪ್ರಿಯವಾಗಿರುವ 'ಕುರಿಗಳು ಸಾರ್ ಕುರಿಗಳು' ಪದ್ಯವನ್ನು ತಾತ್ವಿಕಕಾರಣಕ್ಕಾಗಿ ಇಟ್ಟು ನೋಡಬಹುದು.

ಮಂದೆಯಲಿ ಒಂದಾಗಿ, ಸ್ವಂತಿಕೆಯೇ ಬಂದಾಗಿ
ಇದರ ಬಾಲ ಅದು, ಮತ್ತೆಅದರ ಬಾಲ ಇದು ಮೂಸಿ
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲಿಕಡ್ಡಿ ಮೇವು, ಅಂಡಲೆಯುವ ನಾವು ನೀವು
ಕುರಿಗಳು ಸಾರ್ ಕುರಿಗಳು

ನೆರೂಡನ 'ದಿ ಪೀಪಲ್' ಪದ್ಯ ಮತ್ತು ನಿಸಾರರ 'ಕುರಿಗಳು ಸಾರ್ ಕುರಿಗಳು' ಪದ್ಯಗಳ ನಡುವೆ ಇರುವ ತಾತ್ವಿಕತೆ ಹಾಗೂ ಲೋಕದೃಷ್ಟಿಗಳ ವ್ಯತ್ಯಾಸ ಗಮನಿಸಿ. ಅಂತಃಕರಣ, ವ್ಯಂಗ್ಯ, ವಿಡಂಬನೆ, ಹಾಸ್ಯ, ಕಟಕಿ, ಅದರ ಜೊತೆಗೆ ಗಾಢ ವಿಷಾದ ತುಂಬಿದ ಪದ್ಯ ನಿಸಾರರದು. ಹಾಗೆಯೇ ಆ ಪದ್ಯದ ಲಯಗಾರಿಕೆ ಕೂಡ ಬೆರಗಾಗಿಸುವಂತದ್ದು. ನೆರೂಡನ 'ದಿ ಪೀಪಲ್' ಕಾವ್ಯದಲ್ಲಿ ಎಲ್ಲ ಅತ್ಯುತ್ತಮ ಕಾವ್ಯಾಂಶಗಳ ಜೊತೆಗೆ, ತನ್ನ ನಾಡಿನ ಸಾಮಾನ್ಯ ಜನರ ಬಗೆಗೆ ಅಗಾಧವಾದ ಶ್ರದ್ಧೆ, ನಂಬಿಕೆ ತುಂಬಿದೆ.

ಅನುವಾದಕನು ಕೃತಿಯೊಂದನ್ನು ಆಯ್ಕೆ ಮಾಡಿಕೊಳ್ಳುವಾಗ ತಿಳಿದೋ ತಿಳಿಯದೆಯೋ ಆಯಾಕಾಲದ ಸಾಂಸ್ಕೃತಿಕ ಮತ್ತು ರಾಜಕೀಯ ಸಂಗತಿಗಳು ಪ್ರಧಾನ ಪಾತ್ರ ವಹಿಸುತ್ತವೆ ಎಂದು ಹೇಳಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯು ತನ್ನ ಸಾಂಸ್ಕೃತಿಕ ಐಕಾನ್ ಎನ್ನುವಂತೆ ಶೇಕ್ಸ್‌ಪಿಯರನನ್ನು ತನ್ನ ಅಧೀನಕ್ಕೆ ಒಳಪಟ್ಟ ದೇಶಗಳಲ್ಲಿ ಚಾಲ್ತಿಗೆ ತಂದಿತು. ನಿಸಾರರು ಶೇಕ್ಸ್‌ಪಿಯರನ ಒಥೆಲೋ ಮತ್ತು 'ಮಿಡ್‌ಸಮ್ಮರ್ ನೈಟ್ಸ್‌ಡ್ರೀಮ್' ಎಂಬ ಎರಡು ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನೆರೂಡ ಅಮೇರಿಕಾದಂತಹ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳ ಎದುರು ಹೋರಾಡಿದವನು. ನಿಸಾರರು ನೆರೂಡನ ಕಾವ್ಯಗಳನ್ನೂ ಅನುವಾದ ಮಾಡಿದ್ದಾರೆ. ನಿಸಾರರು ಅನುವಾದಕ್ಕಾಗಿ ಮಾಡಿಕೊಂಡಿರುವ ಕೃತಿಗಳ ಆಯ್ಕೆಯಲ್ಲಿ ಕಾಣುವ ವೈರುಧ್ಯವು ವಿಸ್ಮಯಕಾರಿಯಾದುದು.

ನೆರೂಡನ ಮುಖ್ಯ ಪದ್ಯಗಳಲ್ಲಿ 'United Fruit Company'ಯೂ ಸೇರಿದೆ.

ಬಂಡವಾಳಶಾಹಿ ಶಕ್ತಿಗಳು ತನ್ನ ದೇಶವನ್ನು ನಿರ್ದಯೆಯಿಂದ ದೋಚುತ್ತಿರುವುದರ ಕುರಿತ ತೀವ್ರ ಆಕ್ರೋಶ ತೋರುವ ಪದ್ಯ ಇದು. ನಿಸಾರರೂ ಅಮೇರಿಕಾದಂತಹ ಬಂಡವಾಳಶಾಹಿ ಶಕ್ತಿಗಳ ವಿರುದ್ಧ ಬರೆದ ಪದ್ಯವೊಂದಿದೆ. ಅದರ ಹೆಸರು 'ಅಮೇರಿಕ ಅಮೇರಿಕ'.

ನೆರೂಡನ 'United Fruit Company', ನಿಸಾರರ ಅನುವಾದ:

ದೊಡ್ಡಸ್ತಿಕೆ, ಧ್ವಜ, ಸ್ವಾತಂತ್ರ್ಯಗಳನ್ನು
ತಂದಿತ್ತ ವೀರರ ಅಸ್ಪಷ್ಟ ವಿರಾಮ ಭಂಗಿಗಳ ಮೇಲೆ
ಜೋಲುಮೊಗದ ಮೃತರ ಮೇಲೆ
ಸಂಗೀತ ಪ್ರಹಸನಾಲಯವನ್ನು ಆ ಜನ ಸ್ಥಾಪಿಸಿದರು
ಸಾಹಸೋದ್ಯಮಗಳನೆಲ್ಲ ಬಲಾತ್ಕಾರದಿಂದ ಅಪಹರಿಸಿದರು.

ನಿಸಾರರ 'ಅಮೇರಿಕ ಅಮೇರಿಕ' ಪದ್ಯ:

ಸದ್ದಿರದೆ ಸುದ್ದಿಯಲಿ ನನ್ನ ಕಬಳಿಸುತ್ತಿರುವ
ನಿನ್ನ ಉತ್ಕೃಷ್ಟಕ್ಕೆ ಕರುಬು ಹಳಿದಾಗಲೆಲ್ಲ
ನನ್ನ ಕಡುದಾರಿದ್ರ್ಯ, ಜನಸಂಖ್ಯೆ, ಭೂಗೋಳ
ನಾಲಗೆಯ ನಿಲಿಸುತ್ತದೆ.

ನಿಸಾರರ ಪದ್ಯ ಹೇಳುತ್ತಿರುವುದು ಅಮೇರಿಕಾದಂತಹ ಬಲಿಷ್ಟ, ಶ್ರೀಮಂತ ದೇಶ ತನ್ನಲ್ಲಿ ಹುಟ್ಟಿಸುತ್ತಿರುವ ಅಸೂಯೆ ಮತ್ತು ಕೀಳರಿಮೆಗಳನ್ನು ಮಾತ್ರ. ಅಂದರೆ, ಒಂದೇ ವಸ್ತು ಎರಡು ಭಿನ್ನದೇಶ/ ಸಂಸ್ಕೃತಿಗಳಿಗೆ ಸೇರಿದ ಕವಿಗಳಲ್ಲಿ ಸೃಷ್ಟಿಸಿರುವ ಭಿನ್ನ ಭಾವಪ್ರಪಂಚಗಳಿಗೆ ಉದಾಹರಣೆಯಾಗಿ ನೆರೂಡನ 'ಯುನೈಟೆಡ್ ಫ್ರೂಟ್ ಕಂಪೆನಿ' ಮತ್ತು ನಿಸಾರರ 'ಅಮೇರಿಕ ಅಮೇರಿಕ' ಪದ್ಯಗಳನ್ನು ಪರಿಗಣಿಸಬಹುದು.

ಕೊನೆಯದಾಗಿ ಒಂದು ಮಾತು:

ನೆರೂಡನ 'ArsPoetica' ಪದ್ಯವನ್ನು ನಿಸಾರರರು 'ಮಬ್ಬು ಶೂನ್ಯಗಳ ನಡುವೆ' ಎನ್ನುವ ಶೀರ್ಷಿಕೆಯಲ್ಲಿ ತುಂಬ ಸೊಗಸಾಗಿ ಅನುವಾದ ಮಾಡಿದ್ದಾರೆ. ಆ ಪದ್ಯ ಕವಿಯಾಗಿ ನಿಸಾರರ ವ್ಯಾಕುಲತೆ, ಅವರಕಾವ್ಯದ ವ್ಯಾಕುಲತೆ ಎರಡನ್ನೂ ಸಮರ್ಥವಾಗಿ ಧ್ವನಿಸುವಂತಿದೆ. ಅದರ ಒಂದು ಪುಟ್ಟ ಭಾಗವನ್ನು ಇಲ್ಲಿ ಗಮನಿಸಬಹುದು.

ನಿಸಾರರ ಅನುವಾದ:

'ಮಬ್ಬು ಶೂನ್ಯಗಳ ನಡುವೆ'
ಬಹುಶಃ ವ್ಯಥೆಯನ್ನೊಂದಿಷ್ಟು ಸಾಧುಗೊಳಿಸಿ
ಇದನ್ನು ಬೇರೆತರ ನುಡಿಯಬಹುದೆ?
ಸಕಲ ಸತ್ಯವನ್ನೂ ಒದರಿಬಿಟ್ಟರೆ
ಗಾಳಿ ಬಲವಾದ ಗುದ್ದಾಗಿ ನನ್ನೆದೆಗೆ ಬಡಿಯುತ್ತದೆ.

ಕಾವ್ಯದಲ್ಲಿ ತಮ್ಮ ವ್ಯಥೆಯನ್ನು ಒಂದಿಷ್ಟು ಸಾಧುಗೊಳಿಸಿ ಹೇಳಿದ ನಿಸಾರರು; ವ್ಯಥೆಯನ್ನು ಹೆಚ್ಚು ತಾತ್ವಿಕ ದಿಟ್ಟತನದಿಂದ ಹೇಳಿದ ನೆರೂಡ–ನಿಜಕ್ಕೂ ಕುತೂಹಲ ಮೂಡಿಸುವ ಕವಿಗಳು.

ಆಕರ ಕೃತಿಗಳು:

1. Selected Poems of Pablo Neruda: Edited and translated by Ben Belitt, Grove Press, Newyork (1963)
2. ಕೆ.ಎಸ್ ನಿಸಾರ್‌ಅಹಮದ್ ಸಮಗ್ರ ಕವಿತೆಗಳು, ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು. ವರ್ಷ: 1991
3. ಬರೀ ಮರ್ಯಾದಸ್ಥರೆ– ಲೇ: ನಿಸಾರ್‌ಅಹಮದ್, ಪ್ರ: ಹರ್ಷ ಪ್ರಕಾಶನ, ಬೆಂಗಳೂರು. ವರ್ಷ: 1983
4. ಮರಳಿ ಬರುವೆ– ಲೇ: ತೇಜಸ್ವಿನಿ ನಿರಂಜನ, ಪ್ರ: ಕಥಾ ಸಾಹಿತ್ಯ, ಬೆಂಗಳೂರು. ವರ್ಷ: 1976.
5. ನನ್ನೊಳಗೆ ನಿನ್ನ ನಡಿಗೆ– ಲೇ: ತೇಜಶ್ರೀ, ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ. ವರ್ಷ: 2015
6. ಪಾಬ್ಲೋ ನೆರೂಡ ನೆನಪುಗಳು; ಆತ್ಮಕತೆ– ಕನ್ನಡಕ್ಕೆ: ಓ.ಎಲ್.ನಾಗಭೂಷಣಸ್ವಾಮಿ, ಪ್ರ: ಲಡಾಯಿ ಪ್ರಕಾಶನ, ಗದಗ. ವರ್ಷ: 2017
7. ಮರುಮಾತು– ಲೇ: ಡಾ. ಅಮರೇಂದ್ರ ಹೊಲ್ಲಂಬಳ್ಳಿ, ಪ್ರ: ಸಿವಿಜಿ ಪ್ರಕಾಶನ, ಬೆಂಗಳೂರು. ವರ್ಷ: 2014
8. ತೌಲನಿಕ ಸಾಹಿತ್ಯ– ಲೇ: ದೇಜಗೌ, ಪ್ರ: ಬೆಂಗಳೂರು ವಿಶ್ವವಿದ್ಯಾಲಯ. ವರ್ಷ: 1995

❖❖❖

ಹವಳಗೊಕ್ಕಿನಿಂದ ಹೊರಟ
ಧವಳಗಾನ ಕೇಳಿದೆ
ಗಿಳಿಯಗೊರಲಗಾನವನ್ನು
ಗಾಳಿ ಹೊತ್ತು ಮೆರೆದಿದೆ
ನಾದಲಯವೆ ಹರಡಿದೆ

ನವಶೋಧಿತ ಮುರಗೋಡ ಶಾಸನ

ಡಾ. ಕೆ. ಎಸ್. ಪಾಟೀಲ
ಇತಿಹಾಸ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು
ಕಲಘಟಗಿ, ಧಾರವಾಡ ಜಿಲ್ಲೆ

ಪೀಠಿಕೆ

ಮುರಗೋಡ ಗ್ರಾಮವು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿದೆ. ಇದು ಸವದತ್ತಿಯಿಂದ 44 ಕಿ.ಮೀ ದೂರದಲ್ಲಿದ್ದು. ಪುರಾತನ ಸ್ಥಳವಾಗಿದೆ. ಮಹಾಭಾರತದ ಕಾಲಾವಧಿಯಲ್ಲಿ ಇದನ್ನು 'ಅಮರಕಲ್ಯಾಣ' ಎಂದು ಕರೆಯುತಿದ್ದರು. ನಂತರದಲ್ಲಿ 'ತ್ರಿಶಿಗಪುರ' ಎಂದು ಕರೆಯಲಾಯಿತು. ಅಂದು ಇದು ಕೂಹುಂಡಿ ಮೂರು ಸಾಸಿರ ಪ್ರದೇಶದ ಆಡಳಿತ ವಿಭಾಗದಲ್ಲಿ ಅಂತರ್ಗತವಾಗಿತ್ತು. ಪುರಾತನ ಇತಿಹಾಸ ಹೊಂದಿದ ಮುರಗೋಡವು ಕಲ್ಯಾಣದ ಚಾಳುಕ್ಯರು ಮತ್ತು ವಿಜಯನಗರದ ಅರಸರ ಕಾಲಾವಧಿಯಲ್ಲಿ ಐತಿಹಾಸಿಕ ಸ್ಥಳವಾಗಿತ್ತು. ಎಂಬುದಕ್ಕೆ ಇವರ ಆಡಳಿತ ಅವಧಿಯಲ್ಲಿ ದೊರೆತ ಶಾಸನಗಳಿಂದ ಮಾಹಿತಿ ಲಭ್ಯವಾಗುತ್ತದೆ.

ಪ್ರಸ್ತುತ ಮುರುಗೋಡದಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಾಲಯದ ಉತ್ತರದ ಪ್ರವೇಶ ದ್ವಾರದಲ್ಲಿ ದೊರೆತ ಈ ನವಶೋಧಿತ ಶಾಸನವು ಅಲ್ಲಲ್ಲಿ ತ್ರುಟಿತಗೊಂಡಿದೆ. ಇದು ವಿಜಯನಗರ ಮನೆತನದ ಅರಸನಾದ ಶ್ರೀ ವೀರ ಪ್ರತಾಪ ವೀರಸದಾಶಿವರಾಯ (ವೀರಸದಾಶಿವರಾಯ) (ಕ್ರಿ.ಶ.1542–1570)ನ ಆಳ್ವಿಕೆಗೆ ಸಂಬಂಧಿಸಿದ್ದಾಗಿದೆ. ಇದನ್ನು ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಶಿಲೆಯ ಮೇಲೆ ಬರೆಯಲಾಗಿದೆ. ಇದರಲ್ಲಿ ಒಟ್ಟು 20 ಸಾಲುಗಳಿವೆ. ಶಾಸನವನ್ನು ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆಯಲಾಗಿದೆ. ಒಂಭತ್ತನೇ ಸಾಲಿನಿಂದ ಹದಿಮೂರನೇ ಸಾಲಿನವರೆಗೆ ಅಲ್ಲಲ್ಲಿ ಅಕ್ಷರಗಳು ತ್ರುಟಿತಗೊಂಡಿವೆ. ಈ ಶಾಸನವು "Annual Report on South Indain Epigraphy"-1940-41 ಅಪೆಂಡಿಕ್ಸ್ ಇ ನಂ–67, ಪುಟಸಂಖ್ಯೆ–245ರಲ್ಲಿ ಕೇವಲ ವರದಿಯಾಗಿದೆ. ಆದರೆ ಇಲ್ಲಿಯವರೆಗೂ ಈ ಶಾಸನದ ಪಾಠ ಪ್ರಕಟವಾಗಿಲ್ಲ, ಹೀಗಾಗಿ ಶಾಸನದ ಪಾಠ, ಸಾರಾಂಶ ಮತ್ತು ಮಹತ್ವವನ್ನು ಈ ಕೆಳಗಿನಂತೆ ಗಮನಿಸಬಹುದು.

ಶಾಸನದ ಪಾಠ

1) ಜ ನಮಃ ಶಿವಾಯ । ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ.
2) ತ್ರಯಿಳೋಕ್ಯ ಮೂಲಸ್ತಂಭಾಯ ಸಂಭವೆ । ಸ್ವಸ್ತಿ ಶ್ರೀ ಜಯಾಭ್ಯುದಯ ಸಾಲಿವಾಹನ ಸಕ
3) ವರ್ಷ 1479ನೆಯ ವಿರೋಧಿಕೃತ ಸಂವತ್ಸರದ ಶ್ರಾವಣ ಬ.8. ಸೋಮವಾರದಲು ಶ್ರೀ [ಮ]
4) ರಾಜಾಧಿರಾಜ ಪರಮೇಶ್ವರ ಶ್ರೀವೀರಪ್ರತಾಪ ವೀರಸದಾಶಿವರಾಯ ಮಹಾ.

5) ರಾಯರು ಸುಖ ಸಂಖಥಾ ವಿನೋದದಿಂದ ಚಂದ್ರಾರ್ಕ್ನ ತಾರಂಬರಂ ಸಲುಉತ್ತಮಿಲರೆ ಶ್ರೀ
6) ಮನ್ಮಹಾ ಮಂಡಲೇಶ್ವರ ಬಾಚಿರಾಜ ನರಸರಾಜಯ್ಯದೇವ ಮಹಾ ಆರಸು ನ. ಣಯ್ಯಕೆ.
7) .ರಾದ ಮುರುಗೋಡ ಪೇಡಿನಾಯಕರು ಮಲ್ಲಿಕಾರ್ಜುನ ದೇವರಿಗೆ ಕೊಟ್ಟ ಭೂದಾನದ.
8) .ಸು [ದಾ] ನ ಕ್ರಮವೆಂತೆಂದರೆ ಮಲ್ಲಿಕಾರ್ಜುನ ದೇವರ ಮಾಂನ್ಯದ ಹೊಲ ನಡ
9) .ರಣನಾಯಕನು ಆ . . . ಮಾಡಿ ನಾಲ್ಕು ಹೊಲನಳ ಮತ್ತ ಕೋಲಲು ದೇವ. . . .
10) ಸಂಬಂಧ. . . . ತ್ಥರ ವರೋವಂ ಮಾಡಿ ನಂ
11) . ಲೋಕ . . . . . ಕು ಎಂದುಗೆ ಕಲ್ಲಆಸ್ವ (ವಿಧಿಯ) ಪುಣ್ಯ ಕಾಲದಲು
12) . . ಕೇದಾರೆಯ ನೂ ಯೆರೆದು ಬಿಟ್ಟು ಕೊಟ್ಟರು
13) ಲನು. . ಹೊಲನನು ಶಿವಾಯ ನಂ ಮಾಡಿಯನರಣ
14) ಯ್ಯಗೆ ಪುಣ್ಯವಾಗಲಿಯೆಂದು ನಮ್ಮ ತಂದೆ ಮುಮ್ಮಡಿ ನಾ
15) . . ಗ ಪುಣ್ಯ ಲೋಕವಾಗಬೇಕುಯೆಂದು । ದಾರೆಯನೂಯೆರೆದು [ಬಿ]
16) ಟ್ಟ ಸರ್ವ್ವ ಮಾನ್ಯದ ಹೊಲನ ಸೀಮೆ ಸಾಶನ ಆ ಹೊಲಕ್ಕೆ ಸಲುವ ಆ ಪ. .
17) ಗಡಿ ಸಾಮ್ಯವೆಂದು ಪಾಥರ ಶ್ರೀ ಮಲ್ಲಿಕಾರ್ಜುನದೇವರ ಪೂಜೆ ಪುನಸ್ಕಾರಕೆ ಆ
18) .ಮಾಡಿಕೊಂಡುಯಿ ಹದ. ಎಂದು ಕೊಟ್ಟ ಮಾನ್ಯದ
19) ಹೊಲಕ್ಕೆ ಮುಂದೆ ಆವನೊಬ್ಬನು ಅಳುಪಿದವ ಬಾಯಲ್ಲಿ ಕತ್ತೆ ತುಣ್ಣಿ.
20) ಆ ಹೊಲನ ಹೊಕ್ಕವನು ತಪ್ಪಲಾಗದು ಕೊಂಡವನ ಆ ಅಪಮಾನ.

ಶಾಸನದ ಸಾರಾಂಶ

ಶಾಸನವು ಶೈವ ಶ್ಲೋಕದೊಂದಿಗೆ ಪ್ರಾರಂಭವಾಗುತ್ತದೆ. ಎರಡನೆಯ ಸಾಲುಗಳಲ್ಲಿ ತೇದಿಯ ವಿವರಗಳಿದ್ದು ಶಾಲಿವಾಹನ ಶಕ ವರ್ಷ 1473ನೆಎಯ ವಿರೋಧಿಕೃತು ಸಂವತ್ಸರದ ಶ್ರಾವಣ ಬ.8 ಸೋಮವಾರದಲು ಎಂಬ ಪದಗಳು ಸ್ಪಷ್ಟವಾಗಿವೆ. ಆದ್ದರಿಂದ ಈ ತೇದಿಯನ್ನು ಕ್ರಿ.ಶ 1551 ಜುಲೈ 26 ರವಿವಾರಕ್ಕೆ ಸಮಾನವೆಂದು ಪರಿಗಣಿಸಬಹುದು. ಈ ಶಾಸನವು ವಿಜಯನಗರ ಮನೆತನದ ವೀರ ಸದಾಶಿವರಾಯನ ಆಳ್ವಿಕೆ ಮತ್ತು ಬಿರುದನ್ನು ಪರಿಚಯಿಸುತ್ತದೆ. ಈತನ ಆಳ್ವಿಕೆಯ ಕಾಲಾವಧಿಯಲ್ಲಿ ಮಹಾಮಂಡಳೇಶ್ವರನಾದ ಬಾಚಿರಾಜ ನರಸರಾಜಯ್ಯದೇವನು ಆಡಳಿತವನ್ನು ನಡೆಸುತ್ತಿರುವಾಗ ಮಹಾ ಅರಸರ ಪ್ರತಿನಿಧಿಯಾಗಿದ್ದ ಮುರುಗೋಡು ಪೆಡಿನಾಯಕನು ಮುರುಗೋಡಿನ ಮಲ್ಲಿಕಾರ್ಜುನದೇವರ ಪೂಜೆ ಇತ್ಯಾದಿ ಕಾರ್ಯನಿರ್ವಹಣೆಗಾಗಿ ಭೂದಾನ ಮಾಡಿದ ಬಗ್ಗೆ ಪ್ರಸ್ತಾಪಿಸುತ್ತದೆ. ಅಲ್ಲದೆ ಮಲ್ಲಿಕಾರ್ಜುನ ದೇವರ ಮಾನ್ಯದ ಹೊಲದ ಕುರಿತು ಚೆಕ್ ಬಂದಿಯನ್ನು ಸಹ ವಿವರಿಸಲಾಗಿದೆ. ಹಾಗೂ ಶಾಸನದ ಕೊನೆಯಲ್ಲಿ ಶಾಪಾಶಯವಿದೆ.

ಶಾಸನದ ಮಹತ್ವ

ಶಾಸನದಲ್ಲಿ ಸದಾಶಿವರಾಯನ ಬಿರುದನ್ನು ಪರಿಚಯಿಸುವುದರೊಂದಿಗೆ ಮಹಾಮಂಡಳೇಶ್ವರ ಬಾಚಿರಾಜ ನರಸರಾಜಯ್ಯದೇವನ ಹೆಸರು ಪ್ರಸ್ತಾಪವಾಗಿದೆ. ಈಗಾಗಲೇ ಮುರಗೋಡದಲ್ಲಿ ಮೂರು ಶಾಸನಗಳು ದೊರೆತಿದ್ದು. ಅವುಗಳಲ್ಲಿ ಮಹಾಮಂಡಳೇಶ್ವರ ಬಾಚಿರಾಜ ನರಸರಾಜಯ್ಯದೇವನ ಹೆಸರು ಪ್ರಸ್ತಾಪಗೊಂಡಿಲ್ಲ ಅಲ್ಲದೇ ಮುರುಗೋಡದ ಪೆಡಿನಾಯಕರು ಮಲ್ಲಿಕಾರ್ಜುನ ದೇವರಿಗೆ ನೀಡಿದ ಭೂದಾನದ ಪ್ರಸ್ತಾಪವು ಇನ್ನುಳಿದ ಶಾಸನಗಳಲ್ಲಿ ಗೋಚರಿಸುವುದಿಲ್ಲ ಭೂಮಿಯನ್ನು ದಾನ ನೀಡುವಾಗ ಅಳತೆ ಮಾಪನದ ಬಗ್ಗೆ ಪ್ರಸ್ತಾಪವಾಗಿರುವುದು ವಿಶೇಷವಾಗಿದೆ. ಶಾಸನದಲ್ಲಿ ಉಲ್ಲೇಖವಾಗಿರುವ ಶಾಸನೋಕ್ತ ಮಲ್ಲಿಕಾರ್ಜುನ ದೇವಾಲಯವೇ ಇಂದಿನ ಪ್ರಸ್ತುತ ಮಲ್ಲಿಕಾರ್ಜುನ ದೇವಾಲಯವಾಗಿದೆ. ಆದ್ದರಿಂದ ಈ ಮೇಲಿನ ವಿಷಯಗಳ ಕುರಿತು ಸಂಶೋಧನೆ ಮಾಡಲು ಅಪರೂಪದ ಆಕರಗಳಾಗಿವೆ.

ಅಡಿಟಿಪ್ಪಣಿಗಳು

1) A. R. S. I. E. 1940 -41 ಅಪೆಂಡಿಕ್ಸ್, ಇ.ನಂ–67, ಪುಟ–245
2) ಕಪ್ಪುಷಾಯಿಂದ ತೆಗೆದ ಪಡಿಯಚ್ಚಿನಿಂದ ಓದಲಾಗಿದೆ.
3) ಡಾ. ಕೆ.ಎಸ್. ಪಾಟೀಲ "ಸವದತ್ತಿ ತಾಲೂಕಿನ ಪುರಾತತ್ವ ಅನ್ವೇಷಣೆ" ಎಂ.ಫಿಲ್. ಪ್ರಬಂದ. ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

❖❖❖

ಕಿ.ರಂ. ನಾಗರಾಜ ಅವರ 'ಕಾಲಜ್ಞಾನಿ ಕನಕ' ಮತ್ತು 'ನೀಗಿಕೊಂಡ ಸಂಸ' ನಾಟಕಗಳು : ಒಂದು ವಿವೇಚನೆ

ಡಾ. ಮಾದಯ್ಯ ಮಾಕನಹಳ್ಳಿ
ಕನ್ನಡ ಸಹಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ

ಕನ್ನಡದ ಗಣನೀಯ ಚಿಂತಕರಾಗಿದ್ದ ಕಿ.ರಂ. ನಾಗರಾಜ ಅವರು ಬರೆದಿದ್ದರೆ ಹಲವು ಸಂಪುಟಗಳೇ ಆಗಿರುತ್ತಿದ್ದವು. ಆದರೆ ಬರೆದದ್ದು ಕಡಿಮೆ, ಉಪನ್ಯಾಸಗಳಲ್ಲೇ ತಾವು ಹೇಳಬಯಸಿದ್ದನ್ನು ಹೇಳುತ್ತಾ ಹೋದರು. ಅವರು ನಾಡಿನ ಹಲವು ಬಗೆಯ ಚಳವಳಿಗಳ ಸಂಗಾತಿ ಕೂಡ ಆಗಿದ್ದರು. ಸಂಸ್ಕೃತಿ, ಭಾಷೆ, ಸಮಾಜಗಳ ಬಗ್ಗೆ ಅಧಿಕೃತವಾಗಿ ಹಾಗೂ ಪ್ರಾಮಾಣಿಕವಾಗಿ ಮಾತಾಡಬಲ್ಲ ಬುದ್ಧಿಜೀವಿಯಾಗಿದ್ದ ಕಿ.ರಂ. ಕನ್ನಡನಾಡಿನ ಎಲ್ಲೆಡೆ ಹೊಸ ಅರಿವನ್ನು ಬಿತ್ತಿದವರು. ಸದಾ ಹೊಸ ಚಿಂತನೆಗಳ ಮೂಲಕ ಭಾಷಾ ಸಂಸ್ಕೃತಿಯನ್ನು ನಿರ್ಮಿಸುತ್ತಿದ್ದ ಕಿ.ರಂ. ಅವರು ಅನೇಕ ರೀತಿಯ ಪ್ರಯೋಗಗಳನ್ನು ನಡೆಸಿದ್ದಾರೆ. ವಿಮರ್ಶಾ ಕ್ಷೇತ್ರದಲ್ಲಷ್ಟೆ ಅಲ್ಲದೇ ನಾಟಕ ಮೊದಲಾಗಿ ಇತರ ವಿಭಾಗಗಳಲ್ಲೂ ಕೆಲಸ ಮಾಡಿದ್ದಾರೆ.

ಕಿ.ರಂ. ನಾಗರಾಜ್ ತಮ್ಮ ಮಾತಿನಲ್ಲೇ ರನ್ನ, ಪಂಪ, ಬೇಂದ್ರೆಯವರನ್ನು ಸೃಷ್ಟಿಸುತ್ತಿದ್ದ ವೈಖರಿ ಶ್ಲಾಘನೀಯವಾದದ್ದು. ಅವರು 'ಕಾಲಜ್ಞಾನಿ ಕನಕ' ಮತ್ತು 'ನೀಗಿಕೊಂಡ ಸಂಸ' ಎಂಬ ಎರಡು ನಾಟಕಗಳನ್ನು ವಿಭಿನ್ನ ಆಯಾಮಗಳಲ್ಲಿ ರಚಿಸಿದ್ದಾರೆ. ಈ ಎರಡು ನಾಟಕಗಳಲ್ಲೂ ಒಡಮೂಡಿರುವ ವಿಶಿಷ್ಟ ಚಿಂತನೆಗಳನ್ನು ವಿವೇಚನೆಗೆ ಒಳಪಡಿಸುವುದು ಸೂಕ್ತವೆನಿಸುತ್ತದೆ.

ಕಾಲಜ್ಞಾನಿ ಕನಕ

'ಕಾಲಜ್ಞಾನಿ ಕನಕ' ನಾಟಕದ ವಸ್ತು ಜೀವಪರವಾದದ್ದು, ಶಾಂತಿಪ್ರಿಯವಾದದ್ದು. ಸಮಾಜಪರ ಕಾಳಜಿಯದ್ದಾಗಿದೆ. ಕನಕದಾಸರ ಮೂಲಕ ಲೋಕಪ್ರಿಯವಾದ ಸಮಾನತೆಯ ತುಡಿತವನ್ನು ಈ ನಾಟಕದಲ್ಲಿ ಅನಾವರಣಗೊಳಿಸಿದ್ದಾರೆ. ಯುದ್ಧ ರಾಜ ರಾಜರ ಮಧ್ಯೆ ನಡೆದರೂ ಅದಕ್ಕೆ ತಲೆ ಕೊಡಬೇಕಾದವರು ಸಾಮಾನ್ಯರಾಗಿರುತ್ತಾರೆ, 'ಯುದ್ಧ ಮಾನವಲೋಕದ ಮಾಯದ ಗಾಯ' ಎಂಬ ಮಾತು ಇಡೀ ನಾಟಕದ ಕೇಂದ್ರವಾಗಿದೆ ಎಂದರೆ ತಪ್ಪಾಗಲಾರದು. ಪ್ರೇಮದಿಂದ ಮನುಷ್ಯರನ್ನು ಕಾಣಬೇಕು ಎಂಬುದು ಇಲ್ಲಿನ ಆಶಯ, ಯುದ್ಧವೇ ಒಂದು ಭೀಕರ ಪ್ರಳಯ. ಯುದ್ಧ ಮುಗ್ಧರನ್ನು, ಅರಳುವ ಪೀಳಿಗೆಯನ್ನು ನಾಶ ಮಾಡುತ್ತೆ, ಹೀಗೆ ಯುದ್ಧ ಮುಂದುವರಿಯುತ್ತಿದ್ದರೆ ಜಗತ್ತು ಒಂದು ದಿನ ಮನುಷ್ಯರೇ ಇಲ್ಲದ ಮರುಭೂಮಿ ಆಗುತ್ತೆ ಎಂಬ ಕನಕನ ಮಾತು ಕಿ.ರಂ. ಅವರ ಯುದ್ಧ ವಿರೋಧಿ ನಿಲುವನ್ನು ತಿಳಿಸುತ್ತದೆ.

ಜಾತಿ, ಕುಲ, ಮಡಿ ಹೆಸರಿನಲ್ಲಿ ಮನುಷ್ಯ ಕುಲವನ್ನೆ ಮೇಲು–ಕೀಳಂತೆ ಕಾಣುವ ಈ ವ್ಯವಸ್ಥೆಯ ವಿರುದ್ಧ ಕನಕ ಪ್ರತಿಭಟಿಸುತ್ತಾನೆ. 'ದೇವರನ್ನು ನೋಡುವುದು, ಅವನ ಜೊತೆ ಮಾತನಾಡುವುದು ಒಂದು ಸಾಧನೆಯ ಜಗತ್ತನ್ನು, ಜನರ ಜೀವನವನ್ನು ತಿಳಿದು

ಅವರೊಂದಿಗೆ ಸಮತೆಯ ಬಾಳನ್ನು ನಡೆಸುವುದು ಅವರನ್ನು ತಿಳಿದ ಹಾಗೆ' ಎಂಬ ಮಾತಿನ ಮೂಲಕ ಸಮಾನತೆಯ ಹಣತೆಯನ್ನು ಬೆಳಗಿಸಲು ಪ್ರಯತ್ನಿಸುವುದನ್ನು ಕಾಣಬಹುದು. ಉತ್ತಮರು ಎನಿಸಿಕೊಂಡವರು ಉನ್ಮತ್ತರಾಗಿ ಮಾತನಾಡಬಾರದು. ನೇಮ ಇಲ್ಲದೆ ನೀರಿನಲ್ಲಿ ಮುಳುಗಿ ನಾವು ಶುದ್ಧರಾದೆವು ಎಂದು ಭ್ರಮಿಸುವವರು ತೀರ್ಥಯಾತ್ರೆ ಮಾಡಿ ಹೆಮ್ಮೆ ಪಟ್ಟರೆ ಬಂದ ಭಾಗ್ಯವೇನು? ಎಂದು ವ್ಯವಸ್ಥೆಯ ವಿರುದ್ಧ ದನಿ ಎತ್ತುತ್ತಾನೆ. ದೇವಸ್ಥಾನದಲ್ಲಿ ಮುಕ್ತ ಅವಕಾಶ ದೊರಕದೆ, ದೇವರನ್ನೇ ಮೂಲೆಗುಂಪಾಗಿಸಿದ ಸಮಾಜಕ್ಕೆ ಕನಕ ಹೀಗೆ ತಿಳಿಸುತ್ತಾರೆ. "ದೇವಸ್ಥಾನದಲ್ಲಿ ದೇವರಿದ್ದಾನೆ ಅಂತ ನಾನು ತಿಳಿದಿಲ್ಲ. ಬಹಿರಂಗದ ಜಂಜಾಟಕ್ಕೆ ಸಿಲುಕಿದ ಜನ ತಮ್ಮ ಮನಸ್ಸಿನ ನೆಮ್ಮದಿಗೆ ದೇವಸ್ಥಾನಕ್ಕೆ ಬರ್ತಾರೆ, ದೇವಾಲಯ ಮುಕ್ತವಾಗಬೇಕು, ದೇವಾಲಯ ಎಲ್ಲರಿಗೂ ಸೇರಿದ್ದು, ಆದರೆ ಯಾರದೇ ಯಜಮಾನಿಕೆ ಇರಕೂಡದು" ಎಂಬುದಾಗಿ ವಾದಿಸುತ್ತಾನೆ. ಇದಕ್ಕೆ ಪೂರಕವಾಗಿ ವಚನ ಚಳವಳಿಯಲ್ಲಿನ 'ದೇಹವೆ ದೇಗುಲ' ಎಂಬ ಪರಿಕಲ್ಪನೆಯನ್ನು ಸ್ಮರಿಸಬಹುದಾಗಿದೆ.

ಭಾಷೆಯ ಸಾಮರಸ್ಯದ ಜೊತೆಗೆ ಮಾನವೀಯತೆಯ ಮೌಲ್ಯವನ್ನು ಈ ನಾಟಕವು ಸಾರುತ್ತದೆ. "ಜಾತಿಯಂತೆ ಜಾತಿ, ಅನೇಕ ಬಣ್ಣಗಳ ಹಸುಗಳಿರುತ್ತೆ. ಆದರೆ ಅವು ಕೊಡುವ ಹಾಲಿನ ಬಣ್ಣ ಬೇರೆ ಬೇರೆ ಏನು? ಕಬ್ಬಿನ ಗಣಿ ಡೊಂಕು ಅದರ ಹಾಲು ಡೊಂಕಾಗಿರೋಕೆ ಸಾಧ್ಯವೇ?" ಎಂಬಂತಹ ಪ್ರತಿಮೆಗಳ ಮೂಲಕ ಜಾತಿ ಎಂಬ ವರ್ತುಲವನ್ನು ವಿರೋಧಿಸುವುದನ್ನು ಕಾಣಬಹುದು. ರಾಗಿ ಮತ್ತು ಅಕ್ಕಿಯ ಶ್ರೇಷ್ಠತೆಯಲ್ಲಿನ ಪ್ರಶ್ನೆಯಲ್ಲಿ ಸಾಮರಸ್ಯವನ್ನು ಸಾಧಿಸಲು ಲೇಖಕರು ಸೋಪಜ್ಞತೆಯನ್ನು ಮೆರೆದಿದ್ದಾರೆ. ಮೇಲು-ಕೀಳೆಂಬ ಭಾವನೆ ಹೋಗಲಾಡಿಸಲು ಉತ್ತಮ ವಿದ್ಯೆಯೇ ಪ್ರಮುಖ ಅಸ್ತ್ರ. ಸರ್ವೋದಯ, ಸಮನ್ವಯ ಮಂತ್ರದಂತೆ ಒಂದಾಗಿ ಬಾಳಬೇಕು ಎಂಬುದು ಈ ನಾಟಕದ ಪ್ರಮುಖ ಅಂಶವಾಗಿದೆ.

ನೀಗಿಕೊಂಡ ಸಂಸ

'ನೀಗಿಕೊಂಡ ಸಂಸ' ನಾಟಕ ಲೇಖಕನೊಬ್ಬನ ತಲ್ಲಣಗಳನ್ನು, ಅವನು ತನ್ನನ್ನು ತಾನು ನೀಗಿಕೊಳ್ಳಲು ಕಾರಣವಾದ ಶಕ್ತಿಗಳನ್ನು ಪರೀಕ್ಷಿಸುತ್ತದೆ. ಸಂಸರ ನಾಟಕಗಳನ್ನು, ಜೀವನದ ವಿವರಗಳನ್ನು ಬಳಸಿ ಹೊಸ ನಾಟಕಪಠ್ಯವೊಂದನ್ನು ಕಿ.ರಂ. ಅವರು ಸೃಷ್ಟಿಸಿದ್ದಾರೆ. ಅನಂತಮೂರ್ತಿಯವರು ಮಾತುಕತೆಯೊಂದರಲ್ಲಿ ಹೇಳಿದಂತೆ, ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ ಆ ಕಾಲದ 'ಪಂಡಿತೋತ್ತಮರ' ನಡುವೆ ಹಿನ್ನೆಲೆಗೆ ಸರಿದಂತಿದ್ದ 'ಅಕಡೆಮಿಕ್' ಅಲ್ಲದ ಬುದ್ಧಿಜೀವಿಗಳ ಬಗೆಗೆ ಕಿ.ರಂ. ಅವರಿಗಿದ್ದ ಗೌರವ, ಕಾಳಜಿ, ಆಕರ್ಷಣೆ ಕೂಡ ಸಂಸನನ್ನು ಕುರಿತ ಈ ನಾಟಕಕ್ಕೆ ಪ್ರೇರೇಪಣೆಯಾಗಿರಬಹುದು. ಜಡ ಪಂಡಿತರನ್ನು, ಅವರು ಚರಿತ್ರೆಯನ್ನು ಓದುವ ಹುಂಬ ರೀತಿಗಳನ್ನು ಸಂಸರ ಪಾತ್ರ ಗೇಲಿ ಮಾಡುತ್ತದೆ.

ಒಂದು ಸಂದರ್ಭದಲ್ಲಿ ಸಂಸರ ಬಾಯಲ್ಲಿ ಬರುವ ಕವಿತೆಯ ಸ್ವರೂಪ ಕುರಿತ ಮಾತು. ಕಿ.ರಂ. ತಮ್ಮ ವಿಮರ್ಶೆಯಲ್ಲಿ ಅನೇಕ ಸಲ ಮಾಡಿದ ಕಾವ್ಯ ವ್ಯಾಖ್ಯಾನದಂತೆಯೇ ಇದೆ. "ಕವಿತೆ! ಅದು ವಿವಿಧ ಸ್ವರಗಳಿಂದಾದ ಭಾಷೆ, ವಿವಿಧ ಪದಗಳಿಂದ ಆದ ಬೇರೆ ಬೇರೆಯದೇ ಭಾಷೆ, ಅದರ ವಿನ್ಯಾಸ, ಅದರ ಬಣ್ಣ.... ಅದರ

ಮೈಯಲ್ಲಿ ಸೇರಿರುವ ದೇಸಿ.... ಶರೀರಕ್ಕೆ ಒಪ್ಪುವ ಚಲನೆ... ಜಗತ್ತಿನ ಪ್ರಕೃತಿಯನ್ನೇ ತೂಗಾಡಿಸುವ ಅದರ ಜೀವ... ಇಷ್ಟೇ ಅಲ್ಲದೆ... ಇನ್ನೂ ಯಾವ್ಯಾವುದೋ ಭಾಷೆ... ಅದೇ ಕವಿತೆಯ ಭಾಷೆ" ಅದರ ಜೊತೆಗೆ, ವಸಾಹತುಶಾಹಿ ಕುರಿತ ಪ್ರತಿಕ್ರಿಯೆಗಳನ್ನು 'ನೀಗಿಕೊಂಡ ಸಂಸ' ನಾಟಕದಲ್ಲಿ ಕಾಣಬಹುದು. "ರಾಜರ ಖಡ್ಗ. ಗುರಾಣಿ, ಜಂಬೂಸವಾರಿ ಇವೆಲ್ಲ ಸುಳ್ಳಿನಕಂತೆ, ಬ್ರಿಟಿಷರು ರಾಜರ ಸುತ್ತ ಕೋಟೆ ಕಟ್ಟಿದ್ದಾರೆ. ಅದರ ಮಧ್ಯೆ ರಾಜರು ಅವರ ತಾಳಕ್ಕೆ ತಕ್ಕ ಹಾಗೆ ಕುಣಿತಾ ಇದ್ದಾರೆ. ಈ ರಾಜರನ್ನು ಪೋಲಿಸ್ನೋರು ಮುತ್ತಿದ್ದಾರೆ, ರಾಜರ ಶಕ್ತಿ ಒಳಗೇ ಹುಳ ತಿಂದು ಬೀಳೋ ಮರದ ಹಾಗೆ ಆಗಿದೆ" ಎಂಬ ಮಾತಿನಲ್ಲಿ ಪ್ರಭುತ್ವವನ್ನು ವಿರೋಧಿಸುವ ಧೋರಣೆ ಇದೆ.

ರಾಜಕೀಯ ಬೇಹುಗಾರಿಕೆ ಜನತೆಯನ್ನು ಧ್ವನಿಯನ್ನು ಕೊಲ್ಲುತ್ತೆ. ಇದು ನಿಧಾನವಿಷ ಇದ್ದ ಹಾಗೆ. ಇಂತಹ ವ್ಯವಸ್ಥಿತ ಬಂಧನದಲ್ಲಿ ಸಿಲುಕಿಕೊಂಡ ಸಮಾಜವನ್ನು ಮೇಲೆತ್ತಲು ಸಂಸ ಬಯಸುತ್ತಾನೆ. ಇದು ಅವನ ವೈಯಕ್ತಿಕ ತುಮುಲಗಳಾಗಿರದೇ ಸಾಮಾಜಕ ಕಾಳಜಿಯೂ ಸೇರಿಕೊಂಡಿದೆ. ರಾಜರು ಮಣ್ಣಾಗುತ್ತಾರೆ. ಕಲೆಗೆ ಮುಪ್ಪಿಲ್ಲ, ಮರಣವಿಲ್ಲ, ಕಾವ್ಯಕ್ಕೆ ರಾಜಮದದ ಠೇಂಕಾರವಿಲ್ಲ: ಶಿಕ್ಷೆಯ ಭೀತಿಯಿಲ್ಲ ಎಂಬುದರಲ್ಲಿ ಕಲೆಯ ಸತ್ತ್ವವನ್ನು ಲೇಖಕರು ತಿಳಿಸುತ್ತಾರೆ.

ಪಂಡಿತರು ಕವಿಯನ್ನು ಕೊಲ್ಲುವುದಕ್ಕೆ ಟೀಕೆ, ಟಪ್ಪಣಿ, ವಿಮರ್ಶೆ ವ್ಯಾಖ್ಯಾನಗಳ ಆಯುಧಗಳನ್ನು ಹಿಡಿದು ನಿಂತಿರುತ್ತಾರೆ. ಹಣದಿಂದ ಸಾಹಿತ್ಯವನ್ನು ಗುತ್ತಿಗೆ ಪಡೆಯಬಹುದು ಎಂದು ತಿಳಿದಿರುವ ಸಾಹಿತ್ಯ ಸಂಸ್ಥೆಗಳ ವಿರುದ್ಧ ಬೇಸರವನ್ನು ಸಂಸ ತಾಳುತ್ತಾನೆ. ಇಂತಹ ಆಲೋಚನೆಗಳು ನೀಗಬೇಕು. ಆಕಾಂಕ್ಷೆಗಳು, ಕನಸುಗಳು, ಹೊಸಸೃಷ್ಟಿ ಇವೆಲ್ಲ ಅರ್ಥ ಪಡೆಯುವುದು ಸಾವಿನಿಂದ. ತಾನು ಸಾಯಬೇಕು ಮತ್ತೊಂದನ್ನು ಕಾಣಬೇಕು. ಆಗ ಮಾತ್ರ ಮನುಷ್ಯನ ಚೇತನ್ಯಕ್ಕೆ ಅವನ ಸೃಷ್ಟಿಗೆ ಒಂದು ಅರ್ಥ ಬರುತ್ತದೆ. ಮನಸ್ಸಿನಲ್ಲಿ ಹಳೆಯ ಆಲೋಚನೆಗಳು ನೀಗಿಕೊಂಡು ಹೊಸ ಆಲೋಚನೆಗಳಿಗೆ ಜೀವ ತುಂಬಬೇಕಾಗುತ್ತದೆ.

ಕಿ.ರಂ. ಅವರ ಈ ಎರಡೂ ನಾಟಕಗಳಲ್ಲಿ ಬೇರೆ ಬೇರೆ ಬಗೆಯ ಪ್ರತಿಷ್ಠಿತ ಶಕ್ತಿಗಳನ್ನು ಎದುರಾಗುವ ಎರಡು ಕೇಂದ್ರ ಪಾತ್ರಗಳಿವೆ. ಎರಡರಲ್ಲೂ ಎರಡು ವಿಭಿನ್ನ ರೀತಿಯ ನಿರ್ವಸಾಹತೀಕರಣ ಆಗಬೇಕೆಂಬ ಆಶಯವಿದೆ.

ಆಕರ ಗ್ರಂಥಗಳು

1. ಕಿ.ರಂ. ನಾಗರಾಜ : ಕಾಲಜ್ಞಾನಿ ಕನಕ ; ಅಭಿನವ ಪ್ರಕಾಶನ, ಬೆಂಗಳೂರು, 2013
2. ಕಿ.ರಂ. ನಾಗರಾಜ : ನೀಗಿಕೊಂಡ ಸಂಸ ; ಅಭಿನವ ಪ್ರಕಾಶನ, ಬೆಂಗಳೂರು

ಪರಾಮರ್ಶನ ಗ್ರಂಥಗಳು

1. ನಟರಾಜ್ ಹುಳಿಯಾರ್ (ಸಂ.) : ತೆರೆದು ಪಠ್ಯ (ಕಿ.ರಂ. ನಾಗರಾಜ ಅವರ ಆಯ್ದ ಬರಹಗಳು) ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2012
2. ಕುವೆಂಪು : ಕುವೆಂಪು ಸಮಗ್ರ ನಾಟಕ; ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ), ಕುಪ್ಪಳ್ಳಿ, 2013
3. ಗಿರಡ್ಡಿ ಗೋವಿಂದರಾಜ : ಓದುವ ದಾರಿಗಳು; ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು, 2016.

❖❖❖

ಸಂಸ್ಕೃತಿ – ಒಂದು ಟಿಪ್ಪಣಿ

ಅಜಕ್ಕಳ ಗಿರೀಶ ಭಟ್
ಸ.ಪ್ರ.ದ. ಕಾಲೇಜು, ಸಿದ್ಧಕಟ್ಟೆ

ಇಂಗ್ಲಿಷಿನ 'ಕಲ್ಚರ್' ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಸಂಸ್ಕೃತಿ' ಎಂಬ ಪದವನ್ನು ನಾವಿಂದು ಬಳಸುತ್ತಿದ್ದೇವೆ. ಭಾರತೀಯ ಭಾಷೆಗಳಲ್ಲಿ 'ಸಂಸ್ಕೃತಿ' ಎಂಬ ಪದವು ಬಹಳ ಸಂದರ್ಭಗಳಲ್ಲಿ ವ್ಯಕ್ತಿಯ ಸಂಸ್ಕಾರವನ್ನು ಹೇಳುವಲ್ಲಿ ಬಳಕೆಯಾಗುತ್ತದೆಯಾದರೂ ನಾವು ಇಂದು 'ಸಂಸ್ಕೃತಿ' ಪದವನ್ನು ಬಳಸುವಾಗ ಅದು ಸಮುದಾಯ/ಸಮೂಹಕ್ಕೆ ಕೂಡ ಸಂಬಂಧಿಸಿದ್ದಾಗಿರುತ್ತದೆ. ಹಲವು ಭಾರತೀಯ ಭಾಷೆಗಳಲ್ಲಿ 'ಸಂಪ್ರದಾಯ' ಎನ್ನುವ ಪದ ಬಳಕೆಯಲ್ಲಿದೆಯಷ್ಟೆ. 'ಸಾಂಪ್ರದಾಯಿಕ' ಎನ್ನುವುದನ್ನು ಕೆಲವು 'ಆಧುನಿಕರು' ತುಸು ಋಣಾತ್ಮಕ ಧ್ವನಿಯಲ್ಲಿ ಬಳಸುವುದೂ ಇದೆ. ಆದರೆ ವಾಸ್ತವವಾಗಿ 'ಸಂಪ್ರದಾಯ' ಎಂದರೆ 'ಹಿಂದಿನವರಿಂದ ಪಡೆದ ಅಥವಾ ಪೂರ್ವಜರಿಂದ ಬಂದ ಉತ್ತಮವಾದುದು/ ಸರಿಯಾದುದು' ಎಂಬರ್ಥವನ್ನೇ ನೀಡುವ ಪದ. ಹೀಗಾಗಿಯೇ ಸಂಸ್ಕೃತಿ–ಸಂಪ್ರದಾಯ ಹೀಗೆ ಈ ಎರಡನ್ನೂ ಒಟ್ಟೊಟ್ಟಾಗಿ ಅಥವಾ ಕೆಲವು ಸಲ ಒಂದೇ ಅರ್ಥದಲ್ಲಿ ಬಳಸಿದರೆ ತಪ್ಪಿಲ್ಲ.

ಉತ್ತಮವಾದುದು ಯಾವುದು ಎನ್ನುವ ಪ್ರಶ್ನೆಗೆ ಸಾರ್ವತ್ರಿಕವಾಗಿ ಅನ್ವಯವಾಗುವ ಕೆಲವು ಉತ್ತರಗಳು ಇವೆ ನಿಜ. ಉದಾಹರಣೆಗೆ ಪರೋಪಕಾರ ಇತ್ಯಾದಿ. ಆದರೆ, ವಿವಿಧ ಸಮುದಾಯಗಳ ಜೀವನವಿಧಾನಗಳನ್ನು ನೋಡಿದಾಗ ಒಳ್ಳೆಯದು ಅಥವಾ ಅನುಸರಣಯೋಗ್ಯ ಯಾವುದು ಎಂಬುದು ಬಹುಮಟ್ಟಿಗೆ ಸಾಪೇಕ್ಷ ಎನಿಸುತ್ತದೆ. ಒಂದು ಸಮುದಾಯಕ್ಕೆ ಅನುಸರಣಯೋಗ್ಯ ಎನಿಸಿದ್ದು ಇನ್ನೊಂದಕ್ಕೆ ಹಾಗನ್ನಿಸಬೇಕೆಂದಿಲ್ಲ. ಹೀಗಿರುವಾಗ ಸಾಪೇಕ್ಷತೆಯನ್ನು ಮಾನ್ಯ ಮಾಡಿ ಆಯಾ ಸಮುದಾಯಗಳು ಅವುಗಳ ದೃಷ್ಟಿಯಲ್ಲಿ ಯಾವುದು ಒಳ್ಳೆಯದೋ ಅದನ್ನೇ ಜೀವನವಿಧಾನವಾಗಿ ಪರಿಗಣಿಸುತ್ತವೆ ಎಂದು ಭಾವಿಸಬೇಕಾಗುತ್ತದೆ. ಹೀಗಿರುವಾಗ ಇಂದು ನಾವು ಭಾಷೆ, ನಂಬಿಕೆ, ಆಚರಣೆ ಆಹಾರಕ್ರಮ, ವೇಷಭೂಷಣ, ಕಲಾಪ್ರಕಾರಗಳು ಇವನ್ನೆಲ್ಲ ಸಾಂಸ್ಕೃತಿಕ ದ್ರವ್ಯಗಳು ಎಂದು ಪರಿಗಣಿಸುವುದು ಸರಿಯೇ ಆಗಿದೆ. ಈ ಹಿನ್ನೆಲೆಯಲ್ಲಿ ಭಾಷೆ, ನಂಬಿಕೆ, ಆಚರಣೆ ಆಹಾರಕ್ರಮ ಮುಂತಾದ ಸಾಂಸ್ಕೃತಿಕ ದ್ರವ್ಯಗಳ ಆಧಾರದಲ್ಲಿ ವಿವಿಧ ಸಮುದಾಯಗಳ 'ಸಂಸ್ಕೃತಿ'ಗಳನ್ನು ವಿಭಿನ್ನ ಸಂಸ್ಕೃತಿಗಳು ಎಂಬುದಾಗಿ ಪರಿಗಣಿಸುವುದೂ ಸರಿಯೇ.

ಭಾರತದಲ್ಲಿ ಅನೇಕ ಸಂಸ್ಕೃತಿಗಳಿವೆ ಎಂದು ಹೇಳುವಾಗ ಅವುಗಳ ನಡುವೆ ಅನೇಕ ಸಮಾನ ಅಂಶಗಳು ಇವೆ ಎಂಬುದನ್ನು ಮರೆಯಲಾಗದು. ಈ ಸಮಾನ ಅಂಶಗಳು ಅಥವಾ ಹಲವು ಭಾರತೀಯ ಸಂಸ್ಕೃತಿಗಳ ಸಾರವು ಒಟ್ಟಾದಾಗ ಒಂದು 'ಭಾರತೀಯ ಸಂಸ್ಕೃತಿ' ಆಗುತ್ತದೆ. ತಾತ್ಪರ್ಯವೇನೆಂದರೆ, ಭಾರತದಲ್ಲಿ ಹಲವು ಪ್ರತ್ಯೇಕ ಸಂಸ್ಕೃತಿಗಳು ಮಾತ್ರ ಇರುವುದಲ್ಲ; ಹಲವು ಸಂಸ್ಕೃತಿಗಳು ಇರುವಂತೆಯೇ ಅವುಗಳ ಸಾರಭೂತವಾಗಿ 'ಭಾರತೀಯ ಸಂಸ್ಕೃತಿ'ಯೂ ಇದೆ ಎನ್ನುವಷ್ಟು ಸಮಾನ ಅಂಶಗಳು ಆ ವಿವಿಧ ಭಾರತೀಯ ಸಂಸ್ಕೃತಿಗಳಲ್ಲಿವೆ. ಆದರೆ ಈ ಕಡೆಗೆ ನಮ್ಮ ದೇಶದ ಸಂಸ್ಕೃತಿ ಚಿಂತಕರು ಗಮನ ಹರಿಸಿದುದು ಕಡಮೆಯೇ. ಈ ಕುರಿತ ಹೆಚ್ಚಿನ ವಿವರಗಳಿಗೆ ಈ ಲೇಖಕನ 'ಬಹುವಚನಕ್ಕೊಂದೇ ತತ್ತ್ವ' ಕೃತಿಯನ್ನು ನೋಡಬಹುದು.

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 13, Issue 1, July-September 2024
Included in UGC - CARE List
Edited, Published, Printed & Owned by

Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
chinthanabayalu@gmail.com
www.chinthanabayalu.in

Printed at

Aakrithi Prints
Light House Hill Road, Mangaluru - 575 001

Pages : 128

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com